ಮಾರ್ಗದರ್ಶಕರು

ಪ್ರೊ. ಜಿ. ವೆಂಕಟಸುಬ್ಬಯ್ಯ



ಮಾರ್ಗದರ್ಶಕರು

ಪ್ರೊ॥ ಜಿ. ವೆಂಕಟಸುಬ್ಬಯ್ಯ

ವಸಂತ ಪ್ರಕಾಶನ

ಕಾಸ್ಮೊಪಾಲಿಟನ್‌ಕ್ಲಬ್ ಎದುರು ರಸ್ತೆ

ನಂ.360, 10 'ಬಿ' ಮೈನ್, ಜಯನಗರ 3ನೇ ಬ್ಲಾಕ್

ಬೆಂಗಳೂರು – 560 011, ದೂರವಾಣಿ : 22443996

Margadarshakaru - collection by ***Prof G. Venkatasubbiah,*** published by ***Vasantha Prakashana,*** Opp. Casmopolitan Club Rd, #360, 10th 'B' Main, Jayanagar, 3rd Block, Bangalore-560011, Phone : 22443996

ಪ್ರಥಮ ಮುದ್ರಣ : 2006

ಹಕ್ಕುಗಳು : ಲೇಖಕರದು

ಕಾಗದ : 70 ಜಿ.ಎಸ್.ಎಂ. ಮ್ಯಾಪ್‌ಲಿಥೋ

ಪುಟಗಳು : 137 + iv

ಮುಖ ಪುಟ : ಯು.ಟಿ. ಸುರೇಶ್

ರೂ. : 60/-

ISBN : 81-89818-18-X

ವಸಂತ ಪ್ರಕಾಶನ
ಕಾಸ್ಮೊಪಾಲಿಟನ್‌ಕ್ಲಬ್ ಎದುರು ರಸ್ತೆ
ನಂ.360, 10 'ಬಿ' ಮೈನ್
ಜಯನಗರ 3ನೇ ಬ್ಲಾಕ್
ಬೆಂಗಳೂರು - 11 ; ದೂ. : 22443996

ಅಕ್ಷರ ಜೋಡಣೆ :
ಶ್ರೀ ಲಕ್ಷ್ಮೀ ಎಂಟರ್‌ಪ್ರೈಸಸ್
ನಂ.1052, ಮೊದಲ ಹಂತ
ಕುಮಾರಸ್ವಾಮಿ ಬಡಾವಣೆ
ಬೆಂ. - 78 ; ಮೊ : 9886255928

ಮುದ್ರಕರು :
ಸತ್ಯಾನಂದ ಪ್ರಿಂಟರ್ಸ್
ಕಾಟನ್‌ಪೇಟೆ, ಬೆಂಗಳೂರು - 53.

ಮುನ್ನುಡಿ

ಇಪ್ಪತ್ತೊಂದನೆಯ ಶತಮಾನದ ಈ ದಶಕದಲ್ಲಿ ಕನ್ನಡದ ಅನೇಕ ಹಿರಿಯರ ಜನ್ಮಶತಮಾನೋತ್ಸವಗಳು ನೆರವೇರಿವೆ. ಇನ್ನೂ ನೆರವೇರುವ ಅವಕಾಶವಿದೆ. ಹೀಗಿರುವಾಗ ಅಂಥ ಹಿರಿಯರಲ್ಲಿ ನನಗೆ ಪರಿಚಿತರಾಗಿ ನನ್ನ ಮೇಲೆ ಪ್ರಭಾವವನ್ನು ಬೀರಿದ ಕೆಲವರ ನೆನಪು ನನ್ನನ್ನು ಕಾಡಿತು. ಮತ್ತೆ ಕೆಲವರು ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡರು. ಆ ಸಂದರ್ಭಗಳಲ್ಲಿ ನಾನು ರಚಿಸಿದ ಕೆಲವು ಚಿಕ್ಕ ಚಿಕ್ಕ ಲೇಖನಗಳನ್ನು ಕನ್ನಡಪ್ರಭ, ಪ್ರಜಾವಾಣಿ, ವಿಜಯಕರ್ನಾಟಕ, ಹೊಸತು ಮುಂತಾದ ಪತ್ರಿಕೆಗಳು ಪ್ರಕಟಿಸಿದವು. ಅವುಗಳನ್ನೆಲ್ಲ ಕೂಡಿಸಿ 'ಮಾರ್ಗದರ್ಶಕರು' ಎಂಬ ಹೆಸರಿಟ್ಟು ಈ ಪುಸ್ತಕವನ್ನು ಪ್ರಕಟಿಸಲಾಗಿದೆ. ಇಲ್ಲಿರುವ ಲೇಖನಗಳಲ್ಲಿ ಉಲ್ಲೇಖಿತರಾದ ಎಲ್ಲರೂ ನನಗೆ ಗೊತ್ತಿದ್ದವರೇ. ಅಲ್ಲದೆ ಅವರ ಜೀವನವನ್ನೂ ಅವರ ಬರಹಗಳನ್ನೂ ಹತ್ತಿರದಿಂದ ಬಲ್ಲವನು ನಾನು. ಆದುದರಿಂದ ಈ ಲೇಖನಗಳಲ್ಲಿ ಕಾಣಬರುವ ಆತ್ಮೀಯತೆಗೆ ಅವರೆಲ್ಲರ ಸಾಹಚರ್ಯವೇ ಕಾರಣವೆಂದು ಓದುಗರು ತಿಳಿಯಬೇಕೆಂದು ನಾನು ಅಪೇಕ್ಷೆಪಡುತ್ತೇನೆ. ಹೇಳ ಬೇಕಾದ್ದು ಬೇಕಾದಷ್ಟು ಇದ್ದರೂ ಈ ಲೇಖನಗಳು ಪತ್ರಿಕೆಗಳ ಸೀಮಿತ ವ್ಯಾಪ್ತಿಗೆ ಅಳವಡಬೇಕಾ ಗಿತ್ತು. ಆದುದರಿಂದ ಅವು ಸಂಗ್ರಹವಾಗಿವೆ. ಕೇವಲ ನೆನಪು ತರುವುದಷ್ಟೇ ಈ ಲೇಖನಗಳ ಉದ್ದೇಶ. ಇಲ್ಲಿ ಉಲ್ಲೇಖಗೊಂಡವರೆಲ್ಲ ಖ್ಯಾತನಾಮರೇ! ಆದುದರಿಂದ ಅವರ ಬಗ್ಗೆ ಬೇರೆ ಬೇರೆ ಕಡೆಗಳಲ್ಲಿ ವಿಸ್ತಾರವಾದ ಬರಹಗಳುಂಟು. ಅವುಗಳಲ್ಲಿ ಇಲ್ಲದಿರಬಹುದಾದ ಆತ್ಮೀಯ ವಿವರಗಳು ಇಲ್ಲಿ ಬಂದಿರಬಹುದು.

ಓದುಗರು ಈ ದೃಷ್ಟಿಯಿಂದ ಇವುಗಳನ್ನು ಪರಿಗಣಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇವುಗಳನ್ನು ಮೊದಲು ಪ್ರಕಟಿಸಿದ ಪತ್ರಿಕೆಗಳಿಗೆ ನಾನು ಕೃತಜ್ಞನಾಗಿದ್ದೇನೆ.

ಜಿ. ವೆಂಕಟಸುಬ್ಬಯ್ಯ

ನಂ. 58, 31ನೇ ಕ್ರಾಸ್
7ನೇ ಬ್ಲಾಕ್, ಜಯನಗರ
ಬೆಂಗಳೂರು-560070

ಪರಿವಿಡಿ

- ಅತ್ಯಪೂರ್ವ ವಿದ್ವಾಂಸರಾದ ಡಾ|| ಎ. ವೆಂಕಟಸುಬ್ಬಯ್ಯ 1
- ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು – ನೂರರ ನೆನಪು 8
- ಪ್ರಸಿದ್ಧ ಪುರಾತತ್ವಶಾಸ್ತ್ರಜ್ಞ ಡಾ|| ಎಂ.ಎಚ್.ಕೃಷ್ಣ 14
- 'ಆಕಾಶವಾಣಿ'ಯ ಸಂಸ್ಥಾಪಕ, ಮನಶ್ಶಾಸ್ತ್ರಜ್ಞ ಡಾ|| ಎಂ.ವಿ.ಗೋಪಾಲಸ್ವಾಮಿ 22
- ಪ್ರೊ.ಜಿ. ಹನುಮಂತರಾವ್ ಅವರ ಸಜ್ಜನತೆ 30
- ಅಲೆಯುವ ಮನದ ಮಿನುಗುವ ಮಿಂಚಿನ ಎ.ಎನ್.ಮೂರ್ತಿರಾವ್ 33
- ವಿನಯವಂತ ವಿದ್ವಾಂಸ ಎಲ್. ಗುಂಡಪ್ಪ 36
- ಮಾತಿನ ಮಂಟಪ ಸಿದ್ದವನಹಳ್ಳಿ ಕೃಷ್ಣಶರ್ಮ 43
- ಡಾ|| ಎಸ್. ಶ್ರೀಕಂಠಶಾಸ್ತ್ರಿಗಳ ಜನ್ಮಶತಾಬ್ದದಲ್ಲಿ ವಿದ್ಯಾರ್ಥಿಯೊಬ್ಬನ ನೆನಪು 50
- ಗ್ರೀಕ್‌ನಾಟಕಗಳ ಅನುವಾದಕ ಕೆ.ವಿ.ರಾಘವಾಚಾರ್ 55
- ಅನುವಾದ ಪ್ರೌಢಿಮೆಯ ಟಿ ಎನ್.ಶ್ಯಾಮರಾಯರು 64
- ಅನುವಾದ ಕುಶಲಿ ಪರಮೇಶ್ವರಭಟ್ಟರು 77
- 'ನೀಲಿಯಾಕಾಶದಲಿ ನಾನೊಂದು ನಕ್ಷತ್ರ'– ಕೆ.ಎಸ್. ನರಸಿಂಹಸ್ವಾಮಿ 86
- ಮೌನಿಯಾಗಿದ್ದ ವಿದ್ವಾಂಸ ಡಾ|| ಜಿ. ವರದರಾಜರಾಯರು 99
- ಜಾನಪದ ಕಾಳಜಿಯ ಎಚ್.ಎಲ್. ನಾಗೇಗೌಡ 104
- ಸಮೂಹಮಾಧ್ಯಮಕ್ಕೆ ಮೆರುಗಿತ್ತ ತಂತ್ರಕುಶಲಿ ಡಾ|| ಎಚ್.ಕೆ. ರಂಗನಾಥ 107
- ಬಿ.ಸಿ. ರಾಮಚಂದ್ರಶರ್ಮ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ 110
- ವಿದ್ವದ್ವರೇಣ್ಯ ಎಸ್.ಕೆ. ರಾಮಚಂದ್ರರಾಯರು 127
- 'ರಾಜತರಂಗಿಣಿ' ಖ್ಯಾತಿಯ ನೀರ್ಪಾಜೆ ಭೀಮಭಟ್ಟರು 134

ಅತ್ಯಪೂರ್ವ ವಿದ್ವಾಂಸರಾದ ಡಾ॥ ಎ. ವೆಂಕಟಸುಬ್ಬಯ್ಯ
(1886-1969)

20ನೆಯ ಶತಮಾನದ ಮೊದಲರ್ಧದ ಕಾಲದಲ್ಲಿ ಮೈಸೂರು ನಗರದಲ್ಲಿ ಕಾಣಬರುತ್ತಿದ್ದ ಜನಜೀವನದ ನೆನಪೇ ರೋಮಾಂಚಕಾರಕವಾದುದು. ಚಾಮುಂಡಿ ಬೆಟ್ಟದ ಸಾನುಪ್ರದೇಶದಲ್ಲಿ ಹಬ್ಬಿ ಬೆಳೆದ ನಗರವು ಅಲ್ಲಿನ ಅಧಿದೇವತೆಯಾದ ಚಾಮುಂಡಾಂಬೆಯ ರಕ್ಷಣೆಯಲ್ಲಿ ಸದಾ ಸುಖ ಶಾಂತಿಯುತವಾಗಿ ಕಂಗೊಳಿಸುತ್ತಿತ್ತು. ದೈವಭಕ್ತಿಯುತರೂ ಪ್ರಜಾವತ್ಸಲರೂ ಆಗಿದ್ದ ಮೈಸೂರು ಅರಸರ ಸುಸಂಸ್ಕೃತ ಆಡಳಿತದಲ್ಲಿ ಜನಸಾಮಾನ್ಯರು ಸಂತೃಪ್ತಜೀವನವನ್ನು ಸಾಗಿಸುತ್ತಿದ್ದರು. ನಗರದ ಸಾಂಸ್ಕೃತಿಕ ಆವರಣದಲ್ಲಿ ಪ್ರತಿಭಾವಂತ ಕಲೆಗಾರರೂ ಸಾಹಿತ್ಯೋಪಾಸಕರೂ ಆಧ್ಯಾತ್ಮಿಕ ಜ್ಞಾನಿಗಳೂ ಜ್ಞಾನಪಿಪಾಸುಗಳಾದ ಸಜ್ಜನರೂ ತುಂಬಿ ತುಳುಕುತ್ತಿದ್ದರು. ಬೆಳಗಿನ ವಾಯುವಿಹಾರಕ್ಕೆಂದು ಹೊರಟರೆ ಯಾವ ಬೀದಿಯಲ್ಲಿ ಹೋದರೂ ಎರಡು ಸಾಲುಗಳ ಮನೆಗಳ ಒಳಗಡೆಯಿಂದ ವಾದ್ಯದ ನಾದವೋ ಗಾನಾಲಾಪವೋ ವೇದಘೋಷವೋ ಕೇಳಬರುತ್ತಿತ್ತು. ಜೀವನೋದ್ಯೋಗ ದಲ್ಲಿ ನಿರತರಾಗಿದ್ದವರೂ ಆಳವಾದ ವ್ಯಾಸಂಗದಲ್ಲಿ ಮುಳುಗಿದ್ದುದನ್ನು ಕಾಣಬಹುದಾಗಿತ್ತು. ಶಿಕ್ಷಕವೃತ್ತಿಯಲ್ಲಿ ನಿರತರಾಗಿಲ್ಲದ ಎಷ್ಟೋ ಮಂದಿ ವಿದ್ವದ್ವಿಷಯಗಳಲ್ಲಿ ಆಸಕ್ತರಾಗಿ ಗಾಢವಾದ ವ್ಯಾಸಂಗದ ಪರಿಣಾಮವಾಗಿ ಪ್ರಭಾವಯುತರಾದ ಪಂಡಿತವರ್ಯರಾಗಿ ಖ್ಯಾತರಾಗಿದ್ದರು. ಅಂಥವರಲ್ಲಿ ಡಾ। ಎ. ವೆಂಕಟಸುಬ್ಬಯ್ಯನವರು ಮುಖ್ಯರು.

ಡಾ|| ಜಿ. ವೆಂಕಟಸುಬ್ಬಯ್ಯನವರು ಮದರಾಸು ಪ್ರಾಂತದಿಂದ ಮೈಸೂರು ಕಡೆಗೆ ಬಂದು ನೆಲೆಸಿದ ಬೃಹಚ್ಚರಣರೆಂಬ ಸ್ಮಾರ್ತಬ್ರಾಹ್ಮಣ ಪಂಗಡಕ್ಕೆ ಸೇರಿದವರು. ಬೃಹಚ್ಚರಣರಲ್ಲಿ ಕಂಡ್ರಮಾಣಿಕ್ಯಂ, ಪುರತ್ತೂರು ಮತ್ತು ಮಳಗುಚೂರು ಎಂಬ ಮೂರು ಒಳಪಂಗಡಗಳಿವೆಯಂತೆ. ಅವುಗಳಲ್ಲಿ ಡಾ|| ವೆಂಕಟಸುಬ್ಬಯ್ಯನವರು ಕಂಡ್ರಮಾಣಿಕ್ಯಂ ಪಂಗಡಕ್ಕೆ ಸೇರಿದವರು. ಈ ಪಂಗಡದ ಜನ ಮೈಸೂರು ಪ್ರದೇಶಕ್ಕೆ ಬಂದ ಬಗೆಗೆ ಕೆಲವು ಚಾರಿತ್ರಿಕ ಘಟನೆಗಳು ಕಾರಣವಾಗಿವೆ. ಅವುಗಳನ್ನು ತಿಳಿಯುವುದರಿಂದ ಆ ಜನರಿಂದಾದ ಕೆಲವು ಸಾಂಸ್ಕೃತಿಕ ಕಾರ್ಯಗಳನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗುತ್ತದೆ. ಮೈಸೂರು ರಾಜ್ಯದಲ್ಲಿ ನೆಲೆಸಿದ ಡಾ|| ಡಿ.ವಿ. ಗುಂಡಪ್ಪ, ಡಾ.ಎ.ಎನ್.ನರಸಿಂಹಯ್ಯ, ಪ್ರೊ.ಲಕ್ಷ್ಮೀನರಸಿಂಹಯ್ಯ, ಬಿಗಡವಿಕ್ರಮರಾಯದ ಹಂಸ, ಸ್ವಾತಂತ್ರ್ಯ ಹೋರಾಟದ ಎಂ.ಎನ್.ಜೋಯಿಸರು ಮುಂತಾದವರೆಲ್ಲ ಮೈಸೂರಿನ ಜೀವನವನ್ನು ಬೆಳಗಿದ ಖ್ಯಾತ ವ್ಯಕ್ತಿಗಳು.

ಮೈಸೂರು ಸಂಸ್ಥಾನವು ಭಾರತದೇಶದ ಇತರ ಎಲ್ಲ ಸಂಸ್ಥಾನಗಳಿಗಿಂತ ಹೆಚ್ಚಾದ ಪ್ರತಿಷ್ಠೆಯನ್ನೂ ಗೌರವವನ್ನೂ ಪಡೆಯುವುದಕ್ಕೆ ಇಲ್ಲಿಗೆ ಬಂದ ಕೆಲವು ದಿವಾನರು ಕಾರಣರಾಗಿದ್ದಾರೆ. ಹತ್ತೊಂಬತ್ತನೆಯ ಶತಮಾನದಲ್ಲಿ ಕೊನೆಯ ಭಾಗದಲ್ಲಿ ಮುಮ್ಮಡಿ ಕೃಷ್ಣರಾಜರು ಕಾಲವಾದಾಗ ಮೈಸೂರಿನ ಅರಮನೆಯ ಆಡಳಿತದಲ್ಲಿ ಏರುಪೇರಾಗಿ ತುಂಬ ಗೊಂದಲವುಂಟಾಯಿತು. ಸ್ವಾರ್ಥಪರರು ಅರಮನೆಯ ಆಸ್ತಿಪಾಸ್ತಿಗಳಿಗೆ ಹಾನಿಯನ್ನುಂಟು ಮಾಡಿದ್ದರು. ಆಗ ಚೀಫ್ ಕಮೀಷನರಾಗಿದ್ದ ಬೌರಿಂಗ್ ಎಂಬ ಆಂಗ್ಲ ಅಧಿಕಾರಿಯು ಬಾಲಕ ಚಾಮರಾಜ ಒಡೆಯರನ್ನು ಮುಮ್ಮಡಿ ಕೃಷ್ಣರಾಜರು ಕಾಲವಾದ ಮಾರನೆಯ ದಿನವೇ ಮೈಸೂರಿನ ರಾಜರನ್ನಾಗಿ ಮಾಡಿ ಪಟ್ಟಾಭಿಷೇಕದ ಏರ್ಪಾಟು ಮಾಡಿದನು. ಕೂಡಲೆ ಮೈಸೂರಿನ ಆಡಳಿತದಲ್ಲಿ ತಕ್ಕ ಏರ್ಪಾಟು ಮಾಡಿ ಆಡಳಿತದಲ್ಲಿ ಬಿಗಿಬರುವ ವ್ಯವಸ್ಥೆಯನ್ನು ತಂದುದು ಬೌರಿಂಗ್ ಅಧಿಕಾರಿಯ ದೂರದೃಷ್ಟಿಯ ಪರಿಣಾಮವಾಗಿತ್ತು. ಪ್ರಜಾಸತ್ತಾತ್ಮಕವಾದ ಆಡಳಿತವು ಸ್ಥಾಪಿತವಾಗಲು ಸಿದ್ಧತೆಗಳನ್ನು ಮಾಡಿದುದು ಆತನ ಮಹಾಕಾರ್ಯ. ಆ ಸಿದ್ಧತೆಗಳ ಬೆಳಕಿನಲ್ಲಿ ಮೈಸೂರಿನಲ್ಲಿ ಪ್ರಜಾಸತ್ತಾತ್ಮಕ ಆಡಳಿತವನ್ನು ಸ್ಥಾಪಿಸಿದ ಕೀರ್ತಿ ದಿವಾನ್ ರಂಗಾಚಾರ್ಲು ಅವರಿಗೆ ಸಲ್ಲುತ್ತದೆ.

1868 ರಿಂದ ದಿವಾನ್ ರಂಗಾಚಾರ್ಲು ಅವರು ಅರಮನೆಯ ಕಾರ್ಯದರ್ಶಿಯಾಗಿ ಚಾಮರಾಜ ಒಡೆಯರ ಶಿಕ್ಷಣದ ಮೇಲ್ವಿಚಾರಕರಾಗಿ ಅತ್ಯುತ್ತಮ ಕಾರ್ಯವನ್ನು ನಿರ್ವಹಿಸಿದರು. 1881ರಲ್ಲಿ ಚಾಮರಾಜ ಒಡೆಯರು ಪ್ರಾಪ್ತವಯಸ್ಕರಾಗಿ ರಾಜ್ಯ ಭಾರವನ್ನು ವಹಿಸಿಕೊಂಡಾಗ ರಂಗಾಚಾರ್ಲು ಅವರು ದಿವಾನರಾಗಿ ಸುಧಾರಣೆಗಳನ್ನು ತಂದು ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆಗೆ ಕಾರಣರಾದರು. ಅವರು ತಮ್ಮ ಆಡಳಿತ ಕಾರ್ಯಗಳಲ್ಲಿ ಸಹಾಯ ಮಾಡಲು 1879ರಲ್ಲಿ ಶೇಷಾದ್ರಿಅಯ್ಯರ್ ಅವರನ್ನು ನೇಮಿಸಿಕೊಂಡರು. ಈ ಸ್ಥಾನದಲ್ಲಿದ್ದು ರಂಗಾಚಾರ್ಲು ಅವರಿಂದ ಆದ ಮಾರ್ಗದರ್ಶನದಲ್ಲಿ ಅಪಾರ ಅನುಭವವನ್ನು

ಗಳಿಸಿ ದಿವಾನ್ ರಂಗಾಚಾರ್ಲು ಅವರು 1883ರಲ್ಲಿ ನಿಧನ ಹೊಂದಿದಾಗ ಅವರ ಸ್ಥಾನಕ್ಕೆ ನೇಮಕರಾದರು. ಶೇಷಾದ್ರಿ ಅಯ್ಯರ್ ಅವರು ಮೈಸೂರು ಸಂಸ್ಥಾನದ ದಿವಾನರಾಗಿ 17 ವರ್ಷಗಳ ಕಾಲ ಕಾರ್ಯನಿರತರಾಗಿದ್ದರು. ಮೈಸೂರು ಸಂಸ್ಥಾನಕ್ಕೆ ಅವರಿಂದ ಬಹು ಉಪಕಾರವಾಯಿತು. ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮವಾಯಿತು. ಚಿನ್ನದಗಣಿಯ ಉದ್ಯಮ, ಕಾಫಿಯ ಕೃಷಿ, ಜೀವವಿಮಾ ಯೋಜನೆ, ತಾಲ್ಲೂಕು ಬೋರ್ಡುಗಳ ಸ್ಥಾಪನೆ, ಓರಿಯಂಟಲ್ ಲೈಬ್ರರಿಯ ಸ್ಥಾಪನೆ, ಪ್ರಾಚೀನ ಶಿಲಾಶಾಸನಗಳ ಸಂಶೋಧನಾಲಯ, ಹಸ್ತಪ್ರತಿಸಂಗ್ರಹ. ಸ್ತ್ರೀವಿದ್ಯಾಭ್ಯಾಸ, ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯ ಏರ್ಪಾಟು, ಶಿವನ ಸಮುದ್ರದಲ್ಲಿ ವಿದ್ಯುತ್ ಉತ್ಪಾದನೆಯ ಯಂತ್ರಾಗಾರ ಇತ್ಯಾದಿಯಾಗಿ ಅನೇಕ ಪ್ರಗತಿಕಾರ್ಯಗಳನ್ನು ಉಂಟುಮಾಡಿದರು.

ಶೇಷಾದ್ರಿ ಅಯ್ಯರ್ ಅವರು ದಿವಾನರಾಗಿದ್ದ (1883-1900) ಕಾಲದಲ್ಲಿ ಅವರು ಕೈಗೊಂಡ ಆಡಳಿತ ಸುಧಾರಣೆಯ ಕಾರ್ಯದಲ್ಲಿ ಸಮರ್ಥರಾದ ವಿದ್ಯಾವಂತರಾದ ಅನೇಕರನ್ನು ನೇಮಿಸಿಕೊಂಡರು. ಮೈಸೂರು ಸಂಸ್ಥಾನದಲ್ಲಿ ವಿಶ್ವವಿದ್ಯಾನಿಲಯವೂ ಇಲ್ಲದಿದ್ದ ಕಾಲ ಅದು. ಆಗ ಸ್ವಾಭಾವಿಕವಾಗಿಯೇ ಮದರಾಸು ವಿಶ್ವವಿದ್ಯಾನಿಲಯದಲ್ಲಿ ಪದವಿಯನ್ನು ಪಡೆದು ಆಡಳಿತದಲ್ಲಿ ಸಮರ್ಥರಾಗಿದ್ದ ಕೆಲವರು ಅಧಿಕಾರಿಗಳನ್ನು ಮದರಾಸು ಪ್ರಾಂತದಿಂದ ಕರೆದು ತಂದರು. ಹೀಗೆ ಬಂದವರಲ್ಲಿ ಕೆಲವರು ಬೃಹಚ್ಚರಣ ಪಂಗಡದವರೂ ಇದ್ದರು. ಅವರು ಮೈಸೂರು ಸಂಸ್ಥಾನದ ಶಾಂತ ಜೀವನದ ರೀತಿನೀತಿಗಳಿಗೆ ಮಾರುಹೋಗಿ ಇಲ್ಲಿಯೇ ನೆಲಸಿದರು. ಮತ್ತೆ ಕೆಲವರು ಸ್ಥಿತಿವಂತರಾದ ಬೃಹಚ್ಚರಣವಿದ್ವಾಂಸರು ಕೂಡ ಈ ಕಡೆಗೆ ಪ್ರಯಾಣ ಮಾಡಿ ಚಾಮರಾಜನಗರ, ನಂಜನಗೂಡು ಮುಂತಾದ ಕಡೆಗಳಲ್ಲಿ ನೆಲಸಿದರು. ಇಂಥ ವಿದ್ವಾಂಸರ ಮನೆತನಗಳಲ್ಲಿ ಬಂದವರು ಡಾ|| ಎ. ವೆಂಕಟಸುಬ್ಬಯ್ಯ ನವರ ವಂಶದವರು. ಇವರೆಲ್ಲ ಥಿಯಾಸಫಿ ಪಂಥದ ಪ್ರಭಾವಕ್ಕೆ ಒಳಗಾಗಿ ಬ್ರಹ್ಮವಿದ್ಯಾ ಸಮಾಜ ಎಂಬ ಹೆಸರಿನ ಸಂಸ್ಥೆಯನ್ನು ಬೆಳೆಸಲು ಶ್ರಮಿಸಿದರು. ಅವರಿಗೆ ಬೈಬಲ್ಲಿನಂತಿದ್ದ The Secret Doctrine by Madame H.P. Blavatsky (1888) ಎಂಬ ಗ್ರಂಥವನ್ನು ಅನುಸರಿಸಿ ಅನೇಕ ಸಣ್ಣಸಣ್ಣ ಮಾಸಪತ್ರಿಕೆಗಳು ಬರುತ್ತಿದ್ದವು. The Physics of the Secret Doctrine ಎಂಬ ಒಂದು ಗ್ರಂಥವನ್ನು William Kingsland ಎಂಬ ಪಾಶ್ಚಾತ್ಯ ವಿದ್ವಾಂಸನು ರಚಿಸಿದ್ದಾನೆ. ಆತನು ಆ ಪುಸ್ತಕವನ್ನು a significant meeting point between physics and metaphysics ಎಂದು ವರ್ಣಿಸಿದ್ದಾನೆ. ಈ ಗ್ರಂಥವೂ ಕೂಡ ಆಗಿನ ಕಾಲದಲ್ಲಿ ವಿದ್ಯಾವಂತರ ಆಸಕ್ತಿಯನ್ನು ಕೆರಳಿಸುವ ಪುಸ್ತಕವಾಗಿತ್ತು. ನಮ್ಮ ತಂದೆಯವರು ಈ ಪಂಥದ ಅಭಿಮಾನಿಗಳಾಗಿದ್ದುದರಿಂದ ನಾನೂ ಈ ಗ್ರಂಥವನ್ನು ನನ್ನ ಬಾಲ್ಯದಲ್ಲಿಯೇ ಓದಿದ ನೆನಪಿದೆ. ನಂಜನಗೂಡಿನಲ್ಲಿ **'ಸುಪಂಥ'** ಎಂಬ ಹೆಸರಿನ ಮಾಸಪತ್ರಿಕೆಯೊಂದು ಈ ಪ್ರಚಾರದಲ್ಲಿ ನಿರತವಾಗಿತ್ತು. ಅದರ ಅನೇಕ ಪ್ರತಿಗಳು ನಮ್ಮ ಮನೆಯಲ್ಲಿ ಇದ್ದವು. ಈ ಸಂಸ್ಥೆಯ ಪ್ರಚಾರಕಾರ್ಯದಲ್ಲಿ ನಿರತರಾಗಿದ್ದ ಅಂಬಳೆ

ವೆಂಕಟೇಶಯ್ಯನವರು ದೊಡ್ಡ ವಿದ್ವಾಂಸರಾಗಿದ್ದು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಮೈಸೂರಿನಲ್ಲಿ ನಿಂತು ಅವರು ಈ ಬ್ರಹ್ಮವಿದ್ಯಾ ಸಮಾಜಕ್ಕೆ ತುಂಬ ಸೇವೆ ಮಾಡಿದರು. ಇವರ ಹಿರಿಯ ಮಗನೇ ಡಾ॥ ಎ. ವೆಂಕಟಸುಬ್ಬಯ್ಯನವರು. ಅವರು ಮುಂದೆ ಮಾಡಿದ ಅನೇಕ ವಿದ್ವತ್ಕಾರ್ಯಗಳಿಗೆ ಅತ್ಯುತ್ತಮವಾದ ಹಿನ್ನೆಲೆ ಇದ್ದಿತೆಂದು ತಿಳಿಸುವುದಕ್ಕೆ ಈ ಚಾರಿತ್ರಿಕಾಂಶಗಳು ಸಹಾಯ ಮಾಡುತ್ತವೆ.

ಡಾ॥ ಎ. ವೆಂಕಟಸುಬ್ಬಯ್ಯನವರ ಜನನವಾದುದು ಮೈಸೂರಿನಲ್ಲಿ (26-05-1886). ಅವರ ಬಾಲ್ಯವಿದ್ಯಾಭ್ಯಾಸಾದಿಗಳ ಬಗ್ಗೆ ಹೆಚ್ಚು ವಿವರಗಳು ದೊರಕುವುದಿಲ್ಲ. ಬಿ.ಎ. ಪದವಿಯನ್ನೂ ಸಂಸ್ಕೃತ ಎಂ.ಎ. ಪದವಿಯನ್ನೂ ಪಡೆದ ಅವರು ಸ್ನಾತಕೋತ್ತರ ವಿದ್ವಾಂಸರಾಗಿ ಮುಂದಿನ ವಿದ್ಯಾಭ್ಯಾಸಕ್ಕೆಂದು ಪರದೇಶಕ್ಕೆ ಪ್ರಯಾಣ ಮಾಡಿದರು. ಜರ್ಮನಿಯಲ್ಲಿ ಅಭ್ಯಾಸಮಾಡಿ ಬಹು ಸ್ವಲ್ಪ ಕಾಲದಲ್ಲಿಯೇ ತಮ್ಮ ಪಿಎಚ್.ಡಿ., ಪದವಿಗೆ ಒಂದು ಪ್ರಬಂಧವನ್ನು ಮಂಡಿಸಿದರು. ಆ ಪ್ರಬಂಧದ ಹೆಸರು The Kalās. (ಕಲೆಗಳು). ಕಲೆ ಕಲಾಶಬ್ದದ ಅತ್ಯಪೂರ್ವವಾದ ವಿವರಣೆಯನ್ನು ಈ ಪ್ರಬಂಧದಲ್ಲಿ ಕಾಣಬಹುದು. ಕೇವಲ 70 ಪುಟದ ಕಿರುಗ್ರಂಥದಲ್ಲಿ ಅಡಗಿರುವ ಸಾಂದ್ರವಾದ ವಿಷಯ ಸಂಗ್ರಹವೂ ಅದರ ವಿಷಯಾರ್ಥನಿರೂಪಣೆಯು ಬಹುಶಕ್ತನಾದ ವಿದ್ವಾಂಸನಿಗೆ ಮಾತ್ರ ಸಾಧ್ಯ. ಈ ಪುಟ್ಟ ಪುಸ್ತಕ ಈಗ ಅನುಪಲಬ್ಧವಾಗಿದೆ. ಅದು ಕೆಲವು ವಿಶ್ವವಿದ್ಯಾನಿಲಯದ ಸಂಗ್ರಹದಲ್ಲಿರಬಹುದು. ನಾನು ಅದನ್ನು ವಿದ್ಯಾರ್ಥಿ ದೆಸೆಯಲ್ಲಿ ಓದಿದ ನೆನಪಿದೆ. ಇದಕ್ಕೆ ಅಗತ್ಯವಾದ ವ್ಯಾಸಂಗ ಎಷ್ಟು ಕಾಲ ಹಿಡಿದಿರಬಹುದು ಎಂಬುದೇ ಬೇಗ ನಿರ್ಧಾರ ಮಾಡಲಾಗದ ವಿಷಯ. ಅದರ ಸಂಗ್ರಹಗುಣ ಸ್ಪಷ್ಟವಾಗಿದ್ದರೂ ನಮ್ಮನ್ನು ಆಯಾ ಆಕರಗಳ ಅಭ್ಯಾಸಕ್ಕೆ ತೊಡಗಿಸುವ ಪ್ರೇರಣಶಕ್ತಿ ಆ ಬರಹಕ್ಕೆ ಇದೆ. ಏನೋ ಓದಾಯಿತು ಎಂದು ಸುಮ್ಮನಿರಲು ಆ ಬರವಣಿಗೆ ಅವಕಾಶಕೊಡುವುದಿಲ್ಲ. ಅಲ್ಲಿರುವ ಸೂಚನೆಗಳ ವ್ಯಾಪ್ತಿ ಎಷ್ಟೆಂದು ತಿಳಿಯಲು ಕೆರಳಿಸುವ ಗುಣ ಆ ಬರಹದಲ್ಲಿದೆ.

ಸಮುದ್ರಯಾನ ಮಾಡುವುದು ಬ್ರಾಹ್ಮಣರಿಗೆ ತ್ಯಾಜ್ಯ. ಸ್ಮೃತಿಗಳು ಹೀಗೆ ಹೇಳಿವೆ ಎಂದು ಬ್ರಾಹ್ಮಣ ವಿದ್ವಾಂಸರು ಹೆಚ್ಚಿನ ಅಭ್ಯಾಸಕ್ಕೆಂದು ಪರದೇಶಗಳಿಗೆ ಹೋಗಿ ಹಿಂತಿರುಗಿದಾಗ ಬ್ರಾಹ್ಮಣ ಶ್ರೋತ್ರಿಯರು ಅವರಿಗೆ ಬ್ರಾಹ್ಮಣ ಸಮಾಜದಿಂದ ಬಹಿಷ್ಕಾರ ಹಾಕಿದ ಅನೇಕ ಘಟನೆಗಳಿವೆ. ಸೀನಿಯರ್ ಸರ್ಜನ್ ಎಸ್. ಸುಬ್ಬರಾವ್, ಎನ್. ಎಸ್. ಸುಬ್ಬರಾವ್ ಮುಂತಾದವರು ಹೀಗೆ ಬಹಿಷ್ಕಾರ ಹೊಂದಿದವರಲ್ಲಿ ಮುಖ್ಯರು. ಹಾಗೆಯೇ ಡಾ॥ ಎ. ವೆಂಕಟಸುಬ್ಬಯ್ಯನವರಿಗೂ ಅವರ ಹತ್ತಿರದ ನೆಂಟರಿಗೂ ಬಹಿಷ್ಕಾರವನ್ನು ಘೋಷಿಸಿತು, ಬ್ರಾಹ್ಮಣ ಶ್ರೋತ್ರಿಯವೃಂದ. ಬಳಿಕ ಅದರ ಪ್ರಭಾವ ಕಡಮೆಯಾಗಿ ಅನೇಕ ಪುರೋಹಿತರೂ ಶ್ರೋತ್ರಿಯರೂ ಮಠಾಧಿಪತಿಗಳೂ ಸಮುದ್ರಯಾನ ಮಾಡಿ ಮಡಿವಂತರಾಗಿಯೇ ಉಳಿದಿದ್ದಾರೆ. ಈಗ ಇದು ಸಮಾಜದ ಚರಿತ್ರೆಗೆ ಸೇರಿದ ವಿಷಯ.

ನಾವು ವಿದ್ಯಾರ್ಥಿಗಳಾಗಿದ್ದಾಗ ನಮಗೆ ಡಾ|| ವೆಂಕಟಸುಬ್ಬಯ್ಯನವರ ಮತ್ತೊಂದು ಗ್ರಂಥ ಬಹು ಪ್ರಧಾನವಾಗಿ ಕಂಡು ಬಂತು. ಆ ಪುಸ್ತಕ Some Saka Dates in inscriptions : A Contribution to Indian Chronology (1918). ಕನ್ನಡದ ಶಾಸನಗಳಲ್ಲಿ ಬರುವ ಕಾಲನಿರೂಪಣೆಯ ಭಾಗದಲ್ಲಿ ಬೇರೆ ಬೇರೆ ಶಕಗಳ ಹೆಸರುಗಳೂ ಪಂಚಾಂಗದ ತೇದಿ ವಾರಗಳ ದಾಖಲೆಗಳೂ ಎಷ್ಟೋ ವೇಳೆ ಸ್ಪಷ್ಟವಾಗಿರುವುದಿಲ್ಲ. ಪಾಶ್ಚಾತ್ಯ ವಿದ್ವಾಂಸರು ಈ ವಿಷಯದಲ್ಲಿ ಸಾಕಷ್ಟು ದುಡಿದಿದ್ದಾರೆ. ಕಾಲಗಣನೆಗೆ ನಮಗೆ ಇರುವುದು ಇವೇ ಮೊದಲ ವಿದ್ವತ್ಕಾರ್ಯಗಳು. ಡಾ|| ವೆಂಕಟಸುಬ್ಬಯ್ಯನವರು ರಾಜವಂಶಾವಳಿಯಲ್ಲಿ ಕಾಣಬರುವ ರಾಜರ ಸಾಮಂತರ ಆಡಳಿತದ ಆದಿ ಅಂತ್ಯಗಳ ನಿರ್ಧಾರಕ್ಕೆ ಶಾಸನಗಳ ಹೇಳಿಕೆಗಳನ್ನು ಹೇಗೆ ವಿವಿಧವಾಗಿ ಅರ್ಥಮಾಡಿಕೊಳ್ಳಬಹುದು ಎಂಬ ಬಗ್ಗೆ ತಮ್ಮದೇ ಆದ ಮಾರ್ಗವನ್ನು ಕಂಡು ಹಿಡಿದರು. ಇದರ ಪ್ರಯೋಜನವೇನು ಎಂಬುದನ್ನು ಈ ಗ್ರಂಥದಲ್ಲಿ ದೃಷ್ಟಾಂತಪೂರ್ವಕವಾಗಿ ಸ್ಪಷ್ಟಪಡಿಸಿದ್ದಾರೆ.

ನಮಗೆ ಕನ್ನಡ ಸಾಹಿತ್ಯಚರಿತ್ರೆಯನ್ನು ಬೋಧಿಸಿದವರು ಪ್ರೊ.ಟಿ.ಎಸ್.ವೆಂಕಣ್ಣಯ್ಯನವರು. ಅವರು ಈ ಗ್ರಂಥದ ಪ್ರಾಧಾನ್ಯವನ್ನು ನಮಗೆ ತಿಳಿಸಿಕೊಟ್ಟು ಡಾ|| ವೆಂಕಟಸುಬ್ಬಯ್ಯನವರ ಇತರ ಬರಹಗಳ ಕಡೆಗೆ ನಮ್ಮ ಗಮನವನ್ನು ಹರಿಸಿದರು. ಡಾ|| ಅವರ ವೈದಿಕ ಸಂಬಂಧವಾದ ಲೇಖನಗಳನ್ನು ಓದಿ ಅರಗಿಸಿಕೊಳ್ಳುವ ಸಾಮರ್ಥ್ಯ ಆ ಕಾಲದಲ್ಲಿ ಇಲ್ಲದೆ ಹೋದುದರಿಂದ ಆಗ ಅವುಗಳನ್ನು ಓದಲಾಗಲಿಲ್ಲ. ಈಚೆಗೆ ಸಂಬಂಧ ಬಂದಾಗಲೆಲ್ಲ ಡಾ|| ಎ.ಆರ್. ಕೃಷ್ಣಶಾಸ್ತ್ರಿಗಳ ಮೂಲಕ ಅವುಗಳ ವಿಸ್ತಾರವನ್ನೂ ಆಳವನ್ನೂ ಅರಿಯುವುದು ಸಾಧ್ಯವಾಯಿತು.

ಪ್ರೊ. ಟಿ.ಎಸ್. ವೆಂಕಣ್ಣಯ್ಯನವರು ನಮ್ಮ ತರಗತಿಗಳಲ್ಲಿ ಪಾಠಮಾಡುವ ಸಂದರ್ಭದಲ್ಲಿ ಡಾ|| ವೆಂಕಟಸುಬ್ಬಯ್ಯನವರ ಒಂದು ಲೇಖನವನ್ನು ಭಾಷಾಂತರಿಸಿರುವುದನ್ನು ತಿಳಿಸಿ ಸಾಹಿತ್ಯ ಪರಿಷತ್ತಿನ ಪತ್ರಿಕೆಯಲ್ಲಿ ಅದು ಮುದ್ರಣವಾಗಿರುವುದನ್ನು ಹೇಳಿ ನಾವು ಅದನ್ನು ಅಭ್ಯಾಸ ಮಾಡುವಂತೆ ಹೇಳಿದರು. ಆ ಒಂದು ಲೇಖನದಿಂದಲೇ ನಮಗೆ ಕರ್ನಾಟಕದ ಪ್ರಾಚೀನ ಚರಿತ್ರೆಯ ಬಗ್ಗೆ ಅಪಾರವಾದ ಆಸಕ್ತಿ ಬೆಳೆಯಿತು.

ಸಾಹಿತ್ಯ ಚರಿತ್ರೆಯ ಪಾಠಗಳು ಮುಂದುವರಿಯುತ್ತಿದ್ದಂತೆ ನಮಗೆ ಈ ಹಿಂದೆಯೇ ಮುದ್ರಣವಾಗಿದ್ದ 'ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ'ವೆಂಬ ಗ್ರಂಥದ ಆಳವಾದ ಪರಿಚಯವನ್ನು ಪ್ರೊ.ಡಿ.ಎಲ್. ಅವರು ಮಾಡಿಕೊಟ್ಟರು. ಆಗ ಅವರು ರಾ. ನರಸಿಂಹಾಚಾರ್ಯರ ಮತ್ತು ಡಾ|| ವೆಂಕಟಸುಬ್ಬಯ್ಯನವರ ವ್ಯಕ್ತಿ ಪರಿಚಯವನ್ನೂ ಮಾಡಿಕೊಟ್ಟರು. ಅವರಿಬ್ಬರ ಲೇಖನಗಳಲ್ಲಿ ಪರಸ್ಪರ ದ್ವೇಷವಿರುವಂತೆ ಕಂಡರೂ ಆ ಇಬ್ಬರ ಲೇಖನಗಳನ್ನು ಚೆನ್ನಾಗಿ ಅಭ್ಯಾಸಮಾಡಿದಾಗ ಓದುಗರಿಗೆ ಆಗುವ ಲಾಭ ದೊಡ್ಡದು ಎಂಬುದು ಸ್ವತಃ ತಿಳಿದು ಬರುತ್ತಿತ್ತು. ಡಾ|| ವೆಂಕಟಸುಬ್ಬಯ್ಯನವರ ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ

ಮತ್ತು ಕರ್ಣಾಟಕ ಕಾದಂಬರಿಯ ಸಂಪುಟಗಳು ನಮಗೆ ಒಂದು ವರ್ಷಪೂರ್ತಿ ದಿನನಿತ್ಯ ಓದುವ ಪುಸ್ತಕಗಳಾಗಿಬಿಟ್ಟವು.

ಪಂಚತಂತ್ರವು ಬಹು ಪ್ರಸಿದ್ಧವಾದ ಪ್ರಾಚೀನಗ್ರಂಥ. ಈ ಗ್ರಂಥದ ಪ್ರಭಾವ ಪ್ರಪಂಚದ ಅನೇಕ ದೇಶಗಳ ಮೇಲೆ ಅನೇಕ ಭಾಷೆಗಳ ಮೇಲೆ ಆಗಿದೆ. ಡಾ|| ಅವರು ಯಾವ ಯಾವ ಭಾಷೆಗಳಲ್ಲಿ ಈ ಪ್ರಭಾವ ಹರಡಿದೆಯೋ ಆ ಎಲ್ಲವನ್ನೂ ಆಳವಾಗಿ ಅಭ್ಯಾಸಮಾಡಿ ಅನೇಕ ಲೇಖನಗಳನ್ನು ರಚಿಸಿದ್ದಾರೆ. ವಸುಭಾಗಭಟ್ಟ ಮತ್ತು ವಿಷ್ಣುಶರ್ಮರ ಬೇರೆ ಬೇರೆ ಸಂಪ್ರದಾಯದ ಪಾಠಗಳಿರುವುದನ್ನು ವಿಮರ್ಶಿಸಿ ಎಲ್ಲೆಲ್ಲಿ ಸಾದೃಶ್ಯ ವೈದೃಶ್ಯಗಳಿವೆಯೋ ಅವನ್ನೆಲ್ಲ ದಾಖಲಿಸಿದ್ದಾರೆ. ಇದೊಂದು ಗೊಂದಲದ ಪ್ರಪಂಚ. ಆದರೆ ಡಾ|| ವೆಂಕಟಸುಬ್ಬಯ್ಯನವರು ಸಾಧ್ಯವಾದಷ್ಟು ಮಟ್ಟಿಗೆ ಅದನ್ನೆಲ್ಲ ಪರಿಷ್ಕರಿಸಿ ಒಂದು ರೂಪಕ್ಕೆ ತಂದುಬಿಟ್ಟಿದ್ದಾರೆ. ಹೀಗೆಂದರೆ ಪಂಚತಂತ್ರದ ಶುದ್ಧ ಪಾಠವೊಂದು ಸಿದ್ಧವಾಯಿತು ಎಂದರ್ಥವಲ್ಲ. ಪಂಚತಂತ್ರದ ವಿವಿಧ ಪಾಠಗಳನ್ನು ಪರಿಶೀಲಿಸಿ ಪ್ರತಿಯೊಂದರಲ್ಲಿಯೂ ಕಾಣಬರುವ ವ್ಯತ್ಯಾಸಗಳನ್ನು ದಾಖಲಿಸಿದ್ದಾರೆ ಎಂದರ್ಥ.

'ಮನುಧರ್ಮಸಾರ'ವೆಂಬ ಒಂದು ಸಂಸ್ಕೃತಗ್ರಂಥವನ್ನು ಸಂಸ್ಕೃತದಲ್ಲಿ ಕಾಶಿಯ ಬಾಬು ಭಗವಾನ್ ದಾಸ್ ಎಂಬುವರು ರಚಿಸಿದ್ದಾರೆ. ಅದನ್ನು ಡಾ|| ಜಿ. ವೆಂಕಟಸುಬ್ಬಯ್ಯನವರು ಕನ್ನಡಕ್ಕೆ ಅನುವಾದಮಾಡಿದ್ದಾರೆ. ಇದು ಮನುಸ್ಮೃತಿಯ ಬಗ್ಗೆ ಬರೆದ ವಿವೇಚನೆಯ ಗ್ರಂಥ. ಮನುಸ್ಮೃತಿಯನ್ನು ಕನ್ನಡಕ್ಕೆ ಅನುವಾದ ಮಾಡಿದ ಗ್ರಂಥವೊಂದು ಬಹು ಹಿಂದೆಯೇ ಪ್ರಕಟವಾಗಿದೆ. ಅದರೆ ಇದು ಪ್ರತಿಯೊಂದು ಪದ್ಯವನ್ನೂ ಕನ್ನಡಕ್ಕೆ ಅನುವಾದ ಮಾಡಿರುವ ಗ್ರಂಥ. ಇದು 1888ರಲ್ಲಿ ಬೊಂಬಾಯಿಯಲ್ಲಿ ಪ್ರಕಟವಾಗಿದೆ. ಇದರಲ್ಲಿ ಹೀಗೆ ಬರವಣಿಗೆ ಇದೆ :

> ಇದನ್ನು ಕೆ. ವೆಂಕಟರಮಣಶಾಸ್ತ್ರೀ ಸೂರಿ, ಎ.ಹ.ಸ. ಇವರ ಅನುಜ್ಞೆಯಿಂದಲೂ ಸಹಾಯದಿಂದಲೂ, ಕೃಷ್ಣಾಜೀಬಿಷ್ಟೋ ಭಾಗವತ ಇವರು ಭಾಷಾಂತರ ಮಾಡಿದರು.

ಇದರ ಪ್ರಕಟಣೆಗೆ ಸಹಾಯ ಮಾಡಿದ ಮೂವರ ಹೆಸರುಗಳು ದಾಖಲಾಗಿವೆ. ಇದು 449 ಪುಟಗಳ ದೊಡ್ಡ ಗ್ರಂಥ.

ಹೀಗಿರುವುದರಿಂದ ಮನುಸ್ಮೃತಿಯನ್ನು ಅನುವಾದ ಮಾಡುವ ಅಭಿಪ್ರಾಯ ಡಾ|| ಅವರಿಗೆ ಇರಲಿಲ್ಲ . ಆದರೆ ಅದರ ಬಗ್ಗೆ ಬರೆದಿರುವ ಸಂಸ್ಕೃತ ಗ್ರಂಥದಲ್ಲಿ ಆಧುನಿಕ ಸಮಾಜಕ್ಕೆ ಸರಿಯಾಗಿ ಮನುಸ್ಮೃತಿಯನ್ನು ಹೇಗೆ ಹೊಂದಿಸಿಕೊಳ್ಳಬೇಕೆಂಬ ಚರ್ಚೆಯ ವಿಷಯವಿದೆ. ಇದು ಡಾ|| ಅವರಿಗೆ ಸ್ವಾರಸ್ಯವಾದ ವಿಷಯವಾಗಿ ಅದನ್ನು ಕನ್ನಡಿಸಿರಬೇಕು.

ಡಾ|| ವೆಂಕಟಸುಬ್ಬಯ್ಯನವರು ವ್ಯವಹಾರಕುಶಲರಾಗಿರಲಿಲ್ಲ. ಅವರಿಗೆ ಇದ್ದ ಭೂಮಿ ಕಾಣಿಗಳನ್ನು ಕಳೆದುಕೊಂಡರು. ತಮ್ಮ ಅಧ್ಯಯನದಲ್ಲಿ ನಿರತರಾಗಿ ನಿರಾತಂಕ

ವಾಗಿದ್ದು ಬಿಟ್ಟರು. ಅವರು ಮದುವೆಯಾದ ಹುಡುಗಿ ಬೇಗ ತೀರಿಕೊಂಡು ಅವರು ಮದುವೆಯಾಗದವರಂತೆಯೇ ಬಾಳಿದರು. ಊಟೋಪಚಾರವನ್ನು ಹತ್ತಿರದ ನಂಟರು ನೋಡಿಕೊಂಡರು. ಉಡುಪಿನ ಬಗ್ಗೆ ಎಂದೂ ತಲೆಕೆಡಿಸಿಕೊಂಡವರಲ್ಲ. ತಮ್ಮನ್ನು ಯಾರೂ ಕಾಣರು ಎನ್ನುವಂತೆ ಎಲೆಮರೆಯ ಕಾಯಿಯಾಗಿಯೇ ಬದುಕಿದರು.

ಈಗಿನ ಕನ್ನಡ ವಿದ್ಯಾರ್ಥಿಗಳಿಗೆ ಡಾ|| ಎ. ವೆಂಕಟಸುಬ್ಬಯ್ಯನವರ ಗ್ರಂಥಗಳ ಬಗ್ಗೆ ಪರಿಚಯವೇ ಆಗುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ವಿಷಯ ವಿಶ್ವಕೋಶದಲ್ಲಿ ಅವರ ಹೆಸರು ಕಾಣುವುದಿಲ್ಲ. ನೋಡುವುದಕ್ಕೆ ಅವರು ಅಷ್ಟು ಆಕರ್ಷಕ ವ್ಯಕ್ತಿಯಾಗಿರಲಿಲ್ಲ. ದಪ್ಪ ಕನ್ನಡಕವನ್ನು ಧರಿಸುತ್ತಿದ್ದರು. ಇದನ್ನೆಲ್ಲ ನೆನೆದಾಗ ನಮ್ಮ ಇಂಟರ್‌ಮೀಡಿಯಟ್ ವಿದ್ಯಾಭ್ಯಾಸದ ಸಮಯದಲ್ಲಿ ನಮಗೆ ಪ್ರಾಚೀನ ಚರಿತ್ರೆಯನ್ನು ಬೋಧಿಸುತ್ತಿದ್ದ ವೆಂಕಟೇಶ್ವರನ್ ಎಂಬ ಉಪಾಧ್ಯಾಯರು ಹೇಳಿದ ಮಾತು ನೆನಪಿಗೆ ಬರುತ್ತದೆ. ಅವರು ನಮಗೆ ಗ್ರೀಕ್ ಮತ್ತು ರೋಮನ್ ದೇಶಗಳ ಪ್ರಾಚೀನ ಚರಿತ್ರೆಯನ್ನು ಬೋಧಿಸಬೇಕಾಗಿತ್ತು. ಮೊದಲನೆಯ ತರಗತಿಯಲ್ಲಿ ಆ ಮುಂದೆ ಕೆಲವು ಪಾಠಗಳಲ್ಲಿ ಅವರು ನಮಗೆ ಈ ಎರಡು ದೇಶಗಳ ಚರಿತ್ರೆಯನ್ನು ವಿಸ್ತಾರವಾಗಿ ತಿಳಿಸಿ ಆ ಬಳಿಕ ಈ ಎರಡು ದೇಶದ ಚರಿತ್ರೆಗಳೇ ಸಾಲದು. ಪ್ರಾಚೀನ ಚೀನಾ, ಜಪಾನ್, ಈಜಿಪ್ಟ್ ದೇಶಗಳ ಪರಿಚಯವೂ ಬೇಕು ಎಂದು ಹೇಳಿ ಒಂದು ಪಾಠದಲ್ಲಿ ಚೀನಾ ದೇಶದ ಕಥೆಯನ್ನು ಹೇಳಿ ಕನ್‌ಫ್ಯೂಷಿಯಸ್, ಸನ್‌ಯಾತ್‌ಸೆನ್, ಲೋಟ್ಸೆ ಇವರುಗಳ ಬಗ್ಗೆ ವಿವರಿಸಿ ಕೊನೆಗೆ ಹೀಗೆ ಹೇಳಿದರು : There is a Confucius in Mysore also. You can see him sometimes in the Oriental Library. ನಾವು ಡಾ|| ವೆಂಕಟಸುಬ್ಬಯ್ಯನವರನ್ನು ಕಂಡಾಗಲೆಲ್ಲ ನಮ್ಮ ಅಧ್ಯಾಪಕರು ಆ ಮಾತನ್ನೂ ತಮಾಷೆಗಾಗಿ ಹೇಳಿದ್ದರು ಎಂದುಕೊಂಡಿದ್ದೆವು. ಏಕೆಂದರೆ ಅವರು ಚೀನಾದೇಶದ ವ್ಯಕ್ತಿಯಂತೆಯೇ ಕಾಣುತ್ತಿದ್ದರು. ಆದರೆ ಮಹಾರಾಜರ ಕಾಲೇಜಿಗೆ ಬಂದು ಅವರ ವಿಚಾರವನ್ನು ಅರಿತಮೇಲೆ ಆ ಉಪಾಧ್ಯಾಯರ ಮಾತು ಹೊಗಳಿಕೆಯ ಮಾತು ಎಂಬುದು ಅರ್ಥವಾಯಿತು.

ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಎಲ್ಲವೂ ನೇರವಾಗಿ ಕಥೆಯಂತೆ ಕಾದಂಬರಿಯಂತೆ ಸುಸೂತ್ರವಾಗಿ ತಿಳಿಯಬರುವುದಿಲ್ಲ. ಅಲ್ಲಲ್ಲಿ ಕೊಂಡಿಗಳು ಕಳಚಿರುವುದು ಕಾಣಬರುತ್ತದೆ. ಈ ಕೊಂಡಿಗಳನ್ನು ಸೇರಿಸುವ ಕಾರ್ಯವನ್ನು ಡಾ|| ವೆಂಕಟಸುಬ್ಬಯ್ಯನವರು ಮಾಡಿದರು. ಅವರನ್ನು ನಾವು ಆಗಿಂದಾಗ ನೆನಪಿಗೆ ತಂದುಕೊಳ್ಳಬೇಕು.

ಈಗ ಕನ್ನಡ ಪುಸ್ತಕ ಪ್ರಾಧಿಕಾರದವರು ಡಾ|| ಎ. ವೆಂಕಟಸುಬ್ಬಯ್ಯನವರ ಸಂಶೋಧನ ಲೇಖನಗಳು ಎಂಬ ಹೆಸರಿನಲ್ಲಿ ಒಂದು ಹೊಸ ಸಂಪುಟವನ್ನು ಪ್ರಕಟಿಸಿದ್ದಾರೆ. ಕನ್ನಡಿಗರಿಗೆ ಡಾ|| ಅವರ ನೆನಪನ್ನು ಮುಂದುವರಿಸುವ ಈ ಗ್ರಂಥವನ್ನು ನಮ್ಮ ಜನ ಓದಬೇಕು.

ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು - ನೂರರ ನೆನಪು
(1890-1968)

ಈ ಶತಮಾನದ ಮೊದಲ ಭಾಗದಲ್ಲಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ನಾಡಿನ ಪುಣ್ಯದಿಂದ ನವೋದಯವೆಂಬ ಹೆಸರಿನ ಚಳವಳಿಯು ಮೂಡಿಬಂದಿತು. ಜಡತೆಯಿಂದ ಕುಗ್ಗಿ ಮಲಗಿದ್ದ ಜನತೆಯನ್ನು ಎಚ್ಚರಿಸಿ ಸುಪ್ತವಾಗಿದ್ದ ಚೈತನ್ಯವನ್ನು ಚುರುಕುಗೊಳಿಸಿತು. ಕತ್ತಲೆ ಸರಿದು ಬೆಳಕು ಹರಿಯಿತು. ನಾಡಿನಲ್ಲಿ ಎಲ್ಲಕಡೆ ಚಟುವಟಿಕೆ ಕಾಣಬಂತು. ಇಂಥ ಹೊಸ ಸ್ಪಂದನವನ್ನು ಉಂಟುಮಾಡಿದ ಮಹಾವ್ಯಕ್ತಿಗಳು ಯಾರು ಎಂದು ಸಂಶೋಧನೆ ಮಾಡುವುದು ತುಂಬ ಫಲದಾಯಕವಾದ ಬೌದ್ಧಿಕ ಕಾರ್ಯವಾಗುತ್ತದೆ. ಆ ಸಮಯದಲ್ಲಿ ಕನ್ನಡ ಭಾಷಾಸಾಹಿತ್ಯಗಳ ಉಜ್ಜೀವನಕ್ಕೆಂದು ವ್ರತಹಿಡಿದ ಉದಾತ್ತ ವ್ಯಕ್ತಿಗಳ ಪಂಕ್ತಿಯಲ್ಲಿ ಪ್ರೊ. ಕೃಷ್ಣಶಾಸ್ತ್ರಿಗಳು ಪ್ರಮುಖರಾಗುತ್ತಾರೆ. ಅವರ ಜೀವನವನ್ನೂ ಕಾರ್ಯವಿವರಗಳನ್ನೂ ಅಭ್ಯಾಸಮಾಡುವವರಿಗೆ ಅವರ ವ್ಯಕ್ತಿತ್ವ ಆಶ್ಚರ್ಯವನ್ನುಂಟುಮಾಡುತ್ತದೆ.

ನೂರಾರು ವರ್ಷಗಳ ಹಿಂದೆ 1890ನೆಯ ಇಸವಿ ಫೆಬ್ರವರಿ 12 ರಂದು (ವಿರೋಧಿ ಸಂವತ್ಸರ ಮಾಘ ಬಹುಳ ಸಪ್ತಮೀ ಬುಧವಾರ) ಮೈಸೂರಿನಲ್ಲಿ ಅವರು ಜನ್ಮ ತಳೆದರು. ಅವರ ತಂದೆ ರಾಮಕೃಷ್ಣಶಾಸ್ತ್ರಿಗಳು ಮೈಸೂರಿನ ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣಶಾಸ್ತ್ರದ ಮಹಾವಿದ್ವಾಂಸರಾಗಿ ಶಿಷ್ಯರಿಗೆ ಬೋಧಿಸುತ್ತಿದ್ದರು. ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ಕೃಷ್ಣಶಾಸ್ತ್ರಿಗಳು ಅಂಥ ಸಂಸಾರಗಳಿಗೆ

ಒದಗಿಬರುವ ಎಲ್ಲ ಕಷ್ಟಗಳನ್ನೂ ಅನುಭವಿಸಬೇಕಾಯಿತು. ಆದರೆ ಅವರ ತಂದೆ ಈ ಬಾಲಕನಿಗೆ ತಾಯಿಯೂ ಆಗಿ ವಾತ್ಸಲ್ಯದಿಂದ ಬೆಳೆಸಿ ವಿದ್ಯಾವಂತನನ್ನಾಗಿ ಮಾಡಿದರು. ಸಾಮಾನ್ಯವಾಗಿ ಸಂಸ್ಕೃತಭಾಷೆಯ ಅಭ್ಯಾಸ ಅಮರವನ್ನು ಬಾಯಿಪಾಠ ಮಾಡುವುದರಿಂದ ಮೊದಲಾಗುತ್ತಿದ್ದ ಆ ಕಾಲದಲ್ಲಿ ಕೃಷ್ಣಶಾಸ್ತ್ರಿಗಳ ತಂದೆ ಬಾಲಕನಿಗೆ ವ್ಯಾಕರಣ ಶಾಸ್ತ್ರದ ಮಾಹೇಶ್ವರ ಸೂತ್ರಗಳಿಂದಲೇ ಪಾಠವನ್ನು ಮೊದಲು ಮಾಡಿದರಂತೆ. ಸಂಸ್ಕೃತದ ಜೊತೆಗೆ ಲೌಕಿಕದ ಉಪಯೋಗಕ್ಕೆಂದು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳನ್ನೂ ಅಭ್ಯಾಸ ಮಾಡಿಸಿದರು. ಹೀಗಾಗಿ ಮೈಸೂರಿನ ರಾಜಾಸ್ಕೂಲು, 'ವೆಸ್ಲಿಯನ್ ಮಿಷನ್ ಹೈಸ್ಕೂಲ್' ಮತ್ತು 'ಮಹಾರಾಜರ ಕಾಲೇಜು'ಗಳಲ್ಲಿ ಅಭ್ಯಾಸ ಮಾಡಿ ಕೃಷ್ಣಶಾಸ್ತ್ರಿಗಳು ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ತೇರ್ಗಡೆಯಾದರು. ಗಣಿತಶಾಸ್ತ್ರವು ಅವರಿಗೆ ಪ್ರಿಯವಾದ ವಿಷಯವಾಗಿದ್ದರೂ ಅದನ್ನು ವ್ಯಾಸಂಗ ಮಾಡಬೇಕಾದರೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಬೇಕಾಗಿತ್ತು. ಅದಕ್ಕೆ ಬೇಕಾದ ಆರ್ಥಿಕ ಅನುಕೂಲವಿಲ್ಲದೆ ಚರಿತ್ರೆಯನ್ನೂ ಭಾಷೆಗಳನ್ನೂ ಮೈಸೂರಿನಲ್ಲಿಯೇ ಅಭ್ಯಾಸ ಮಾಡಿದರು. ಎಂ.ಸಿ.ಎಸ್. ಪರೀಕ್ಷೆಗೂ ಕುಳಿತು ಸ್ವಲ್ಪದರಲ್ಲಿ ಆಯ್ಕೆಯಾಗದೆ ಉಳಿದರು. ಕನ್ನಡದ ಪುಣ್ಯದಿಂದ ಕೃಷ್ಣಶಾಸ್ತ್ರಿಗಳಿಗೆ ಸರಕಾರದ ಉನ್ನತ ಅಧಿಕಾರ ತಪ್ಪಿತು.

ಬಾಲ್ಯದಿಂದಲೂ ಕೃಷ್ಣಶಾಸ್ತ್ರಿಗಳು ಅಭ್ಯಾಸದಲ್ಲಿಟ್ಟುಕೊಂಡಿದ್ದ ಕೆಲವು ಚಟುವಟಿಕೆಗಳು ಅವರಿಗೆ ಜೀವನದಲ್ಲಿ ಮುಂದೆ ಬಹಳ ಸಹಾಯಕ್ಕೆ ಬಂದುವು. ಪ್ರತಿದಿನ ಬೆಳಗ್ಗೆ ಚಾಮುಂಡಿಬೆಟ್ಟವನ್ನು ಹತ್ತಿ ಇಳಿಯುವುದು, ಸಂಜೆ ಗರಡಿಯಲ್ಲಿ ಸಾಮುಮಾಡಿ ಮೈಕಟ್ಟನ್ನು ದೃಢಪಡಿಸಿಕೊಳ್ಳುವುದು. ನಿತ್ಯವೂ ನಾಲ್ಕಾರು ಗಂಟೆಗಳಷ್ಟು ಕಾಲ ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಓದಿ ವಿಷಯ ಸಂಗ್ರಹ ಮಾಡುವುದು, ಅಚ್ಚುಕಟ್ಟಾಗಿ ಅಡಿಗೆ ಮಾಡುವುದು. ಮೈಸೂರಿನ ಅರಮನೆಯ ಪರಿಚಯವು ಇದ್ದುದರಿಂದ ಸಂಗೀತ, ಸಾಹಿತ್ಯ, ಚಿತ್ರಕಲೆ ಇವುಗಳಲ್ಲಿ ಕ್ರಮವಾಗಿ ಜ್ಞಾನವನ್ನು ವೃದ್ಧಿಪಡಿಸಿಕೊಳ್ಳುವುದು. ಈ ಎಲ್ಲ ಕಾರ್ಯಕ್ರಮಗಳನ್ನೂ ವ್ಯವಧಾನದಿಂದ ನಡೆಸಿ ಶ್ರೀಯುತರು ಉತ್ಸಾಹಿ ಸುಸಂಸ್ಕೃತ ತರುಣನಾಗಿ ಬೆಳೆಯುವುದು ಸಾಧ್ಯವಾಯಿತು.

1915ರಲ್ಲಿ ಕೃಷ್ಣಶಾಸ್ತ್ರಿಗಳು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡದ ಅಧ್ಯಾಪಕರಾಗಿ ಸೇರಿದ ಮೇಲೆ ಅವರ ಪ್ರತಿಭೆಗೆ ಯೋಗ್ಯವಾದ ಮೆರುಗು ಬಂತು. ಆ ಕಾಲದಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಬಹು ಪ್ರಸಿದ್ಧರಾದ ಪ್ರಾಧ್ಯಾಪಕರೂ ಅಧ್ಯಾಪಕರೂ ಇದ್ದು ಪ್ರತಿಯೊಬ್ಬರೂ ಒಂದೊಂದು ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದರು. ಆಗ ಕನ್ನಡ ಪಾಠಹೇಳಿಕೊಡುವವರನ್ನು ಉಪನ್ಯಾಸಕರೆಂದಾಗಲಿ ಅಧ್ಯಾಪಕರೆಂದಾಗಲಿ ಕರೆಯುತ್ತಿರಲಿಲ್ಲ. ಅವರು 'ಮುನಷಿ'ಗಳು ಎಂದು ಅಗೌರವದಿಂದ ಗುರುತಿಸಲಾಗುತ್ತಿತ್ತು. ಇಂಗ್ಲಿಷ್ ಭಾಷೆಗೆ ಪ್ರಾಧಾನ್ಯವಿದ್ದು ಆ ಭಾಷೆ ಬಾರದವರು ವಿದ್ಯಾರ್ಥಿಗಳ ಕುಚೇಷ್ಟೆಗಳಿಗೆ ಸಿಕ್ಕುತ್ತಿದ್ದರು. ಆದುದರಿಂದ ಕಾಲೇಜಿನ ಆವರಣದಲ್ಲಿ ಆತ್ಮಗೌರವವನ್ನು ಕಾಪಾಡಿಕೊಳ್ಳಬೇಕಾದರೆ ಕನ್ನಡದ

ಅಧ್ಯಾಪಕರು ಇಂಗ್ಲಿಷ್ ಸಾಹಿತ್ಯದಲ್ಲಿ ಅಪಾರ ಪರಿಶ್ರಮ ಉಳ್ಳವರಾಗಿದ್ದು ಕನ್ನಡ ಬೋಧನೆ ಮಾಡಬೇಕಾಗಿತ್ತು. ಸಂಸ್ಕೃತದ ಪರಿಚಯವಿದ್ದಷ್ಟೂ ಹೆಚ್ಚು ಅನುಕೂಲಕರವಾಗಿತ್ತು. ಈ ಮೂರೂ ಸಾಹಿತ್ಯಗಳ ತುಲನಾತ್ಮಕ ವಿಮರ್ಶೆಮಾಡಿ ಯಾವುದು ಉತ್ತಮ ಎಂಬುದನ್ನು ವಿದ್ಯಾರ್ಥಿಗಳಿಗೆ ಸಕಾರಣವಾಗಿ ನಿರೂಪಿಸಿ ಕನ್ನಡದ ಸತ್ವವನ್ನೂ ಕನ್ನಡ ಅಧ್ಯಾಪಕನ ಸತ್ವವನ್ನೂ ಕಾಪಾಡಿಕೊಳ್ಳಬೇಕಾಗಿತ್ತು. ಗರಣಿ ಕೃಷ್ಣಾಚಾರ್ಯರು ನಿವೃತ್ತಿ ಹೊಂದಿದ ಸಮಯದಲ್ಲಿ ಅಲ್ಲಿ ನೇಮಕವಾದ ಕೃಷ್ಣಶಾಸ್ತ್ರಿಗಳು ಈ ಕಾರ್ಯಕ್ಕೆ ಹೇಳಿಮಾಡಿಸಿದ ವ್ಯಕ್ತಿತ್ವವುಳ್ಳವರಾಗಿದ್ದರು. ಅವರಿಗೆ ಇಂಗ್ಲಿಷ್, ಕನ್ನಡ, ಸಂಸ್ಕೃತಗಳ ಜೊತೆಗೆ ಹಿಂದಿ, ಬಂಗಾಳಿ ಭಾಷೆಗಳ ಪರಿಚಯವೂ ಚೆನ್ನಾಗಿತ್ತು. ಆದುದರಿಂದ ತರಗತಿಯ ಉಪನ್ಯಾಸಗಳಲ್ಲಿ ಈ ಎಲ್ಲ ವಿಷಯಗಳು ಅಯಾಚಿತವಾಗಿ ಉಪಯೋಗಗೊಳ್ಳುತ್ತಿದ್ದುದರಿಂದ ಈ ಯುವಕ ಉಪನ್ಯಾಸಕರು ದೊಡ್ಡ ವಿದ್ವಾಂಸರೆಂಬ ವಿಚಾರವು ತಾನಾಗಿ ತಿಳಿದು ಅವರು ಬಹುಬೇಗ ವಿದ್ಯಾರ್ಥಿಗಳಿಗೆ ಪ್ರಿಯರಾಗಿಬಿಟ್ಟರು. ವಿದ್ಯಾರ್ಥಿಗಳಲ್ಲಿ ಸಿ.ಕೆ. ವೆಂಕಟರಾಮಯ್ಯ, ಎನ್.ನೀಲಕಂಠಪ್ಪ, ಎಸ್.ವಿ. ರಂಗಣ್ಣ, ವಿ. ಸೀತಾರಾಮಯ್ಯ, ನಿಟ್ಟೂರು ಶ್ರೀನಿವಾಸರಾವ್. ಕೆ. ಗೋಪಾಲಕೃಷ್ಣರಾವ್ ಮುಂತಾದವರಿದ್ದರು. ಇವರೆಲ್ಲ ಮುಂದೆ ಪ್ರಸಿದ್ಧ ವ್ಯಕ್ತಿಗಳಾದುದು ಕನ್ನಡಿಗರಿಗೆ ತಿಳಿದ ವಿಷಯ. ಈ ವಿದ್ಯಾರ್ಥಿಗಳ ಸಹಕಾರದಿಂದ 1918ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಒಂದು ಕರ್ಣಾಟಕ ಸಂಘವನ್ನು ಪ್ರಾರಂಭಿಸುವುದು ಸಾಧ್ಯವಾಯಿತು. 1919ರಲ್ಲಿ 'ಪ್ರಬುದ್ಧ ಕರ್ಣಾಟಕ'ವೆಂಬ ವಿದ್ಯಾರ್ಥಿಗಳ ಪತ್ರಿಕೆಯನ್ನೂ ಕೃಷ್ಣಶಾಸ್ತ್ರಿಗಳು ಪ್ರಾರಂಭಿಸಿದರು.

ಇದೇ ಸಮಯದಲ್ಲಿ ಟಿ.ಎಸ್. ವೆಂಕಣ್ಣಯ್ಯನವರೂ ಬೆಂಗಳೂರಿಗೆ ಬಂದು ಸೇರಿದ್ದುದರಿಂದ ಬೆಂಗಳೂರಿನಲ್ಲಿ ಒಂದು ಕನ್ನಡದ ಸೇನೆ ಸಿದ್ಧವಾಯಿತು. ಈ ಸೇನೆ ಯಾವ ಯುದ್ಧವನ್ನೂ ಮಾಡದ ಆದರೆ ಎಲ್ಲ ಕನ್ನಡಿಗರನ್ನು ಎಚ್ಚರಿಸುವ ಸೇನೆಯಾಯಿತು. ಬಿ.ಎಂ.ಶ್ರೀಕಂಠಯ್ಯನವರ ಶಿಷ್ಯರಾಗಿದ್ದ , ಎ.ಆರ್.ಕೃಷ್ಣಶಾಸ್ತ್ರಿಗಳು, ಟಿ.ಎಸ್. ವೆಂಕಣ್ಣಯ್ಯನವರು, ಮಾಸ್ತಿ ವೆಂಕಟೇಶ ಅಯ್ಯಂಗಾರರು ಮತ್ತು ಇವರೆಲ್ಲರ ಮಿತ್ರರಾಗಿದ್ದ ಎಂ.ಆರ್. ಶ್ರೀನಿವಾಸಮೂರ್ತಿಗಳು, ಡಿ.ವಿ.ಗುಂಡಪ್ಪನವರು ಮತ್ತು ಇವರೆಲ್ಲರಿಗೂ ಹಿರಿಯರಾಗಿದ್ದ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಈ ಚಟುವಟಿಕೆಯ ಕೇಂದ್ರ ಬಿಂದುಗಳಾಗಿ ಪ್ರಬುದ್ಧ ಕರ್ಣಾಟಕವನ್ನು ಅನ್ವರ್ಥವನ್ನಾಗಿ ಮಾಡಿದರು.

'ಪ್ರಬುದ್ಧ ಕರ್ಣಾಟಕ'ವನ್ನು ಮೈಸೂರು ವಿಶ್ವವಿದ್ಯಾನಿಲಯವು ತನ್ನ ಆಡಳಿತಕ್ಕೆ ತೆಗೆದುಕೊಂಡು ಅದಕ್ಕೆ ಆರ್ಥಿಕ ಸಹಾಯವನ್ನು ಒದಗಿಸಿತು. ಈಗಲೂ ಕನ್ನಡದ ಪ್ರಸಿದ್ಧ ತ್ರೈಮಾಸಿಕವಾಗಿ ಇನ್ನೂ ಬಾಳನ್ನು ನಡೆಸುತ್ತಿರುವ ಈ ಪತ್ರಿಕೆ ಎಷ್ಟು ಜನ ಸಾಹಿತಿಗಳಿಗೆ ಪ್ರೋತ್ಸಾಹ ನೀಡಿ, ಎಷ್ಟು ಸಾಹಿತ್ಯವನ್ನು ನಿರ್ಮಾಣಮಾಡಿದೆಯೆಂಬುದನ್ನು ಗಣನೆಗೆ ತಂದುಕೊಂಡರೆ ಕೃಷ್ಣಶಾಸ್ತ್ರಿಗಳ ದೂರದೃಷ್ಟಿ ಎಷ್ಟು ಫಲವನ್ನು ನೀಡಿದೆ ಎಂಬುದು ಅರ್ಥವಾಗುತ್ತದೆ. ಕೃಷ್ಣಶಾಸ್ತ್ರಿಗಳು ಈ ವಿಚಾರದಲ್ಲಿ ಹೇಳಿರುವ ಮಾತುಗಳನ್ನು ನೆನೆದು

ಕೊಳ್ಳುವುದು ಇಲ್ಲಿ ಉಚಿತ : "ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಷ್ಟೋ ಉತ್ಸಾಹವಾದ ವ್ಯವಸಾಯ ನಡೆದಿದೆ. ಹಲವು ಕರ್ನಾಟಕರು ತಾವು ನಡೆಯುವಂತೆ ಸ್ವಚ್ಛಂದವಾದ ಸಾಹಸವಾಗಿ ಕಾಡು ಕಡಿದು, ಭೂಮಿಯನ್ನು ಉತ್ತು, ನೆಲ ಹದಮಾಡಿ, ಬೀಜ ಹಾಕಿ, ಎಷ್ಟೋ ಒಳ್ಳೆ ನೀರು ಬೀಜಗೊಬ್ಬರಗಳನ್ನು ಒದಗಿಸಿಕೊಟ್ಟಿದೆ ಎಂದು ನಂಬಿದ್ದೇನೆ. ಆದರೆ ಬರಿಯ ನೆಲ ನೇಗಿಲುಗಳಿಂದ ಆಗುವುದೇನು ? ಫಲ ತೆನೆಯಲು 'ನಭೋಮಂಡಲಗಳು' ಬೇಕು. ಅವರನ್ನು ಅರಿಸಿಕಳುಹಿಸಿಕೊಡುವುದು ಭಗವಂತನ ದಯೆ, ನಾಡಿನ ಪುಣ್ಯ."

1919ನೆಯ ವರ್ಷವಾದಮೇಲೆ ಕೃಷ್ಣಶಾಸ್ತ್ರಿಗಳು ಮೈಸೂರಿನ ಒರಿಯಂಟಲ್ ಲೈಬ್ರರಿಯಲ್ಲಿ ಸಂಶೋಧಕ ವಿದ್ವಾಂಸರಾಗಿ ಕೆಲಸಮಾಡಿದರು. ಅವರು ಪ್ರಕಟಪಡಿಸಿರುವ 'ಧರ್ಮಾಮೃತ'ಗ್ರಂಥ ಈಗಲೂ ಗ್ರಂಥ ಸಂಪಾದನೆಗೆ ಮಾರ್ಗದರ್ಶಕವಾಗಿದೆ.

ಕೃಷ್ಣಶಾಸ್ತ್ರಿಗಳ ಸಾಹಿತ್ಯ ಕೃಷಿಯೂ ಬಹು ಮೌಲಿಕವಾದುದು. ಇತರರು ಯಾರೂ ಕೈಹಾಕಲು ಹಿಂದೆಗೆಯುವ ಸಾಹಸಕ್ಕೆ ಮಾತ್ರ ಅವರು ಮುಂದುವರಿಯುತ್ತಿದ್ದರು. ಹತ್ತು ವರ್ಷಗಳ ಸತತ ಸಂಶೋಧನೆ ಮತ್ತು ವ್ಯಾಸಂಗಗಳ ಪರಿಣಾಮವಾಗಿ ಪ್ರಕಟವಾಗಿರುವ 'ಸಂಸ್ಕೃತನಾಟಕಗಳು' ಎಂಥ ಕೃತಿಯೊಂದನ್ನು ಕುರಿತು ಕೃಷ್ಣಶಾಸ್ತ್ರಿಗಳಿಗೆ ಸಂಸ್ಕೃತವನ್ನು ಬೋಧಿಸಿದ ಪ್ರೊ. ಹಿರಿಯಣ್ಣನವರು ಹೇಳಿರುವ ಮಾತುಗಳು ಇವು : "It is in my opinion, a most valuable publication. I can hardly think of a work even in English- let alone Indian languages- which gives in such a brief compass so clear, comprehensive and reliable an account of the subject or utilizes so fully the results of modern research concerning it." ಗುರುಗಳಿಂದ ಬಂದ ಇಂಥ ತುಂಬು ಹೃದಯದ ಮೆಚ್ಚುಗೆಗಿಂತ ಇನ್ನೇನು ತಾನೇ ಗೌರವವಿದ್ದೀತು !

ವಿಶ್ವವಿದ್ಯಾನಿಲಯದಿಂದ ನಿವೃತ್ತರಾದಮೇಲೂ ಕೃಷ್ಣಶಾಸ್ತ್ರಿಗಳು ಸಾಹಿತ್ಯಕಾರ್ಯದಿಂದ ನಿವೃತ್ತರಾಗಲಿಲ್ಲ. ಸಂಸ್ಕೃತ ನಾಟಕದ ಪೀಠಿಕೆಯಲ್ಲಿ ಅವರು ಹೇಳಿದ್ದಂತೆ "ಯಾವ ನಾಟಕವನ್ನೂ ನಾನೇ ಚೆನ್ನಾಗಿ ವ್ಯಾಸಂಗ ಮಾಡದೆ, ಬಿಟ್ಟಿಗೆಯಾಗದೆ, ಎಲ್ಲಿಯೂ ಅಭಿಪ್ರಾಯವನ್ನೂ ಕೊಟ್ಟಿಲ್ಲ" ಎಂಬ ದೃಢವಾದ ನಿಲುವನ್ನು ಮುಂದುವರಿಸಿದರು.

ಸಂಸ್ಕೃತ ಮಹಾಭಾರತದ ಒಂದು ಲಕ್ಷ ಶ್ಲೋಕಗಳನ್ನೂ ಅಭ್ಯಾಸಮಾಡಿ ಉತ್ತರ-ದಕ್ಷಿಣ ಹಸ್ತಪ್ರತಿಗಳ ಪಾಠಾಂತರಗಳನ್ನೆಲ್ಲ ಪರಿಶೀಲಿಸಿ ಕೇವಲ ಆರು ತಿಂಗಳಲ್ಲಿ 'ವಚನ ಭಾರತ'ದಂಥ ಅಜರಾಮರಗ್ರಂಥವನ್ನು ರಚಿಸಿದರು. ಈ ಗ್ರಂಥವನ್ನು ಕುರಿತು ನಾನೇ ಒಂದು ಕಡೆ ಹೀಗೆ ಹೇಳಿದ್ದುಂಟು : "ಸಂಸ್ಕೃತ ಸಾಹಿತ್ಯಾರಣ್ಯದಲ್ಲಿ ತಪಸ್ಸು ಮಾಡಿ ಭಾಸಕವಿ ಪರಮಾತ್ಮರನ್ನು ಸ್ತುತಿಸಿ, ಸಂಸ್ಕೃತ ನಾಟಕ ದೇವಿಯರನ್ನೂ ಮೆಚ್ಚಿಸಿ, ವಚನ ಭಾರತದ ನವ್ಯಗಂಗೆಯನ್ನು ಕನ್ನಡಕ್ಕೆ ತಂದ ಭಗೀರಥರಿವರು"— ಈ ಮಾತು ಪ್ರಾಮಾಣಿಕತ್ವ.

ಕಥಾಮೃತ, ಬಂಕಿಂಚಂದ್ರ ಮುಂತಾದ ಗ್ರಂಥಗಳು ಮುಂದೆ ರಚಿತವಾದುವು. ಕೇಂದ್ರ ಸಾಹಿತ್ಯ ಅಕಾಡೆಮಿಯ ಗೌರವ ಬಂದಿತು. ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟೊರೇಟ್ ಗೌರವ ಬಂತು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ನಾಡಿನ ಎಲ್ಲರ ಗೌರವಕ್ಕೆ ಪಾತ್ರರಾದರು.

ಶಿಷ್ಯ ವಾತ್ಸಲ್ಯ ಅವರ ವ್ಯಕ್ತಿತ್ವದ ಬಹುಮುಖ್ಯ ಗುಣ. ಸಮರ್ಥರನ್ನು ಕಂಡರೆ ಅವರ ಕೈಲಿ ಯಾವ ಕೆಲಸ ಮಾಡಿಸಬಹುದೆಂಬುದನ್ನು ಊಹಿಸಿ ಪಟ್ಟುಹಿಡಿದು ಮಾಡಿಸುತ್ತಿದ್ದರು. ಇಂದು ಕನ್ನಡದಲ್ಲಿ ಸಂಸ್ಕೃತದ ಎಲ್ಲ ಅಲಂಕಾರ ಗ್ರಂಥಗಳೂ ಕೈಗೆಸಿಕ್ಕುವಂತಿದ್ದರೆ ಅದಕ್ಕೆ ನಾವು ಕೃಷ್ಣಶಾಸ್ತ್ರಿಗಳಿಗೆ ಕೃತಜ್ಞರಾಗಿರಬೇಕು. ಪ್ರೊ. ಕೆ. ಕೃಷ್ಣಮೂರ್ತಿಗಳನ್ನು ಧ್ವನ್ಯಾಲೋಕದ ಅನುವಾದಕ್ಕೆ ಪ್ರೋತ್ಸಾಹಿಸಿ, ಬೇಕಾದ ಸಹಾಯವನ್ನು ನೀಡಿ ಅಲ್ಲಿಂದ ಮುಂದೆ ಎಲ್ಲ ಮುಖ್ಯ ಅಲಂಕಾರ ಗ್ರಂಥಗಳನ್ನೂ ಅವರೇ ಅನುವಾದಿಸುವಂತೆ ಮಾಡಿದ ದೂರದೃಷ್ಟಿ ಅವರದು. ಈಗ ನಾಡಿನಲ್ಲಿ ಹಿರಿಯ ಹೆಸರಾಗಿರುವ ಪ್ರೊ. ಕೆ. ಕೃಷ್ಣಮೂರ್ತಿಗಳು ಹೀಗೆ ಹೇಳಿದ್ದಾರೆ :

"ಕನ್ನಡ ಧ್ವನ್ಯಾಲೋಕದ ಪ್ರಕಟಣೆಯ ಕಾಲದಲ್ಲಿ ಕೊನೆಯ ಪಕ್ಷ ಮೂರು ಸಲವಾದರೂ ಅವರು ಆಮೂಲಾಗ್ರವಾಗಿ ಇದನ್ನೋದಿ ಶೋಧಿಸಿದ್ದಾರೆ. ಈಗ ತಮ್ಮ ಅಮೂಲ್ಯವಾದ ಮುನ್ನುಡಿಯನ್ನು ಅನುಗ್ರಹಿಸಿ ಆಶೀರ್ವದಿಸಿದ್ದಾರೆ. ಹೀಗೆ ಈ ಗ್ರಂಥಕ್ಕೆ ಪ್ರೊ. ಕೃಷ್ಣಶಾಸ್ತ್ರಿಗಳಿಂದ ಆಗಿರುವ ಉಪಕಾರವನ್ನು ನಾನು ಎಷ್ಟು ಸ್ಮರಿಸಿದರೂ ಸ್ವಲ್ಪವೇ."

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನ ಸಂಪಾದಕ ಸಮಿತಿಗೆ ಪ್ರೊ. ಕೃಷ್ಣಶಾಸ್ತ್ರಿಗಳು ಪ್ರಥಮ ಅಧ್ಯಕ್ಷರಾಗಿದ್ದರು. ನಿಘಂಟಿನ ಸ್ವರೂಪವು ಹೇಗಿರಬೇಕೆಂಬುದನ್ನು ಕುರಿತು ಅವರು ಬಹುವಿಚಾರಗಳನ್ನು ಚರ್ಚಿಸಿ ಅದಕ್ಕೆ ಒಂದು ಹಂತದ ಸ್ವರೂಪವನ್ನು ನಿರ್ಣಯಿಸಿ ಕರ್ನಾಟಕದ ಎಲ್ಲ ವಿದ್ವಾಂಸರ ಪರಿಶೀಲನೆಗೆ ಕಳುಹಿಸಿಕೊಟ್ಟರು. ಅದನ್ನು ಮಾದರಿ ಪುಟಗಳು ಎಂದು ಕರೆದು ವಿದ್ವಾಂಸರ ಸೂಚನೆಗಳನ್ನು ಆಹ್ವಾನಿಸಿದರು. ಆಗ ಪರಿಷತ್ತಿನ ಕಾರ್ಯದರ್ಶಿಯಾಗಿ ನಾನು ಕೆಲಸ ಮಾಡುತ್ತಿದ್ದೆ. ಅಂದು ಅವರು ನನಗೆ ಹೇಳಿದ ಮಾತುಗಳು ಈಗಲೂ ನನ್ನ ಕಿವಿಯಲ್ಲಿ ಅನುರಣಿತವಾಗುತ್ತಿವೆ. ಅವರು ಹೇಳಿದರು : "ಒಂದು ಮಾತನ್ನು ನೆನಪಿಡು. ಈ ಕೆಲಸ ಸಾಮಾನ್ಯವಾದುದಲ್ಲ. ಇದು ನನ್ನ ಜೀವಮಾನದಲ್ಲಿ ಖಂಡಿತ ಪೂರೈಸುವುದಿಲ್ಲ. ನಿನ್ನ ಜೀವಮಾನದಲ್ಲಿ ಪೂರೈಸಿದರೆ ನಿನ್ನ ಪುಣ್ಯ" ಹೀಗೆ ಹೇಳಿದ್ದಲ್ಲದೆ ನನಗೆ ವೈದಿಕ ನಿಘಂಟಿನ ಮತ್ತು ಯಾಸ್ಕನ ನಿರುಕ್ತದ ಪಾಠಮಾಡಿ ನನ್ನ ತಿಳಿವಿಗೆ ವಿಸ್ತಾರವನ್ನು ನೀಡಿದರು. ಕನ್ನಡ ನಿಘಂಟು ಪೂರೈಸಿರುವ ಈಗ ನಾನು ಸದಾ ಅವರನ್ನು ಸ್ಮರಿಸುತ್ತ ಇರುತ್ತೇನೆ.

ಶ್ರೀ ಕೆ.ಎಸ್. ನರಸಿಂಹಸ್ವಾಮಿಯವರನ್ನು ಉತ್ತಮ ಕವಿಯೆಂದು ಗುರುತಿಸಿ ಅವರ "ಮೈಸೂರ ಮಲ್ಲಿಗೆ"ಯ ಪ್ರಕಟಣೆಗೆ ಸಹಾಯ ಮಾಡಿ ಮೈಸೂರಿನ ಮಹಾರಾಜ ಕಾಲೇಜಿನ ವೈಭವದ ಉತ್ಸವದಲ್ಲಿ ಅದನ್ನು ಬಿಡುಗಡೆ ಮಾಡಿದ ಪ್ರಸಂಗ ಯಾರಿಗೆ ಗೊತ್ತಿಲ್ಲ?

ಪ್ರೊ. ಕೆ.ವಿ. ಪುಟ್ಟಪ್ಪನವರನ್ನು ಸೆಂಟ್ರಲ್ ಕಾಲೇಜಿನ ಕವಿ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆಹ್ವಾನಿಸಿ ಆ ಯುವಕ ಕವಿಯ ಚೈತನ್ಯಕ್ಕೆ ಗುರುತು ತುಂಬಿದ ಕಥೆಯನ್ನು ಯಾರು ಮರೆತಾರು ?

ಅವರು ಮಾಡಿದುದೆಲ್ಲ ಇಂಥ ಮಹಾಕಾರ್ಯಗಳೇ. ಅವುಗಳಿಗೆ ಎಣಿಕೆಯಿಲ್ಲ!

ಸತ್ಯವಾದುದನ್ನು ಹೇಳಲು ಅವರು ಎಂದೂ ಹಿಂಜರಿದವರಲ್ಲ. ಕನ್ನಡದ ಬೆಳವಣಿಗೆಗೆ ಹಿಂದಿಯ ಅಧಿಕಾರ ಮಾರಕವೆಂಬ ಅವರ ಮಾತು ದೊಡ್ಡ ವಿರೋಧವನ್ನೇ ಎಬ್ಬಿಸಿತು. ಅಂಥ ಖಂಡಿತವಾದಿಯಾದ ಭಾಷಣ ಆ ಕಾಲಕ್ಕೆ ಬೇಕಾಗಿತ್ತು. ಅದ ಅರಗಿಸಿಕೊಳ್ಳುವ ಅಂಥ ವಿದ್ವಾಂಸರು ಎಲ್ಲಿದ್ದಾರೆ!

ಶ್ರೀಯುತರ ಸ್ನೇಹ ವ್ಯಾಪ್ತವಲ್ಲದಿದ್ದರೂ ಪರಿಮಿತರ ಗುಂಪಿನಲ್ಲಿ ಗಾಢವಾಗಿತ್ತು. ಅವರನ್ನು ಆಪ್ತರೆಂದು ತಿಳಿದುಕೊಂಡವರಲ್ಲಿ ಅವರು ತೋರಿಸುತ್ತಿದ್ದ ಅಭಿಮಾನ, ಪ್ರೀತಿ ಇವುಗಳಿಗೆ ಮಿತಿಯಿರಲಿಲ್ಲ. ಟಿ.ಎಸ್. ವೆಂಕಣ್ಣಯ್ಯ ಮತ್ತು ಕೃಷ್ಣಶಾಸ್ತ್ರಿಗಳ ಸ್ನೇಹವನ್ನು ಆಗಿನ ಕಾಲದಲ್ಲಿ ಚಂದನದಾಸ, ಅಮಾತ್ಯರಾಕ್ಷಸ ಇವರ ಸ್ನೇಹಕ್ಕೆ ಸಮಾನವಾದುದೆಂದು ವರ್ಣಿಸುತ್ತಿದ್ದರು.

ಎಲೆಮರೆಯ ಮಾಗಿದ ಹಣ್ಣಾಗಿ ಕೃಷ್ಣಶಾಸ್ತ್ರಿಗಳು ಬಾಳಿದರು. ಸಾವಿರ ಸಂಸಾರಗಳಿಗೆ ಬಾಳಿನ ಉದ್ದೇಶವನ್ನು ವಚನಭಾರತದಿಂದ ಬೋಧಿಸಿದರು. ಸಾವಿರಾರು ಯುವಕ ಚೈತನ್ಯಗಳನ್ನು ಬೆಳೆಸಿದರು. ಮರೆಯಲಾಗದ ಕಂಪನ್ನು ನಾಡಿನಲ್ಲಿ ಶಾಶ್ವತವಾಗಿ ನಿಲ್ಲಿಸಿ ಮರೆಯಾದರು. ಕಣ್ಣಿಂದ ಮರೆಯಾದರೂ, ಎಂದೂ ಮನದಿಂದ ಮರೆಯಲಾಗದ ವ್ಯಕ್ತಿತ್ವವನ್ನು ಉಳಿಸಿಹೋದರು.

ಪ್ರಸಿದ್ಧ ಪುರಾತತ್ವಶಾಸ್ತ್ರಜ್ಞ ಡಾ|| ಎಂ.ಎಚ್.ಕೃಷ್ಣ
(1892-1947)

ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಯುಗದಲ್ಲಿ ಮಹಾರಾಜರ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಜ್ಞಾನದಾನ ಮಾಡುತ್ತಿದ್ದ ಪ್ರಾಧ್ಯಾಪಕ ವರ್ಗದ ಶ್ರೇಷ್ಠ ವಿದ್ವಾಂಸರಲ್ಲಿ ಡಾ। ಎಂ.ಎಚ್. ಕೃಷ್ಣ ಅವರೂ ಪ್ರಮುಖರಾಗಿದ್ದರು. ಇವರ ಹಿರಿಯರು ಕಳಲೆಯನ್ನು ಆಳುತ್ತಿದ್ದ ದಳವಾಯಿಗಳ ಆಶ್ರಿತ ವರ್ಗಕ್ಕೆ ಸೇರಿದವರು. ಆ ದಳವಾಯಿಗಳಲ್ಲಿ ಅನೇಕರು ಮೈಸೂರಿನ ಮಹಾರಾಜರ ಸೇವೆಗೆ ಸೇರಿ ಮೈಸೂರಿಗೆ ಬಂದಾಗ ಅವರ ಆಶ್ರಿತರಾಗಿದ್ದ ಅನೇಕರು ಅವರೊಡನೆ ಮೈಸೂರಿಗೆ ಬಂದು ವಾಸಿಸತೊಡಗಿದರು. ಹೀಗೆ ಬಂದವರಲ್ಲಿ ರಂಗ ಐಂಗಾರ್ಯರೆಂಬುವರು ಸಂಸ್ಕೃತದ ವಿದ್ವಾಂಸರಾಗಿದ್ದು ಸಂಸ್ಕೃತ ಶಾಲೆಯಲ್ಲಿ ಅಧ್ಯಾಪಕರಾದರು. ಅವರ ಪತ್ನಿ ಲಕ್ಷ್ಮಮ್ಮ. ರಂಗಐಂಗಾರ್ಯರು ಉತ್ತಮ ಉಪಾಧ್ಯಾಯರೆಂಬ ಕೀರ್ತಿಗೆ ಭಾಜನರಾಗಿದ್ದರು. ಆದುದರಿಂದ ಮೈಸೂರು ಅರಸರಲ್ಲಿ ಪ್ರಸಿದ್ಧರಾದ ನಾಲ್ವಡಿ ಕೃಷ್ಣರಾಜ ಒಡೆಯರ ಬಾಲ್ಯದಲ್ಲಿ ಅವರಿಗೆ ಬೋಧಮಾಡಲು ರಂಗಐಂಗಾರ್ಯರನ್ನು ಗೊತ್ತುಮಾಡಲಾಯಿತು. ಅವರ ವಿನಯ ವಿದ್ವತ್ತುಗಳಿಂದ ಮತ್ತು ವ್ಯವಹಾರ ಚಾತುರ್ಯದಿಂದ ಚಾಮರಾಜ ಒಡೆಯರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದರು. ಕ್ರಮೇಣ ಅವರು ಅರಮನೆಯ ಮೊಖ್ತೇಸರ್ ಆಗಿ ನೇಮಕಗೊಂಡರು. ಮೊಖ್ತೇಸರ್ ಎಂಬುದು ಅರಬ್ಬಿ ಮತ್ತು ಪಾರಸೀ ಭಾಷೆಗಳಲ್ಲಿ ಪ್ರಚಾರದಲ್ಲಿರುವ ಶಬ್ದ. ಅದಕ್ಕೆ ಪ್ರಧಾನ ಅಧಿಕಾರಿ, ಎಲ್ಲ ಕೆಲಸಗಳ ಮೇಲ್ವಿಚಾರಕ ಎಂದು ಅರ್ಥ. ಇದು ಅರಮನೆಯ ಎಲ್ಲಾ

ಕಾರ್ಯಗಳನ್ನು ಸದಾ ಗಮನಿಸಿ ನಿರ್ವಹಿಸಬೇಕಾಗಿದ್ದ ಕೆಲಸವಾದುದರಿಂದ ರಂಗಯ್ಯಂಗಾರ್ಯರಿಗೆ ಮಹಾರಾಜ ಚಾಮರಾಜ ಒಡೆಯರು ಅರಮನೆಯ ಬಳಿ, ಕೋಟೆಯ ಒಳಗಡೆ ಒಂದು ಮನೆಯನ್ನು ಗೊತ್ತು ಮಾಡಿಕೊಟ್ಟರು. ಆ ಮನೆಯನ್ನು ಹಟ್ಟಿ ಎಂದು ಕರೆದರು. ಹೀಗೆ ರಂಗಯ್ಯಂಗಾರ್ಯರು ಮೈಸೂರು ಹಟ್ಟಿ ರಂಗಯ್ಯಂಗಾರ್ಯರಾದರು. ಅವರ ಮಕ್ಕಳಲ್ಲಿ ಎರಡನೆಯವರಾಗಿ ಕೃಷ್ಣ ಅವರು 19-8-1892ರಲ್ಲಿ ಜನಿಸಿದರು. ಅವರ ಪೂರ್ತಿ ಹೆಸರು ಮೈಸೂರು ಹಟ್ಟಿ ಕೃಷ್ಣ ಐಯಂಗಾರ್. - ಎಂ.ಎಚ್.ಕೃಷ್ಣಐಯಂಗಾರ್. ಕ್ರಮವಾಗಿ ಅದು ಎಂ.ಎಚ್. ಕೃಷ್ಣ ಆಯಿತು.

ಎಂ.ಎಚ್. ಕೃಷ್ಣ ಅವರ ವಿದ್ಯಾಭ್ಯಾಸವು ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಾಯಿತು. ಬಳಿಕ ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಪಡೆದರು. ಅವರು ಅಭ್ಯಾಸ ಮಾಡಿದ ವಿಷಯಗಳು ಇತಿಹಾಸ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ

ಪ್ರಾಕ್ತನ ಶಾಸ್ತ್ರ ಮತ್ತು ನಾಣ್ಯ ಶಾಸ್ತ್ರಗಳಲ್ಲಿ ಅವರಿಗೆ ಪ್ರೀತಿ ಕ್ರಮೇಣ ಬೆಳೆಯಿತು. 1917ರಲ್ಲಿ ಮದ್ರಾಸು ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿಯನ್ನು ಪಡೆದು ಅವರು ಓದಿದ ಕಾಲೇಜಿನಲ್ಲಿಯೇ ಅಧ್ಯಾಪಕರಾದರು. ಅವರು ಕಾಲೇಜಿನಲ್ಲಿ ಅಧ್ಯಾಪಕರಾದ ಪ್ರಾರಂಭದಲ್ಲಿ ಅವರನ್ನು ವಸ್ತು ಸಂಗ್ರಹಾಲಯಕ್ಕೆ ವರ್ಗ ಮಾಡಿ ಅದನ್ನು ವ್ಯವಸ್ಥೆ ಮಾಡುವ ಕಾರ್ಯವನ್ನು ವಹಿಸಲಾಯಿತು. ಈ ಸಮಯದಲ್ಲಿ ಎಂ.ಎಚ್. ಕೃಷ್ಣ ಅವರು ಮೈಸೂರು ಸರ್ಕಾರದ ವಸ್ತು ಸಂಗ್ರಹಾಲಯದಲ್ಲಿದ್ದ ನಾಣ್ಯಗಳನ್ನು ಅನುಕ್ರಮವಾಗಿ ಪಟ್ಟಿ ಮಾಡಿ ಅವುಗಳ ಬಗ್ಗೆ ತಿಳಿಯಬಂದ ವಿವರಗಳನ್ನು ದಾಖಲಿಸಿದರು. ಮೈಸೂರಿನ ಪುರಾತತ್ವ ಸಂಶೋಧನ ಇಲಾಖೆಯಲ್ಲಿ ನಿರ್ದೇಶಕರಾಗಿದ್ದ ರಾ. ನರಸಿಂಹಾಚಾರ್ಯರು ಬಹು ಪ್ರಸಿದ್ಧ ವಿದ್ವಾಂಸರಾಗಿದ್ದರು. ಅವರು ಕೃಷ್ಣ ಅವರ ನಾಣ್ಯಶಾಸ್ತ್ರದ ತಿಳುವಳಿಕೆಯನ್ನು ಮೆಚ್ಚಿ ಮೈಸೂರಿನ ಪುರಾತತ್ವ ಇಲಾಖೆಯ ಎಲ್ಲಾ ಕಾರ್ಯಗಳನ್ನೂ ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ಸಮರ್ಥರನ್ನು ತಯಾರಿಸಲು ಲಂಡನ್ ವಿಶ್ವವಿದ್ಯಾನಿಲಯಕ್ಕೆ ಯುವಕರನ್ನು ವಿದ್ಯಾರ್ಥಿವೇತನದ ಮೇಲೆ ಕಳುಹಿಸಿಕೊಡಬೇಕೆಂದು ಸರಕಾರಕ್ಕೆ ಶಿಫಾರಸ್ಸು ಮಾಡಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆಗಿದ್ದ ಡಾ.ಬ್ರಜೇಂದ್ರನಾಥ ಸೀಲ್ ಅವರು ಸರಕಾರದ ಅಪೇಕ್ಷೆಯಂತೆ ಎಂ.ಎಚ್. ಕೃಷ್ಣ ಅವರನ್ನು 1924 ರಿಂದ 1926ರ ವರೆಗೆ ಉನ್ನತ ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಕಳುಹಿಸಿದರು. ಅಲ್ಲಿ ಅವರು ಲಂಡನ್ ವಿಶ್ವವಿದ್ಯಾನಿಲಯದಲ್ಲಿಯೂ ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿಯೂ ಪುರಾತತ್ವದ ಸಂಶೋಧನೆಯಲ್ಲಿ ಉನ್ನತ ತರಬೇತಿಯನ್ನು ಪಡೆಯಬೇಕಾಗಿತ್ತು. ಕೃಷ್ಣ ಅವರ ಅದೃಷ್ಟದಿಂದಲೋ ಎಂಬಂತೆ ಲಂಡನ್ನಿನ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆಗಿದ್ದ ಪ್ರೊ. ಇ.ಎ. ಗಾರ್ಡಿನರ್ ಅವರೇ ಪುರಾತತ್ವ ಸಂಶೋಧನೆಯ ಪ್ರಾಧ್ಯಾಪಕರೂ ಆಗಿದ್ದರು. ಲಂಡನ್ನಿನಲ್ಲಿ ಕೃಷ್ಣ ಅವರು ಪುರಾತತ್ವಕ್ಕೆ ಸಂಬಂಧಿಸಿದ ಅನೇಕ ಮುದ್ರೆಗಳನ್ನು ಆಳವಾಗಿ

ಅಭ್ಯಾಸ ಮಾಡುವುದು ಸಾಧ್ಯವಾಯಿತು. ಬ್ರಿಟಿಷ್ ವಸ್ತು ಸಂಗ್ರಹಾಲಯದ ಅತ್ಯಾಧುನಿಕ ವ್ಯವಸ್ಥೆಯಿಂದ ವಿಶೇಷ ಸಹಾಯವಾಯಿತು. ಅವರು ಅಭ್ಯಾಸ ಮಾಡಿದ ವಿಷಯಗಳು ಇವು : ಶಾಸನಶಾಸ್ತ್ರ, ವಾಸ್ತು ಶಾಸ್ತ್ರ, ಶಿಲ್ಪಶಾಸ್ತ್ರ, ನಾಣ್ಯ ಶಾಸ್ತ್ರ, ಉತ್ಖನನ, ಮಾನವ ಶಾಸ್ತ್ರ, ಸಂಸ್ಕೃತಿ, ಇತಿಹಾಸ ಮತ್ತು ಸಮಾಜ ಶಾಸ್ತ್ರ. ಪ್ರೊ. ಇ.ಎ. ಗಾರ್ಡಿನರ್ ಅವರು ಅಂತರರಾಷ್ಟ್ರೀಯ ಖ್ಯಾತಿಯ ವಿದ್ವಾಂಸರಾಗಿದ್ದರು. ಅವರ ಸಹಾಯದಿಂದ ಈಜಿಪ್ಟಿನಲ್ಲಿ ನಡೆಯುತ್ತಿದ್ದ ಉತ್ಖನನದಲ್ಲಿ ಭಾಗವಹಿಸಿ, ನೇರವಾದ ಅನುಭವವನ್ನು ಪಡೆದರು. ಸ್ವಲ್ಪವೂ ವಿರಾಮ ಸಿಗದ ವ್ಯಾಸಂಗದಲ್ಲಿ ನಿರತರಾಗಿ 'ಡೆಕ್ಕನ್ ನ್ಯೂಮಿಸ್ಮ್ಯಾಟಿಕ್ಸ್' ಎಂಬ ಮಹಾ ಪ್ರಬಂಧವನ್ನು ಬರೆದು ಲಂಡನ್ ವಿಶ್ವವಿದ್ಯಾನಿಲಯಕ್ಕೆ ಪರೀಕ್ಷೆಗೆ ಕಳುಹಿಸಿದರು. ಲಂಡನ್ ವಿಶ್ವವಿದ್ಯಾನಿಲಯವು ಈ ಪ್ರಬಂಧವನ್ನು "most thorough and learned treatise" ಎಂದು ಶಿಫಾರಸ್ಸು ಮಾಡಿ ಡಿ.ಲಿಟ್. ಪದವಿಯನ್ನು ಪ್ರದಾನ ಮಾಡಿತು.

ಈ ಕಾರ್ಯವನ್ನು ನಿರ್ವಹಿಸುವಾಗ ಅವರಿಗೆ ಮಾರ್ಗದರ್ಶನ ಮಾಡಿದ ಬಾರ್ನೆಟ್, ಫ್ಲಿಂಡರ್ಸ್ ಪೆಟ್ರಿ, ವೆಸ್ಟರ್ ಮಾರ್ಕ್ ಮತ್ತು ಸೆಲಿಗ್ಮನ್ ಮುಂತಾದ ಪ್ರಸಿದ್ಧ ವಿದ್ವಾಂಸರು ಅವರ ಕಾರ್ಯವನ್ನು ಮೆಚ್ಚಿಕೊಂಡರು. ಇದರ ಪರಿಣಾಮವಾಗಿ ಕೃಷ್ಣ ಅವರು History and Archaeological Research ಎಂಬ ವಿಷಯವನ್ನು ಕುರಿತು ಲಂಡನ್ ಯೂನಿವರ್ಸಿಟಿ ಕಾಲೇಜಿನಲ್ಲಿ 7 ಸಾರ್ವಜನಿಕ ಉಪನ್ಯಾಸಗಳನ್ನು ನೀಡಲು ಅನುಕೂಲವಾಯಿತು. ಅಲ್ಲದೆ ಇತಿಹಾಸದಲ್ಲಿ ಜ್ಞಾನದ ಪರಿಧಿಯನ್ನು ವಿಸ್ತಾರಗೊಳಿಸುವ ಕಾರಣದಿಂದ ಯೂರೋಪಿನ ಅನೇಕ ರಾಷ್ಟ್ರಗಳಲ್ಲಿ ಸಂಚರಿಸಿ, ಅನೇಕ ವಸ್ತು ಸಂಗ್ರಹಾಲಯಗಳನ್ನು ಪರಿಶೀಲಿಸಿ ಈ ವಿಷಯಗಳಲ್ಲಿ ಪರಿಣತರಾಗಿ ಸ್ವದೇಶಕ್ಕೆ ಅವರು ಹಿಂದಿರುಗಿದರು.

ಮೈಸೂರಿಗೆ ಹಿಂದಿರುಗಿದ ಎಂ.ಎಚ್.ಕೃಷ್ಣ ಅವರಿಗೆ ತಾನೊಬ್ಬ ಹೊಸ ಮನುಷ್ಯನಾದಂತೆ ಭಾವನೆ ಬಂದಿತ್ತು. ಯಾವುದನ್ನೇ ಆಗಲಿ ಪರಿಶೀಲಿಸುವ ದೃಷ್ಟಿಯಲ್ಲಿ ಒಂದು ಸ್ವತಂತ್ರವೂ ಪರಂಪರೆಯಲ್ಲಿ ದೃಢ ವಿಶ್ವಾಸವೂ ಒಂದುಗೂಡಿ ಎಷ್ಟೋ ವಿವರಗಳು ಸ್ಪಷ್ಟವಾಗಿ ಹೊಳೆದು ಸಮಸ್ಯೆಗಳು ತಾವಾಗಿ ಪರಿಹಾರವಾಗುವಂತೆ ಭಾಸವಾಯಿತು. ಅವರ ತರಗತಿಗಳಲ್ಲಿ ಕುಳಿತಿರುತ್ತಿದ್ದ ನಮಗೆ ಅವರು ತಮ್ಮ ಈ ಭಾವನೆಗಳನ್ನು ನೆನಪಿನಿಂದ ಹೇಳುತ್ತಿದ್ದರು. 'ಎರಡು ವರ್ಷಗಳನ್ನು ಬರಿಯ ಮೊಸರನ್ನ ಮತ್ತು ಹಣ್ಣು ಹಾಲುಗಳಲ್ಲಿ ಕಳೆದ ನನಗೇನೂ ಬೇಸರವೆನಿಸಲಿಲ್ಲ. ಚಳಿಗಾಲದಲ್ಲಿ ಬರಿಯ ಮೈಯಲ್ಲಿ ಸಂಧ್ಯಾವಂದನೆ ಮಾಡುವುದು ಸ್ವಲ್ಪ ಕಷ್ಟವಾಗಿ ತೋರುತ್ತಿತ್ತು. ಆದರೆ ಹಾಗೆ ಮಾಡುವುದರಿಂದ ಮನಸ್ಸಿಗೆ ಯಾವುದೋ ಬಲ ತುಂಬಿಕೊಳ್ಳುತ್ತಿತ್ತು. ಪರದೇಶಿಯನಾದ ನನಗೆ ಆ ವಿದ್ವಾಂಸರೆಲ್ಲರೂ ತೋರಿಸಿದ ಆತ್ಮೀಯ ವಿಶ್ವಾಸವೇ ನನ್ನನ್ನು ಹೊಸಬನನ್ನಾಗಿ ಮಾಡಿತು' ಎನ್ನುತ್ತಿದ್ದರು.

ಮೈಸೂರಿನ ಇತಿಹಾಸದ ಪ್ರಾಚಾರ್ಯರ ಅಧಿಕಾರವು ಅವರಿಗಾಗಿ ಕಾದಿತ್ತು. ಬಂದು ಒಡನೆಯೇ ಈ ಅಧಿಕಾರವನ್ನು ಸ್ವೀಕರಿಸಿ ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದ ರೀತಿನೀತಿಗಳನ್ನು

ಬಳಸಿ ವೈಜ್ಞಾನಿಕ ರೀತಿಯಿಂದ ಇತಿಹಾಸವನ್ನು ಅಭ್ಯಾಸ ಮಾಡುವ ಬಗೆಯ ಪ್ರಯೋಜನವನ್ನು ಮನದಟ್ಟು ಮಾಡುತ್ತಿದ್ದರು.

ವಿದ್ಯಾರ್ಥಿಗಳು ಕಟ್ಟಿಕೊಂಡಿದ್ದ ಇತಿಹಾಸ ಸಂಘದ ಅಧ್ಯಕ್ಷರಾಗಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ವಿಸ್ತಾರವನ್ನು ಒದಗಿಸಿದರು. ಸಾಹಿತ್ಯದ ವಿದ್ಯಾರ್ಥಿಗಳಾದ ನಮಗೆ ಅವರು ಕರ್ನಾಟಕದ ಪ್ರಾಚೀನ ಚರಿತ್ರೆಯನ್ನೂ ಉತ್ಖನನದ ಬಗ್ಗೆ ವಿವರಗಳನ್ನೂ ಚಂದ್ರವಳ್ಳಿಯ ಉತ್ಖನನದ ವಿಶೇಷಗಳನ್ನೂ ತಿಳಿಸಿಕೊಟ್ಟರು. ನಮ್ಮನ್ನೂ ಕೂಡ ಚಂದ್ರವಳ್ಳಿಯ ನಿವೇಶನಕ್ಕೆ ಕರೆದೊಯ್ದಿದ್ದರು. ಶಾಸನಗಳ ಬಗ್ಗೆ ನಮಗೆ ನಿಜವಾದ ತಿಳಿವಳಿಕೆ ಬಂದದ್ದು ಅವರ ಪಾಠಗಳಿಂದ. ಅವರ ಸಂಶೋಧನೆಗಳಲ್ಲಿ ಕನ್ನಡದ ಅತಿ ಪ್ರಾಚೀನವಾದ ಹಲ್ಮಿಡಿಯ ಶಾಸನ ಮುಖ್ಯವಾಗಿತ್ತು. ಅದನ್ನು ಕಂಡುಹಿಡಿದು ಅದರ ಬಗ್ಗೆ ಸಂಶೋಧನೆ ಮಾಡಿ ಶಾಸನವನ್ನು ಸರಿಯಾಗಿ ಸಂಘಟನೆ ಮಾಡಿ ಅದರ ಬಗ್ಗೆ ಮೊದಲ ಲೇಖನವನ್ನು ಬರೆದು ಅದರ ಕಾಲ ಕ್ರಿ.ಶ. 450 ಸು. ಎಂದು ನಿರ್ಧರಿಸಿದರು. ಕದಂಬರ ಮಯೂರ ಶರ್ಮನ ಶಾಸನವೂ ಇಂಥದೇ ಪ್ರಾಧಾನ್ಯವನ್ನು ಹೊಂದಿದೆ.

ಕನ್ನಡನಾಡು ಭಾಷಾ ದೃಷ್ಟಿಯಿಂದಲೂ ಅದನ್ನು ಮಾತನಾಡುವವರು ವಾಸಿಸುವ ದೃಷ್ಟಿಯಿಂದಲೂ ಎಷ್ಟು ವಿಸ್ತಾರವಾಗಿರಬೇಕು ಎಂಬುದನ್ನು ನಿಶ್ಚಯಿಸಿ ಮೊದಲನೆಯ ಕರ್ನಾಟಕದ ಭೂಪಟವನ್ನು ಸಿದ್ಧಪಡಿಸಿದವರು ಅವರು. ಅವರು ರಚಿಸಿದ ಆ ಭೂಪಟ ಇಂದೂ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕಂಗೊಳಿಸುತ್ತಾ ಇದೆ. ಅದರಲ್ಲಿ ಕೃಷ್ಣ ಅವರ ಹಸ್ತಾಕ್ಷರವೂ ಇದೆ.

ಕನ್ನಡ ಲಿಪಿಯ ಉಗಮವನ್ನು ಅಭ್ಯಾಸ ಮಾಡಿ ಅದರ ಚರಿತ್ರೆಯನ್ನು ಕುರಿತ ಮೊದಲ ಉಪನ್ಯಾಸವನ್ನು ನೀಡಿದವರು ಡಾ. ಎಂ. ಎಚ್. ಕೃಷ್ಣ ಅವರು. ಇತಿಹಾಸ ಇಲಾಖೆಯ ವಿಶಿಷ್ಟ ಕಾರ್ಯವನ್ನು ಪೂರೈಸುವಾಗ ಕನ್ನಡ ನಾಡು ನುಡಿಯ ಬಗ್ಗೆ ತುಂಬ ಕಳಕಳಿಯನ್ನು ಅವರು ಪ್ರದರ್ಶಿಸುತ್ತಿದ್ದರು. ಎಲ್ಲ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದರು.

ಪ್ರೌಢಶಾಲೆಗಳಿಗೆ ಕನ್ನಡ ಚರಿತ್ರೆಯ ಪಠ್ಯಪುಸ್ತಕವೇ ಇಲ್ಲದಿದ್ದಾಗ ಮೊದಲ ಪಠ್ಯಪುಸ್ತಕವನ್ನು ರಚಿಸಿದವರು ಅವರು. ಆ ಪುಸ್ತಕದ ಹೆಸರು 'ಹಿಂದೂ ಚರಿತ್ರಸಾರ'. ನಾನು ಅದನ್ನು ಪಠ್ಯವಾಗಿ ಓದಿದೆ. ಅದು ಒಳ್ಳೆಯ ಕಾದಂಬರಿಯಂತೆ ಇತ್ತು. ಬುದ್ಧನ ಬೋಧನೆಗಳನ್ನು ಒಂದು ಸುಂದರ ವಾಕ್ಯವೃಂದದಲ್ಲಿ ಸಂಗ್ರಹಿಸಿದ್ದರು. "ದುಃಖವೆಂಬುದು ದುರಾಸೆಯ ಫಲವು" ಎಂದು ಮೊದಲಾಗುತ್ತಿದ್ದ ಈ ವಾಕ್ಯವೃಂದವನ್ನು ವಿದ್ಯಾರ್ಥಿಗಳೆಲ್ಲರೂ ಬಾಯಿ ಪಾಠ ಮಾಡುತ್ತಿದ್ದರು. ಅದು ಅಷ್ಟು ಪ್ರಭಾವಶಾಲಿಯಾಗಿತ್ತು.

ಕರ್ನಾಟಕದ ಕಲೆಗಳನ್ನು ಅಭ್ಯಾಸ ಮಾಡಿ 'ಕನ್ನಡ ನಾಡಿನ ಚರಿತ್ರೆ– ಕಲೆಗಳು' ಎಂಬ ಪುಸ್ತಕವನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ರಚಿಸಿಕೊಟ್ಟರು. ಅದು ಅನೇಕ ಮುದ್ರಣಗಳನ್ನು

[illegible] ಹೆಸರಿನ ಪುಟ್ಟ ಪುಸ್ತಕದಲ್ಲಿ ಅಜಂತ ಗುಹೆಯ ಕಲೆಯನ್ನು ಸಾಮಾನ್ಯ ಜನರಿಗೆ ಪರಿಚಯ ಮಾಡುವುದಕ್ಕಾಗಿಯೇ ವಿವರಗಳನ್ನು ಸೇರಿಸಿದರು. ಅಜಂತದ ಗುಹೆಯ ಚಿತ್ರಗಳನ್ನು ಒಳಗೊಂಡ ಈ ಪುಟ್ಟ ಪುಸ್ತಕದ ಸಾವಿರಾರು ಪ್ರತಿಗಳು ಮಾರಾಟವಾಗಿದೆ.

ಮೈಸೂರು ಸಂಸ್ಥಾನದ ಪ್ರವಾಸ ಸ್ಥಳಗಳ ಪರಿಚಯವನ್ನು ರಚಿಸಿ ಪ್ರವಾಸಿಗರಿಗೆ ಕೈಪಿಡಿಗಳನ್ನಾಗಿ ಮಾಡಿದರು. ಬೇಲೂರು, ಹಳೇಬೀಡು, ತಿರುಕುಡಿಯ ಶ್ರವಣಬೆಳಗೊಳ, ಶ್ರೀರಂಗಪಟ್ಟಣ, ನಂದಿ ಇತ್ಯಾದಿ ಪುಸ್ತಿಕೆಗಳು ಇಂದಿಗೂ ಪ್ರಯೋಜನಕರವಾಗಿವೆ.

ವಿದ್ಯಾರ್ಥಿಗಳೊಡನೆ ತುಂಬ ಸರಳ ರೀತಿಯಲ್ಲಿ ವರ್ತಿಸಿ ಅವರಿಗೆ ಆತ್ಮೀಯರಾಗಿದ್ದರು. ಕಾಲೇಜಿನ ಗರಡಿಯಲ್ಲಿ ಕುಸ್ತಿ ವ್ಯಾಯಾಮವನ್ನು ಮಾಡುವುದು ಅವರ ಹವ್ಯಾಸವಾಗಿತ್ತು.

ಅತ್ಯುತ್ತಮ ಭಾಷಣಕಾರರಾದ ಅವರು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ [illegible] ಮಾತುಗಾರರಾಗಿದ್ದರು. ಅವರ ಉಪನ್ಯಾಸಗಳಿಗೆ ಸಭಾಭವನವು ಭರ್ತಿಯಾಗಿರುತ್ತಿತ್ತು. ಅವರ ಅನೇಕ ವಿದ್ಯಾರ್ಥಿಗಳು ಪ್ರಸಿದ್ಧರಾಗಿ ಪುರಾತತ್ವದಲ್ಲಿ ಮಹಾ ಕಾರ್ಯವನ್ನು ಮಾಡಿದ್ದಾರೆ. ಒಬ್ಬೊಬ್ಬರ ಹೆಸರನ್ನೂ ಹೇಳಬಹುದು. ಡಾ. ಎಂ. ಶೇಷಾದ್ರಿ ಅವರೂ ಡಾ.ಎಸ್.ಆರ್. ರಾವ್ ಅವರೂ ಉತ್ಖನನದಲ್ಲಿ ಅತಿ ಪ್ರಮುಖ ಕಾರ್ಯವನ್ನು ಮಾಡಿದ್ದಾರೆ. ಡಾ. ರಾವ್ ಅವರು ಇತ್ತೀಚಿನವರೆಗೂ ಸಮುದ್ರತಳದ ಉತ್ಖನನದಲ್ಲಿ ನಿರತರಾಗಿದ್ದು ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ್ದಾರೆ. ಭಾರತದ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ [illegible] ಪ್ರಾಧ್ಯಾಪಕರಾಗಿದ್ದಾರೆ. [illegible] ಡಾ. ಜಿ.ಎಸ್. ದೀಕ್ಷಿತ್ ಹೆಸರು [illegible].

ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಅವರಿಗೆ ಇತಿಹಾಸವನ್ನು ಬೋಧಿಸಿದವರು ಡಾ. ಎಂ.ಎಚ್. ಕೃಷ್ಣ ಅವರು. ಅಷ್ಟು ಅಲ್ಲದೆ ಅವರು ಮುಂದೆ ಮಹಾರಾಜರಾಗುವುದನ್ನು [illegible] ಸರಕಾರದ ವ್ಯವಹಾರದಲ್ಲಿ ಅವರಿಗೆ ಪರಿಚಯ ಮಾಡಿಕೊಟ್ಟವರು ಡಾ. ಕೃಷ್ಣ.

ಇತಿಹಾಸ ಅರ್ಥಶಾಸ್ತ್ರಗಳಲ್ಲಿ ಅದ್ವಿತೀಯರಾಗಿದ್ದು ಎಲ್ಲ ಭಾರತೀಯ ವಿದ್ವಾಂಸರ ಪಾಶ್ಚಾತ್ಯ ವಿದ್ವಾಂಸರ ಪರಿಚಯವನ್ನು ಹೊಂದಿ ಮೈಸೂರಿನ ವಿಶ್ವವಿದ್ಯಾನಿಲಯದ ಇತಿಹಾಸ ಇಲಾಖೆಗೆ ಅಪಾರ ಕೀರ್ತಿಯನ್ನು ತಂದಿತ್ತುದು, ಡಾ. ಎಂ.ಎಚ್. ಕೃಷ್ಣ ಅವರ ಮಹಾಕಾರ್ಯ.

ಮೈಸೂರಿನ ಸಂಸ್ಥಾನದ ಪುರಾತತ್ವ ಇಲಾಖೆಯ ನಿರ್ದೇಶಕರಾಗಿ ಡಾ.ಎಂ.ಎಚ್. ಕೃಷ್ಣ ಅವರು ಮಾಡಿದ ಕಾರ್ಯ ಇನ್ನೂ ಮಹತ್ತರವಾದುದು. 1928ರಿಂದ 1947ರ ತನಕ 19 ವರ್ಷಗಳ ಕಾಲ ಅವರು ಈ ಇಲಾಖೆಯ ಕರ್ತವ್ಯವನ್ನು ನಿರ್ವಹಿಸಿದರು.

ಬಹುಶಃ ಭಾರತ ದೇಶದಲ್ಲಿಯೇ ಪುರಾತತ್ತ್ವದಲ್ಲಾಗಲಿ ಶಾಸನ ಶಾಸ್ತ್ರದಲ್ಲಾಗಲಿ ಹಿಂದಿನ ಮೈಸೂರು ಸಂಸ್ಥಾನದಲ್ಲಿ ನಡೆದಷ್ಟು ಸಂಶೋಧನ ಕಾರ್ಯ ಬೇರೆಲ್ಲಿಯೂ ನಡೆದಿರಲಿಲ್ಲ. ಕರ್ನಾಟಕದಲ್ಲಿ ಶಾಸನ ಶಾಸ್ತ್ರದ ಅಧ್ಯಯನಕ್ಕೂ ಸಂಶೋಧನೆಗೂ ಪ್ರಾರಂಭದ ಚಾಲನೆಯನ್ನು ನೀಡಿದವರು ಬಿ.ಎಲ್.ರೈಸ್ ಅವರು. 'ಎಪಿಗ್ರಾಫಿಯ ಕರ್ನಾಟಿಕ' ಎಂಬ ಹೆಸರಿನಲ್ಲಿ ಪ್ರಕಟವಾಗುತ್ತಿದ್ದ ಸಂಪುಟದಲ್ಲಿ ಪ್ರತಿ ವರ್ಷವೂ ಪುರಾತತ್ತ್ವ ಇಲಾಖೆಯಲ್ಲಿ ನಡೆದ ಸಂಶೋಧನೆಗಳ ಫಲಿತಾಂಶಗಳನ್ನು ವಿದ್ವದ್ವರ್ಗಕ್ಕೆ ಪರಿಚಯಿಸಲಾಗುತ್ತಿತ್ತು. ಈ ಕಾರ್ಯವನ್ನು ಪ್ರಾರಂಭಿಸಿದವರೂ ಬಿ.ಎಲ್.ರೈಸ್ ಅವರೇ. ಇದನ್ನು ನೋಡಿ ಇದರ ಪ್ರಯೋಜನವನ್ನು ತಿಳಿದ ಬಳಿಕವೇ ಭಾರತ ಸರಕಾರವು 'ಎಪಿಗ್ರಾಫಿಯಾ ಇಂಡಿಕಾ' ಎಂಬ ಶಾಸನ ಸಂಪುಟವನ್ನು ಪ್ರಕಟಿಸಲು ಪ್ರಾರಂಭಿಸಿತು. ಅದೂ ಎರಡು ವರ್ಷದ ತರುವಾಯ. ಈಗ ಎಲ್ಲ ರಾಜ್ಯಗಳವರೂ ಇಂಥ ಪ್ರಕಟನೆಯನ್ನು ಮಾಡಲು ಪ್ರಾರಂಭಿಸಿದ್ದಾರೆ.

ರೈಸ್ ಅವರು ಮೈಸೂರು ಸಂಸ್ಥಾನದ ಗ್ರಾಮೀಣ ಪ್ರದೇಶಗಳಲ್ಲಿ ಸುತ್ತಾಡಿ 22 ವರ್ಷಗಳ ಶ್ರಮದ ಪರಿಣಾಮವಾಗಿ ಸುಮಾರು 10,000 ಶಾಸನಗಳನ್ನು ಪರಿಶೋಧಿಸಿ ಪ್ರಕಟಿಸಿದರು. ರೈಸರ ಬಳಿಕ ಡಾ. ನರಸಿಂಹಾಚಾರ್ಯರು 16 ವರ್ಷಗಳ ಕಾಲ ಈ ಇಲಾಖೆಯ ನಿರ್ದೇಶಕರಾಗಿ ಸುಮಾರು 5000 ಶಾಸನಗಳನ್ನು ಪ್ರಕಟಿಸಿದರು. ಇವುಗಳು ಎಪಿಗ್ರಾಫಿಯಾ ಸಂಪುಟಕ್ಕೆ ಪೂರಕ ಅನುಬಂಧವಾಗಿ ಪ್ರಕಟವಾಗಿದೆ. ಡಾ. ನರಸಿಂಹಾಚಾರ್ಯರು ಮಹಾ ವಿದ್ವಾಂಸರಾಗಿದ್ದವರು. ಹಿಂದೆ ಪ್ರಕಟವಾಗಿದ್ದ ಶಾಸನಗಳಲ್ಲಿದ್ದ ತಪ್ಪುಗಳನ್ನು ತಿದ್ದಿ ಪ್ರಕಟಿಸಿದರು. ರೈಸರ ಕಣ್ಣಿಗೆ ಬೀಳದೆ ಇದ್ದ ಅನೇಕ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿದರು. ಇವರಾದ ಬಳಿಕ ಡಾ. ಶಾಮಶಾಸ್ತ್ರಿಗಳು 15 ವರ್ಷಕಾಲ ಅಧಿಕಾರಿಗಳಾಗಿದ್ದರು. ಅವರು ಕೌಟಿಲ್ಯನ ಅರ್ಥಶಾಸ್ತ್ರವನ್ನು ಪ್ರಕಟಿಸಿ ಪ್ರಸಿದ್ಧರಾದರು. ಆ ಬಳಿಕ ಡಾ.ಎಂ.ಎಚ್. ಕೃಷ್ಣ ಅವರು 19 ವರ್ಷಗಳ ಕಾಲ ನಿರ್ದೇಶಕರಾಗಿದ್ದು ಪ್ರಕಟಿಸಿದ ಇಲಾಖೆಯ ವಾರ್ಷಿಕ ವರದಿಗಳು ವಿಶಿಷ್ಟವಾಗಿ ಸಂಶೋಧನೆಯ ಫಲವನ್ನು ಬಿಂಬಿಸಿದವು. ಈ ಪ್ರಕಟನೆಗಳಲ್ಲಿ ಶಾಸನಗಳ ಜೊತೆಗೆ ನಾಣ್ಯಶಾಸ್ತ್ರದ ಲೇಖನಗಳು ಮತ್ತು ಇತರ ಸಂಶೋಧನೆಗಳ ಪರಿಚಯವೂ ಸೇರುತ್ತಿದ್ದವು. ಸುಂದರವಾದ ಮುದ್ರಣ, ಸೂಕ್ತ ಚಿತ್ರಗಳ ಅಳವಡಿಕೆ, ವಸ್ತ್ರದಿಂದ ಕೂಡಿದ ಮುಖಪುಟ ಬಹು ಸುಂದರವಾದ ಸಂಪುಟ-ಅಂತರಂಗ ಬಹಿರಂಗದ ಆಕರ್ಷಕವಾದ ಪ್ರಕಟಣೆಯಾದವು. ಇದನ್ನು ಕಂಡು ಹೊರ ದೇಶಗಳ ವಿದ್ವಾಂಸರಿಂದಲೂ ದೇಶೀಯ ವಿದ್ವಾಂಸರಲ್ಲಿ ಮೆಚ್ಚುಗೆಯ ಅಭಿಪ್ರಾಯಗಳು ಪ್ರಕಟವಾದವು.

ಹೊಯ್ಸಳ ವಾಸ್ತುಶಿಲ್ಪವನ್ನು ಕುರಿತ ವಿವರಗಳು, ಚಿತ್ರಗಳು, ನಾಣ್ಯಗಳ ವಿವರಗಳು ಐತಿಹಾಸಿಕ ನಾಯಕರ ವೃತ್ತಾಂತ ಇತ್ಯಾದಿ ಕಾರ್ಯಗಳಿಂದ ಮೈಸೂರು ಸಂಸ್ಥಾನದ ಪುರಾತತ್ತ್ವ ಇಲಾಖೆಗೆ ವಿಶ್ವವ್ಯಾಪ್ತ ಕೀರ್ತಿಯು ಪ್ರಚಾರವಾಯಿತು. ಅತ್ಯಪೂರ್ವವಾಗಿದ್ದ, ಅನುಪಲಬ್ಧವಾಗಿದ್ದ ಕನ್ನಡದ ಕೃತಿ 'ಸೂಕ್ತಿ ಸುಧಾರ್ಣವ'ವನ್ನು ಕಂಡು ಹಿಡಿದ ಕೀರ್ತಿ ಅವರದು.

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಪ್ರಸಿದ್ಧ ಚಾರಿತ್ರಿಕ ಸಂಸ್ಥೆಯಾದ ಮಿಥಿಕ್ ಸೊಸೈಟಿಯ ಆಡಳಿತ ವರ್ಗದಲ್ಲಿ ಎಂ.ಎಚ್. ಕೃಷ್ಣ ಅವರು ಅನೇಕ ವರ್ಷಗಳ ಸೇವೆಯನ್ನು ಸಲ್ಲಿಸಿದರು. ಅವರ ಸಹಾಯ ಆ ಸಂಸ್ಥೆಗೆ ತುಂಬ ಅಗತ್ಯವಾಗಿತ್ತು. ಇದನ್ನು ನೆನೆದು ಈಗ ಈ ಸಂಸ್ಥೆಯ ಉಪಸಂಸ್ಥೆಯಾಗಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಡಾಲಜಿ ಎಂಬುದಕ್ಕೆ ಡಾ.ಎಂ.ಎಚ್. ಕೃಷ್ಣ ಅವರ ಹೆಸರನ್ನು ಇಡಲಾಗಿದೆ. ಈಗ ಈ ಸಂಸ್ಥೆಗೆ ನಾಲ್ಕನೆಯ ವರ್ಷ ನಡೆಯುತ್ತಿದೆ. ಇಲ್ಲಿ ತರಬೇತಿ ಪಡೆದವರಿಗೆ ಡಿಪ್ಲೊಮಾ ಇನ್ ಇಂಡಾಲಜಿ ಎಂಬ ಪ್ರಮಾಣ ಪತ್ರವನ್ನು ನೀಡಲಾಗುವುದು. ಇದಕ್ಕೆ ವಿಶ್ವವಿದ್ಯಾನಿಲಯಗಳ ಗೌರವ ಸಂದಾಯವಾಗಿದೆ.

1935ರಲ್ಲಿ ಮೈಸೂರಿನಲ್ಲಿ ನೆರವೇರಿದ ಓರಿಯಂಟಲ್ ಕಾನ್‌ಫರೆನ್ಸ್‌ನ ಕಾರ್ಯದರ್ಶಿಯಾಗಿ ಅವರು ಅತ್ಯುತ್ತಮವಾದ ಕಾರ್ಯವನ್ನು ನಡೆಸಿಕೊಟ್ಟರು. ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆದ ಆ ಸಮ್ಮೇಳನಕ್ಕೆ ಭಾರತದ ಎಲ್ಲ ಕಡೆಗಳಿಂದ ಅನೇಕ ಘನ ವಿದ್ವಾಂಸರು ಬಂದಿದ್ದರು. ಈ ಸಂದರ್ಭದಲ್ಲಿ ಡಾ.ಎಂ.ಎಚ್. ಕೃಷ್ಣ ಅವರ ಸಹಾಯಕ್ಕಾಗಿ ಸೇರಿಸಿದ್ದ ಸ್ವಯಂಸೇವಕರ ತಂಡದಲ್ಲಿ ನಾನೂ ಇದ್ದುದನ್ನು ನಾನಿಂದೂ ನೆನೆಯುತ್ತೇನೆ. ಆ ಸಮ್ಮೇಳನದಲ್ಲಿ ಭಾರತ ದೇಶದ ಇತರ ದೇಶದ ವಿದ್ವಾಂಸರಿಗೆ ಮೈಸೂರು ಶೈಲಿಯ ಭರತನಾಟ್ಯದ ಅಭಿನಯ ಭಾಗದ ಸೊಗಸನ್ನು, ಅರ್ಥವ್ಯಾಪ್ತಿಯನ್ನು ಪರಿಚಯಮಾಡಿ ಕೊಡಲು ಡಾ. ಎಂ.ಎಚ್.ಕೃಷ್ಣ ಅವರು ವಿಶೇಷವಾದ ಏರ್ಪಾಟನ್ನು ಮಾಡಿದರು. ಮೈಸೂರಿನ ಅರಮನೆಯ ನರ್ತಕಿಯಾದ ಅಭಿನಯ ವಿಶಾರದೆ ಜಟ್ಟಿತಾಯಮ್ಮನವರ ಅಭಿನಯ ಕಲೆಯ ಪ್ರದರ್ಶನವನ್ನು ಏರ್ಪಡಿಸಿದರು. ಆಕೆ ನಾಟ್ಯ ವಿಶಾರದೆ ವೆಂಕಟಲಕ್ಷ್ಮಮ್ಮನ ಗುರುವಾಗಿದ್ದರು. ಆಕೆಗೆ ಜಯದೇವನ ಅಷ್ಟಪದಿಯ ಒಂದು ಶ್ಲೋಕದ ಅಭಿನಯ ವಿಸ್ತಾರವನ್ನು ಪ್ರದರ್ಶಿಸಲು ಸೂಚಿಸಲಾಗಿತ್ತು. ಮಹಾರಾಜ ಕಾಲೇಜಿನ ಪ್ರಾಧ್ಯಾಪಕರಾದ ಆರ್. ನರಸಿಂಹ ಶಾಸ್ತ್ರಿಗಳು, ರಾಳ್ಲಪಲ್ಲಿ ಅನಂತಕೃಷ್ಣ ಶರ್ಮರು, ಎಂ.ಎಚ್. ಕೃಷ್ಣ ಅವರು ಆಕೆಯ ಪ್ರದರ್ಶನವನ್ನು ಯಶಸ್ವಿಯಾಗಿಸಲು ಆಕೆಗೆ ಸರ್ವ ಸಹಾಯವನ್ನು ಮಾಡಿದರು. ಜಯದೇವನ ಅಷ್ಟಪದಿಯಿಂದ

ಯಾಹಿ ಮಾಧವ ಯಾಹಿ ಕೇಶವ
ಮಾವದ ಕೈತವ ವಾದಮ್
ತಾಮನುಸರ ಸರಸೀರುಹಲೋಚನ
ಯಾ ತವ ಹರತಿ ವಿಷಾದಮ್

ಎಂಬ ಶ್ಲೋಕವನ್ನು ಆರಿಸಲಾಗಿತ್ತು. ಈ ಒಂದೇ ಶ್ಲೋಕದ ಅಭಿನಯವನ್ನು ಜಟ್ಟಿತಾಯಮ್ಮನವರು ಒಂದು ಗಂಟೆಯ ಕಾಲ ನಡೆಸಿಕೊಟ್ಟರು. ಸಭೆ ವಿಸ್ಮಯಪಟ್ಟು ಆಕೆಯನ್ನು ಅಭಿನಂದಿಸಿತು.

ಹೀಗೆ ಯಾವ ಕಾರ್ಯವೇ ಆಗಲಿ ಅದನ್ನು ಸಂಪೂರ್ಣವಾಗಿ ಅಚ್ಚುಕಟ್ಟಾಗಿ ನಡೆಸುವುದು ಡಾ.ಎಂ.ಎಚ್. ಕೃಷ್ಣ ಅವರ ಜಾಯಮಾನವಾಗಿತ್ತು.

ಅವರ ಸಂಸಾರ ಪ್ರಾರಂಭದಲ್ಲಿ ದುಃಖವನ್ನು ಅನುಭವಿಸಿದರು. ಕೆಲಕಾಲದ ಬಳಿಕ ಸುಖಮಯವಾಗುತ್ತಿತ್ತು. ಅವರ ಮೊದಲ ಪತ್ನಿ ಎರಡನೆಯ ಪ್ರಸವವಾದ ಬಳಿಕ ತೀರಿಕೊಂಡಿದ್ದರು. ದ್ವಿತೀಯ ಸಂಬಂಧದಲ್ಲಿ ಸಂಗೀತದಲ್ಲಿ ಆಸಕ್ತರಾಗಿದ್ದ ಪತ್ನಿಯು ದೊರೆತು ಅವರ ಮನಸ್ಸಿಗೆ ಆಹ್ಲಾದವುಂಟಾಯಿತು ಆಕೆಗೆ ವೀಣಾ ದೊರೆಸ್ವಾಮಿ ಅಯ್ಯಂಗಾರ್ಯರ ಮೂಲಕ ವೀಣಾ ವಾದನವನ್ನು ಪಾಠ ಮಾಡಿಸಿದರು. ಆಗ ದೊರೆಸ್ವಾಮಿ ಅಯ್ಯಂಗಾರ್ಯರು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದರೂ ಸಂಗೀತ ಕ್ಷೇತ್ರದಲ್ಲಿ ಕೀರ್ತಿಯನ್ನು ಗಳಿಸಿದ್ದರು. ಅವರ ಪ್ರಾವೀಣ್ಯವನ್ನು ಗೌರವಿಸಿ ತಮ್ಮ ವಿದ್ಯಾರ್ಥಿಗಳೇ ಆಕೆಗೆ ಗುರುವಾಗುವಂತೆ ಮಾಡಿ ಸಂತೋಷಪಟ್ಟವರು ಡಾ.ಎಂ.ಎಚ್.ಕೃಷ್ಣ.

ಡಾ. ಎಂ.ಎಚ್. ಕೃಷ್ಣ ಅವರು ಅವಸಾನ ಹೊಂದಿ 60 ವರ್ಷಗಳಾದವು. ನನಗೆ ತುಂಬ ಆತ್ಮೀಯ ಗುರುಗಳಾಗಿದ್ದ ಅವರ ನೆನಪಿಗೆ ಕೃತಜ್ಞತೆಯ ಅರ್ಪಣೆ ಈ ಲೇಖನ.

'ಆಕಾಶವಾಣಿ'ಯ ಸಂಸ್ಥಾಪಕ, ಮನಶ್ಶಾಸ್ತ್ರಜ್ಞ ಡಾ|| ಎಂ.ವಿ.ಗೋಪಾಲಸ್ವಾಮಿ (1896-1957)

ನಮ್ಮ ವಯಸ್ಸಿನವರು ಮೈಸೂರಿನಲ್ಲಿ ಮಹಾರಾಜಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿದ್ದ ಕಾಲ ಮೈಸೂರಿನ ಸುವರ್ಣಯುಗವಾಗಿತ್ತು. ಮೈಸೂರು ಸಂಸ್ಥಾನದ ಮಹಾರಾಜರು ವಾಸಿಸುತ್ತಿದ್ದ ನಗರವಾಗಿ ಅದಕ್ಕೆ ತುಂಬ ಪ್ರಾಧಾನ್ಯವಿತ್ತು. ಚಾಮುಂಡಿಬೆಟ್ಟದ ಸಾನು ಪ್ರದೇಶದಲ್ಲಿ ವಿಸ್ತಾರವಾಗಿ ಹರಡಿದ್ದ ಆ ನಗರವು ಶುಭ್ರ ಸುಂದರನಗರವೆಂದು ಖ್ಯಾತಿಯನ್ನು ಪಡೆದಿತ್ತು. ಊರಿನ ಪ್ರಮುಖ ಬೀದಿಗಳನ್ನು ಪ್ರತಿನಿತ್ಯ ನೀರಿನಿಂದ ತೊಳೆದು ಅಚ್ಚುಕಟ್ಟಾಗಿ ಇಡುತ್ತಿದ್ದರು. ಕಸಕಡ್ಡಿಗಳು ಎಲ್ಲೂ ಕಾಣುತ್ತಿರಲಿಲ್ಲ. ಊರಿನ ಬಡಾವಣೆಗಳಲ್ಲಿ ಸುಸಂಸ್ಕೃತ ಸಂಸಾರಗಳು ವಾಸಿಸುತ್ತಿದ್ದು ಅವು ಎಲ್ಲ ಕಲೆಗಳ ಆಗರವಾಗಿದ್ದುವು. ಸಂಗೀತ, ಚಿತ್ರಕಲೆ, ಸಾಹಿತ್ಯಸಂವಾದ, ನಾಟಕ ಪ್ರದರ್ಶನ, ನೃತ್ಯಸಮಾರಂಭಗಳು ದಿನನಿತ್ಯದ ಮಾತಾಗಿದ್ದುವು. ರಾಮನವಮಿಯ ಸಮಾರಂಭದಲ್ಲಿ ದೇಶದ ಅನೇಕ ಕಡೆಗಳಿಂದ ಪ್ರಸಿದ್ಧ ಸಂಗೀತಗಾರರು ಬಂದು ಕಚೇರಿಗಳನ್ನು ನಡೆಸುತ್ತಿದ್ದರು. ಹನುಮಜ್ಜಯಂತಿಯ ರಾತ್ರಿ ಮಾರ್ಕೆಟ್ ಚೌಕದಲ್ಲಿ ದೇಶದ ಅತಿ ಪ್ರಸಿದ್ಧ ನಾಗಸ್ವರವಾದಕರು ಸಾವಿರಾರು ಜನಗಳಿಗೆ ನೀಡುತ್ತಿದ್ದ ರಸದೌತಣ ಬೆಳಗಿನತನಕ ಮುಂದುವರಿಯುತ್ತಿತ್ತು. ಮಹಾರಾಜರ ವರ್ಧಂತಿ, ದಸರಾ ದರ್ಬಾರು, ವಿಜಯದಶಮಿಯ ವಿಶ್ವವಿಖ್ಯಾತವಾದ ಜಂಬೂಸವಾರಿ ಲಕ್ಷಾಂತರ ಜನರನ್ನು ಆಕರ್ಷಿಸು

ತ್ತಿದ್ದವು. ಅರಮನೆಯ ವಿದ್ಯುದ್ದೀಪಾಲಂಕಾರವನ್ನೂ ಮೆರವಣಿಗೆಯನ್ನೂ ನೋಡಲು ಇತರ ದೇಶಗಳಿಂದಲೂ ಅನೇಕರು ಪ್ರವಾಸಿಗಳು ಬರುತ್ತಿದ್ದರು. ಇಂಥ ನಗರಕ್ಕೆ ಮಹಾರಾಜರ ಕಾಲೇಜು ಸಂಸ್ಕೃತಿ ಕೇಂದ್ರವಾಗಿತ್ತು.

ಮೈಸೂರು ವಿಶ್ವವಿದ್ಯಾನಿಲಯವು 1917ರಲ್ಲಿ ಸ್ಥಾಪಿತವಾದಮೇಲೆ ಮಾನವಿಕ ವಿಷಯಗಳ ವ್ಯಾಸಂಗಕ್ಕೆ ಮಹಾರಾಜಕಾಲೇಜು ಕೇಂದ್ರವಾಯಿತು. ಈ ಕಾಲೇಜಿನಲ್ಲಿ ಬೋಧನೆ ಗೊಳ್ಳುತ್ತಿದ್ದ ವಿಷಯಗಳಿಗೆ ಭಾರತದ ಇತರ ಪ್ರದೇಶಗಳಿಂದ ಅತ್ಯಂತ ಪ್ರಸಿದ್ಧರಾಗಿದ್ದ ವಿದ್ವಾಂಸರನ್ನು ಆಹ್ವಾನಿಸಿ ಗೌರವಿಸುತ್ತಿದ್ದರು. ಹಾಗೆ ಇಲ್ಲಿಗೆ ಅಧ್ಯಾಪಕರಾಗಿ ಬಂದು ಕಾಲೇಜಿನ ಕೀರ್ತಿಯನ್ನು ಇತರ ದೇಶಗಳಿಗೂ ಹರಡಿದ ಅನೇಕ ಪ್ರಾಧ್ಯಾಪಕರಿದ್ದರು. ಡಾ|| ರಾಧಾಕೃಷ್ಣನ್, ಎ.ಆರ್.ವಾಡಿಯಾ, ಜೆ.ಸಿ.ರಾಲೋ, ಡಾ|| ಎಂ.ವಿ. ಗೋಪಾಲಸ್ವಾಮಿ ಮುಂತಾದವರು ಪ್ರಮುಖರು. ನಮ್ಮವರೇ ಆದ ಹಿರಿಯಣ್ಣನವರು ತತ್ತ್ವಶಾಸ್ತ್ರವೇತ್ತರಾಗಿ ಪ್ರಪಂಚದಲ್ಲೆಲ್ಲ ಪ್ರಖ್ಯಾತರಾಗಿದ್ದರು. ಇವರೊಬ್ಬೊಬ್ಬರ ಬಗ್ಗೆಯೂ ಒಂದೊಂದು ಗ್ರಂಥವನ್ನೇ ಬರೆಯಬಹುದು.

ಇಂಥವರಲ್ಲಿ ಒಬ್ಬರಾದ ಡಾ|| ಗೋಪಾಲಸ್ವಾಮಿಯವರನ್ನು ಕುರಿತು ಈ ಲೇಖನದಲ್ಲಿ ಕೆಲವು ವಿಷಯಗಳನ್ನು ನಿರೂಪಿಸಲಾಗಿದೆ.

ಗೋಪಾಲಸ್ವಾಮಿಯವರ ಮನೆತನ ಶ್ರೀಮಂತಮನೆತನ. ಅವರ ತಂದೆ ನ್ಯಾಯಮೂರ್ತಿಗಳಾಗಿದ್ದರಂತೆ. ತಂದೆ ಬೇಗ ತೀರಿಕೊಂಡ ಬಳಿಕ ಅವರ ತಾಯಿ ಅವರನ್ನು ವಿದ್ವಾಂಸರಾಗುವಂತೆ ಪ್ರೋತ್ಸಾಹಿಸಿದರು. ಮದರಾಸಿನಲ್ಲಿ ಪ್ರಾರಂಭದ ವಿದ್ಯಾಭ್ಯಾಸವನ್ನು ಪೂರೈಸಿ ಅಲ್ಲಿಯ ಪಚ್ಚಯ್ಯಪ್ಪ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಪಡೆದರು. ಬಳಿಕ ಲಂಡನ್ನಿಗೆ ಪ್ರಯಾಣ ಮಾಡಿ ಅಲ್ಲಿ ಮನಶ್ಶಾಸ್ತ್ರವನ್ನು ಆಳವಾಗಿ ಅಧ್ಯಯನಮಾಡಿ ಪಿಎಚ್.ಡಿ. ಪದವಿಯನ್ನು ಗಳಿಸಿ ಭಾರತಕ್ಕೆ ಹಿಂದಿರುಗಿದರು. ಬಳಿಕ ಮೈಸೂರಿನಲ್ಲಿ ಮನಶ್ಶಾಸ್ತ್ರ ವಿಭಾಗವನ್ನು ಸೇರಿ ಕಾಲೇಜಿನಲ್ಲಿ ಆ ವಿಭಾಗವನ್ನು ಬೆಳೆಸಿ ಅದರ ಕೀರ್ತಿಗೂ ಅಭಿವೃದ್ಧಿಗೂ ಕಾರಣರಾದರು. ಮನಶ್ಶಾಸ್ತ್ರವನ್ನು ವಿಶ್ವವಿದ್ಯಾಲಯದಲ್ಲಿ ಬೋಧಿಸಲು ಮೊದಲು ಮಾಡಿದುದು ಮೈಸೂರಿನ ಮಹಾರಾಜ ಕಾಲೇಜು ಎಂದು ಭಾರತದಲ್ಲೆಲ್ಲ ಆ ಕಾಲೇಜಿಗೆ ಕೀರ್ತಿ ಬಂದಿತ್ತು. ಪ್ರಾಯೋಗಿಕ ಮನಶ್ಶಾಸ್ತ್ರವೆಂಬ ಉಪವಿಭಾಗದಲ್ಲಿ ವಿಶೇಷ ಸಂಶೋಧನೆ ನಡೆಯುತ್ತಿತ್ತು. ಆ ಕಾಲದಲ್ಲಿಯೇ Sigmund Freudನ Oedipus complex, Adlerನ inferiority complex, Jungನ The psychology of the unconscious ಮುಂತಾದ ತತ್ತ್ವಗಳು ಕಾಲೇಜಿನ ಉನ್ನತ ವಿದ್ಯಾರ್ಥಿಗಳಲ್ಲಿ ಚರ್ಚೆಯಾಗುತ್ತಿದ್ದ ವಿಷಯಗಳಾಗಿದ್ದವು. ಬಿ.ಟಿ. ತರಗತಿಗೆ ಗೋಪಾಲಸ್ವಾಮಿಯವರು Educational Psychologyಯನ್ನು ಬೋಧೆಮಾಡುತ್ತಿದ್ದರು. ಅಲ್ಲಿಯೇ ನಾನು ಅವರ ವಿದ್ಯಾರ್ಥಿಯಾಗಿದ್ದು ಅವರಿಂದ ತುಂಬ ಸಹಾಯವನ್ನು ಪಡೆದೆ. ಅವರನ್ನು ಸಮೀಪದಿಂದ

ಕಂಡು ಅವರ ಮನೆಯಿಂದ ಗ್ರಂಥಗಳನ್ನು ತಂದು ಓದುವುದೂ ಸಾಧ್ಯವಾಯಿತು. ವಿದ್ಯಾರ್ಥಿಗಳನ್ನು ಕಂಡರೆ ಅವರಿಗೆ ತುಂಬ ಆದರ. ಬಡವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯವನ್ನೂ ಮಾಡುತ್ತಿದ್ದರು. ವಾರದ ಹುಡುಗರು ಮುಂತಾದವರಿಗೆ ಸುಲಭದರದಲ್ಲಿ ಊಟವನ್ನು ಹಾಕಲು Health Kitchen ಎಂಬುದನ್ನು ಏರ್ಪಡಿಸಿ ಸಹಾಯ ಮಾಡಿದರು.

ಮನೆಯಲ್ಲಿ ಪ್ರಾಣಿಗಳನ್ನು ಸಾಕಿ ಅವುಗಳ ಸ್ವಭಾವವನ್ನು ವೈಜ್ಞಾನಿಕವಾಗಿ ಅಭ್ಯಾಸಮಾಡುತ್ತಿದ್ದರು. ನಾಯಿ, ಬೆಕ್ಕು, ಗಿಣಿ, ಕಪಿ, ಹಾವು ಮುಂತಾದವುಗಳನ್ನು ಸಾಕಿ ಅವುಗಳ ಜೊತೆ ಬಹುಕಾಲವನ್ನು ಕಳೆಯುತ್ತಿದ್ದರು. ಇಂಥ ಸಮಯದಲ್ಲಿಯೇ ಅವರ ಮಗು ಒಂದು ನಾಗರಹಾವಿನ ಜತೆ ಆಟವಾಡುತ್ತ ಅದರ ಕಡಿತಕ್ಕೆ ಒಳಗಾಗಿ ಸಾವನ್ನಪ್ಪಿತು. ಈ ಘಟನೆ ಅವರನ್ನು ತುಂಬ ಅಧೀರರನ್ನಾಗಿ ಮಾಡಿತು. ಊರಲ್ಲೆಲ್ಲ ಈ ಮಾತು ಪ್ರಚಾರವಾಗಿತ್ತು.

ಮಹಾರಾಜ ಕಾಲೇಜಿಗೆ ಅವರು 1942 ರಿಂದ 52ರವರೆಗೆ ಪ್ರಿನ್ಸಿಪಾಲರಾಗಿದ್ದರು. ಆಗ ವಿದ್ಯಾರ್ಥಿಗಳ ಬಗ್ಗೆ ಅನುಕಂಪದಿಂದ ಅನೇಕ ಸಹಾಯಗಳನ್ನು ಏರ್ಪಡಿಸಿದರು. ತ್ರೀಪೀಸ್ ಸೂಟನ್ನು ಧರಿಸಿ ಅವರು ಗಂಭೀರವಾಗಿ ಕಾಲೇಜಿಗೆ ಬರುವುದನ್ನೇ ನೋಡಲು ಅನೇಕ ವಿದ್ಯಾರ್ಥಿಗಳು ಕಾದಿರುತ್ತಿದ್ದರು. ಅವರ ಕಾಲದಲ್ಲಿ ಯೂನಿಯನ್ನಿನ ಕಾರ್ಯಕ್ರಮಗಳು ಹೆಚ್ಚಿದವು.

ಲಂಡನ್ನಿನಲ್ಲಿದ್ದಾಗ ಅವರು ಶಿಕ್ಷಣಕ್ಷೇತ್ರದಲ್ಲಿ ಪ್ರಸಿದ್ಧವಾಗಿದ್ದ ಮಾಂಟೆಸೊರಿ, ಕಿಂಡರ್‌ಗಾರ್ಟನ್ ಮುಂತಾದ ಪದ್ಧತಿಗಳನ್ನು ಆಳವಾಗಿ ಅಭ್ಯಾಸಮಾಡಿದ್ದರು. ತತ್ಪರಿಣಾಮವಾಗಿ ಮೈಸೂರಿನಲ್ಲಿ ಅವರು ಒಂದು ಶಿಶುವಿಹಾರವನ್ನು ಸ್ವಂತ ಖರ್ಚಿನಲ್ಲಿ ಏರ್ಪಡಿಸಿದರು. ಮೈಸೂರು ದೇಶದಲ್ಲಿ ಅದೇ ಮೊದಲ 'ಶಿಶುವಿಹಾರ', 'ಶಿಶುವಿಹಾರ' ಎಂಬ ಹೆಸರು ಪ್ರಸಿದ್ಧವಾದುದೇ ಈ ಶಾಲೆಯ ಸ್ಥಾಪನೆಯಿಂದ. ಜಿ.ಪಿ.ರಾಜರತ್ನಂ ಅವರು ಇಲ್ಲಿ ಪಾಠಮಾಡುತ್ತಿದ್ದಾಗಲೇ ಅವರ ಶಿಶುಗೀತಗಳು ರಚಿತವಾದವು. ಆ ಬಳಿಕ ನಾನು ಕೆಲವು ಕಾಲ ಅಲ್ಲಿ ಪಾಠಮಾಡುತ್ತಿದ್ದೆ. ಈ ವಿಧವಾದ ಪ್ರಯೋಗಗಳಲ್ಲಿ ಗೋಪಾಲಸ್ವಾಮಿಯವರು ತುಂಬ ಪರಿಣತರಾಗಿದ್ದರು. ಯುವಕರಿಗೆ ಶಿಕ್ಷಣ ಕ್ಷೇತ್ರದಲ್ಲಿ ತರಬೇತಿ ನೀಡುವುದರಲ್ಲಿ ಅತ್ಯಂತ ಆಸಕ್ತಿಯನ್ನು ವಹಿಸುತ್ತಿದ್ದರು. ತಾವು ಸ್ಥಾಪಿಸಿದ ಶಿಶುವಿಹಾರದ ಪ್ರಯೋಗದ ಬಗ್ಗೆ ಅವರು 1952ರಲ್ಲಿ ಪ್ಯಾರಿಸ್ ನಗರದಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾಡಿದ ಭಾಷಣವು ತುಂಬ ಪ್ರಭಾವವನ್ನು ಬೀರಿತು. ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಯನ್ನು ಪಡೆಯಿತು.

ಪ್ರೊ. ಗೋಪಾಲಸ್ವಾಮಿಯವರ ಕಾಲೇಜಿನ ಸಂಬಂಧವೂ ಅವರ ಮನಶ್ಶಾಸ್ತ್ರದ ಪ್ರಾವೀಣ್ಯವೂ ಶಿಶುವಿಹಾರದ ಸ್ಥಾಪನೆಯೂ ಅವರಿಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟದ್ದು ನಿಜ. ಆದರೆ ಭಾರತದೇಶಕ್ಕೆ ಅವರು ನೀಡಿದ ಕೊಡುಗೆಯ ಬಗ್ಗೆ ಹೇಳುವುದು ಬೇಕಾದಷ್ಟಿದೆ.

ಆಲ್ ಇಂಡಿಯಾ ರೇಡಿಯೋ ಎಂಬ ಸಂಸ್ಥೆ ಇರುವುದು ಈಗ ಜನರಿಗೆಲ್ಲ ಗೊತ್ತಿದೆ. ಇಂಥ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಪ್ರಯತ್ನ ಬೊಂಬಾಯಿಯಲ್ಲಿ 1927ರಲ್ಲಿಯೇ ನಡೆಯಿತು. ಆದರೆ ಅದು ಅಷ್ಟು ಫಲಪ್ರದವಾಗಲಿಲ್ಲ. ಡಾ॥ ಗೋಪಾಲಸ್ವಾಮಿಯವರು ಈ ಪ್ರಸಾರಯಂತ್ರದ ಬಗ್ಗೆ ಆಳವಾಗಿ ಅಭ್ಯಾಸಮಾಡಿ ಒಂದು ಪ್ರಸಾರಯಂತ್ರವನ್ನು ಸ್ವಂತ ಖರ್ಚಿನಲ್ಲಿ ಸ್ಥಾಪನೆ ಮಾಡಿದ್ದು 1935ರಲ್ಲಿ. ಅದು ಪ್ರಾರಂಭವಾದ ತಾರೀಕು ಸೆಪ್ಟೆಂಬರ್ ಹತ್ತು 10-9-1935. ಭಾರತದಲ್ಲಿ ರೇಡಿಯೋ ಸೆಟ್‌ಗಳನ್ನು ಮನೆಯಲ್ಲಿ ಯಾರೂ ಇಟ್ಟಿರಲಿಲ್ಲ. ಆದುದರಿಂದ ಗೋಪಾಲಸ್ವಾಮಿಯವರ ಮನೆಯಿಂದ ಮಾಡುವ ಪ್ರಸಾರ ವನ್ನು ಕೇಳುವುದಕ್ಕೆ ಅನುಕೂಲವಾಗುವಂತೆ ಮೈಸೂರಿನ ಕೆಲವು ಕಡೆಗಳಲ್ಲಿ ಏರ್ಪಾಟು ಮಾಡಿದರು. ರಂಗಾಚಾರ್ಲುವೇ ಮೆಮೋರಿಯಲ್ ಹಾಲ್‌ನಲ್ಲಿ ಪ್ರಮುಖವಾದ ಒಂದು ಏರ್ಪಾಟು. ಅವರ ಮನೆಯ ಮುಂದೆಯೇ footpathನಲ್ಲಿ ನಿಂತು ಜನ ವರ್ತಮಾನ ವನ್ನೂ, ಸಂಗೀತವನ್ನೂ, ಉಪನ್ಯಾಸಗಳನ್ನೂ ಕೇಳುತ್ತಿದ್ದರು. ಇದೊಂದು ಅಪೂರ್ವದ ಅನುಭವವಾಗಿತ್ತು ಮೈಸೂರಿನ ಪ್ರಜೆಗಳಿಗೆ. ಡಾ॥ ಗೋಪಾಲಸ್ವಾಮಿಯವರು ಜನಪ್ರಿಯ ಪ್ರಾಚಾರ್ಯರಾಗಿದ್ದರು. ಅನೇಕ ಶಿಕ್ಷಕರು ಅವರ ವಿದ್ಯಾರ್ಥಿಗಳಾಗಿದ್ದರು. ಮಹಾರಾಜ ಕಾಲೇಜಿನ ಅನೇಕ ಅಧ್ಯಾಪಕರು ರೇಡಿಯೋ ಕಾರ್ಯಕ್ರಮಗಳಿಗೆ ವಿಶ್ವಾಸದಿಂದ ಸಹಾಯ ವನ್ನು ನೀಡಿದರು. ಹೀಗೆ ಕಾರ್ಯಕ್ರಮಗಳನ್ನು ನೀಡಿದವರಿಗೆ ಗೋಪಾಲಸ್ವಾಮಿಯವರ ಮನೆಯಲ್ಲಿ ಕಾಫಿ ಮತ್ತು ತಿಂಡಿಯನ್ನು ನೀಡಿ ಗೌರವಿಸುತ್ತಿದ್ದರು. ಹೊರಟು ಬರುವಾಗ ತೆಂಗಿನಕಾಯಿಯನ್ನು ಇಟ್ಟು ವೀಳೆಯದೆಲೆ ಅಡಕೆಯನ್ನೂ ನೀಡುತ್ತಿದ್ದರು. ತಮ್ಮ ಧ್ವನಿ ರೇಡಿಯೋ ಪ್ರಸಾರ ಯಂತ್ರದ ಮೂಲಕ ಅನೇಕರಿಗೆ ಕೇಳುತ್ತಿದೆ ಎಂಬುದೇ ಕಾರ್ಯಕ್ರಮ ವನ್ನು ನೀಡಿದವರಿಗೆ ತೃಪ್ತಿಯನ್ನೂ ಸಂತೋಷವನ್ನೂ ನೀಡುತ್ತಿದ್ದವು. ಕೆಲವು ಕಾಲದ ಬಳಿಕ ಈ ಪ್ರಸಾರಯಂತ್ರವನ್ನು ಮೈಸೂರಿನ ರೈಲ್ವೆ ಸ್ಟೇಷನ್ ಬಳಿ ಇದ್ದ ಎಕ್ಸಿಬಿಷನ್ ಕಟ್ಟಡಕ್ಕೆ ವರ್ಗಾಯಿಸಲಾಯಿತು.

ಈ ಪ್ರಸಾರವು ಪ್ರಾರಂಭವಾದ ದಿನಗಳಲ್ಲಿ ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಜೆ.ಸಿ.ರಾಲೊ ಅವರು 'ಕಣ್ಣಿಗೆ ಕಾಣದ ಸಭೆಗೆ' ಭಾಷಣ ಮಾಡಿದರು. ಕುವೆಂಪು ಅವರು ಮಹಾರಾಜ ಕಾಲೇಜಿನ ಬಿ.ಎ. ರಂಗಮಂದಿರದಲ್ಲಿ ಸೇರಿದ್ದ ಸಭೆಗೆ ಗೋಪಾಲಸ್ವಾಮಿಯವರ ಮನೆಯಿಂದಲೇ ತಮ್ಮ ಕವನಗಳನ್ನು ಓದಿದರು. ತಮ್ಮ ವಾಚನವನ್ನು ಯಾವ ಪ್ರೇತಪಿಶಾಚಿಗಳು ತಡೆಯಲಿಲ್ಲವೆಂದು ಸಂತೋಷಪಟ್ಟರು. ಇಂಥ ಪ್ರಸಾರಪ್ರಯತ್ನಕ್ಕೆ ಮದರಾಸಿನಲ್ಲಿ 'ವಾನುಲಿನಿಲಯ' ಎಂದೇ ಕರೆಯುತ್ತಿದ್ದರು.

ಇದಕ್ಕೆ ಸಮನಾಗಿ ಮೈಸೂರಿನ ಕನ್ನಡ ಕೇಂದ್ರಕ್ಕೆ ಏನು ಹೆಸರಿಡಬೇಕೆಂಬ ಪ್ರಶ್ನೆ ಗೋಪಾಲಸ್ವಾಮಿಯವರನ್ನು ಎದುರಿಸಿತು. ಅಲ್ಲಿ ಸ್ಥಾಪಿತವಾಗಿದ್ದ ರೇಡಿಯೋ ಸರ್ವಿಸಸ್ ಎಂಬುದಕ್ಕೆ ಸರಿಯಾದ ಬೇರೊಂದು ಕನ್ನಡದ ಹೆಸರಿಡಬೇಕೆಂಬುದು ಗೋಪಾಲಸ್ವಾಮಿ ಯವರ ಉದ್ದೇಶ. ರೇಡಿಯೋ ಕಾರ್ಯಕ್ರಮಗಳಿಗೆ ಸಹಾಯಮಾಡುತ್ತಿದ್ದ ನಾ.ಕಸ್ತೂರಿ

ಅವರನ್ನು ಕರೆದು ಮಹಾರಾಜರ ಕಾಲೇಜಿನ ಭಾಷಾ ಅಧ್ಯಾಪಕರೊಡನೆ ಆಲೋಚನೆ ಮಾಡಿ ಒಂದು ಶಬ್ದವನ್ನು ಆರಿಸಬೇಕೆಂದು ಸೂಚಿಸಿದರು. ಕಸ್ತೂರಿಯವರು ಮಹಾರಾಜರ ಕಾಲೇಜಿನ Common Roomಗೆ ಈ ವಿಚಾರಕ್ಕಾಗಿಯೇ ಬಂದರು. ಆಗ ಅವರು ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಚರಿತ್ರೆಯ ಅಧ್ಯಾಪಕರಾಗಿದ್ದರು. ಈ ವಿಚಾರವಾಗಿ ಚರ್ಚೆ ನಡೆದುದು 1939ರಲ್ಲಿ ಎಂದು ನನಗೆ ಚೆನ್ನಾಗಿ ನೆನಪಿದೆ. ಆಗ ನಾನು ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿದ್ದೆ. ಈ ವಿಚಾರವಾಗಿ ಮಾತುಕತೆ ನಡೆದಾಗ ಅಲ್ಲಿ ಎನ್.ಎಸ್. ನಾರಾಯಣಶಾಸ್ತ್ರಿಗಳು, ರಾಳ್ಲಪಳ್ಳಿ ಅನಂತಕೃಷ್ಣಶರ್ಮರು, ತಿ. ನಂ. ಶ್ರೀಕಂಠಯ್ಯನವರು, ಡಿ.ಎಲ್.ನರಸಿಂಹಾಚಾರ್ಯರು ಇದ್ದರು. ಇವರ ಜೊತೆಯಲ್ಲಿ ಸಂಸ್ಕೃತ ಅಧ್ಯಾಪಕರಾಗಿದ್ದ ಎನ್. ಲಕ್ಷ್ಮೀನರಸಿಂಹಯ್ಯನವರೂ ಇದ್ದರೆಂದು ನೆನಪು. ಇವರೆಲ್ಲರಿಗಿಂತ ತುಂಬ ಕಿರಿಯನಾದ ನಾನೂ ಇದ್ದೆ. 'ಬಾನುಲಿನಿಲಯ' ಎಂದೇ ಕರೆಯಬಹುದೆಂಬ ಸೂಚನೆಗೆ ಅಷ್ಟು ಬಲವು ಕಾಣಬರಲಿಲ್ಲ.

ಸ್ವಲ್ಪ ಮಾತುಕತೆಯಾದ ಮೇಲೆ ರಾಳ್ಲಪಳ್ಳಿ ಅನಂತಕೃಷ್ಣಶರ್ಮರು 'ಆಕಾಶವಾಣಿ' ಎಂಬ ಹೆಸರನ್ನು ಸೂಚಿಸಿದರು. ಇದಕ್ಕೆ ಇರುವ ಪರ್ಯಾಯ ರೂಪವಾದ 'ಅಶರೀರವಾಣಿ'ಯನ್ನು ಕುರಿತು ಚರ್ಚೆಯಾಗಿ ಕೊನೆಗೆ **ಆಕಾಶವಾಣಿ** ಎಂಬುದೇ ಸರಿ ಎಂದು ಸರ್ವರೂ ಒಪ್ಪಿಗೆ ಇತ್ತರು. ಈ ಹೆಸರನ್ನು ನಾ.ಕಸ್ತೂರಿಯವರು ಗೋಪಾಲಸ್ವಾಮಿಯವರಿಗೆ ತಿಳಿಸಿ, ಅವರ ಒಪ್ಪಿಗೆ ಪಡೆದ ಬಳಿಕ ಪ್ರಚಾರಕ್ಕೆ ತಂದರು. 1942ರಿಂದ ಪ್ರಾರಂಭವಾದ ರೇಡಿಯೋ ಪ್ರಸಾರದ ಕಾರ್ಯಕ್ರಮಗಳನ್ನು ತಿಳಿಸುವ ಪಾಕ್ಷಿಕ ಪತ್ರಿಕೆಗೆ 'ತರಂಗರಂಗ' ಎಂಬ ಹೆಸರಿಟ್ಟು ಅದನ್ನು ಆಕಾಶವಾಣಿಯ ಕಾರ್ಯಕ್ರಮ ಪತ್ರಿಕೆ- ಎರಡು ವಾರಕ್ಕೆ ಒಮ್ಮೆ ಪ್ರಕಟವಾಗುವುದು ಎಂದು ವಿವರಣೆ ನೀಡಲಾಗುತ್ತಿತ್ತು. ಸಂಸ್ಕೃತ ನಾಟಕಗಳಲ್ಲಿ ಬರುವ ಅಶರೀರವಾಣಿಗಿಂತ **ಆಕಾಶವಾಣಿ**ಯೇ ಗೆದ್ದದ್ದು ಹೀಗೆ.

ನಾನೂ ಕೂಡ ಆಕಾಶವಾಣಿಯಲ್ಲಿ ಆರಂಭದಿಂದ ಭಾಷಣಗಳನ್ನು ಪ್ರಸಾರಮಾಡಿದ್ದೇನೆ. 1941ರಲ್ಲಿ ಪ್ರಕಟವಾದ ಶಿವರಾಮ ಕಾರಂತರ ಕಾದಂಬರಿ 'ಮರಳಿಮಣ್ಣಿಗೆ'ಯ ಕಥಾಸಾರವನ್ನೂ ಪಂಪರಾಮಾಯಣದ ವಿಮರ್ಶೆಯನ್ನೂ ಕುರಿತು ಅರ್ಧಗಂಟೆಯಕಾಲ ಉಪನ್ಯಾಸ ಮಾಡಿದ ನೆನಪಿದೆ. ನಾನು ಆಕಾಶವಾಣಿಯಲ್ಲಿ ಭಾಷಣಮಾಡಿದ್ದನ್ನು ತರಂಗರಂಗದಲ್ಲಿ ಮುದ್ರಿಸುತ್ತಿದ್ದರು. ತರಂಗರಂಗದ ಒಂದೆರಡು ಪ್ರತಿಗಳು ನನ್ನಲ್ಲಿವೆ. ಒಂದು ಸಂಚಿಕೆಯ ಜೆರಾಕ್ಸ್ ಪ್ರತಿಯನ್ನು ಇಲ್ಲಿ ಮುದ್ರಿಸಲಾಗಿದೆ.

ಅದು ಯುದ್ಧಕಾಲವಾದುದರಿಂದ ವರ್ತಮಾನಗಳಿಗೆ ಹಾತೊರೆಯುವವರು ಹೆಚ್ಚಾಗಿ ಆಕಾಶವಾಣಿಯ ಜನಪ್ರಿಯತೆ ಹೆಚ್ಚಿತು. ನಾ. ಕಸ್ತೂರಿಯವರು ಆಕಾಶವಾಣಿಯ ಕಾರ್ಯಕ್ರಮಗಳನ್ನು ತುಂಬ ಆಸಕ್ತಿಯಿಟ್ಟು ನಿರ್ವಹಿಸುತ್ತಿದ್ದರು. ನಾಟಕ, ಸಂಗೀತ, ಭಾಷಣ, ಹರಿಕಥೆ, ಸಂವಾದ, ಸಂದರ್ಶನ, ಹಾಸ್ಯ, ಹೊಸಗನ್ನಡ ಗ್ರಂಥಗಳ ವಾಚನ ಇತ್ಯಾದಿ ವಿವಿಧ

ತರಂಗರಂಗ

(ತರಂಗಪ್ರಮಾಣ: ೩೧೦ ಮತ್ತು ೪೯-೪೬ ಮೀಟರುಗಳು)

ಆಕಾಶವಾಣಿಯ ಕಾರ್ಯಕ್ರಮ ಪತ್ರಿಕೆ

ಎರಡುವಾರಕ್ಕೆ ಒಮ್ಮೆ ಪ್ರಕಟವಾಗುವುದು

ಸಂಪುಟ ೨	೧೯೪೩ ಮಾರ್ಚಿ ೧೬ ರಿಂದ ೩೧	ಸಂಚಿಕೆ ೬

ಭಾರತದ ಮಹಾವ್ಯಕ್ತಿಗಳು

ಕನ್ನಡಭಾಷೆಯಲ್ಲಿರುವ ಪಂಪ ಭಾರತ, ಗದುಗಿನ ಭಾರತಗಳಿಗೂ ಭಾರತದ ಕಥೆಯ ಯಾವುದಾದರೊಂದು ಭಾಗವನ್ನವಲಂಬಿಸಿ ಬರೆದಿರುವ ಗದಾಯುದ್ಧದಂತಹ ಗ್ರಂಥಗಳಿಗೂ, ಕಥಾಮೂಲ ದೊರೆತಿರುವುದು ವ್ಯಾಸ ಪ್ರಣೀತ ಸಂಸ್ಕೃತ ಮಹಾಭಾರತದಿಂದಾದರೂ ಈ ಕನ್ನಡಗ್ರಂಥಗಳು ಸಂಸ್ಕೃತ ಭಾರತದ ನಕಲುಗಳಲ್ಲ. ವ್ಯಕ್ತಿಗಳ ಗುಣನಿರೂಪಣೆಯಲ್ಲಿ ಈ ಕನ್ನಡ ಗ್ರಂಥಗಳು ಸಂಸ್ಕೃತ ಮಹಾಭಾರತದಿಂದ ಭಿನ್ನವಾದ ಮಾರ್ಗವನ್ನು ಅವಲಂಬಿಸಿವೆ; ಅಷ್ಟೇ ಅಲ್ಲ. ಈ ಕನ್ನಡ ಗ್ರಂಥಗಳಲ್ಲಿ ಕೂಡ ವಿವಿಧ ವ್ಯಕ್ತಿಗಳ ಗುಣ ನಿರೂಪಣೆ ಬೇರೆ ಬೇರೆ ರೂಪವನ್ನು ತಾಳಿದೆ. ಪಂಪನ ಭೀಮ ರನ್ನನ ಭೀಮನಂತಿಲ್ಲ; ರನ್ನನ ದುರ್ಯೋಧನ ನಾರಣಪ್ಪನ ದುರ್ಯೋಧನನಂತಿಲ್ಲ; ಪಂಪನಿಗೆ ಭೀಮನ ಮೇಲೆ ಹೆಚ್ಚು ಅಭಿಮಾನವಾದರೆ ರನ್ನನಿಗೆ ದುರ್ಯೋಧನನ ಮೇಲೆ ಹೆಚ್ಚು ಮಮತೆ; ನಾರಣಪ್ಪನಿಗೆ ಕರ್ಣ ಮೆಚ್ಚು. ಹೀಗೆ ಕನ್ನಡ ಸಾಹಿತ್ಯದಲ್ಲಿ ಕೃತನಾಮರಾದ ಪಂಪ, ರನ್ನ, ನಾರಣಪ್ಪ ಇವರು ಒಬ್ಬೊಬ್ಬರೂ ಭಾರತದ ಮಹಾವ್ಯಕ್ತಿಗಳನ್ನು ತಮ್ಮದೇ ಆದ ರೀತಿಯಲ್ಲಿ ನಿರೂಪಿಸಿದ್ದಾರೆ. ಒಬ್ಬೊಬ್ಬರ ನಿರೂಪಣೆಯಲ್ಲಿ ಒಂದೊಂದು ರೀತಿಯ ಸೊಬಗು ಇದೆ. ಶ್ರೀಮಾನ್ ಟಿ. ವೆಂಕಟಸುಬ್ಬಯ್ಯ, ಎಂ. ಎ., ಬಿ. ಟಿ., ಅವರು "ಭಾರತದ ಮಹಾವ್ಯಕ್ತಿಗಳು" ಎಂಬ ಭಾಷಣಮಾಲೆಯಲ್ಲಿ ಭೀಮ, ದುರ್ಯೋಧನ, ಕರ್ಣ, ದ್ರೌಪದಿ, ಅರ್ಜುನ, ಕೃಷ್ಣ — ಈ ಭಾರತದ ವ್ಯಕ್ತಿಗಳ ಗುಣ ನಿರೂಪಣೆ, ವ್ಯಾಸ ಪ್ರಣೀತ ಮಹಾಭಾರತದಲ್ಲಿಯೂ, ಕನ್ನಡಕಾವ್ಯಗಳಲ್ಲಿಯೂ ಹೇಗೆ ರೂಪುಗೊಂಡಿದೆ ಎಂಬುದನ್ನು ವಿವೇಚಿಸುವರು.

ಈ ಭಾಷಣಮಾಲೆಯ ಮೊದಲನೆಯ ಭಾಷಣವನ್ನು — ಭೀಮನನ್ನು ಕುರಿತದು — ಈ ತಿಂಗಳು ೩೦ನೇ ತಾರೀಖು ರಾತ್ರಿ ೮-೧೦ ಗಂಟೆಗೆ "ಆಕಾಶವಾಣಿ"ಯಲ್ಲಿ ಪ್ರಸಾರ ಮಾಡಲಾಗುವುದು.

ಈ ಭಾಷಣಮಾಲೆ ಸಾಹಿತ್ಯಪ್ರೇಮಿಗಳಿಗೆ ರುಚಿಸುವುದೆಂದು ನಾವು ಭಾವಿಸುತ್ತೇವೆ.

ಇನ್ನು ಕೆಲವು ಕಾರ್ಯಕ್ರಮಗಳು

ಮಾರ್ಚಿ ೧೭ನೇ ತಾರೀಖು ಮೇಲುಕೋಟೆಯಲ್ಲಿ ವೈರಮುಡಿ ಸೇವೆ. ಇದರ ಪ್ರಯುಕ್ತ ೧೭ನೇ ತಾರೀಖು ರಾತ್ರಿ ೮ ಗಂಟೆ ೧೦ ನಿಮಿಷಕ್ಕೆ "ವೈರಮುಡಿ" ಎಂಬ ಶಬ್ದಚಿತ್ರವನ್ನು ಪ್ರಸಾರಮಾಡುತ್ತೇವೆ. ಈ ಶಬ್ದ ಚಿತ್ರದಲ್ಲಿ ಚೆಲುವನಾರಾಯಣಸ್ವಾಮಿಯ ದೇವಾಲಯದ ಇತಿಹಾಸದಿಂದ ಆರಿಸಿದ ಕೆಲವು ಸನ್ನಿವೇಶಗಳನ್ನು ನಿರೂಪಿಸಲಾಗುವುದು.

೨೧ನೇ ತಾರೀಖಿನ ದಿವಸ, ಸಂಜೆ ೬-೩೦ ನಿಮಿಷಕ್ಕೆ ಧಾರ್ಮಿಕಜ್ಞಾನಾಕಾಂಕ್ಷಿಯಾಗಿ ಚೀನಾದಿಂದ ಇಂಡಿಯಾಕ್ಕೆ ಬಂದ ಹುಯೆನ್‌ತ್ಸಾಂಗನ ಜೀವನ ಅನುಭವದಿಂದ ಆರಿಸಿದ ಘಟನೆಗಳನ್ನು ನಿರೂಪಿಸುವೆವು. ಚೀನಾ ಇಂಡಿಯಾ ಬಾಂಧವ್ಯವನ್ನು ವಿವರಿಸುವ ಉದ್ದೇಶದಿಂದ, ಚೀನಾದಿಂದ ಇಂಡಿಯಾಕ್ಕೆ ಬಂದ ಮತ್ತು ಇಂಡಿಯಾದಿಂದ ಚೀನಾಕ್ಕೆ ಹೋಗಿ ಜ್ಞಾನಾರ್ಜನೆ ಜ್ಞಾನಪ್ರಸಾರಗಳನ್ನು ಸಾಧಿಸಿದ ಮಹನೀಯರ ಜೀವಿತ ಘಟನೆಗಳನ್ನು ನಿರೂಪಿಸಲು ನಾವು ಪ್ರಸಾರ ಮಾಡುತ್ತಿರುವ ಶಬ್ದ ಚಿತ್ರಮಾಲೆಯಲ್ಲಿ "ಹುಯೆನ್‌ತ್ಸಾಂಗ್" ಎರಡನೆಯದು. ಮುಂದೆ ಕುಮಾರಜೀವ ಬೋಧಿಧರ್ಮ ಇವರಿಬ್ಬರ ವಿಚಾರವಾಗಿ ಶಬ್ದಚಿತ್ರಗಳನ್ನು ಪ್ರಸಾರಮಾಡುವೆವು.

ಕಾರ್ಯಕ್ರಮಗಳು ಇರುತ್ತಿದ್ದವು. ನಾನು ಮೈಸೂರನ್ನು ಬಿಟ್ಟು ಬೆಂಗಳೂರಿಗೆ ಬಂದಮೇಲೆ 1943ರಲ್ಲಿ ಆಕಾಶವಾಣಿಯ ಮತ್ತು ನನ್ನ ಸಂಬಂಧ ಕಡಿಮೆ ಹೋಯಿತು. ಹೀಗಾಗಿ 1976ರ ಸ್ವರ್ಣ ಮಹೋತ್ಸವದಲ್ಲಿಯಾಗಲಿ 1997ರ ವಜ್ರ ಮಹೋತ್ಸವದಲ್ಲಾಗಲಿ ನನಗೆ ಒಂದು ಆಹ್ವಾನ ಕೂಡ ಬರಲಿಲ್ಲ.

ಆಕಾಶವಾಣಿಯ ಸ್ಥಾಪನೆ ಹೀಗೆ ಡಾ|| ಎಂ.ವಿ. ಗೋಪಾಲಸ್ವಾಮಿಯವರು ರಾಷ್ಟ್ರಕ್ಕೆ ನೀಡಿದ ಕೊಡುಗೆ. 1946ರಲ್ಲಿ ಆಕಾಶವಾಣಿ ಬೆಂಗಳೂರಿಗೆ ಬಂತು. All India Radio 1950ರಲ್ಲಿ ಆಕಾಶವಾಣಿ ಎಂಬ ಶಬ್ದವನ್ನೇ ಒಪ್ಪಿಕೊಂಡು ಇಂದಿಗೂ ಉಪಯೋಗಿಸುತ್ತ ಇದೆ.

ಡಾ||.ಗೋಪಾಲಸ್ವಾಮಿಯವರು ಮಹಾರಾಜರ ಕಾಲೇಜಿನಿಂದ ನಿವೃತ್ತಿ ಹೊಂದಿದ ಮೇಲೆ ಬೆಂಗಳೂರಿಗೆ ಬಂದು ನೆಲೆಸಿದರು. ಕೃಷ್ಣರಾವ್ ಪಾರ್ಕಿನ ಬಳಿ ಅವರು ವಾಸಿಸುತ್ತಿದ್ದರು. ಮಾನಸಿಕ ರೋಗಿಗಳ ಆಸ್ಪತ್ರೆಗೆ ಹೋಗಿ ಅಲ್ಲಿ ಸ್ವಲ್ಪಕಾಲ ಸಂಶೋಧನೆಗಳಲ್ಲಿ ಸಹಾಯಮಾಡುತ್ತಿದ್ದರು.

ಇಂಥ ಪ್ರಜ್ಞಾವಂತ ದೇಶಭಕ್ತನು 1957ರಲ್ಲಿ ತೀರಿಕೊಂಡಾಗ ಅದು ದೇಶಕ್ಕಾಗಲಿ ಸಂಸ್ಥಾನಕ್ಕಾಗಲಿ ಪ್ರಸಾರದ ವಿಷಯವಾಗಲೇ ಇಲ್ಲ.

ತಮ್ಮನ್ನು ಎಂದೂ ಮುಂದೆ ಮಾಡಿಕೊಳ್ಳದೆ ಆಕಾಶವಾಣಿಯ ಅಧಿಕಾರಿಗಳಿಗೂ ಕಾರ್ಯಕರ್ತರಿಗೂ ಸ್ವಾತಂತ್ರ್ಯವನ್ನು ನೀಡಿ ಆಕಾಶವಾಣಿಯು ಬೆಳೆಯುವುದಕ್ಕೆ ಮಾರ್ಗದರ್ಶಕರಾದರು ಡಾ|| ಗೋಪಾಲಸ್ವಾಮಿಯವರು.

ಕೊನೆಗೆ ಆಲ್ ಇಂಡಿಯಾ ರೇಡಿಯೋ ಎಂಬ ಪದಪುಂಜಕ್ಕೆ ಆಕಾಶವಾಣಿ ಎಂಬುದೇ ಸರಿಯಾದುದು ಎಂದು ತೀರ್ಮಾನವಾಗುವ ಹಾಗೆ ಆ ಶಬ್ದಕ್ಕೆ ಪ್ರಾಧಾನ್ಯವುಂಟಾಗುವಂತೆ ಮಾಡಿದವರು ಡಾ|| ಗೋಪಾಲಸ್ವಾಮಿಯವರು.

ಇಂಥ ಡಾ|| ಗೋಪಾಲಸ್ವಾಮಿಯವರು ಭಾವಚಿತ್ರಗಳು ಎಲ್ಲಿಯೂ ದೊರೆಯುತ್ತಿಲ್ಲ. ನಾನು ಬಿ.ಟಿ. ತರಗತಿಯಲ್ಲಿ ವಿದ್ಯಾರ್ಥಿಯಾಗಿದ್ದ ಕಾಲದ ಗ್ರೂಪ್ ಫೋಟೋ ಒಂದು ನನ್ನ ಹಳೆಯ ಕಡತಗಳಲ್ಲಿ ಸಿಕ್ಕಿತು. ಅದರಿಂದ ತೆಗೆದ ಭಾವಚಿತ್ರವನ್ನೂ ಆಕಾಶವಾಣಿಯವರು ಪ್ರಕಟಪಡಿಸುತ್ತಿದ್ದ **ತರಂಗರಂಗ** ಎಂಬ ಪಾಕ್ಷಿಕದ ಒಂದು ಪುಟವನ್ನು ದಾಖಲೆಗಾಗಿ ಈ ಲೇಖನದ ಜೊತೆಯಲ್ಲಿ ಮುದ್ರಿಸಲಾಗಿದೆ.

'ಆಕಾಶವಾಣಿ' ಎಂಬ ಹೆಸರನ್ನು ಯಾರು ನೀಡಿದರು ಎಂಬ ಬಗ್ಗೆ ಅನೇಕ ಬೇರೆ ಬೇರೆ ಅಭಿಪ್ರಾಯಗಳು ಪ್ರಚಾರದಲ್ಲಿವೆ. ರಾಳ್ಲಪಳ್ಳಿ ಅನಂತಕೃಷ್ಣಶರ್ಮರು ಬೆಂಗಳೂರಿನಲ್ಲಿ ಅವರ ಮಗ ಡಾ|| ಫಣಿಶಾಯಿಯವರೊಡನೆ ಜಯನಗರದಲ್ಲಿ ವಾಸಿಸುತ್ತಿದ್ದಾಗ ನಾನು ಅವರನ್ನು ಕಂಡು ಮಾತನಾಡಲು ಆಗಾಗ ಹೋಗುತ್ತಿದ್ದೆ. ಅವರು ನನಗೂ ತೆಲುಗು ಭಾಷೆಯನ್ನು ಸಾಹಿತ್ಯವನ್ನು ಬೋಧೆ ಮಾಡಿದ ಗುರುಗಳು. ಮೈಸೂರಿನಲ್ಲಿದ್ದಾಗ ಅವರ ಮನೆಯಲ್ಲಿ ಪ್ರತಿವಾರವೂ ನಡೆಯುತ್ತಿದ್ದ ಸಂಗೀತ ಸಮಾರಂಭಗಳಿಗೆ ನಾನು ಹೋಗುತ್ತಿದ್ದೆ. ಈ ಸಾಮೀಪ್ಯ ಅವರು ಬೆಂಗಳೂರಿಗೆ ಬಂದ ಮೇಲೆಯೂ ಮುಂದುವರಿಯುತ್ತಿತ್ತು.

ಇಂಥಸಮಯದಲ್ಲಿ 'ಆಕಾಶವಾಣಿ'ಯ ಹೆಸರಿನ ಬಗ್ಗೆ ಮತ್ತೆ ಬೇರೆ ಬೇರೆ ಅಭಿಪ್ರಾಯಗಳು ಪತ್ರಿಕೆಗಳಲ್ಲಿ ಪ್ರಕಟವಾದವು. ಅವುಗಳನ್ನು ಓದಿದ ರಾಳ್ಲಪಳ್ಳಿಯವರು ನನಗೆ ಮಹಾರಾಜರ ಕಾಲೇಜಿನಲ್ಲಿ ನಡೆದ ಚರ್ಚೆಯನ್ನೂ ಆದ ತೀರ್ಮಾನವನ್ನೂ ನೆನಪಿಗೆ

ತಂದರು. ಅಲ್ಲದೆ ಈ ಬಗ್ಗೆ ಸ್ವಂತ ತಿಳಿವಳಿಕೆಯುಳ್ಳ ನಾ. ಕಸ್ತೂರಿ ಅವರು ಪ್ರಕಟಣೆ ನೀಡಬೇಕು ಎಂದು ತಿಳಿಸಿದರು. ಆದರೆ ನಾ. ಕಸ್ತೂರಿಯವರು ಲೌಕಿಕ ವಿಚಾರಗಳಿಂದ ದೂರವಾಗಿ ಪಾರಲೌಕಿಕದಲ್ಲಿ ಮುಳುಗಿ ಪ್ರಸಿದ್ಧ ಆಶ್ರಮದಲ್ಲಿ ನೆಲೆಸಿಬಿಟ್ಟಿದ್ದರು. ಹೀಗೆ ರಾಕ್ಲಪಕ್ಕಿಯವರು ಸೂಚಿಸಿದ, ಕಸ್ತೂರಿಯವರು ಪ್ರಚಾರ ಮಾಡಿದ ಆಕಾಶವಾಣಿ ಶಬ್ದದ ಚರಿತ್ರೆ ಈಗಲೂ ಅನೇಕ ಹೇಳಿಕೆಗಳ ಮಧ್ಯೆ ತೂಗಾಡುತ್ತಿದೆ. ಸಕಾಲದಲ್ಲಿ ದಾಖಲೆಮಾಡದೆ ಇರುವುದರಿಂದ ಎಷ್ಟೋ ಚಾರಿತ್ರಿಕ ಸತ್ಯಗಳು ಮರೆಮಾಚಿ ಹೋಗುತ್ತವೆ.

ಅದು ಏನೇ ಆದರೂ ಆಕಾಶವಾಣಿ ಮತ್ತು ಗೋಪಾಲಸ್ವಾಮಿ ಎಂಬ ಎರಡು ಹೆಸರುಗಳ ಬಾಂಧವ್ಯವನ್ನು ಯಾರೂ ಮರೆಯಲಾರರು.

ಪ್ರೊಫೆಸರ್ ಜಿ. ಹನುಮಂತರಾವ್ ಅವರ ಸಜ್ಜನತೆ
(1898-1974)

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ನಾನು ವಿದ್ಯಾರ್ಥಿಯಾಗಿ ವ್ಯಾಸಂಗ ಮಾಡುತ್ತಿದ್ದಾಗ ಅಲ್ಲಿ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಕಾರ್ಯದಲ್ಲಿ ಸದಾ ನಿರತರಾಗಿದ್ದ ಕೆಲವರು ಅಧ್ಯಾಪಕರಿದ್ದರು. ಅಂಥವರಲ್ಲಿ ತತ್ವಶಾಸ್ತ್ರ ಇಲಾಖೆಯ ಜಿ. ಹನುಮಂತರಾವ್ ಮತ್ತು ಯಾಮುನಾಚಾರ್ ಇವರು ಮುಖ್ಯರು. ಇಬ್ಬರೂ ಅವರವರ ಕ್ಷೇತ್ರಗಳಲ್ಲಿ ಆಳವಾದ ವಿದ್ವತ್ತನ್ನು ಪಡೆದ ವಿದ್ವಾಂಸರಾಗಿದ್ದರು. ಜಿ. ಹನುಮಂತರಾಯರು ಮೈಸೂರು ವಿಶ್ವವಿದ್ಯಾನಿಲಯದ ಪುಸ್ತಕ ಭಂಡಾರದ ಮುಖ್ಯಾಧಿಕಾರಿಗಳಾಗಿ ವಿದ್ಯಾರ್ಥಿಗಳಿಗೆ ಎಲ್ಲ ಅನುಕೂಲಗಳನ್ನು ಒದಗಿಸಿಕೊಡುತ್ತಿದ್ದರು. ಆಗಿನ ಕಾಲದಲ್ಲಿ ವಿದ್ಯಾರ್ಥಿಗಳ ಪ್ರೌಢತರಗತಿಗಳಿಗೆ ಬೇಕಾಗಿದ್ದ ಪುಸ್ತಕಗಳು ಹೊರಗೆ ದೊರಕುತ್ತಿರಲಿಲ್ಲ. ಅವು ಮತ್ತೆ ಮುದ್ರಣವಾಗುವ ಸಾಧ್ಯತೆಯೂ ಇರಲಿಲ್ಲ. ಇಂಥ ಸಂದರ್ಭದಲ್ಲಿ ಈ ಪುಸ್ತಕ ಭಂಡಾರಿಗಳು ವಿದ್ಯಾರ್ಥಿಗಳ ದಿನನಿತ್ಯದ ಅಗತ್ಯಗಳನ್ನು ಅರಿತು ಪುಸ್ತಕ ಭಂಡಾರದಲ್ಲಿ ವ್ಯಾಸಂಗಮಾಡಲು ರಾತ್ರಿ ಹತ್ತು ಗಂಟೆಯ ತನಕ ಅವಕಾಶವನ್ನು ಮಾಡಿಕೊಟ್ಟರು. ಇದರಿಂದ ವಿದ್ಯಾರ್ಥಿಗಳಿಗೆ ತುಂಬ ಸಹಾಯಕವಾಯಿತು. ಕಾಲೇಜಿನ ಹಾಸ್ಟೆಲಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಿಗಂತೂ ಇದೊಂದು ವರವಾಗಿ ಪರಿಣಮಿಸಿತು. ನಾನು ತತ್ವಶಾಸ್ತ್ರದ ವಿದ್ಯಾರ್ಥಿಯಲ್ಲದಿದ್ದರೂ ನಮ್ಮಂಥ ವಿದ್ಯಾರ್ಥಿಗಳಿಗೆ ಬೇಕಾಗಿದ್ದ ಗ್ರಂಥಗಳನ್ನು ಇತರ ಕಾಲೇಜುಗಳ ಗ್ರಂಥ ಭಂಡಾರಗಳಿಂದ ತರಿಸಿ ಅನುಕೂಲಗಳನ್ನು ಒದಗಿಸಿಕೊಟ್ಟರು.

ನಾನು ಮಹಾರಾಜ ಕಾಲೇಜಿನಲ್ಲಿ 1939ರಲ್ಲಿ ಅಧ್ಯಾಪಕನಾಗಿ ಸೇರಿಕೊಂಡಾಗ ಹನುಮಂತರಾಯರೊಡನೆ ಇನ್ನೂ ಹೆಚ್ಚು ರೀತಿಯಲ್ಲಿ ವ್ಯವಹರಿಸುವುದು ಸಾಧ್ಯ ವಾಯಿತು. ಆಗ ಮೈಸೂರು ವಿಶ್ವವಿದ್ಯಾನಿಲಯವು 'ಪ್ರಚಾರೋಪನ್ಯಾಸ ಮಾಲೆ'ಯೆಂಬ ಒಂದು ಹೊಸ ಪ್ರಯೋಗವನ್ನು ಪ್ರಾರಂಭಿಸಿತು. ವಿಶ್ವವಿದ್ಯಾನಿಲಯದ ಅನುಕೂಲವು ಒದಗದ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲ ವಿಷಯಗಳನ್ನು ಕುರಿತ ಉಪನ್ಯಾಸಗಳನ್ನು ಕನ್ನಡದಲ್ಲಿ ಏರ್ಪಡಿಸಿ ಸಾಮಾನ್ಯ ಜನರಿಗೆ ವಿಶ್ವವಿದ್ಯಾನಿಲಯದ ವ್ಯಾಸಂಗವಿಷಯಗಳ ಮತ್ತು ಜನರಿಗೆ ಅವಶ್ಯವಾಗಿ ಬೇಕಾಗಿದ್ದ ಜ್ಞಾನಗಳ ಪರಿಚಯ ಮಾಡಿಕೊಡುವುದು ಅದರ ಉದ್ದೇಶವಾಗಿತ್ತು. ಆ ಕಾರ್ಯವನ್ನು ಮಾಡಲು University Teachers Association ಎಂಬ ಸಂಘವನ್ನು ಸ್ಥಾಪಿಸಿದರು. ಅದರ ಕಾರ್ಯದರ್ಶಿಗಳಾಗಿ ಹನುಮಂತರಾಯರು ಮಾಡಿದ ಏರ್ಪಾಟು ತುಂಬ ತೃಪ್ತಿದಾಯಕವಾಗಿತ್ತು. ಅಂದು ಕುಲಪತಿಗಳಾಗಿದ್ದ ಎನ್.ಎಸ್. ಸುಬ್ಬರಾಯರಿಗೆ ಇದು ತುಂಬ ಪ್ರಿಯವಾದ ಕಾರ್ಯವಾಯಿತು. ಹೀಗೆ ಅಧ್ಯಾಪಕರು ನೀಡಿದ ಉಪನ್ಯಾಸಗಳನ್ನು ಬಳಿಕ ಸಣ್ಣ ಸಣ್ಣ ಪುಸ್ತಕಗಳನ್ನಾಗಿ ಮುದ್ರಿಸುವ ಏರ್ಪಾಟಾಯಿತು. ಈ ಪುಸ್ತಕಮಾಲೆ ತುಂಬ ಜನಪ್ರಿಯವಾದುದರಿಂದ ಸಾವಿರಾರು ಪ್ರತಿಗಳು ಮಾರಾಟವಾದವು. ಇದಕ್ಕೆ ಕಾರಣ ಆ ಪುಸ್ತಕಗಳ ಬೆಲೆ ಅಂದಿನ ಎರಡಾಣೆಗಿಂತ ಹೆಚ್ಚಾಗಿರಲಿಲ್ಲ. ಹೀಗೆ ಮುದ್ರಣವಾದ ಪುಸ್ತಕಗಳು ಕ್ರಮೇಣ ನೂರರ ಸಂಖ್ಯೆಯನ್ನು ಮೀರಿತು. ಅಲ್ಲದೆ ಈ ಪುಸ್ತಕಗಳು ಅನೇಕ ಸಲ ಪುನರ್ಮುದ್ರಣಗೊಂಡವು.

ಇಂಥ ಉಪನ್ಯಾಸಗಳನ್ನು ಮಾಡಲು ಒಂದೊಂದು ಸಲ 10 ಜನ ಅಧ್ಯಾಪಕರು ಗ್ರಾಮೀಣ ಪ್ರದೇಶಗಳಿಗೆ ಪ್ರಯಾಣ ಮಾಡಬೇಕಾಗಿತ್ತು ಮತ್ತು ಅಲ್ಲಿ ಎರಡು ಮೂರು ದಿನ ನಿಲ್ಲಬೇಕಾಗುತ್ತಿತ್ತು. ಈ ಎಲ್ಲ ವ್ಯವಸ್ಥೆಗಳನ್ನು ಸರ್ವಸಮರ್ಪಕವಾಗಿ ಮಾಡುವುದರಲ್ಲಿ ಹನುಮಂತರಾಯರ ಸಾಮರ್ಥ್ಯ ಸರ್ವಮಾನ್ಯವಾಗಿತ್ತು. ಎಲ್ಲರ ಮೆಚ್ಚುಗೆಯನ್ನು ಪಡೆದ ಅವರು ಇಂಥ ಕಾರ್ಯಗಳಿಗೆ ಯಾವ ಅಧ್ಯಾಪಕರನ್ನು ಕರೆದರೂ ಅವರು ಎರಡು ಮಾತಿಲ್ಲದೆ ಒಪ್ಪಿಕೊಳ್ಳುತ್ತಿದ್ದರು. ಹೀಗೆ ಉಪನ್ಯಾಸ ಮಾಡಿದ ನನ್ನ ಪುಸ್ತಕ ರುಚಿ ಒಂದು ಆ ಮಾಲೆಯಲ್ಲಿ ಪ್ರಕಟವಾಗಿದೆ. ಈಗ ಅದು 8ನೆಯ ಮುದ್ರಣವನ್ನು ಕಂಡಿದೆ.

ನವ ಅಧ್ಯಾಪಕರಲ್ಲಿ, ಯುವಕರು ಹೊಸದಾಗಿ ಸೇರಿದವರು ಇದ್ದರೆ, ಅವರಿಗೆ ಸಂಸಾರದ ನಿರ್ವಹಣೆಯ ಬಗ್ಗೆ ಮಾರ್ಗದರ್ಶನ ಮಾಡಿ ಮೈಸೂರಿನಂಥ ನಗರದಲ್ಲಿ ಅಂಥವರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದು ಹನುಮಂತರಾಯರ ಮತ್ತೊಂದು ಉಪಕಾರವಾಗಿತ್ತು. ಹೀಗೆ ಅನುಕೂಲವನ್ನು ಪಡೆದವರಲ್ಲಿ ನನ್ನ ಸಹಪಾಠಿಗಳಾಗಿದ್ದ ಎಚ್.ಎಂ. ಶಂಕರನಾರಾಯಣರಾಯರೂ, ಎಸ್.ವಿ. ಪರಮೇಶ್ವರಭಟ್ಟರೂ ಮುಖ್ಯರು. ನಾನು ಬೆಂಗಳೂರಿಗೆ ಬಂದುಬಿಟ್ಟದ್ದರಿಂದ ನನಗೆ ಈ ಅದೃಷ್ಟ ಲಭಿಸಲಿಲ್ಲ. ಅದರೇನು ಅವರು ಇರುವತನಕ ನಾನು ಅವರನ್ನು ಕಂಡಾಗ ಅವರು ತೋರುವ ವಿಶ್ವಾಸದ ಪರಿಣಾಮವಾಗಿ ನನಗೆ ಅತೀವ ಆನಂದವಾಗುತ್ತಿತ್ತು.

ಹನುಮಂತರಾಯರು ಕೇವಲ ಅಧ್ಯಾಪಕರಾಗಿ ಪಾಠಮಾಡಿ ವಿರಮಿಸುತ್ತಿರಲಿಲ್ಲ. ಅತ್ಯಂತ ಶ್ರೇಷ್ಠ ಬರಹಗಾರರೂ ಆಗಿದ್ದರು ಅವರು ರಚಿಸುವ ಗ್ರಂಥಗಳು ವಿದ್ಯಾರ್ಥಿಗಳಿಗೆ ತುಂಬ ಪ್ರಯೋಜನಕರವಾಗಿದ್ದುವು. ಅವರು ಪಾಠಮಾಡುತ್ತಿದ್ದುದು ಇಂಗ್ಲೀಷಿನಲ್ಲಾದರೂ ಗ್ರಂಥಗಳನ್ನು ರಚಿಸಿದ್ದುದು ಕನ್ನಡದಲ್ಲಿ. ಅವರ ಕೆಲವು ಗ್ರಂಥಗಳು ಈಗಲೂ ಯುವಕರಿಗೆ ಮಾರ್ಗದರ್ಶಕವಾಗಿದೆ.

ಅವರು ನಿವೃತ್ತರಾದ ಮೇಲೆ ಅವರ ಮಕ್ಕಳು ಉತ್ತಮವಾದ ಒಂದು ಮುದ್ರಣಾಲಯವನ್ನು ಸ್ಥಾಪಿಸಿ ಅನೇಕ ಉತ್ತಮಗ್ರಂಥಗಳನ್ನು ಮುದ್ರಿಸಿ ಪ್ರಕಟಿಸಿ ಹೆಸರು ಮಾಡಿದರು.

ಮೈಸೂರು ನಗರದ ಸಂಸ್ಕೃತಿ ಜೀವನವನ್ನು ಬೆಳೆಸುವುದರಲ್ಲಿ ಹನುಮಂತರಾಯರ ಪಾತ್ರ ದೊಡ್ಡದಾಗಿತ್ತು. ಈಗಲೂ ಜನ ಅವರನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. ಅಂಥವರ ನೆನಪಿಗೆ ಇದು ನನ್ನ ಕಿರಿಯ ಕಾಣಿಕೆ.

ಅಲೆಯುವ ಮನದ ಮಿನುಗುವ ಮಿಂಚಿನ
ಎ.ಎನ್.ಮೂರ್ತಿರಾವ್
(1900-2003)

ಹರಟೆಯಿಂದ ಮನಸ್ಸನ್ನು ಬೆಳಗುವ ಸಾಹಿತ್ಯವನ್ನು ಸೃಷ್ಟಿಸಿ ಜನಪ್ರಿಯತೆಯನ್ನು ಸಂಪಾದಿಸಿದವರು ಎ.ಎನ್. ಮೂರ್ತಿರಾಯರು. ಕನ್ನಡಕ್ಕೆ ಲಲಿತಪ್ರಬಂಧದ ಸವಿಯನ್ನು ತಂದಿತ್ತವರು ಅವರು. ನಾವು ವಿದ್ಯಾರ್ಥಿಗಳಾಗಿದ್ದಾಗ ರಚಿತವಾಗುತ್ತಿದ್ದ ಅವರ ಪ್ರಬಂಧಗಳನ್ನು ಓದುವುದಕ್ಕೆ ಮುಂಚೆಯೇ 'ಆಷಾಢಭೂತಿ'ಯ ಮೂಲಕ ಪ್ರಸಿದ್ಧರಾಗಿದ್ದರು ಅವರು. ಫ್ರೆಂಚ್ ನಾಟಕಕಾರ ಮೋಲಿಯೇರನ ತಾರ್ತುಫ್ ನಾಟಕದ ರೂಪಾಂತರವಾದ ಆ ನಾಟಕವನ್ನು ನೋಡದ ಕಾಲೇಜು ವಿದ್ಯಾರ್ಥಿಗಳಿರಲಿಲ್ಲ. ಹಾಗೆ ನೋಡಿದರೆ ಮೈಸೂರಿನ ಜನಕ್ಕೆಲ್ಲ ಆ ನಾಟಕ ಚಿರಪರಿಚಿತವಾಗಿತ್ತು. ಅದೂ ಅದ್ಭುತ ನಟರಾಗಿದ್ದ ಎನ್.ಎಸ್. ನಾರಾಯಣ ಶಾಸ್ತ್ರಿಗಳ ಅಭಿನಯದ ಮೂಲಕ ನೋಟಕರನ್ನು ಆಗಾಗ ಸಂತೋಷಪಡಿಸುತ್ತಿತ್ತು. 'ಹಗಲುಗನಸುಗಳು' ಎಂಬ ಪ್ರಬಂಧ ಸಂಕಲನವು ಪ್ರಕಟವಾದ ಮೇಲೆ ಅದು ಕಾಲೇಜಿನ ಎಲ್ಲ ವಿದ್ಯಾರ್ಥಿಗಳ ಮೇಲೆ ತುಂಬ ಪ್ರಭಾವವನ್ನು ಬೀರಿತು. ಕನ್ನಡದಲ್ಲಿ ಇಲ್ಲದಿದ್ದ ಒಂದು ಸಾಹಿತ್ಯ ಪ್ರಕಾರಕ್ಕೆ ಆ ಪುಸ್ತಕ ನಾಂದಿಯನ್ನು ಹಾಡಿತು. 'ಹವಳದ್ವೀಪ'ವೆಂಬ ಒಂದು ರಮ್ಯ ಕಾದಂಬರಿ ಬ್ಯಾಲಂಟೈನನ The Coral Island ಎಂಬುದರ ಅನುವಾದ, ಸಂಗ್ರಹಾನುವಾದ. ಅದು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾದ ಮೇಲೆ ಮೂರ್ತಿರಾಯರ ಕೀರ್ತಿ ಕನ್ನಡ ದೇಶಕ್ಕೆಲ್ಲ ಹರಡಿತು. ಹೀಗೆ ಪ್ರಾರಂಭವಾದ ಮೂರ್ತಿರಾಯರ ಸಾಹಿತ್ಯ ಕೃಷಿ

ಬಹುಮಾನ್ಯರಾಗಿ ಬೆಳೆದರು. ಅವರು 'ದೇವರು' ಕೃತಿಯನ್ನು ಸೃಷ್ಟಿಸಿದ ಮೇಲೆ ಎಲ್ಲ ಜನರ ಬಾಯಿ ಮಾತಾದರು.

ಚಿತ್ರಗಳು-ಪತ್ರಗಳು ಎಂಬ ಅವರ ಪುಸ್ತಕದಲ್ಲಿ ಅವರಿಗೆ ಅಧ್ಯಾಪಕರಾಗಿದ್ದ ತಪರಂತ ಬೂಟ್‌ನಿಂದ ಹಿಡಿದು ಶ್ರೀಕಂಠಯ್ಯನವರವರೆಗೆ ಹತ್ತು ಜನ ಪ್ರತಿಭಾವಂತ ಅಧ್ಯಾಪಕರ ಜೀವನ ಚಿತ್ರಗಳಿವೆ. ಮೈಸೂರು ನಗರದ ಶಿಕ್ಷಣ ಕ್ಷೇತ್ರದ ಈ ಸುಂದರ ಚಿತ್ರಗಳಲ್ಲಿ ಆಗಿನ ವಿದ್ಯಾಭ್ಯಾಸ ಕ್ಷೇತ್ರದ ಚರಿತ್ರೆಯೇ ಅಡಗಿದೆ. ಅಲ್ಲಿರುವ ಒಬ್ಬೊಬ್ಬ ವ್ಯಕ್ತಿಯ ವಿಶಿಷ್ಟ ಗುಣಗಳೂ ಸಹಜವಾಗಿ ಮರೆಯಾಗುವ ಗುರುಕುಲಗಳನ್ನು ನೆನಪಿಗೆ ತರುತ್ತವೆ. ಸ್ನೇಹಿತರ ಒಡನಾಟದ ಸ್ವಾರಸ್ಯವನ್ನು ತೆರೆಯುವ ಈ ಚಿತ್ರಗಳ ಸಂಗ್ರಹವನ್ನು ಓದಿಯೇ ಅನುಭವಿಸಬೇಕು.

ಸಾಹಿತ್ಯಮಾರ್ಗದೊಂದರೇನು ಎಂಬುದನ್ನು ಅವರ 'ಪೂರ್ವಸೂರಿಗಳೊಡನೆ' ಎಂಬ ಗ್ರಂಥದಲ್ಲಿನ ವಿಮರ್ಶಾತ್ಮಕ ಪ್ರಬಂಧಗಳಿಂದಲೂ ನಾವು ತಿಳಿದುಕೊಳ್ಳಬಹುದು. ಷೇಕ್ಸ್‌ಪಿಯರ್‌ನನ್ನು ಕುರಿತ ಅವರ ಗ್ರಂಥ ೬ ಕಲಾವಿದ ನಾಟಕಗಳ ಪರಿಚಯವನ್ನು ಸಾಂದ್ರವಾಗಿ ಮಾಡಿಕೊಡುತ್ತದೆ.

ಅನುವಾದಕರಾಗಿ ಅವರು ಮೋಲಿಯರನ ಎರಡು ನಾಟಕಗಳಲ್ಲದೆ ಷೇಕ್ಸ್‌ಪಿಯರ್‌ನ ಚಂಡಮಾರುತ (Tempest)ವನ್ನು ಕನ್ನಡಕ್ಕೆ ತಂದಿದ್ದಾರೆ.

ಅಮೆರಿಕಾ ದೇಶಕ್ಕೆ ಹೋಗಿ ಅವರು ಅನೇಕ ಸಲ ಅಲ್ಲಿ ಪ್ರವಾಸ ಮಾಡಿದ್ದಾರೆ. 'ಅಪರ ವಯಸ್ಕನ ಅಮೆರಿಕಾ ಯಾತ್ರೆ'ಯಲ್ಲಿ ಎರಡು ದೇಶಗಳ ಸ್ಥಿತಿಗತಿಗಳ ಸಂಸ್ಕೃತಿ ವಿಕೃತಿಗಳ ಹೋಲಿಕೆಯನ್ನು ಮಾಡಿಕೊಟ್ಟಿದ್ದಾರೆ. ಅಂಥ ಬರಹದಲ್ಲೆಲ್ಲ ನಮಗೆ ಕಾಣುವುದು ಅವರ ಸ್ವಭಾವವೇ. ಸಂಗ್ರಹಗುಣ ಮತ್ತು ಸುಂದರ ಹಾಸ್ಯ ಈ ರಚನೆಯ ಪ್ರಧಾನವಾದ ಗುಣಗಳು.

'ಸಂಜೆಗಣ್ಣಿನ ಹಿನ್ನೋಟ'ದಲ್ಲಿ ಅವರ ಆತ್ಮಕಥೆ ಮೂಡಿಬಂದಿದೆ. ಅದರಲ್ಲಿ ಕನ್ನಡ ನಾಡಿನ ಅನೇಕ ವಿವರಗಳು ಸೊಗಸಾಗಿ ಮೂಡಿಬಂದಿದೆ.

'ದೇವರು' ಎಂಬ ಕೃತಿಯನ್ನು ರಚಿಸಿ 'ಅಗ್ನಾಸ್ಟಿಕ್' ಎಂಬ ಶಬ್ದದ ವಿವರವನ್ನು ನೀಡಿದ್ದಾರೆ. ಈ ಗ್ರಂಥದಲ್ಲಿ 'ದೇವರಿಲ್ಲ' ಎಂಬ ವಾದ ನಿರೂಪಿತವಾಗಿದೆ. ಅಮೆರಿಕದ 'ಇಂಗರ್‌ಸಾಲ್' ಎಂಬ ಪ್ರಬಂಧಕಾರನ ಪ್ರಭಾವವನ್ನೂ ನಾವು ಈ ಗ್ರಂಥದ ರಚನೆಯಲ್ಲಿ ಕಾಣಬಹುದು. ನಾವು ವಿದ್ಯಾರ್ಥಿಗಳಾಗಿದ್ದ ಕಾಲದಲ್ಲಿ ಕಾಲೇಜಿನ ವಾತಾವರಣದಲ್ಲಿ ಈ ಲೇಖಕನನ್ನು ವಿದ್ಯಾರ್ಥಿಗಳು ಹೆಚ್ಚಾಗಿ ಓದುತ್ತಿದ್ದರು. ಈ ವಿವಾದಾತ್ಮಕ ರಚನೆಯಿಂದ ಮೂರ್ತಿರಾಯರಿಗೆ ಬಹುಮಾನವು ದೊರಕಿತು. ಮಧ್ಯಯುಗದಲ್ಲಿ ಅಂಥ ಪುಸ್ತಕವನ್ನು ಬರೆದವರಿಗೆ ಗಲ್ಲುಶಿಕ್ಷೆಯಾಗುತ್ತಿದ್ದುದನ್ನು ನೆನಪಿಗೆ ತಂದು ಮೂರ್ತಿರಾಯರು ಜನಗಳ

ಮನಸ್ಸಿನಲ್ಲಿ ಎಷ್ಟು ವ್ಯತ್ಯಾಸವಾಗಿದೆ ಎಂಬುದನ್ನು ವಿವರಿಸುತ್ತಾರೆ. ಸಾಹಿತ್ಯಕ್ಕೆ ಇಂಥಾ ಭಕ್ತಿ ಗೌರವ ನೀಡುವ ಈ ಮನಸ್ಥಿತಿ ಮಾನವನು ತುಂಬ ಬೆಳೆದಿದ್ದಾನೆ ಎಂಬುವನ್ನು ತೋರಿಸುತ್ತದೆ ಎನ್ನುತ್ತಾರೆ.

ಮೂರ್ತಿರಾಯರ ಲೇಖನ ವ್ಯವಸಾಯದ ವಿಸ್ತಾರ ಹೀಗೆ ವ್ಯಾಪಕವಾಗಿದೆ. ಅವರು ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದಾಗ ಮುಖ್ಯಮಂತ್ರಿಗಳಾಗಿದ್ದ ಹನುಮಂತಯ್ಯ ನವರ ಆದೇಶದಂತೆ ಕುಮಾರವ್ಯಾಸನ ಭಾರತವನ್ನು ಚೆನ್ನಾಗಿ ಮುದ್ರಿಸಿ ಪ್ರಕಟಿಸಿದರು. ಅಂಥ ದೊಡ್ಡ ಗ್ರಂಥದ 25000 ಪ್ರತಿಗಳನ್ನು ಮುದ್ರಿಸಿ ಪ್ರತಿಯೊಂದಕ್ಕೆ ಎರಡು ರೂಪಾಯಿಗಳಿಗೆ ಮಾರುವಂತೆ ಮಾಡಿದ್ದರು. ಅವರ ಕಾರ್ಯದಲ್ಲಿ ಇದೊಂದು ಮೈಲಿಗಲ್ಲು.

ಆಕಾಶವಾಣಿಯ ನಿರ್ದೇಶಕರಾಗಿ ಅದರಲ್ಲಿ ಭಾಗವಹಿಸುವವರಿಗೆ ಸಂಭಾವನೆ ದೊರಕುವಂತೆ ಮಾಡಿದುದು ಮತ್ತೊಂದು ಹಂತ.

ಇಷ್ಟೆಲ್ಲ ಆದರೂ ಅವರ ವ್ಯಕ್ತಿತ್ವವನ್ನು ಕುರಿತು ಬರೆಯುವುದು [illegible], ಮೂರ್ತಿರಾಯರು ಅವರ ಸಾಹಿತ್ಯ ಕೃತಿಗಳಿಗಿಂತ ಎತ್ತರದ ವ್ಯಕ್ತಿಯಾಗಿದ್ದರು. ತುಂಬ ಸ್ನೇಹಶೀಲ ವ್ಯಕ್ತಿಯಾಗಿ ವ್ಯವಹರಿಸುತ್ತಿದ್ದರು. ಅವರೂ ಅವರ [illegible] ಸಂಸಾರದ ಚಿತ್ರಗಳು ಒಂದು ಚಿತ್ರ ಪತ್ರದಲ್ಲಿ ಚೆನ್ನಾಗಿ ಮೂಡಿಬಂದಿವೆ.

ಆ ಬಗೆಯ ಸಮಾನತೆಯಲ್ಲಿದ್ದವರಿಗೆ ದೊರಕುತ್ತಿದ್ದ ಸಂತೋಷ ಸಾಮಾನ್ಯರಿಗೆ ದೊರೆಯುವುದಿಲ್ಲ. ಅದಕ್ಕೆ ಕಾರಣ ಅವರು ಗುಂಪಿನೊಳಗೆ ಹೆಚ್ಚಾಗಿ ಸೇರುತ್ತಿರಲಿಲ್ಲ. ತಾನಾಯಿತು ತಮ್ಮ ಮಿತ್ರವೃಂದವಾಯಿತು, ತಮ್ಮ ವ್ಯಾಸಂಗವಾಯಿತು, ತಮ್ಮ ಬರಹವಾಯಿತು ಎಂಬ ರೀತಿಯಲ್ಲಿ ಬಾಳಿದರು. ಸಂತೋಷ ಸುಮ್ಮನೆ ಅವರಿಗೆ ಸಿಗಲಿಲ್ಲ, ಆದರೆ ಅವರ ಬರಹ ಅವರು ಮಾಡಿದ ಕಾರ್ಯವನ್ನು ಮಾಡಿತು. ನಾಡಿನಲ್ಲೆಲ್ಲ ಅದು ಪ್ರಚಾರವಾಗಿ ಓದುಗರಿಗೆ ಬಹುಕಾಲದ ಸಂತೋಷವನ್ನು ನೀಡಿತು. ಕೃತಿಯಿಂದ ಕೃತಕೃತ್ಯರಾದ ಅವರು ಇಂದು ನಮ್ಮೊಡನಿಲ್ಲ, ಆದರೆ ನಾಡಿನ ಜನಮನದಲ್ಲಿ ಅವರಿಗೆ ಸದಾ ಭದ್ರವಾದ ಗೌರವದ ಸ್ಥಾನ ಸ್ಥಾಪಿತವಾಗಿದೆ. ಅಳೆಯದ ಮನದ ಮಿನುಗುವ ಮಿಂಚಾಗಿ ನಾಡಿನ ಸಾಹಿತ್ಯಾಕಾಶದಲ್ಲಿ ಹೊಳೆಯುತ್ತ ಇರುತ್ತಾರೆ. ಅವರ ನೆನಪು ಸದಾ ಹಸಿರಾಗಿರುತ್ತದೆ.

ವಿನಯವಂತ ವಿದ್ವಾಂಸ ಎಲ್. ಗುಂಡಪ್ಪ
(1903-1986)

ಕರ್ನಾಟಕದಲ್ಲಿಯೂ ಇಪ್ಪತ್ತೊಂದನೆಯ ಶತಮಾನವು ತನ್ನ ಆಡಳಿತವನ್ನು ಪ್ರಾರಂಭ ಮಾಡಿ ಎರಡು ವರ್ಷಗಳು ಪೂರೈಸಿವೆ. ಕನ್ನಡನಾಡು ಕನ್ನಡದ ಸರ್ವೋದಯಕ್ಕಾಗಿ ದುಡಿದ, ಇಂದಿನ ಕನ್ನಡ ಸಾಹಿತ್ಯದ ಹೆಬ್ಬೆಳಸಿಗೆ ತಳಪಾಯವನ್ನು ಹಾಕಿದ ಹಿರಿಯರನ್ನು ಮರೆತು ಬಿಡುತ್ತಿದೆಯೋ ಎಂಬ ಹೆದರಿಕೆ ಕೆಲವರ ಮನಸ್ಸಿನಲ್ಲಿ ಮೂಡಿದ್ದರೆ ಅದು ಆಶ್ಚರ್ಯವಲ್ಲ. ಈಗ ಅಂಥ ಹಿರಿಯರನ್ನು ನೆನೆಯುವುದು ಆಗಬೇಕಾದ ಕಾರ್ಯ. ಕಳೆದ ಶತಮಾನದ ಮಧ್ಯಭಾಗದಲ್ಲಿ ಕನ್ನಡ ನುಡಿಯ ಪ್ರಗತಿಗೆ ತಮ್ಮ ಸರ್ವಸ್ವವನ್ನೂ ಅರ್ಪಿಸಿದ ಆದರೂ ಎಲೆಮರೆಯ ಕಾಯಿಯಂತೆಯೇ ಬಾಳಿದ ಅನೇಕರಿದ್ದರು. ಅಂಥವರಲ್ಲಿ ಪ್ರಸಿದ್ಧ ವಿದ್ವಾಂಸರಾಗಿದ್ದ ಎಲ್. ಗುಂಡಪ್ಪನವರು ಒಬ್ಬರು. ಮತಿಘಟ್ಟ ಅವರ ಊರು. ಅವರ ಹಿರಿಯರು ಆ ಊರಿನಲ್ಲಿ ಕೆರೆಯ ಕೆಳಗಿನ ಭೂಮಿಯಲ್ಲಿ ತೆಂಗು ಬಾಳೆಗಳ ತೋಟವನ್ನು ಬತ್ತದ ಗದ್ದೆಯನ್ನು ಹೊಂದಿ ಬೇಸಾಯಗಾರರಾಗಿ ಬಾಳುತ್ತಿದ್ದ ಕಾಲ. ಅವರ ವಿದ್ಯಾಭ್ಯಾಸಕ್ಕೆ ಮಾತ್ರ ಯಾವ ಅನುಕೂಲವೂ ಇರಲಿಲ್ಲ. ತಂದೆ ಲಿಂಗಣ್ಣಯ್ಯ ತಾಯಿ ಚೆನ್ನಮ್ಮ ಅವರ ಪ್ರೀತಿಯ ಆರೈಕೆಯನ್ನು ಬಿಟ್ಟು ನೆಂಟರ ಸಹಾಯವಿದ್ದ ಬೇರೆ ಬೇರೆ ಊರುಗಳಲ್ಲಿ ಗುಂಡಪ್ಪನವರು ವಿದ್ಯಾಭ್ಯಾಸವನ್ನು ಮುಂದುವರಿಸಬೇಕಾಯಿತು. ಬ್ರಾಹ್ಮಣ ವರ್ಗದವರ ಬೇಸಾಯ ಎಂದರೆ ಅದೇನು ಅನೇಕ ಎಕರೆಗಳ ಜೋಡಿದಾರರ ಬಾಳಲ್ಲ. ಒಂದು ಎಕರೆಗೂ ಕಡಮೆಯ ಭೂಮಿಯಿಂದ ಬರುವ ಹಣ್ಣು ಹಂಪಲು ಧಾನ್ಯಗಳಿಂದ

ಸಂಸಾರವನ್ನು ಸಾಗಿಸುವ ಸಂತೃಪ್ತ ಮಧ್ಯಮ ವರ್ಗದ ಜೀವನ. ಇಂಥ ಹಿನ್ನೆಲೆಯಲ್ಲಿ
ಬ ಂ ದ ' ವ ' ರ ' ು
ಎಲ್. ಗುಂಡಪ್ಪನವರು.

8-1-1903ರಲ್ಲಿ ಹುಟ್ಟಿದ ಗುಂಡಪ್ಪನವರ ಬಾಲ್ಯ ವಿದ್ಯಾಭ್ಯಾಸ ಬೇಲೂರಿನಲ್ಲಿ ನಡೆಯಿತು. ಕಲಿಕೆಯಲ್ಲಿ ಮುಂದಾದ ಬಾಲಕನಿಗೆ ಸಾಂಪ್ರದಾಯಿಕ ಬ್ರಾಹ್ಮಣ ಸಂಸಾರದಲ್ಲಿ ದೊರೆಯುವ ಸಂಸ್ಕೃತ ಭಾಷಾ ಸಾಹಿತ್ಯಗಳಲ್ಲಿ ಆಸಕ್ತಿ ಹೆಚ್ಚಿ ಸಾಕಷ್ಟು ತಿಳಿವಳಿಕೆಯನ್ನು ಬೇಗ ಸಂಪಾದಿಸಿಕೊಂಡು ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿದರು. ಪ್ರೌಢ ವಿದ್ಯಾಭ್ಯಾಸಕ್ಕೆ ಜಿಲ್ಲೆಯ ಮುಖ್ಯ ಸ್ಥಳವಾದ ಚಿಕ್ಕಮಗಳೂರಿನಲ್ಲಿ ನೆಲಸಬೇಕಾಯಿತು. ಆ ವ್ಯಕ್ತಿಗೆ ಶೃಂಗೇರಿಯ ಅಭಿನವ ವಿದ್ಯಾತೀರ್ಥ ಸ್ವಾಮಿಗಳು ಆಗಮಿಸಿದಾಗ ಅವರಿಗೆ ನಾಗರಿಕರ ಕಡೆಯಿಂದ ಸಾರ್ವಜನಿಕ ಸನ್ಮಾನವಾಯಿತು. ಈ ಸಂದರ್ಭದಲ್ಲಿ ಇನ್ನೂ ವಿದ್ಯಾರ್ಥಿಯಾಗಿದ್ದ ಕಿರಿ ವಯಸ್ಸಿನ ಎಲ್. ಗುಂಡಪ್ಪ, ಶೃಂಗೇರಿಯ ಸ್ವಾಮಿಗಳ ಆಗಮನವನ್ನು ಸ್ವಾಗತಿಸಿ ಸುಂದರ ವಾದ ಕೆಲವು ವೃತ್ತಗಳನ್ನು ಸಂಸ್ಕೃತದಲ್ಲಿ ರಚಿಸಿ ಅವರೆದುರಿಗೆ ಓದಿದನಂತೆ. ಶ್ರೀಯವರು ಬಾಲಕನ ಸಾಮರ್ಥ್ಯವನ್ನು ಮೆಚ್ಚಿ ಆತನನ್ನು ಮೈಸೂರಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಕಳುಹಿಸ ಬೇಕೆಂದು ಸೂಚನೆಯಿತ್ತರು. ಅಲ್ಲದೆ ಆತನ ವಿದ್ಯಾಭ್ಯಾಸವು ಪೂರೈಸುವತನಕ ಶ್ರೀಮಠ ದಿಂದ ಮಾಸಿಕ ವೇತನದ ಸಹಾಯವನ್ನೂ ಘೋಷಿಸಿದರು. ಇದರಿಂದ ಎಲ್. ಗುಂಡಪ್ಪ ನವರು ಮೈಸೂರಿನಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಮುಂದುವರಿಸಲು ಸ್ವಲ್ಪ ಸಹಾಯ ವಾಯಿತು. ಆದರೂ ಮೈಸೂರಿಗೆ ಬಂದು ಬಾಡಿಗೆ ಕೊಟ್ಟಡಿಯನ್ನು ಹುಡುಕಿ ಸ್ವಂತ ಅಡುಗೆ ಮಾಡಿಕೊಂಡು ವಿದ್ಯಾಭ್ಯಾಸವನ್ನು ಮುಂದುವರಿಸಬೇಕಾಯಿತು.

ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ ಆಗ ನವೋದಯದ ಪ್ರಭಾವವು ಬೆಳೆಯುತ್ತಿದ್ದ ಕಾಲ. ಬಿ.ಎಂ.ಶ್ರೀ., ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ ಇವರುಗಳ ಪ್ರಭಾವ ವ್ಯಾಪಕವಾಗುತ್ತಿದ್ದ ಕಾಲ. ಎಲ್. ಗುಂಡಪ್ಪನವರು ಈ ಪ್ರಭಾವದ ವಲಯಕ್ಕೆ ಸಿಕ್ಕಿ ಆ ಆಂದೋಳನವು ಬೆಳೆಯುವುದಕ್ಕೆ ಸಹಾಯ ಮಾಡಿದ ವ್ಯಕ್ತಿಗಳಲ್ಲಿ ಒಬ್ಬರಾದರು.

ಎಂ.ಎ. ತರಗತಿಯಲ್ಲಿ ಕನ್ನಡವನ್ನು ಪ್ರಧಾನವಾಗಿ ಕಲಿತು ಜೊತೆಗೆ ಇಂಗ್ಲಿಷ್, ಸಂಸ್ಕೃತ, ತಮಿಳು ಈ ಭಾಷೆಗಳಲ್ಲಿ ಪರಿಣತರಾದರು. ಎಂ.ಎ. ಪದವಿಯನ್ನು ಪಡೆದ ಮಾತ್ರಕ್ಕೆ ಜೀವನೋಪಾಯಕ್ಕೆ ದಾರಿಯಾಯಿತು ಎಂದು ಅರ್ಥವಲ್ಲ. ಸರಕಾರದ ಉದ್ಯೋಗ ಆಗಲೂ ದೊರಕುವುದು ಕಷ್ಟವೇ ಆಗಿತ್ತು. ಎಂ.ಎ. ಪದವಿಯಿಂದ ಲೇಖನ ಕಾರ್ಯದಲ್ಲಿ ಸಾಮರ್ಥ್ಯ ಪ್ರಾಪ್ತವಾಗಿತ್ತು. ಪದವಿ ತರಗತಿಯಲ್ಲಿ 'ಸೊಹ್ರಾಬ್‌ರುಸ್ತುಂ' ಎಂಬ ಕವನವನ್ನು ರಚಿಸಿ ಬಿ.ಎಂ.ಶ್ರೀಯವರ ಸುವರ್ಣಪದಕವನ್ನು ಬೇರೆ ಪಡೆದಿದ್ದರು. ಇದರಿಂದ ಪತ್ರಿಕಾ ವ್ಯವಸಾಯದಲ್ಲಿ ದುಡಿಯುವ ಮನಸ್ಸಾಗಿ 'ವ್ಯವಸಾಯ ಪತ್ರಿಕೆ'ಯ ಸಂಪಾದಕರಾಗಿ ಕೆಲವು ಕಾಲ ದುಡಿದರು.

ಇದೇ ಸಮಯಕ್ಕೆ ಸರಿಯಾಗಿ ಮೈಸೂರು ಸರಕಾರವು ಒಂದು ಇಂಗ್ಲಿಷ್-ಕನ್ನಡ ನಿಘಂಟನ್ನು ಸಂಪಾದಿಸಲು 1932ರಲ್ಲಿ ಒಂದು ಯೋಜನೆಯನ್ನು ಸಿದ್ಧಪಡಿಸಿತು. ಅದರ ಕಾರ್ಯಗಳಲ್ಲಿ ಸಹಾಯ ಮಾಡಲು ಮೂವರು ಭಾಷಾ ವಿದ್ವಾಂಸರ ಅಗತ್ಯವಿತ್ತು. ಅದಕ್ಕಾಗಿ ಉತ್ತಮ ಇಂಗ್ಲಿಷ್ ಬಲ್ಲ ಕನ್ನಡ ವಿದ್ವಾಂಸರನ್ನು ಹುಡುಕಬೇಕಾಯಿತು, ಆಗ ಇದಕ್ಕೆ ಬೇಕಾದ ಅರ್ಹತೆಯನ್ನು ಯಾವ ಪ್ರಶ್ನೆಯೂ ಇಲ್ಲದ ಮೂವರು ವಿದ್ವಾಂಸರು ದೊರಕಿದರು. ಅವರೇ ಕೆ.ವಿ. ರಾಘವಾಚಾರ್, ಎಲ್. ಗುಂಡಪ್ಪ ಮತ್ತು ಎಂ.ವಿ. ಸೀತಾರಾಮಯ್ಯನವರು. ಈ ಮೂವರು 1932ರಿಂದ ಪ್ರಾರಂಭವಾದ ನಿಘಂಟು ಕಾರ್ಯದಲ್ಲಿ ನಿಯುಕ್ತರಾದರು. 1942ರಲ್ಲಿ ರಾಘವಾಚಾರ್ಯರು ಮಹಾರಾಜರ ಕಾಲೇಜಿಗೆ ವರ್ಗವಾದರು. 1946ರಲ್ಲಿ ಎಲ್. ಗುಂಡಪ್ಪನವರೂ ಬೆಂಗಳೂರಿನ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕಗೊಂಡು ಸೇವೆಯನ್ನು ಸಲ್ಲಿಸಿದರು.

ಹೀಗೆ ಎಲ್. ಗುಂಡಪ್ಪನವರು ಅವರ ನಲವತ್ತ ಮೂರನೆಯ ವರ್ಷದಲ್ಲಿ ಒಂದು 'ಪರ್ಮನೆಂಟ್' ಉದ್ಯೋಗವನ್ನು ಪಡೆದರು. ಅಲ್ಲಿಯತನಕ ಅಷ್ಟಿಷ್ಟು ಕಾಲಕ್ಷೇಪವೇ ಅವರ ಅದೃಷ್ಟವಾಯಿತು.

ಈ ಜೀವನ ವಿವರಗಳನ್ನು ನೀಡುವುದಕ್ಕೆ ಒಂದು ಮುಖ್ಯವಾದ ಕಾರಣವಿದೆ. ಜೀವನೋಪಾಯದ ವಿಷಯದಲ್ಲಿ ಅತಂತ್ರ ಸ್ಥಿತಿಯಿದ್ದರೂ ಗುಂಡಪ್ಪನವರು ಎಡೆಬಿಡದೆ ಮಾಡಿದ ಕನ್ನಡ ಸಾಹಿತ್ಯ ಸೇವೆ ಮಾತ್ರ ಮುಂದುವರಿಯುತ್ತಲೇ ಇತ್ತು. ಅವರ ದೃಢ ನಿರ್ಧಾರಕ್ಕೆ ಯಾವ ಅಡ್ಡಿ ಆತಂಕಗಳು ಬರಲೇ ಇಲ್ಲ. ಕನ್ನಡ ಭಾಷಾ ಸಾಹಿತ್ಯಗಳ ನವೋದಯದ ಕಾಲದಲ್ಲಿ ಇಂಥವರು ಕೆಲವರು ಮಾಡಿದ ಮೂಲಭೂತವಾದ ಸೇವೆಯನ್ನು ನಾವು ನೆನೆಯಬೇಕು.

ಕನ್ನಡ ಸಾಹಿತ್ಯದಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡಗಳಲ್ಲಿ ಪೂರ್ಣ ಪರಿಣತರಾಗಿದ್ದ ಇವರು ಬಹು ಮುಖ್ಯವಾದ ಕೆಲವು ಕಾರ್ಯಗಳನ್ನು ಮಾಡಿದ್ದಾರೆ. ಕನ್ನಡ ಭಾಷೆಯ ಆದಿ ಕಾವ್ಯವಾದ ಆದಿ ಪುರಾಣವನ್ನು ಸಂಗ್ರಹಿಸಿ ಅದಕ್ಕೆ ಅಚ್ಚುಕಟ್ಟಾದ ಮುನ್ನುಡಿಯನ್ನು ರಚಿಸಿದ್ದಾರೆ. ಅದು ಜೈನ ಗ್ರಂಥವಾದುದರಿಂದ ಅದನ್ನು ಅರ್ಥ ಮಾಡಿಕೊಳ್ಳಲು ಅಗತ್ಯವಾದ ಜೈನ ಧರ್ಮದ ಮುಖ್ಯ ವಿವರಗಳನ್ನೂ ಆ ಮತದಲ್ಲಿ ಪ್ರಯೋಗವಾಗುವ ಪಾರಿಭಾಷಿಕ ಶಬ್ದಗಳ ಅರ್ಥವನ್ನೂ ಆ ಗ್ರಂಥದಲ್ಲಿ ನೀಡಿದ್ದಾರೆ. ಕನ್ನಡ ಮಹಾಕಾವ್ಯಗಳನ್ನು ಸಂಗ್ರಹಿಸಿ ಅಗತ್ಯ ಮುನ್ನುಡಿಯೊಡನೆ ಮುದ್ರಿಸುವ ಮೈಸೂರು ವಿಶ್ವವಿದ್ಯಾನಿಲಯದ ಯೋಜನೆಯಲ್ಲಿ ಪ್ರಕಟವಾಗಿರುವ ಸಂಗ್ರಹ ಗ್ರಂಥಗಳಲ್ಲಿ ಗುಂಡಪ್ಪನವರ ಆದಿಪುರಾಣ ಸಂಗ್ರಹ ತುಂಬ ಮುಖ್ಯವಾದ ಪ್ರಕಟಣೆ. ಇದಾದ ಮೇಲೆ ಕುಮಾರವ್ಯಾಸನ ಗ್ರಂಥವನ್ನು ಹೊಸಗನ್ನಡ ಗದ್ಯದಲ್ಲಿ ಜನತೆಗೆ ನೀಡಿದ್ದಾರೆ. ನಾಡ ಪದಗಳನ್ನು ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿರುವುದು ಜಾನಪದ ಗ್ರಂಥಗಳ ಪ್ರಕಟಣೆಯಲ್ಲಿ ಪ್ರಾರಂಭದಲ್ಲಿ ಆದ ಕೆಲಸವಾಗಿದೆ. ದೇಶದ ಪ್ರಮಾಣಗಳನ್ನು ಕುರಿತ ಪುಸ್ತಕವೂ ಜನಸಾಮಾನ್ಯರಿಗೆ ಉಪಯೋಗವಾಗುತ್ತದೆ.

'ಕನ್ನಡ ಸಾಹಿತ್ಯ ಚಿತ್ರಗಳು' ಎಂಬ ಹೆಸರಿನಲ್ಲಿ ಮೂರು ಸಂಪುಟಗಳನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಸಾಹಿತ್ಯದಲ್ಲಿ ಚಿತ್ರಿತರಾಗಿರುವ ಅನೇಕ ಮಹಾವ್ಯಕ್ತಿಗಳ ಪರಿಚಯದ ನಿರೂಪಣೆಗಳಿವೆ. ಇವು ಸ್ವಾರಸ್ಯಪೂರ್ಣವಾದ ರಚನೆಗಳು, ಮಿಕ್ಕವೆಲ್ಲ ಅಂಥ ರಚನೆಗಳಿಗೆ ಪ್ರೇರಕಗಳಾಗಿವೆ. ಅವರು ರಚಿಸಿದ ಎಲ್ಲ ಹೊಸಗನ್ನಡ ಕವನಗಳನ್ನೂ ಸಂಕಲನ ಮಾಡಿ ಮತ್ತೆ ಪ್ರಕಟಿಸಬೇಕಾದ ಅಗತ್ಯವಿದೆ. 'ಚಟಾಕಿ' ಎಂಬ ಅವರ ಪ್ರಸಿದ್ಧ ಕವನವನ್ನು ಮತ್ತೆ ಶಿಶುಗೀತೆಗಳಲ್ಲಿ ಸೇರಿಸಬೇಕು.

ಅವರು ಮಾಡಿದ ಅತಿ ಮುಖ್ಯ ಕಾರ್ಯವೆಂದರೆ ಮೂರು ಬಗೆಯ ಅನುವಾದಗಳು. ಒಂದು ತಮಿಳಿನಿಂದ, ಎರಡು ಇಂಗ್ಲಿಷಿನಿಂದ, ಮೂರು ಸಂಸ್ಕೃತದಿಂದ. ಈ ಮೂರು ಭಾಷೆಗಳಲ್ಲಿಯೂ ಅವರು ಪರಿಣತರಾಗಿದ್ದುದರಿಂದ ಇದು ಸಾಧ್ಯವಾಯಿತು.

ತಮಿಳು ಗುಂಡಪ್ಪನವರಿಗೆ ತುಂಬ ಪ್ರಿಯವಾದ ಭಾಷೆಯಾಗಿತ್ತು. ಆ ಭಾಷೆಯ ಅತಿ ಪ್ರಾಚೀನ ಗ್ರಂಥಗಳನ್ನು ಆಧುನಿಕ ಗ್ರಂಥಗಳನ್ನು ಅವರು ಆಳವಾಗಿ ಅಭ್ಯಾಸ ಮಾಡಿ ಅವುಗಳಲ್ಲಿ ಮುಖ್ಯವಾದವುಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ತಮಿಳು ಸಂತ ಕವಯಿತ್ರಿ ಅವ್ವೈಯಾರ್ ಗ್ರಂಥಗಳಿಂದ, ಶಿಲಪ್ಪದಿಗಾರಂ, ಪೆರಿಯ ಪುರಾಣಂ ತಿರುವಾಚಕಂ, ತಿರುಕ್ಕುರಳ್ ಮತ್ತು ಸುಬ್ರಹ್ಮಣ್ಯ ಭಾರತಿ ಅವರ ಕವನಗಳಿಂದ ಸಾರವತ್ತಾದ ಭಾಗಗಳನ್ನು ಅನುವಾದಿಸಿದ್ದಾರೆ. ತಿರುಕ್ಕುರಳ್ ಗ್ರಂಥವನ್ನು ಸಂಪೂರ್ಣವಾಗಿ ತಮಿಳು ಛಂದಸ್ಸಿನಲ್ಲಿಯೇ ಅನುವಾದಿಸಿದ್ದಾರೆ. 'ನಾನ್ ಮಣಿಕ್ಕಡಿಗೈ' ಎಂಬ ಪ್ರಸಿದ್ಧ ನೀತಿ ಶತಕ ಗ್ರಂಥವನ್ನು ಅನುವಾದ ಮಾಡಿದ್ದಾರೆ. ಪೆರುಂಗತ್ತೈ ಎಂಬುದು ತಮಿಳಿನ ಬೃಹತ್ಕಥೆ. ಅದನ್ನು ಅನುವಾದಿಸಿ ಉದಯನ ಚರಿತ್ರೆ ಎಂಬ ಹೆಸರಿನಲ್ಲಿ ಈ ಗ್ರಂಥವನ್ನು ಕನ್ನಡಕ್ಕೆ ನೀಡಿದ್ದಾರೆ. ಸಿ. ರಾಜಗೋಪಾಲಾಚಾರ್ಯರ 'ವ್ಯಾಸರ್ ವಿರುಂದು' ಎಂಬ ಗ್ರಂಥವನ್ನು 'ವ್ಯಾಸರ ಔತಣ' ಎಂಬ ಹೆಸರಿನಲ್ಲಿ ಭಾಷಾಂತರಿಸಿದ್ದಾರೆ. ಹೀಗೆಯೇ ತಮಿಳಿನಿಂದ ಅವರು ಕನ್ನಡಕ್ಕೆ ಅನುವಾದ ಮಾಡಿರುವಷ್ಟು ಕಾವ್ಯಗಳನ್ನು ಮತ್ತಾರೂ ಮಾಡಿಲ್ಲ. ಈ ದೃಷ್ಟಿಯಿಂದ ತಮಿಳು-ಕನ್ನಡ ಬಾಂಧವ್ಯವನ್ನು ಹೆಚ್ಚಿಸಿದ ಗುಂಡಪ್ಪನವರನ್ನು ತಮಿಳುನಾಡಿನ ಜನ ಮೆಚ್ಚಿಕೊಂಡು ಅವರಿಗೆ 'ತಮಿಳ್ ಮಾಮಣಿ' ಎಂಬ ಬಿರುದನ್ನು ನೀಡಿ ಸುವರ್ಣ ಪದಕವನ್ನಿತ್ತು ಸಾರ್ವಜನಿಕವಾಗಿ ಗೌರವಿಸಿದರು. ಕನ್ನಡ ಜನ ಇದನ್ನು ಕೇಳಿ ಸಂತೋಷಪಟ್ಟು ಸುಮ್ಮನಾದರು. ಕನ್ನಡ ನಾಡಿನಲ್ಲಿ ಅವರಿಗೆ ಸಲ್ಲಬೇಕಾದ ಗೌರವ ಸನ್ಮಾನಗಳು ದೊರಕಲೇ ಇಲ್ಲ.

ಸಂಸ್ಕೃತದಿಂದ ಕನ್ನಡಕ್ಕೆ ಅನುವಾದ ಮಾಡಿದ ಗ್ರಂಥಗಳ ಪಟ್ಟಿಯೂ ದೊಡ್ಡದಾಗಿಯೇ ಇದೆ. ಭಾಸನು ನಾಟಕಕಾರನಾಗಿ ಪ್ರಸಿದ್ಧನಾಗಿದ್ದರೂ ಅವನ ನಾಟಕಗಳು ಉಪಲಬ್ಧವಾಗಿರಲಿಲ್ಲ. 1910ನೆಯ ಇಸವಿಯಲ್ಲಿ ತಿರುವಾಂಕೂರಿನ ಶ್ರೀ ಟಿ. ಗಣಪತಿ ಶಾಸ್ತ್ರಿಗಳಿಗೆ 13 ನಾಟಕಗಳ ಹಸ್ತಪ್ರತಿ ಸಿಕ್ಕಿತು. ಅವು ಭಾಸನವೇ ಎಂದು ಅವರು ತೀರ್ಮಾನಿಸಿ ಅವುಗಳನ್ನು ಪ್ರಕಟಿಸಿದರು. ಭಾಸನ ಭಾಷೆ ಎಲ್ಲ ಕಡೆ ಸರಳವಾಗಿಲ್ಲ. ಅಲ್ಲಲ್ಲಿ ಕ್ಲಿಷ್ಟತೆಗಳಿವೆ.

ಅವುಗಳನ್ನೆಲ್ಲ ನಾಟಕ ಸಂದರ್ಭಕ್ಕೆ ಹೊಂದುವಂತೆ ಅಳವಡಿಸಿ ಮಾಡಿರುವ ಗುಂಡಪ್ಪನವರ ಭಾಷಾಂತರ ಎಲ್ಲ ಸಂಸ್ಕೃತ ವಿದ್ವಾಂಸರ ಮೆಚ್ಚುಗೆಯನ್ನು ಪಡೆಯಿತು. ಪ್ರೊ ಎಂ. ಹಿರಿಯಣ್ಣನವರು ಇದನ್ನು ಗುಂಡಪ್ಪನವರಿಗೆ ಬರೆದ ಪತ್ರದಲ್ಲಿ ಹೀಗೆ ತಿಳಿಸಿದ್ದರಂತೆ : I find the result extremely satisfactory and you have very well succeeded in preserving in your translation the charm and simplicity characteristic of Bhasa.

ಶ್ರೀರಂಗರೂ ಕೂಡ ಇಂಥದೇ ಮೆಚ್ಚುಗೆಯನ್ನು ಸೂಚಿಸಿದ್ದರಂತೆ. ಗುಂಡಪ್ಪನವರು ಕನ್ನಡಕ್ಕೆ ಅನುವಾದ ಮಾಡಿರುವ ಭಾಸನ ನಾಟಕಗಳು ಇವು : ಮಧ್ಯಮ ವ್ಯಾಯೋಗ, ದೂತವಾಕ್ಯ, ದೂತಘಟೋತ್ಕಚ, ಕರ್ಣಭಾರ, ಊರುಭಂಗ ಎಂಬ ಐದು ಏಕಾಂಕಗಳು ಅಲ್ಲದೆ ಚಾರುದತ್ತ, ಪ್ರತಿಜ್ಞಾ ಯುಗಂಧರಾಯಣ, ಸ್ವಪ್ನವಾಸವದತ್ತ, ಪಂಚರಾತ್ರ ಎಂಬ ನಾಲ್ಕು ದೀರ್ಘ ನಾಟಕಗಳು. ಭಾಸನ ನಾಟಕಗಳನ್ನು ಕುರಿತ ಪ್ರೊ ಎ.ಆರ್. ಕೃಷ್ಣಶಾಸ್ತ್ರಿಗಳ ಗ್ರಂಥ ಬಹಳ ಪ್ರಸಿದ್ಧವಾದದ್ದು. ಸಿ.ಕೆ. ವೆಂಕಟ ರಾಮಯ್ಯನವರೂ ಭಾಸನ ಬಗ್ಗೆ ದೊಡ್ಡ ಗ್ರಂಥವೊಂದನ್ನು ಪ್ರಕಟಿಸಿದ್ದಾರೆ. ಭಾಸನನ್ನು ಅಭ್ಯಾಸ ಮಾಡುವುದಕ್ಕೆ ಈ ಎಲ್ಲ ಗ್ರಂಥಗಳೂ ತುಂಬ ಸಹಾಯಕವಾಗಿವೆ.

ಗುಂಡಪ್ಪನವರಿಗೆ ರಷ್ಯದ ಲಿಯೋ ಟಾಲ್‌ಸ್ಟಾಯ್ ಬಹುಪ್ರಿಯನಾದ ಲೇಖಕನಾಗಿದ್ದನು. ಆದುದರಿಂದ ರಷ್ಯನ್ ಭಾಷೆಯಿಂದ ಇಂಗ್ಲಿಷ್ ಭಾಷೆಗೆ ಅನುವಾದವಾಗುವ ಅನೇಕ ಗ್ರಂಥಗಳಲ್ಲಿ ಅವರಿಗೆ ಪ್ರಿಯವಾದುವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವುಗಳಲ್ಲಿ ಟಾಲ್‌ಸ್ಟಾಯಿಯ ಸಣ್ಣಕತೆಗಳೂ ಮುಖ್ಯ. ಫ್ಯಾಮಿಲಿ ಹ್ಯಾಪಿನೆಸ್ ಎಂಬ ಕಿರು ಕಾದಂಬರಿಯೂ ಸೇರಿದೆ. ಇದಲ್ಲದೆ, ಇತರರು ಇಂಗ್ಲಿಷಿನಲ್ಲಿ ರಚಿಸಿದ್ದ ಥಾಮಸ್ ಆಲ್ವ ಎಡಿಸನ್ ಮತ್ತು ಫ್ಲಾರೆನ್ಸ್ ನೈಟಿಂಗೇಲ್ ಎಂಬ ಜೀವನ ಚರಿತ್ರೆಗಳನ್ನೂ ಅನುವಾದಿಸಿದ್ದಾರೆ. ರಾಬರ್ಟ್ ಲೂಯಿ ಸ್ಟೀವನ್‌ಸನ್‌ನ ಡಾ. ಜೆಕಿಲ್ ಅಂಡ್ ಹೈಡ್ ಎಂಬ ಕಾದಂಬರಿಯನ್ನು ನರ-ರಾಕ್ಷಸ ಎಂಬ ಹೆಸರಿನಲ್ಲಿ ಅನುವಾದ ಮಾಡಿದ್ದಾರೆ.

ಇವಲ್ಲದೆ ಹಸ್ತಪ್ರತಿಯಲ್ಲಿ ನಿಂತಿರುವ ಅನೇಕ ಅನುವಾದಗಳೂ ಸ್ವಂತ ಲೇಖನಗಳೂ ಇವೆ.

ಕಾಲೇಜು ಅಧ್ಯಾಪಕ ವೃತ್ತಿಯಿಂದ ಬಿಡುಗಡೆಯಾದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನಲ್ಲಿ ಸಂಶೋಧಕರಾಗಿ ಆರು ವರ್ಷಗಳ ಕಾಲ ದುಡಿದರು. ಆರ್.ಆರ್. ದಿವಾಕರರಿಗೆ ಸಹಾಯಕರಾಗಿ ಪತ್ರಿಕಾ ನಿಘಂಟು ಎಂಬ 2000 ಪದಗಳ ನಿಘಂಟನ್ನು 1965ರಲ್ಲಿ ತಯಾರಿಸಿಕೊಟ್ಟರು. ಅದೂ ಪ್ರಕಟವಾಗಿದೆ. ಕನ್ನಡದಲ್ಲಿ ಪತ್ರಿಕಾ ನಿಘಂಟುಗಳ ಪ್ರಕಟಣೆಗೆ ಇದೇ ಪ್ರಥಮ ಪ್ರಯತ್ನ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿದ್ದ 'ಶ್ರೀ

'ಚಾಮುಂಡಾ ಲಘು ನಿಘಂಟು' ಎಂಬ ವೈದ್ಯ ವಿಷಯಕವಾದ ನಿಘಂಟನ್ನು ದೊಂಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳ ಸಹಾಯದಿಂದ ಸಂಪಾದಿಸಿ ಪ್ರಕಟಿಸಿದ್ದಾರೆ.

ಸದಾ ವ್ಯಾಸಂಗಶೀಲರಾದ ಗುಂಡಪ್ಪನವರಿಗೆ ಬಡತನ ಚಿಂತನೆಗಳ ನಡುವೆ ವ್ಯತ್ಯಾಸವೇ ಕಾಣುತ್ತಿರಲಿಲ್ಲ. ಅವರು ತುಂಬ ಅದೃಷ್ಟವಂತರಾದ ಸಂಸಾರವಂದಿಗರು. ಮಡದಿ ಮಕ್ಕಳ ನಡುವೆ ಅವರಿಗೆ ದೊರೆತ ಶಾಂತಿ ಸಮಾಧಾನಗಳು ಅನೇಕರಿಗೆ ದೊರಕುವುದಿಲ್ಲ. ದೈವದತ್ತವಾದ ಪ್ರತಿಭೆಯುಳ್ಳ ಮಕ್ಕಳಿಂದ ಅವರಿಗೆ ತುಂಬ ಸಂತೋಷವಾಯಿತು. ಐದು ಜನ ಹೆಣ್ಣು ಮಕ್ಕಳು ಎಲ್ಲರೂ ಸಂಗೀತದಲ್ಲಿ ಸಾಹಿತ್ಯದಲ್ಲಿ ಆಸಕ್ತಿಯುಳ್ಳವರು. ಶಾಸ್ತ್ರೀಯ ಸಂಗೀತವನ್ನೂ ಕಲಿತವರು. ಡಾ.ಎಲ್.ಜಿ. ಸುಮಿತ್ರ ಮತ್ತು ಸಹೋದರಿಯರಿಂದ ಗಮಕಿಯರಾದ ವಿಮಲ ಮತ್ತು ಕಮಲ ಅವರೊಡನೆ ನಾಡಪದಗಳ ಹಾಡುಗಾರಿಕೆಯಲ್ಲಿ ತುಂಬ ಹೆಸರುಮಾಡಿದರು. ಪುತಿನ ಅವರ ಅಹಲ್ಯೆ ಮತ್ತು ಗೋಕುಲ ನಿರ್ಗಮನಗಳ ಹಾಡುಗಳನ್ನು ಕರ್ನಾಟಕದ ಅನೇಕ ಊರುಗಳಲ್ಲಿ ಹಾಡಿ ಜನಸಮುದಾಯವನ್ನು ರಂಜಿಸಿದರು. ಗಂಡುಮಕ್ಕಳು ಸ್ವಉದ್ಯೋಗದಲ್ಲಿ ನಿರತರಾಗಿದ್ದಾರೆ. ಗಮಕಿ ವಿಮಲ ಅಮೆರಿಕದಲ್ಲಿ ನೆಲೆಸಿ ಜಾನಪದ ಗೀತೆಗಳನ್ನು ಅಲ್ಲಿಯೂ ಪ್ರಚಾರ ಮಾಡಿದ್ದಾರೆ.

ಕೊನೆಯ ಮಗಳು ವಾಸಂತಿ ಅಮೆರಿಕಾದಲ್ಲಿ ಅಭ್ಯಾಸ ಮಾಡಿ ಉನ್ನತ ಪದವಿಯನ್ನು ಪಡೆದು ವೈದ್ಯಕೀಯದಲ್ಲಿ ಹೆಸರುವಾಸಿಯಾಗಿದ್ದಾಳೆ. ಆಕೆ ರಾಬರ್ಟ್ ಕಲೆಟನ್ ಎಂಬ ಅರ್ಥಶಾಸ್ತ್ರ ಪರಿಣತನನ್ನು ಮದುವೆಯಾಗಲು ನಿರ್ಧರಿಸಿದಾಗ ಗುಂಡಪ್ಪನವರು ಅಮೆರಿಕಕ್ಕೆ ಪ್ರಯಾಣ ಮಾಡಿ ಫಿಲಿಡೆಲ್ಫಿಯಾದಲ್ಲಿ ಒಂದು ವರ್ಷ ಕಾಲವನ್ನು ಸಂತೋಷದಲ್ಲಿ ಕಳೆದರು. ಮಗಳ ಮದುವೆಯನ್ನು ನೆರವೇರಿಸಿದ ಮೇಲೆ ಅಮೆರಿಕದ ಅನೇಕ ಪ್ರದೇಶಗಳನ್ನು ಸುತ್ತಾಡಿ ಪರದೇಶದ ಜೀವನಾನುಭವವನ್ನು ಪರಿಚಯ ಮಾಡಿಕೊಂಡರು. ಅಲ್ಲಿದ್ದಷ್ಟು ದಿನವೂ ಭಾರತೀಯ ತತ್ತ್ವಶಾಸ್ತ್ರವನ್ನು ಕುರಿತು ಅಲ್ಲಿನ ಭಾರತೀಯರಿಗೆ ಪ್ರವಚನಗಳ ಮೂಲಕ ಪರಿಚಯ ಮಾಡಿಕೊಟ್ಟರು. ಒಮ್ಮೆ ಹತ್ತಿರದಲ್ಲಿದ್ದ ಗೆಟ್ಟಿಸ್‌ಬರ್ಗ್‌ಗೆ ಹೋಗಿದ್ದಾಗ ಅಲ್ಲಿಗೆ ಬಂದ ಪ್ರವಾಸಿಗಳಿಗೆ ಅಬ್ರಹಾಂ ಲಿಂಕನ್ನರ ಜೀವನ ಚಿತ್ರವನ್ನು ಕೊಟ್ಟು ಗೆಟ್ಟಿಸ್‌ಬರ್ಗ್‌ನ ಪ್ರಸಿದ್ಧ ಭಾಷಣವನ್ನೂ ವಿವರಿಸಿದರಂತೆ. ಇದು ಅಲ್ಲಿಯೇ ಇದ್ದ ಮಕ್ಕಳಿಗೆ ಆಶ್ಚರ್ಯಕರವಾಗಿದ್ದು ತುಂಬಾ ಸಂತೋಷವನ್ನು ತಂದಿತು ಎಂದು ಅವರ ಮಕ್ಕಳು ಹೇಳುತ್ತಾರೆ.

ಹೀಗೆ ಸಂಸಾರದಲ್ಲಿ ತುಂಬು ಸುಖವನ್ನು ಕಂಡ ಅವರು ಅಮೆರಿಕದಿಂದ ಹಿಂದಿರುಗಿದ ಬಳಿಕ ಮುಪ್ಪಿನ ಕಾಲದಲ್ಲಿ ಬೆಂಗಳೂರಿನಲ್ಲಿಯೇ ಗ್ರಂಥಾವಲೋಕನದಲ್ಲಿ ಕಳೆಯುತ್ತಿದ್ದರು. ಸ್ನೇಹಿತರೊಡನೆ ಆಗಾಗ ಮಿಳಿತಗೊಂಡು ಕಳೆದ ದಿನಗಳನ್ನು ನೆನೆಯುವುದರಲ್ಲಿ ಸಮಾಧಾನವನ್ನೂ ಅನುಭವಿಸಿದರು.

ಅವರು ತೀರಿಕೊಂಡುದು ಸಮಾಧಾನದಲ್ಲಿ. ತೃಪ್ತಿ ಜೀವನವನ್ನು ಉಂಡ ಸಜ್ಜನರಾಗಿ, ಬೆಳೆದು ಮರೆಯ ಕಾಯಿಯಂತೆ ಬಾಳಿದ್ದೇ ಅವರ ಜೀವನದ ಸಾಫಲ್ಯವಾಯಿತು. ನನ್ನ ಬಾಳಿನಲ್ಲಿ ಕಂಡ ಅತ್ಯಂತ ವಿನಯವಂತರಾದ ದೊಡ್ಡ ವಿದ್ವಾಂಸ ವರ್ಗದಲ್ಲಿ ಅವರು ಪ್ರಮುಖರಾಗಿದ್ದರು. ಅದನ್ನು ಅವರ ಮಿತ್ರರೆಲ್ಲ ಸಂತೋಷದಿಂದ ನೆನೆಯುತ್ತಾರೆ.

2003ನೆಯ ಇಸವಿ ಅವರ ಜನ್ಮಶತಾಬ್ದಿ ಎಂದು ನಾನು ನೆನಪಿಸಬೇಕು.

ಮಾತಿನ ಮಂಟಪ ಸಿದ್ದವನಹಳ್ಳಿ ಕೃಷ್ಣಶರ್ಮ

(1904-1973)

ಶ್ರೀವೈಷ್ಣವ ಸಂಪ್ರದಾಯದಲ್ಲಿ ಸ್ವಯಮಾಚಾರ್ಯ ಪುರುಷ ಪದ್ಧತಿ ಪ್ರಚಾರದಲ್ಲಿದೆ. ರಾಮಾನುಜಾಚಾರ್ಯರು ಈ ಪದ್ಧತಿಯನ್ನು ರೂಢಿಗೆ ತಂದರು. ಸ್ವತಃ ಸಜ್ಜನಿಕೆಯಿಂದ ತುಂಬಿದ, ಆಚಾರ ವ್ಯವಹಾರಗಳಿಂದ ಜನತೆಯಲ್ಲಿ ಭಕ್ತಿಮತವನ್ನು, ಧರ್ಮಮಾರ್ಗವನ್ನು ಆಸ್ತಿಕತೆಯನ್ನು ಪ್ರಚಾರ ಮಾಡಬಲ್ಲ ಜ್ಞಾನಿಗಳಾದ ಎಪ್ಪತ್ತನಾಲ್ಕು ಜನ ವಿದ್ವಾಂಸರನ್ನು ಆರಿಸಿ ಅವರೆಲ್ಲರಿಗೂ ಈ ಸ್ವಯಮಾಚಾರ್ಯ ಪುರುಷರೆಂಬ ಗೌರವವನ್ನು ನೀಡಿದರು. ಈ ಬಗೆಯ ಪ್ರಸಿದ್ಧ ವಿದ್ವಾಂಸರ ಮನೆತನದವರು ಈಗಲೂ ನಾಡಿನ ಎಲ್ಲ ಕಡೆ ಸಜ್ಜನರಾಗಿ ಬದುಕುತ್ತಿದ್ದಾರೆ. ಇವರ ಮೂಲ ಪುರುಷರು ಆಂಧ್ರಪ್ರದೇಶದವರು. ಅವರು ಕಾರಣಾಂತರ ದಿಂದ ಚಿತ್ರದುರ್ಗದ ಹತ್ತಿರದ ಸಿದ್ದವನಹಳ್ಳಿಗೆ ಬಂದು ನೆಲೆಸಿದರು. ಈ ಮನೆತನದ ಹಿರಿಯರು ಮೈಸೂರಿನ ಪರಕಾಲ ಮಠದ ಪೀಠಾಧಿಪತಿಗಳಾಗಿದ್ದರು. ಪರಕಾಲ ಮಠದ ಅಧಿಪತಿಗಳು ಮೈಸೂರಿನ ಮಹಾರಾಜರ ಮನೆತನಕ್ಕೆ ರಾಜಗುರುಗಳು ಇಂಥ ವಂಶಪರಂಪರೆಯಲ್ಲಿ ಹುಟ್ಟಿ ಬಂದವರು ಸಿದ್ದವನಹಳ್ಳಿ ಕೃಷ್ಣಶರ್ಮರು. ತಂದೆ ರಂಗಾಚಾರ್ಯರು, ತಾಯಿ ಶೇಷಮ್ಮ.

ಕೃಷ್ಣಶರ್ಮರ ಜನನ ಆದದ್ದು 1904ನೆಯ ಇಸವಿ ಜುಲೈ 4 ರಂದು. ಇದು ಅವರ ಜನ್ಮ ಶತಾಬ್ದದ ಶುಭ ದಿವಸ. ಕೃಷ್ಣಶರ್ಮರ ಬಾಲ್ಯ ಮತ್ತು ಆಗಿನ ವಿದ್ಯಾಭ್ಯಾಸ ಸಿದ್ದವನಹಳ್ಳಿಯಲ್ಲಿಯೇ ನೆರವೇರಿತು. ವೈದಿಕ ಮನೆತನದಲ್ಲಿ ಎಲ್ಲ ಮಕ್ಕಳಿಗೂ ದೊರಕುತ್ತಿದ್ದ

ಸ್ತೋತ್ರಪಾಠ ಮುಂತಾದುವು ಅವರಿಗೂ ಲಭ್ಯವಾಯಿತು. ಮುಂದಿನ ವಿದ್ಯಾಭ್ಯಾಸ ನಡೆದುದು ಚಿತ್ರದುರ್ಗದಲ್ಲಿ. ಅಲ್ಲಿಯೇ ಅವರು ಕನ್ನಡ ಸಾಹಿತ್ಯದಲ್ಲಿ ಆಸಕ್ತಿ, ಬರಹದಲ್ಲಿ ಚಪಲ, ಓದಿನಲ್ಲಿ ಪ್ರೀತಿ ಇವನ್ನೆಲ್ಲಾ ಮೈಗೂಡಿಸಿಕೊಂಡರು. ಪ್ರೌಢಶಾಲೆಯಲ್ಲಿ ನಾಟಕದಲ್ಲಿ ಆಸಕ್ತಿ ಬೆಳೆಯಿತು. ಮಾತನಾಡುವ ಕಲೆಯಲ್ಲಿ ಚಾತುರ್ಯವೂ, ಬರವಣಿಗೆಯಲ್ಲಿ ಸಾಕಷ್ಟು ಪರಿಶ್ರಮವೂ ಉಂಟಾದುವು. ಈ ಎಲ್ಲವೂ ಮೈಸೂರಿನಲ್ಲಿ ಕೃಷ್ಣಶರ್ಮರು ಕಾಲೇಜಿನ ವಿದ್ಯಾಭ್ಯಾಸಕ್ಕೆ ಸೇರಿದಾಗ ಮತ್ತಷ್ಟು ಪುಷ್ಟಿಗೊಂಡವು. ಇಂಥ ಹಿನ್ನೆಲೆಯಲ್ಲಿ ನಾವು ಕೃಷ್ಣಶರ್ಮರ ವ್ಯಕ್ತಿತ್ವವನ್ನೂ ಅವರ ಕಾರ್ಯಸಾಧನೆಗಳನ್ನೂ ಪರಿಶೀಲಿಸಬೇಕು.

ಮೈಸೂರಿನಲ್ಲಿ ಕೃಷ್ಣಶರ್ಮರು ವಿದ್ಯಾಭ್ಯಾಸ ಮಾಡುತ್ತಿದ್ದುದು ಭಾರತದಲ್ಲಿ ಸ್ವಾತಂತ್ರ್ಯದ ಗಾಳಿ ಬೀಸುತ್ತಿದ್ದಾಗ. 1922ನೆಯ ಇಸವಿಯಲ್ಲಿ ಲೋಕಮಾನ್ಯ ತಿಲಕರು ತೀರಿಕೊಂಡ ಕಾಲ. ಗಾಂಧಿಯವರು ಆಫ್ರಿಕಾದಲ್ಲಿ ಸ್ವಾತಂತ್ರ್ಯ ಕಹಳೆಯನ್ನು ಊದಿ ಅಲ್ಲಿನ ಭಾರತೀಯರಲ್ಲಿ ಹೊಸ ಧೈರ್ಯವನ್ನು ತುಂಬಿ ಹೊಸ ಬಾಳಿಗೆ ದಾರಿ ಮಾಡಿ ಭಾರತಕ್ಕೆ ಬಂದಿದ್ದರು. ಅಹಿಂಸೆಯ ತತ್ವವನ್ನು ರಾಜಕೀಯಕ್ಕೆ ಹೊಂದಿಸಿ ಕ್ರಾಂತಿಯನ್ನು ಅವರು ಪ್ರಚಾರ ಮಾಡುತ್ತಿದ್ದ ಕಾಲ. ತಿಲಕರ ಅವಸಾನದಿಂದ ನೊಂದ ಮೈಸೂರಿನ ಪ್ರಜೆಗಳು ಸಂತಾಪಸೂಚಕ ಸಭೆಗೆ ನೆರೆದಿದ್ದಾಗ ಅದನ್ನು ಅಡ್ಡಿಪಡಿಸಲು ಪೋಲೀಸರು ಲಾಠಿಪ್ರಹಾರ ಮಾಡಿದರು. ಇದರ ಪ್ರಭಾವ ಕೃಷ್ಣಶರ್ಮರ ಮೇಲೆ ಗಾಢವಾಗಿ ಕಾಣಿಸಿಕೊಂಡಿತು. ಇದೇ ಸಮಯದಲ್ಲಿ ಕೃಷ್ಣಶರ್ಮರ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗಿ ಅವರು ಬೆಂಗಳೂರನ್ನು ಸೇರಿದರು. ಅಲ್ಲಿ ಅವರು ದೀನಬಂಧು ಆಂಡ್ರೂಸ್ ಅವರ ಇಂಗ್ಲಿಷ್ ಗ್ರಂಥವನ್ನು ಕನ್ನಡಕ್ಕೆ 'ಪೂರ್ಣಸ್ವಾತಂತ್ರ್ಯದ ಆವಶ್ಯಕತೆ' ಎಂದು ಹೆಸರಿಟ್ಟು ಅನುವಾದ ಮಾಡಿದರು. ಇದರಿಂದ ಅವರು ಕೆ. ಸಂಪದ್ಗಿರಿರಾವ್, ಕಂದಾಡೆ ಕೃಷ್ಣೈಂಗಾರ್, ತಿ.ತಾ.ಶರ್ಮ ಮುಂತಾದ ಸ್ವಾತಂತ್ರ್ಯಪ್ರಿಯರ ಒಡನಾಡಿಯಾದರು.

ಈ ಸಮಯದಲ್ಲಿ ಕೃಷ್ಣಶರ್ಮರ ಜೀವನದಲ್ಲಿ ಹೊಸದೊಂದು ತಿರುವು ಉಂಟಾಯಿತು. ಹೈದರಾಬಾದಿನಲ್ಲಿ ಸಾಕಷ್ಟು ಕ್ರಾಂತಿ ಮಾಡಿ ನೈಜಾಮ್ ಸರಕಾರದ ವತಿಯಿಂದ ರಾಜ್ಯದಿಂದ ಹೊರಹಾಕಲ್ಪಟ್ಟ ಪಂಡಿತ ತಾರಾನಾಥರು ತುಂಗಾನದಿಯ ದಕ್ಷಿಣದಲ್ಲಿ 'ಪ್ರೇಮಾಯತನ' ಎಂಬ ಆಶ್ರಮವನ್ನು ಸ್ಥಾಪಿಸಿದರು.

ಬೆಂಗಳೂರಿನಲ್ಲಿ ತಾರಾನಾಥರನ್ನು ಕಂಡು ಅವರ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ಅವರನ್ನು ಗುರುವೆಂದು ಸ್ವೀಕರಿಸಿ ಶರ್ಮರು 'ಪ್ರೇಮಾಯತನ'ಕ್ಕೆ ಪ್ರಯಾಣ ಮಾಡಿದರು. ಧಾರವಾಡದ ಗೆಳೆಯರ ಗುಂಪಿನ ಸಂಬಂಧವೂ ಶರ್ಮರಿಗೆ ಸಿಕ್ಕಿದ್ದರಿಂದ ತಾರಾನಾಥರಿಗೆ ಶರ್ಮರ ಬಗ್ಗೆ ವಿಶ್ವಾಸ ಬೆಳೆದದ್ದು ಆಶ್ಚರ್ಯವಲ್ಲ. ಈ ವೇಳೆಗಾಗಲೇ ಅವರು ಧಾರವಾಡದ ಜಯಕರ್ನಾಟಕದಲ್ಲಿ ಅನೇಕ ಲೇಖನಗಳನ್ನು ಪ್ರಕಟಿಸಿದ್ದರು. ಆ ಬರಹಗಳಲ್ಲಿ ತುಂಬಿದ ವ್ಯಂಗ್ಯದ ಸೊಗಸು ತಾರಾನಾಥರಿಗೆ ಪ್ರಿಯವಾಯಿತು. ಪ್ರೇಮಾಯತನದಿಂದ

ಪ್ರಕಟವಾಗುತ್ತಿದ್ದ 'ಪ್ರೇಮ' ಪತ್ರಿಕೆಗೆ ಇಂಥ ಲೇಖಕ ದೊರೆತರೆ ಒಳ್ಳೆಯದೇ ಎಂದು ಪಂಡಿತ ತಾರಾನಾಥರು ಕೃಷ್ಣಶರ್ಮರನ್ನು ಪ್ರೀತಿಯಿಂದಲೇ ಸ್ವಾಗತಿಸಿದರು. ಕೆಲವು ದಿನಗಳಲ್ಲಿ ಆಶ್ರಮದ ಎಲ್ಲ ವ್ಯವಹಾರವೂ ಶರ್ಮರ ನಿರ್ದೇಶನದಲ್ಲಿ ನಡೆಯುವಂತಾಯಿತು. ಇತ್ತ ತಂದೆತಾಯಿಗಳಿಗೂ, ನೆಂಟರಿಗೂ ಎಲ್ಲಿ ಶರ್ಮ ಸಂನ್ಯಾಸಿಯಾಗಿ, ಯೋಗಾಭ್ಯಾಸನಿರತನಾಗಿ, ಸಂಸಾರದಿಂದ ದೂರವಾಗುತ್ತಾನೋ ಎಂಬ ಭಯವುಂಟಾಯಿತು. ಕೊನೆಗೆ ಶರ್ಮರ ಭಾವನಾದ ಪ್ರಸಿದ್ಧ ಶಿಕ್ಷಣತಜ್ಞ ಶ್ರೀನಿವಾಸಾಚಾರ್ಯು ಅವರನ್ನು ಪ್ರೇಮಾಯತನಕ್ಕೆ ಕಳುಹಿಸಿ ಕೊಟ್ಟರು. ಅವರ ಪ್ರಭಾವದಿಂದ ಶರ್ಮರು ಊರಿಗೆ ಹಿಂದಿರುಗಿ ನೆಂಟರ ಮಾತಿನ ಪ್ರಭಾವಕ್ಕೆ ಒಳಗಾಗಿ ಸಂಸಾರವಂದಿಗನಾಗಲು ಒಪ್ಪಿ ಮದುವೆಯಾದರು. ಸುಮಾರು 1927-28ರ ವೇಳೆಗೆ ಅವರು ಪತ್ನೀ ಸಮೇತರಾಗಿ ಹೈದರಾಬಾದಿಗೆ, ಮಾವನವರ ಊರಿಗೆ ಪ್ರಯಾಣ ಮಾಡಿಬಿಟ್ಟರು. ಹೈದರಾಬಾದಿನ ಅವರ ಜೀವನವೇ ಬೇರೊಂದು ಅಧ್ಯಾಯವಾಯಿತು.

ಈ ಮಧ್ಯೆ ಕೃಷ್ಣಶರ್ಮರ ಸಾಹಿತ್ಯ ಸಂಪರ್ಕ, ಕನ್ನಡ ಸಾಹಿತಿಗಳ ಒಡನಾಟ ಬೆಳೆದಿತ್ತು. ಅದೇ ಅವರ ಜೀವನದ ಬೇರೊಂದು ಮುಖ. 1922ರಲ್ಲಿ ದಾವಣಗೆರೆಯಲ್ಲಿ ನೆರವೇರಿದ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಾಹಿತ್ಯ ಸಮ್ಮೇಳನದ ಕಾಲದಿಂದಲೂ ಶರ್ಮರಿಗೆ ಸಾಹಿತ್ಯಾಸಕ್ತಿ ಅಂತರಂಗದಲ್ಲಿ ಕುದಿಯುತ್ತಲೇ ಇತ್ತು. ಆ ಸಮ್ಮೇಳನದಲ್ಲಿ ಸರ್ವಜ್ಞನ ತ್ರಿಪದಿಗಳ ಬಗ್ಗೆ ಶರ್ಮರು ಓದಿದ ಭಾಷಣ ಬಹಳ ಪ್ರಭಾವವನ್ನು ಬೀರಿತು.

ಹೈದರಾಬಾದಿಗೆ ಬಂದು ಸೇರಿದ ಮೇಲೆ ಅವರ ಸಾಹಿತ್ಯದ ಸಂಪರ್ಕದಿಂದ ಜೀವನೋಪಾಯ ಮಾರ್ಗ ಒಂದು ಉದ್ಭವವಾಯಿತು. ಆ ನಗರದ ಮೆಥಾಡಿಸ್ಟ್ ಮಿಷನ್ ಸ್ಕೂಲ್ ಎಂಬ ಪಾಠಶಾಲೆಗೆ ಒಬ್ಬ ಕನ್ನಡ ಉಪಾಧ್ಯಾಯನ ಅಗತ್ಯವಿತ್ತು. ಶರ್ಮರನ್ನು ಶಾಲೆಗೆ ಅಧ್ಯಾಪಕನನ್ನಾಗಿ ಆಹ್ವಾನಿಸಿದರು. ಬಹುಬೇಗ ಅವರು ಶಾಲೆಯಲ್ಲಿ ಎಲ್ಲರಿಗೂ ಬೇಕಾದವರಾಗಿಬಿಟ್ಟರು. ಹೈದರಾಬಾದಿನಲ್ಲಿ ಎಲ್ಲ ಶಾಲೆಗಳಲ್ಲಿಯೂ ಕನ್ನಡವನ್ನು ಉರ್ದು ಭಾಷೆಯ ಮಾಧ್ಯಮದಲ್ಲಿ ಬೋಧಿಸಲಾಗುತ್ತಿತ್ತು. ಕನ್ನಡವನ್ನು ಕನ್ನಡದಲ್ಲಿಯೇ ಪಾಠ ಮಾಡಿದ ಮೊದಲ ಉಪಾಧ್ಯಾಯರಾದರು ಶರ್ಮ.

ಆಗಿನ ಕಾಲದಲ್ಲಿ ಹೈದರಾಬಾದು ಸಂಸ್ಥಾನವು ಮುಸಲ್ಮಾನ ಜಹಗೀರುದಾರರ ದೌಲತ್ತಿನ ಅಡಿಯಾಳಾಗಿತ್ತು. ರಾಜ್ಯದ ಆಡಳಿತ ತುಂಬ ಹೀನಸ್ಥಿತಿಯಲ್ಲಿತ್ತು. ಹೈದರಾಬಾದ್ ರಾಜಧಾನಿ ಆದುದರಿಂದ ಅಲ್ಲಿ ಸ್ವಲ್ಪ ಜೀವನ ಬದುಕಿತ್ತು. ರಾಜ್ಯದ ಎಲ್ಲ ಕಡೆ ಕಡು ಬಡತನ. ಮತೀಯವಾಗಿ ಅಂಧ ಸಾಮ್ರಾಜ್ಯ, ವಿದ್ಯಾಭ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಗೀತ, ಸಾಹಿತ್ಯ, ಸಮ್ಮೇಳನ, ಕೈಗಾರಿಕೆ, ಉದ್ಯಮ ಇತ್ಯಾದಿಗಳ ಮಾತೇ ಇಲ್ಲ. ಗೂಢಚಾರರ ಹೆದರಿಕೆ. ನೂರರಲ್ಲಿ 90ರಷ್ಟು ಜನತೆ ಹಿಂದೂಗಳು. ಆದರೇನು ಮಹಮ್ಮದೀಯರ ದಬ್ಬಾಳಿಕೆಯಲ್ಲಿ ಹಿಂದೂಗಳ ಸತ್ವ ಭೂಗತವಾಗಿತ್ತು. ಅಧಿಕಾರವೆಲ್ಲ ಮಹಮ್ಮದೀಯರ ಪಾಲು. ಬಹಮನಿ ರಾಜ್ಯವು ನಾಶವಾದ ಮೇಲೆ ಅವರ ಅವಶೇಷಗಳನ್ನೆಲ್ಲ ಬಾಚಿಕೊಂಡು ಹೈದರಾಬಾದ್ ರಾಜ್ಯ

ಸ್ತೋತ್ರಪಾಠ ಮುಂತಾದುವು ಅವರಿಗೂ ಲಭ್ಯವಾಯಿತು. ಮುಂದಿನ ವಿದ್ಯಾಭ್ಯಾಸ ನಡೆದುದು ಚಿತ್ರದುರ್ಗದಲ್ಲಿ. ಅಲ್ಲಿಯೇ ಅವರು ಕನ್ನಡ ಸಾಹಿತ್ಯದಲ್ಲಿ ಆಸಕ್ತಿ, ಬರಹದಲ್ಲಿ ಚಪಲ, ಓದಿನಲ್ಲಿ ಪ್ರೀತಿ ಇವನ್ನೆಲ್ಲಾ ಮೈಗೂಡಿಸಿಕೊಂಡರು. ಪ್ರೌಢಶಾಲೆಯಲ್ಲಿ ನಾಟಕದಲ್ಲಿ ಆಸಕ್ತಿ ಬೆಳೆಯಿತು. ಮಾತನಾಡುವ ಕಲೆಯಲ್ಲಿ ಚಾತುರ್ಯವೂ, ಬರವಣಿಗೆಯಲ್ಲಿ ಸಾಕಷ್ಟು ಪರಿಶ್ರಮವೂ ಉಂಟಾದುವು. ಈ ಎಲ್ಲವೂ ಮೈಸೂರಿನಲ್ಲಿ ಕೃಷ್ಣಶರ್ಮರು ಕಾಲೇಜಿನ ವಿದ್ಯಾಭ್ಯಾಸಕ್ಕೆ ಸೇರಿದಾಗ ಮತ್ತಷ್ಟು ಪುಷ್ಟಿಗೊಂಡವು. ಇಂಥ ಹಿನ್ನೆಲೆಯಲ್ಲಿ ನಾವು ಕೃಷ್ಣಶರ್ಮರ ವ್ಯಕ್ತಿತ್ವವನ್ನೂ ಅವರ ಕಾರ್ಯಸಾಧನೆಗಳನ್ನೂ ಪರಿಶೀಲಿಸಬೇಕು.

ಮೈಸೂರಿನಲ್ಲಿ ಕೃಷ್ಣಶರ್ಮರು ವಿದ್ಯಾಭ್ಯಾಸ ಮಾಡುತ್ತಿದ್ದುದು ಭಾರತದಲ್ಲಿ ಸ್ವಾತಂತ್ರ್ಯದ ಗಾಳಿ ಬೀಸುತ್ತಿದ್ದಾಗ. 1922ನೆಯ ಇಸವಿಯಲ್ಲಿ ಲೋಕಮಾನ್ಯ ತಿಲಕರು ತೀರಿಕೊಂಡ ಕಾಲ. ಗಾಂಧಿಯವರು ಆಫ್ರಿಕಾದಲ್ಲಿ ಸ್ವಾತಂತ್ರ್ಯ ಕಹಳೆಯನ್ನು ಊದಿ ಅಲ್ಲಿನ ಭಾರತೀಯರಲ್ಲಿ ಹೊಸ ಧೈರ್ಯವನ್ನು ತುಂಬಿ ಹೊಸ ಬಾಳಿಗೆ ದಾರಿ ಮಾಡಿ ಭಾರತಕ್ಕೆ ಬಂದಿದ್ದರು. ಅಹಿಂಸೆಯ ತತ್ವವನ್ನು ರಾಜಕೀಯಕ್ಕೆ ಹೊಂದಿಸಿ ಕ್ರಾಂತಿಯನ್ನು ಅವರು ಪ್ರಚಾರ ಮಾಡುತ್ತಿದ್ದ ಕಾಲ. ತಿಲಕರ ಅವಸಾನದಿಂದ ನೊಂದ ಮೈಸೂರಿನ ಪ್ರಜೆಗಳು ಸಂತಾಪಸೂಚಕ ಸಭೆಗೆ ನೆರೆದಿದ್ದಾಗ ಅದನ್ನು ಅಡ್ಡಿಪಡಿಸಲು ಪೊಲೀಸರು ಲಾಠಿಪ್ರಹಾರ ಮಾಡಿದರು. ಇದರ ಪ್ರಭಾವ ಕೃಷ್ಣಶರ್ಮರ ಮೇಲೆ ಗಾಢವಾಗಿ ಕಾಣಿಸಿಕೊಂಡಿತು. ಇದೇ ಸಮಯದಲ್ಲಿ ಕೃಷ್ಣಶರ್ಮರ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗಿ ಅವರು ಬೆಂಗಳೂರನ್ನು ಸೇರಿದರು. ಅಲ್ಲಿ ಅವರು ದೀನಬಂಧು ಆಂಡ್ರೂಸ್ ಅವರ ಇಂಗ್ಲಿಷ್ ಗ್ರಂಥವನ್ನು ಕನ್ನಡಕ್ಕೆ 'ಪೂರ್ಣಸ್ವಾತಂತ್ರ್ಯದ ಆವಶ್ಯಕತೆ' ಎಂದು ಹೆಸರಿಟ್ಟು ಅನುವಾದ ಮಾಡಿದರು. ಇದರಿಂದ ಅವರು ಕೆ. ಸಂಪದ್ಗಿರಿರಾವ್, ಕಂದಾಡೆ ಕೃಷ್ಣೈಂಗಾರ್, ತಿ.ತಾ.ಶರ್ಮ ಮುಂತಾದ ಸ್ವಾತಂತ್ರ್ಯಪ್ರಿಯರ ಒಡನಾಡಿಯಾದರು.

ಈ ಸಮಯದಲ್ಲಿ ಕೃಷ್ಣಶರ್ಮರ ಜೀವನದಲ್ಲಿ ಹೊಸದೊಂದು ತಿರುವು ಉಂಟಾಯಿತು. ಹೈದರಾಬಾದಿನಲ್ಲಿ ಸಾಕಷ್ಟು ಕ್ರಾಂತಿ ಮಾಡಿ ನೈಜಾಮ್ ಸರಕಾರದ ಪತಿಯಿಂದ ರಾಜ್ಯದಿಂದ ಹೊರಹಾಕಲ್ಪಟ್ಟ ಪಂಡಿತ ತಾರಾನಾಥರು ತುಂಗಾನದಿಯ ದಕ್ಷಿಣದಲ್ಲಿ 'ಪ್ರೇಮಾಯತನ' ಎಂಬ ಆಶ್ರಮವನ್ನು ಸ್ಥಾಪಿಸಿದರು.

ಬೆಂಗಳೂರಿನಲ್ಲಿ ತಾರಾನಾಥರನ್ನು ಕಂಡು ಅವರ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ಅವರನ್ನು ಗುರುವೆಂದು ಸ್ವೀಕರಿಸಿ ಶರ್ಮರು 'ಪ್ರೇಮಾಯತನ'ಕ್ಕೆ ಪ್ರಯಾಣ ಮಾಡಿದರು. ಧಾರವಾಡದ ಗೆಳೆಯರ ಗುಂಪಿನ ಸಂಬಂಧವೂ ಶರ್ಮರಿಗೆ ಸಿಕ್ಕಿದ್ದರಿಂದ ತಾರಾನಾಥರಿಗೆ ಶರ್ಮರ ಬಗ್ಗೆ ವಿಶ್ವಾಸ ಬೆಳೆದದ್ದು ಆಶ್ಚರ್ಯವಲ್ಲ. ಈ ವೇಳೆಗಾಗಲೇ ಅವರು ಧಾರವಾಡದ ಜಯಕರ್ನಾಟಕದಲ್ಲಿ ಅನೇಕ ಲೇಖನಗಳನ್ನು ಪ್ರಕಟಿಸಿದ್ದರು. ಆ ಬರಹಗಳಲ್ಲಿ ತುಂಬಿದ ವ್ಯಂಗ್ಯದ ಸೊಗಸು ತಾರಾನಾಥರಿಗೆ ಪ್ರಿಯವಾಯಿತು. ಪ್ರೇಮಾಯತನದಿಂದ

ಪ್ರಕಟವಾಗುತ್ತಿದ್ದ 'ಪ್ರೇಮ' ಪತ್ರಿಕೆಗೆ ಇಂಥ ಲೇಖಕ ದೊರೆತರೆ ಒಳ್ಳೆಯದೇ ಎಂದು ಪಂಡಿತ ತಾರಾನಾಥರು ಕೃಷ್ಣಶರ್ಮರನ್ನು ಪ್ರೀತಿಯಿಂದಲೇ ಸ್ವಾಗತಿಸಿದರು. ಕೆಲವು ದಿನಗಳಲ್ಲಿ ಆಶ್ರಮದ ಎಲ್ಲ ವ್ಯವಹಾರವೂ ಶರ್ಮರ ನಿರ್ದೇಶನದಲ್ಲಿ ನಡೆಯುವಂತಾಯಿತು. ಇತ್ತ ತಂದೆತಾಯಿಗಳಿಗೂ, ನೆಂಟರಿಗೂ ಎಲ್ಲಿ ಶರ್ಮ ಸಂನ್ಯಾಸಿಯಾಗಿ, ಯೋಗಾಭ್ಯಾಸನಿರತನಾಗಿ, ಸಂಸಾರದಿಂದ ದೂರವಾಗುತ್ತಾನೋ ಎಂಬ ಭಯವುಂಟಾಯಿತು. ಕೊನೆಗೆ ಶರ್ಮರ ಭಾವನಾದ ಪ್ರಸಿದ್ಧ ಶಿಕ್ಷಣತಜ್ಞ ಶ್ರೀನಿವಾಸಾಚಾರ್ಲು ಅವರನ್ನು ಪ್ರೇಮಾಯತನಕ್ಕೆ ಕಳುಹಿಸಿ ಕೊಟ್ಟರು. ಅವರ ಪ್ರಭಾವದಿಂದ ಶರ್ಮರು ಊರಿಗೆ ಹಿಂದಿರುಗಿ ನೆಂಟರ ಮಾತಿನ ಪ್ರಭಾವಕ್ಕೆ ಒಳಗಾಗಿ ಸಂಸಾರವಂದಿಗನಾಗಲು ಒಪ್ಪಿ ಮದುವೆಯಾದರು. ಸುಮಾರು 1927-28ರ ವೇಳೆಗೆ ಅವರು ಪತ್ನೀ ಸಮೇತರಾಗಿ ಹೈದರಾಬಾದಿಗೆ, ಮಾವನವರ ಊರಿಗೆ ಪ್ರಯಾಣ ಮಾಡಿಬಿಟ್ಟರು. ಹೈದರಾಬಾದಿನ ಅವರ ಜೀವನವೇ ಬೇರೊಂದು ಅಧ್ಯಾಯವಾಯಿತು.

ಈ ಮಧ್ಯೆ ಕೃಷ್ಣಶರ್ಮರ ಸಾಹಿತ್ಯ ಸಂಪರ್ಕ, ಕನ್ನಡ ಸಾಹಿತಿಗಳ ಒಡನಾಟ ಬೆಳೆದಿತ್ತು. ಅದೇ ಅವರ ಜೀವನದ ಬೇರೊಂದು ಮುಖ. 1922ರಲ್ಲಿ ದಾವಣಗೆರೆಯಲ್ಲಿ ನೆರವೇರಿದ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಾಹಿತ್ಯ ಸಮ್ಮೇಳನದ ಕಾಲದಿಂದಲೂ ಶರ್ಮರಿಗೆ ಸಾಹಿತ್ಯಾಸಕ್ತಿ ಅಂತರಂಗದಲ್ಲಿ ಕುದಿಯುತ್ತಲೇ ಇತ್ತು. ಆ ಸಮ್ಮೇಳನದಲ್ಲಿ ಸರ್ವಜ್ಞನ ತ್ರಿಪದಿಗಳ ಬಗ್ಗೆ ಶರ್ಮರು ಓದಿದ ಭಾಷಣ ಬಹಳ ಪ್ರಭಾವವನ್ನು ಬೀರಿತು.

ಹೈದರಾಬಾದಿಗೆ ಬಂದು ಸೇರಿದ ಮೇಲೆ ಅವರ ಸಾಹಿತ್ಯದ ಸಂಪರ್ಕದಿಂದ ಜೀವನೋಪಾಯ ಮಾರ್ಗ ಒಂದು ಉದ್ಭವವಾಯಿತು. ಆ ನಗರದ ಮೆಥಾಡಿಸ್ಟ್ ಮಿಷನ್ ಸ್ಕೂಲ್ ಎಂಬ ಪಾಠಶಾಲೆಗೆ ಒಬ್ಬ ಕನ್ನಡ ಉಪಾಧ್ಯಾಯನ ಅಗತ್ಯವಿತ್ತು. ಶರ್ಮರನ್ನು ಶಾಲೆಗೆ ಅಧ್ಯಾಪಕನನ್ನಾಗಿ ಆಹ್ವಾನಿಸಿದರು. ಬಹುಬೇಗ ಅವರು ಶಾಲೆಯಲ್ಲಿ ಎಲ್ಲರಿಗೂ ಬೇಕಾದವರಾಗಿಬಿಟ್ಟರು. ಹೈದರಾಬಾದಿನಲ್ಲಿ ಎಲ್ಲ ಶಾಲೆಗಳಲ್ಲಿಯೂ ಕನ್ನಡವನ್ನು ಉರ್ದು ಭಾಷೆಯ ಮಾಧ್ಯಮದಲ್ಲಿ ಬೋಧಿಸಲಾಗುತ್ತಿತ್ತು. ಕನ್ನಡವನ್ನು ಕನ್ನಡದಲ್ಲಿಯೇ ಪಾಠ ಮಾಡಿದ ಮೊದಲ ಉಪಾಧ್ಯಾಯರಾದರು ಶರ್ಮ.

ಆಗಿನ ಕಾಲದಲ್ಲಿ ಹೈದರಾಬಾದು ಸಂಸ್ಥಾನವು ಮುಸಲ್ಮಾನ ಜಹಗೀರುದಾರರ ದೌಲತ್ತಿನ ಅಡಿಯಾಳಾಗಿತ್ತು. ರಾಜ್ಯದ ಆಡಳಿತ ತುಂಬ ಹೀನಸ್ಥಿತಿಯಲ್ಲಿತ್ತು. ಹೈದರಾಬಾದ್ ರಾಜಧಾನಿ ಆದುದರಿಂದ ಅಲ್ಲಿ ಸ್ವಲ್ಪ ಜೀವನ ಬದುಕಿತ್ತು. ರಾಜ್ಯದ ಎಲ್ಲ ಕಡೆ ಕಡು ಬಡತನ. ಮತೀಯವಾಗಿ ಅಂಧ ಸಾಮ್ರಾಜ್ಯ, ವಿದ್ಯಾಭ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಗೀತ, ಸಾಹಿತ್ಯ, ಸಮ್ಮೇಳನ, ಕೈಗಾರಿಕೆ, ಉದ್ಯಮ ಇತ್ಯಾದಿಗಳ ಮಾತೇ ಇಲ್ಲ. ಗೂಢಚಾರರ ಹೆದರಿಕೆ. ನೂರರಲ್ಲಿ 90ರಷ್ಟು ಜನತೆ ಹಿಂದೂಗಳು. ಆದರೇನು ಮಹಮ್ಮದೀಯರ ದಬ್ಬಾಳಿಕೆಯಲ್ಲಿ ಹಿಂದೂಗಳ ಸತ್ವ ಭೂಗತವಾಗಿತ್ತು. ಅಧಿಕಾರವೆಲ್ಲ ಮಹಮ್ಮದೀಯರ ಪಾಲು. ಬಹಮನಿ ರಾಜ್ಯವು ನಾಶವಾದ ಮೇಲೆ ಅವರ ಅವಶೇಷಗಳನ್ನೆಲ್ಲ ಬಾಚಿಕೊಂಡು ಹೈದರಾಬಾದ್ ರಾಜ್ಯ

ಹೈದರಾಬಾದು ವಾಸ ಆಯಿತು. ಆಗಿನ ನಿಜಾಮನೆಂಬ ಹೆಸರು ನಿಜಾಂ ರಾಜ್ಯದ ದೊರೆಗೆ. ಸ್ವತಃ ನಿಜಾಂ ರಾಜ್ಯದ ಆಡಳಿತದಲ್ಲಿ ಮಹಮ್ಮದೀಯರೆಲ್ಲ ಆಸಕ್ತರಾಗಿದ್ದರು. ಪತ್ರಿಕಾ ಸ್ವಾತಂತ್ರ್ಯವಿರಲಿಲ್ಲ. ಕೆಲವೇ ಪತ್ರಿಕೆಗಳು ಪ್ರಕಟವಾಗುತ್ತಿದ್ದವು. 'ಹೈದರಾಬಾದ್ ಬುಲೆಟಿನ್' ಎಂಬುದರ ಸಂಪಾದಕರಾಗಿದ್ದ ಬಿ.ಆರ್. ರಾವ್ ಅವರು ಕೃಷ್ಣಶರ್ಮರ ಚಿಕ್ಕಮಾವ. ಇದರಿಂದಾಗಿ ಅವರ ಸಂಪರ್ಕ ಶರ್ಮರಿಗೆ ಬೇಗ ಸಾಧ್ಯವಾಯಿತು.

ಹೈದರಾಬಾದ್ ಒಂದು ವಿಚಿತ್ರ ಸಂಸ್ಥಾನ. ಆ ಸಂಸ್ಥಾನದಲ್ಲಿ ತೆಲುಗು, ಕನ್ನಡ, ಮರಾಠಿ – ಈ ಮೂರು ಭಾಷೆಗಳನ್ನಾಡುವ ಜನ ಒಟ್ಟು ಸೇರಿದ್ದರು. ತೆಲುಗು ಎಂಟು ಜಿಲ್ಲೆ, ಮರಾಠಿ ಐದು ಜಿಲ್ಲೆ, ಕನ್ನಡ ಮೂರು ಜಿಲ್ಲೆ. ಕನ್ನಡಿಗರು, ಮರಾಠಿಗಳು ಹೆಚ್ಚು ಜನ. ಆದರೆ ಎಲ್ಲ ಕಡೆ ಉರ್ದುವಿನ ಪ್ರಭಾವವೇ ಹೆಚ್ಚು.

ಭಾರತದ ಇತರ ಕಡೆಗಳಲ್ಲಿ ಆಗ ನೆರವೇರುತ್ತಿದ್ದ ಸ್ವಾತಂತ್ರ್ಯದ ಹೋರಾಟ ಹೈದರಾಬಾದಿಗೆ ನಿಧಾನವಾಗಿ ಪ್ರವೇಶಿಸಿತು. ಖಾದಿಯ ಪ್ರಚಾರ, ಪ್ರಭಾತ್ ಫೇರಿ, ರಾಷ್ಟ್ರೀಯ ಹಾಡುಗಳನ್ನು ಸಾರ್ವಜನಿಕವಾಗಿ ಹಾಡುವುದು, ಸಾಮೂಹಿಕ ಗಾನ, ಇವರೆಲ್ಲಕ್ಕೂ ಶರ್ಮರ ಕೈವಾಡವಿತ್ತು. ಎಲ್ಲೂ ತಾವು ಕಾಣಿಸಿಕೊಳ್ಳದೆ ಎಲ್ಲ ಕಡೆ ಪ್ರಭಾವ ಬೀರುವ ಕಲೆ ಶರ್ಮರಿಗೆ ಹಸ್ತಗತವಾಗಿತ್ತು. ಆದರೂ ಸರಕಾರಕ್ಕೆ ಶರ್ಮರ ಮೇಲೆ ಅನುಮಾನ ಬರದೇ ಇರಲಿಲ್ಲ. ರೈಲ್ವೆ ಆಫೀಸಿಗೆ ಸರಕಾರದ ಪತ್ರ ಬಂತು. ರಾಜ್ಯದ ದ್ರೋಹಿಯಾದ ಶರ್ಮರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂಬ ಒತ್ತಡ. ಸರಿ, ವೃತ್ತಿಯಿಂದ ಬಿಡುಗಡೆ. ಬಳಿಕ ಏಷಿಯಾಟಿಕ್ ಇನ್ಶೂರೆನ್ಸ್ ಕಂಪನಿಯ ಅಧಿಕಾರಿಗಳ ಪರಿಚಯದಿಂದ ಒಂದು ಏಜೆಂಟರ ಕೆಲಸ ದೊರಕಿತು. ಬದುಕಿಗೆ ಒಂದು ದಾರಿಯಾಯಿತು. ಸ್ವಾತಂತ್ರ್ಯದ ಕೆಲಸ ಮುಂದುವರಿಯಿತು. ಕನ್ನಡ, ತೆಲುಗು, ಮರಾಠಿ– ಮೂರು ಭಾಷೆಗಳಲ್ಲಿಯೂ ಕಾರ್ಯಕ್ರಮಗಳು ಮೊದಲಾದುವು. ಹೈದರಾಬಾದ್ ಚಳವಳಿ ಬೆಳೆಯಿತು.

ಸುಮಾರು ಹದಿನೈದು ವರ್ಷಗಳಲ್ಲಿ ಕೃಷ್ಣಶರ್ಮರು ಹೈದರಾಬಾದಿನ ಸ್ವಾತಂತ್ರ್ಯ ಪ್ರಿಯರನ್ನೆಲ್ಲಾ ಒಟ್ಟು ಸೇರಿಸಿ ಭಾರತದ ಕಾಂಗ್ರೆಸ್ ಮುಖಂಡರ ಸಂಬಂಧವನ್ನು ಬೆಳೆಸಿ, ಸತ್ಯಾಗ್ರಹಕ್ಕೆ ಏರ್ಪಾಟು ಮಾಡಿದರು. ಕೃಷ್ಣಶರ್ಮರ ಕಾರ್ಯ ವಿಧಾನದಿಂದ ಕಾಂಗ್ರೆಸ್ಸಿನ ಎಲ್ಲ ಮುಂದಾಳುಗಳಿಗೂ ಅವರು ಮೆಚ್ಚುಗೆಯವರಾದರು. ಈ ಕಾರ್ಯಕ್ರಮದ ವಿವರಗಳು ಬೃಹತ್ತಾಗಿವೆ. ಈ ಕಿರು ಲೇಖನಕ್ಕೆ ದಕ್ಕುವುದಿಲ್ಲ – ಅದು.

ಸತ್ಯಾಗ್ರಹದ ಬಗ್ಗೆ ಕೃಷ್ಣಶರ್ಮರು ಒಂದು ವರದಿಯನ್ನು ಬರೆದು 'ಡೆಕ್ಕನ್ ಕ್ರಾನಿಕಲ್' ಪತ್ರಿಕೆಯಲ್ಲಿ ಪ್ರಕಟಿಸಿದರು. ಸರಕಾರಕ್ಕೆ ತುಂಬ ಇಕ್ಕಟ್ಟಾಯಿತು. ಶರ್ಮರ ಕಾರ್ಯಗಳಿಗೆ ಕಡಿವಾಣ ಹಾಕದೆ ಇದ್ದರೆ ಅಪಾಯ ತಪ್ಪಿದ್ದಲ್ಲ ಎಂದು ತಿಳಿದು ಸಂಸ್ಥಾನದಿಂದ ಶರ್ಮರನ್ನು ಹೊರಹಾಕುವ ಫರ್ಮಾನು ಸಿದ್ಧವಾಯಿತು. 1937ರಲ್ಲಿ ಗಡೀಪಾರು ಆಜ್ಞೆ

ಹೊರಡಿಸಿದ್ದ ಕೂಡಲೆ ಶರ್ಮರು ಬೆಂಗಳೂರಿಗೆ ಬರಲು ಸಿದ್ಧರಾದರು. ಇಲ್ಲದಿದ್ದರೆ ಜೈಲಿಗೆ ಹೋಗಬೇಕಾಗುತ್ತಿತ್ತು.

1948 ಹೈದರಾಬಾದ್ ರಾಜ್ಯದ ಮೇಲೆ ಪೊಲೀಸ್ ಕಾರ್ಯಾಚರಣೆ ಆರಂಭವಾದಾಗ ಶರ್ಮರು ಹೊಸಪೇಟೆಯಲ್ಲಿ ಇದ್ದರು. ಕೃಷ್ಣಶರ್ಮರು ಹೈದರಾಬಾದಿನಿಂದ ಹೊರಗೆ ಇದ್ದರೂ ಅವರ ಮನಸ್ಸೆಲ್ಲ ಹೈದರಾಬಾದಿನಲ್ಲೇ ಇತ್ತು.

ಹೈದರಾಬಾದಿನಲ್ಲಿ ಒಂದು ಕ್ರಿಶ್ಚಿಯನ್ ಶಾಲೆಯಲ್ಲಿ ಕನ್ನಡ ಉಪಾಧ್ಯಾಯರಾಗಿ ಸೇರಿ, ಡಾ. ಜಿ.ಎಸ್. ಮೇಲ್ಕೋಟೆ, ಜನಾರ್ದನ ರಾವ್ ದೇಸಾಯಿ, ಶಾಮಾಚಾರ್ಯ ಮುಂತಾದ ಹಿರಿಯರ ನೇತೃತ್ವದಲ್ಲಿ ಕೃಷ್ಣಶರ್ಮರು ನಡೆಸಿದ ರಾಜಕೀಯ ಸಾಹಸಗಳನ್ನು ಹೈದರಾಬಾದಿನವರು ಇಂದೂ ನೆನೆಯುತ್ತಾರೆ. ನೃಪತುಂಗ ಶಾಲೆ ಈಗ ದೊಡ್ಡ ಶಿಕ್ಷಣ ಸಂಸ್ಥೆಯಾಗಿದೆ. ಕರ್ನಾಟಕ ಸಾಹಿತ್ಯ ಮಂದಿರ ಕಾರ್ಯೋನ್ಮುಖವಾಗಿದೆ. ದೊಡ್ಡ ಪುಸ್ತಕ ಭಂಡಾರವಿದೆ. ಪುಸ್ತಕ ಪ್ರಕಟಣೆ ನಡೆಯುತ್ತಿದೆ. ಹೈದರಾಬಾದಿಗೆ ಕನ್ನಡ ಸಾಹಿತಿಗಳ ಭೇಟಿ ಆಗಿಂದಾಗ ನಡೆಯುತ್ತದೆ, ಸಾಹಿತ್ಯ ಸಮ್ಮೇಳನಗಳಾಗುತ್ತಿವೆ.

ಬೆಂಗಳೂರಿನಲ್ಲಿ ನೆಲೆನಿಂತ ಮೇಲೆ ಶರ್ಮರು ವಾರ್ಧಾದಿಂದ ಬಂದ ಆಹ್ವಾನವನ್ನು ಸ್ವೀಕರಿಸಿ ಅಲ್ಲಿಗೆ ಹೋಗಿ ಗಾಂಧೀಜಿಯವರನ್ನು ಹತ್ತಿರದಿಂದ ನೋಡಿ ಅವರನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯವಾಯಿತು. ಕನ್ನಡದಲ್ಲಿ 'ವಾರ್ಧಾಯಾತ್ರೆ' ಪ್ರಕಟವಾಯಿತು. ಅಲ್ಲಿ ಐವತ್ತೊಂದು ಜನ ದೇಶಭಕ್ತರ ಪರಿಚಯ. ರಾಜಕೀಯ ಮುಖಂಡರ ಚರ್ಚೆ. 'ವಾರ್ಧಾಯಾತ್ರೆ' ವಿಶಿಷ್ಟವಾದ ಪ್ರವಾಸ ಸಾಹಿತ್ಯಗ್ರಂಥವಾಯಿತು. 1939ರಲ್ಲಿ ನಡೆದ ಅಖಿಲ ಭಾರತ ಸಂಸ್ಥಾನ ಪ್ರಜಾಪರಿಷತ್ತಿನ ಐದನೆಯ ಅಧಿವೇಶನಕ್ಕೆ ಲುಧಿಯಾನ ಕೇಂದ್ರವಾಯಿತು. ಅಂದಿನ ಅಧ್ಯಕ್ಷರಾದ ಜವಾಹರಲಾಲ್ ನೆಹರು ಅವರ ಆಹ್ವಾನದ ಮೇರೆಗೆ ಬೊಂಬಾಯಿಯ ಸಂಸ್ಥಾನ ಪ್ರಜಾಪರಿಷತ್ತಿನ ಕಚೇರಿಯಲ್ಲಿ ಕಾರ್ಯದರ್ಶಿಯಾಗಿ ಶರ್ಮ ಕೆಲಸ ಮಾಡಿದರು. ಎಲ್ಲ ಸಂಸ್ಥಾನಗಳಲ್ಲಿ ಪ್ರವಾಸ ಮಾಡಿ ಅನುಭವವನ್ನು ಪಡೆದರು.

ಈ ಕಾಲದಲ್ಲಿ ಅವರು ಪಡೆದ ತಿಳಿವಳಿಕೆಯನ್ನೆಲ್ಲ 'ದೇಶೀಯ ಸಂಸ್ಥಾನಗಳು' ಎಂಬ ಒಂದು ಪುಸ್ತಕದಲ್ಲಿ ಅವರೇ ಪ್ರಭಾವಶಾಲಿಯಾಗಿ ಚಿತ್ರಿಸಿದ್ದಾರೆ. ಗಾಂಧೀಜಿಯವರನ್ನು ತುಂಬ ಹತ್ತಿರದಿಂದ ನೋಡಿದ ಅನುಭವವೆಲ್ಲ 'ಪರ್ಣಕುಟಿ'ಯಲ್ಲಿ ಸುಂದರ, ಸರಳ ಬರವಣಿಗೆಯಲ್ಲಿ ಮೂಡಿ ಬಂದಿದೆ. 'ಪರ್ಣಕುಟಿ'ಯ ಶೈಲಿ ಕನ್ನಡದಲ್ಲಿ ಹೊಸ ಭಾವಾತ್ಮಶೈಲಿಯನ್ನೇ ಸೃಷ್ಟಿ ಮಾಡಿತು.

ಬೆಂಗಳೂರಿನಲ್ಲಿ ತಿ.ತಾ. ಶರ್ಮರು ಪ್ರಾರಂಭಿಸಿದ 'ವಿಶ್ವ ಕರ್ನಾಟಕ' ವಾರಪತ್ರಿಕೆಗೆ ಗಾಂಧೀಜಿಯವರೇ ಶುಭಾಶಯವನ್ನು ಕಳಿಸಿದರು. ವಿವೇಕಯುಳ್ಳ ರಾಜಕೀಯ ಬರವಣಿಗೆಗೆ ವಿಶ್ವ ಕರ್ನಾಟಕ ಹೆಸರು ಮಾಡಿತು. ವಾರಪತ್ರಿಕೆ ದಿನಪತ್ರಿಕೆಯಾಯಿತು. ಸಿದ್ಧವನಹಳ್ಳಿ ಕೃಷ್ಣಶರ್ಮರು ಆ ಪತ್ರಿಕೆಗೆ ಸಾರಥಿಯಾಗಿ ದುಡಿದರು. ವಿಶ್ವಕರ್ನಾಟಕ ಕನ್ನಡ ಜನರ

ಹೃದಯವನ್ನು ಪ್ರಭಾವಿಸಿತು. ಅನೇಕ ಪತ್ರಿಕಾಕರ್ತರು ಈ ಪತ್ರಿಕೆಯಲ್ಲಿ ತಯಾರಾದರು. ಕು.ಶಿ. ಶೇಷಣ್ಣ, ನಾಡಿಗ ಕೃಷ್ಣಮೂರ್ತಿ, ಎಸ್.ಎನ್. ಸೀತಾರಾಮ ಶಾಸ್ತ್ರಿ, ತ.ರಾ.ಸು. ಮುಂತಾದ ಪ್ರಸಿದ್ಧರೆಲ್ಲ ತಯಾರಾದುದು ವಿಶ್ವಕರ್ನಾಟಕದ ನೆರಳಿನಲ್ಲಿ. ಆದರೇನು ಸರಕಾರದ ವಿರೋಧದಿಂದ ವಿಶ್ವಕರ್ನಾಟಕ ನಿಂತುಹೋಯಿತು. 'ವಾಹಿನಿ' ಎಂಬ ಮತ್ತೊಂದು ಪತ್ರಿಕೆ ಪ್ರಾರಂಭವಾಯಿತು. ಅದರಲ್ಲಿ ಕೃಷ್ಣಶರ್ಮರು 'ಮಾತಿನ ಮಂಟಪ' ಎಂಬ ಅಂಕಣವನ್ನು ಬರೆಯತೊಡಗಿದರು. ಸಂಯುಕ್ತ ಕರ್ನಾಟಕದಲ್ಲಿಯೂ 'ಮಾತಿನ ಮಂಟಪ'ದ ಪ್ರಕಟಣೆಯಾಯಿತು.

1942ರ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಕೃಷ್ಣಶರ್ಮರು ಭಾಗವಹಿಸಿ ಜೈಲುವಾಸವನ್ನು ಅನುಭವಿಸಬೇಕಾಯಿತು. ಹೀಗೆ ಎಲ್ಲ ಆಂದೋಲನಗಳಲ್ಲಿಯೂ ಎಲ್ಲ ಚುನಾವಣೆಗಳಲ್ಲಿಯೂ ಕೃಷ್ಣಶರ್ಮರು ಭಾಗವಹಿಸಿದರು. ಯಾವ ಸ್ಥಾನಕ್ಕೂ ಉಮೇದುವಾರರಾಗಿ ನಿಲ್ಲಲಿಲ್ಲ. ಕೆಲವು ದಿನಗಳಲ್ಲೇ ರಾಜಕೀಯ ತುಂಬ ಬದಲಾವಣೆ ಹೊಂದಿತು. 1950ರ ವೇಳೆಗಾಗಲೇ ಬೆಂಗಳೂರಿನ ನಗರ ಕಾಂಗ್ರೆಸ್ ಸಮಿತಿಯಲ್ಲಿ ಹಣ ದುರುಪಯೋಗವಾದುದನ್ನು ಕಣ್ಣಾರೆ ಕಂಡು ಅವರು ರಾಜಕೀಯವನ್ನು ತೊರೆದರು. ಕೆಲವರು ಸ್ನೇಹಿತರೂ ಹಾಗೆಯೇ ಮಾಡಿದರು. ಮತ್ತೆ ಒಳಹೋಗಲಿಲ್ಲ.

ವಿನೋಬಾ ಅವರ ಅನುಯಾಯಿಗಳಾಗಿ ಅವರ ಸಾಹಿತ್ಯವನ್ನು ಅನುವಾದಿಸಿದರು. ಸರ್ವೋದಯ ಸಾಹಿತ್ಯ, ಗಾಂಧಿ ಸಾಹಿತ್ಯ ಇವುಗಳ ಬಹುಭಾಗವನ್ನು ಕನ್ನಡಕ್ಕೆ ಅನುವಾದ ಮಾಡಿ ಕೊಟ್ಟವರು. ಬೆಂಗಳೂರಿನಲ್ಲಿ ಅನೇಕ ಸಾರ್ವಜನಿಕ ಸಂಸ್ಥೆಗಳನ್ನು ಸ್ಥಾಪಿಸಿ ಬೆಳೆಸಿ ಜನಸೇವೆ ಮಾಡಿದರು. ಮಲ್ಲೇಶ್ವರದ 'ಗಾಂಧಿ ಸಾಹಿತ್ಯ ಸಂಘ' ಇವುಗಳಲ್ಲೆಲ್ಲಾ ಮುಖ್ಯವಾದುದು. ಇಂದೂ ಅದು ಕಾರ್ಯೋನ್ಮುಖವಾಗಿದೆ. ನೀಲತ್ತಹಳ್ಳಿ ಕಸ್ತೂರಿ, ಶರ್ಮರ ಅತ್ಯಂತ ನಿಕಟವರ್ತಿಗಳು, ಈ ಸಂಘವನ್ನು ಕಾಪಾಡಿಕೊಂಡು ಬಂದಿದ್ದಾರೆ.

ಕನ್ನಡದಲ್ಲಿ ಕೃಷ್ಣಶರ್ಮ ಅವರ ಬರಹ ಸಾಹಿತ್ಯದ ದೃಷ್ಟಿಯಿಂದ ಕಡಿಮೆ. ಅವರ 'ಕನ್ನಡದ ಕಿಡಿಗಳು', 'ದೀಪಮಾಲೆ', 'ಪರ್ಣಕುಟಿ', 'ಪಾರ್ಥಯಾತ್ರೆ' ಮುಂತಾದುವು ಸಾರ್ವಕಾಲಿಕವಾದವು! ಕೃಷ್ಣಶರ್ಮರು ತಾವೇ ಮಾತಿನಮಂಟಪವಾಗಿದ್ದರು. ಕೊನೆ ಕೊನೆಗೆ 'ಕೃಷ್ಣಾವತಾರ' ಎಂಬ ಮುನ್ಷಿಯವರ ಗ್ರಂಥದ ಅನುವಾದವನ್ನೂ, 'ರಾಮಾವತಾರ' ಎಂಬ ಸ್ವಂತ ಗ್ರಂಥವನ್ನೂ ರಚಿಸಿದರು.

1973ರ ಅಕ್ಟೋಬರ್ 14 ಭಾನುವಾರ ಶರ್ಮರು ಇಹವನ್ನು ತ್ಯಜಿಸಿ ಪರವನ್ನು ಸೇರಿದರು. ನಾಡು ದುಃಖದಲ್ಲಿ ಮುಳುಗಿತು. ನಾಡಿಗೆ, ಸಾಹಿತ್ಯಕ್ಕೆ, ಸಮಾಜಕ್ಕೆ ಅನೇಕ ವಿಧದಲ್ಲಿ ದುಡಿದು ಬಡತನದಲ್ಲಿಯೇ ಕೊನೆಯವರೆಗೂ ಬಾಳಿದ ಅದ್ಭುತ ಚೇತನಕ್ಕೆ ಇಹದ ಬಂಧನ ತಪ್ಪಿತು. ಅವರ ಆ ಬೃಹತ್ ಸಾಮರ್ಥ್ಯ ಸಮಾಜಕ್ಕೆ ಬಿಟ್ಟ ಬಾಳಿನ ಮಾದರಿ. ಅವರ

ಬದುಕಿನ ನೆನಪಿನಲ್ಲಿ ಸದಾ ಜೊತೆಯಾಗಿ ಬದುಕಿರುತ್ತದೆ. ಅವರ ತ್ಯಾಗಜೀವನ ರಾಜಕೀಯದ ಅತ್ಯುಚ್ಚ ಶಿಖರ. ಅವರ ಧ್ಯೇಯವಾದಿತ್ವ ಸಕಲ ಕಾಲಕ್ಕೂ ಮಾದರಿ. ಅವರ ನೆನಪೊಂದು ದಿವ್ಯಜ್ಯೋತಿ.

ಡಾ|| ಎಸ್.ಶ್ರೀಕಂಠಶಾಸ್ತ್ರಿಗಳ ಜನ್ಮಶತಾಬ್ದದಲ್ಲಿ ವಿದ್ಯಾರ್ಥಿಯೊಬ್ಬನ ನೆನಪು

(1904-1974)

ಡಾ|| ಎಸ್.ಶ್ರೀಕಂಠಶಾಸ್ತ್ರಿಗಳ ಹೆಸರು ಕೇಳಿದೊಡನೆಯೇ ನನ್ನ ಮನಸ್ಸು ಐವತ್ತು ವರ್ಷಗಳ ಹಿಂದಕ್ಕೆ ಓಡುತ್ತದೆ. ಮೈಸೂರಿನ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳ ಒಡನೆ ಒಡನಾಡಿ, ಮಹಾಸಮರ್ಥರಾದ ಅಧ್ಯಾಪಕರ ಪ್ರವಚನಗಳನ್ನು ಕೇಳಿ, ಸ್ವಂತ ಚೈತನ್ಯಕ್ಕೆ ಅನೇಕ ಬಗೆಯ ಶಕ್ತಿಯನ್ನು ಗಳಿಸಿಕೊಂಡ ಸಮಯ ಕಣ್ಮುಂದೆ ಕಟ್ಟುತ್ತದೆ. ಅಂದಿನ ಮಹಾರಾಜ ಕಾಲೇಜಿನಲ್ಲಿ ನಡೆಯುತ್ತಿದ್ದ ವಿದ್ಯಾದಾನವನ್ನು ಭಾರತದಲ್ಲೆಲ್ಲ ಜನತೆ ಮೆಚ್ಚಿಕೊಂಡಿತ್ತು. ಮಹಾರಾಜ ಕಾಲೇಜಿನ ಚರಿತ್ರೆಯಲ್ಲಿ ಒಂದು ಸುವರ್ಣಯುಗವೆಂದು ಆ ಕಾಲಕ್ಕೆ ಹೆಸರುಬಂದಿತ್ತು.

ನಾನು ಕನ್ನಡ ಆನರ್ಸ್ ತರಗತಿಗೆ ಸೇರಿದ ವರ್ಷ 1935. ಅಂದಿನ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಪ್ರಾಚೀನ ಗ್ರೀಕ್ ಮತ್ತು ರೋಮನ್ ಚರಿತ್ರೆ, ಸಂಸ್ಕೃತ ಮತ್ತು ತರ್ಕಶಾಸ್ತ್ರಗಳನ್ನು ಅಭ್ಯಾಸಮಾಡಿ ಪದವಿ ತರಗತಿಗೆ ಸೇರಿಕೊಂಡಿದ್ದೆ. ಕನ್ನಡದಲ್ಲಿ ಅಧಿಕ ಅಂಕಗಳನ್ನು ಗಳಿಸಿದ್ದುದರಿಂದ ವಿದ್ಯಾರ್ಥಿವೇತನದ ಆಸೆಯೂ ಮನಸ್ಸಿನಲ್ಲಿತ್ತು. ಆನರ್ಸ್ ತರಗತಿಗೆ ಪಾಠಕ್ಕೆ ಬರುವ ಅಧ್ಯಾಪಕ ವರ್ಗದ ಬಗ್ಗೆ ಕುತೂಹಲ ತುಂಬಿದ್ದ ಕಾಲ. ನಮಗಿಂತ ಮುಂಚೆ ವಿದ್ಯಾರ್ಥಿಗಳಾಗಿದ್ದವರ ಮೂಲಕ ಅಧ್ಯಾಪಕರೆಲ್ಲರ ಬಗ್ಗೆ ತಿಳಿದುಕೊಳ್ಳಬೇಕೆಂಬ

ಹೆಚ್ಚಾಯಿತು. ಆಗ ತಾನೇ ಕೆಲಸಕ್ಕೆ ಸೇರಿಕೊಂಡಿದ್ದ ಎಸ್.ಶ್ರೀಕಂಠಶಾಸ್ತ್ರಿಗಳ ಬಗ್ಗೆ ಹಿರಿಯ ವಿದ್ಯಾರ್ಥಿಗಳು ಆಡುತ್ತಿದ್ದ ಮಾತುಗಳು ತುಂಬ ಮೆಚ್ಚುಗೆಯನ್ನು ಸೂಸುತ್ತಿದ್ದುವು. ಪ್ರಾಧ್ಯಾಪಕ ಎಸ್.ವಿ. ವೆಂಕಟೇಶ್ವರ ಅವರು ನಿವೃತ್ತಿಯಾಗುವುದರಲ್ಲಿದ್ದರು. ಡಾ। ಎಂ.ಎಚ್. ಕೃಷ್ಣ ಅವರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸಮಾಡಿ ಕಾಲೇಜಿನ ಅಧ್ಯಾಪಕರಾಗಿ ಹಿಂದಿರುಗಿದ್ದರು. ಚರಿತ್ರೆಯ ತರಗತಿಗಳಿಗೆ ಎಸ್. ಕಸ್ತೂರಿಯವರೂ ಸತ್ಯಗಂನಾಥನ್ ಅವರೂ ಪ್ರಧಾನ ಉಪಾಧ್ಯಾಯರಾಗಿದ್ದರು. ಪ್ರೊ. ವೆಂಕಟೇಶ್ವರ ಅವರು ನಮಗೆ ಪ್ರಾಚೀನ ಚರಿತ್ರೆಯನ್ನು ಕೆಲವು ತಿಂಗಳು ಮಾತ್ರ ಬೋಧಿಸಿ ನಿವೃತ್ತರಾಗಿದ್ದರು. ಈ ಎಲ್ಲರೂ ಚರಿತ್ರೆಯ ಇಲಾಖೆಯ ಪ್ರಮುಖರು. ಅವರಲ್ಲಿ ಶ್ರೀಕಂಠಶಾಸ್ತ್ರಿಗಳು ಕಿರಿಯರು. ಆದರೆ ಅವರು ವಿದ್ಯಾರ್ಥಿ ದೆಸೆಯಲ್ಲಿಯೇ ಸಂಶೋಧನ ಲೇಖನಗಳನ್ನು ಪ್ರಕಟಿಸಿ ಹಿರಿಯ ಅಧ್ಯಾಪಕರ ಮೆಚ್ಚುಗೆಯನ್ನು ಗಳಿಸಿದ್ದರು. ಅಂಥವರು ನಮಗೆ ಕರ್ನಾಟಕ ಚರಿತ್ರೆ ಮತ್ತು ಸಂಸ್ಕೃತಿಯ ಬಗ್ಗೆ ಪಾಠ ಮಾಡುತ್ತಾರೆಂಬುದು ತುಂಬಾ ಸಂತೋಷದ ವಿಷಯವಾಗಿತ್ತು. ಇಂಟರ್‌ಮೀಡಿಯಟ್ ತರಗತಿಗಳಲ್ಲಿ ಪ್ರಾಚೀನ ಗ್ರೀಕ್ ಮತ್ತು ರೋಮನ್ ಚರಿತ್ರೆಗಳನ್ನು ಪಾಠಮಾಡಿದ್ದ ಎಸ್. ಕಸ್ತೂರಿಯವರು ಆ ವಿಷಯಗಳಲ್ಲಿ ತುಂಬ ಆಸಕ್ತಿಯನ್ನು ಕೆರಳಿಸಿದ್ದರು. ಥೂಸಿಡೈಡೀಸ್‌ನ ಪೆಲೊಪೊನೀಷಿಯನ್ ಯುದ್ಧವನ್ನು ಕುರಿತ ಗ್ರಂಥದಿಂದ ಭಾಗಗಳನ್ನು ಓದಿ ಆ ಗ್ರಂಥವನ್ನು ಓದಬೇಕೆಂಬ ಕುತೂಹಲವನ್ನು ಕೆಣಕಿದ್ದರು. ನಮ್ಮ ಮನಸ್ಸಿನಲ್ಲಿ ಭಾರತದ ಪ್ರಾಚೀನ ಚರಿತ್ರೆಯಲ್ಲಿ ಏನೇನು ಅದ್ಭುತಗಳಿವೆಯೋ ಅವನ್ನೂ ಕರ್ನಾಟಕದ ಚರಿತ್ರೆಯಲ್ಲಿ ಅಡಗಿರುವ ರಹಸ್ಯಗಳನ್ನೂ ತಿಳಿದುಕೊಳ್ಳಬೇಕೆಂಬ ಎಳೆವಯಸ್ಸಿನ ಕುತೂಹಲಿಗಳಾಗಿ ನಾವು ತರಗತಿಗೆ ಹೋಗುತ್ತಿದ್ದೆವು. ಪ್ರಾರಂಭದಲ್ಲಿ ಚರಿತ್ರೆಯ ತರಗತಿಗಳಿಗೆ ಡಾ॥ ಎಂ.ಎಚ್. ಕೃಷ್ಣ ಅವರು ಪಾಠಮಾಡಿ ನಾವು ಅರಿತುಕೊಳ್ಳಬೇಕಾದ ಪಾಠಗಳ ವ್ಯಾಪ್ತಿಯ ಬಗ್ಗೆ ಪರಿಚಯಮಾಡಿಕೊಟ್ಟು ಮುಂದಿನ ಪಾಠಗಳನ್ನು ಶ್ರೀಕಂಠಶಾಸ್ತ್ರಿಗಳು ಬೋಧಿಸುತ್ತಾರೆಂದು ತಿಳಿಸಿದ್ದರು.

ಎಸ್. ಶ್ರೀಕಂಠಶಾಸ್ತ್ರಿಗಳು ನಮ್ಮ ತರಗತಿಗೆ ಬಂದ ಮೊದಲನೆಯ ದಿನ ನಮಗೆ ತುಂಬ ನಿರಾಸೆಯಾಯಿತು. ಅವರ ವ್ಯಕ್ತಿತ್ವದಲ್ಲಿ ಆಕರ್ಷಣೆಯಿರಲಿಲ್ಲ. ಅಲ್ಲದೆ ಅವರಿಗೆ ಸ್ವಲ್ಪ ತೊದಲು ಇದ್ದುದು ಇನ್ನೂ ಹೆಚ್ಚಾಗಿ ನಿರಾಸೆಯನ್ನುಂಟುಮಾಡಿತು. ಆದರೆ ಅವರು ಪ್ರಾರಂಭದ ಪಾಠಮಾಡಿದಾಗ ನಾವು ಕಲಿಯಬೇಕಾಗಿದ್ದ ವಿಷಯಗಳ ವ್ಯಾಪ್ತಿಯನ್ನು ಕುರಿತು ಭಯವಾಯಿತು. ಶಾಸ್ತ್ರಿಗಳು ಚರಿತ್ರೆಯೆನ್ನುವುದು ಒಂದು ಕಲೆಯಲ್ಲ, ಅದೊಂದು ವಿಜ್ಞಾನ. ಅದು ಪ್ರಪಂಚದಲ್ಲಿ ಮಾನವನ ವಿಕಾಸವನ್ನು ತಿಳಿಸುವ ವಿಜ್ಞಾನ. ಮಾನವನು ಇನ್ನೂ ವಿಕಾಸವಾಗುತ್ತಿದ್ದಾನೆ. ಇಲ್ಲಿಯವರೆಗೆ ಮಾನವನು ಸಾಧಿಸಿದ ಜೀವನವಿಧಾನಗಳನ್ನೂ ಮತೀಯ ತತ್ತ್ವಗಳನ್ನೂ ಆಡಳಿತ ವಿಧಾನಗಳನ್ನೂ ಕಲೆಗಳ ವಿಕಾಸವನ್ನೂ ಸಾಹಿತ್ಯ, ಚಿತ್ರಕಲೆ, ಶಿಲ್ಪ, ನಾಟ್ಯ ಮುಂತಾದವುಗಳ ಬೆಳವಣಿಗೆಯನ್ನೂ ತಿಳಿಸುವ ವಿಜ್ಞಾನವಿದು. ಇದು ದೇಶದೇಶಕ್ಕೆ ಬೇರೆಯಾಗಿದೆ. ವಿಶ್ವದ ಅಗಾಧವಾದ ವಿಸ್ತಾರದಲ್ಲಿ ಏನೇನು ಸಾಧಿತವಾಗಿದೆಯೋ ಅವೆಲ್ಲ

[illegible]. ಅದು ಮಾನವ ಜ್ಞಾನವನ್ನು ವಿಸ್ತರಿಸುತ್ತದೆ. ಚರಿತ್ರೆಯನ್ನು ಈ ದೃಷ್ಟಿಯಿಂದ ಅಭ್ಯಾಸ ಮಾಡಬೇಕು. ಕರ್ನಾಟಕದ ಚರಿತ್ರೆ ಪ್ರಪಂಚದ ಚರಿತ್ರೆಗೆ ನೀಡಿರುವ [illegible]ಗಳನ್ನು ಗುರುತಿಸುವುದು ನಮ್ಮ ಕೆಲಸ. ಮುಖ್ಯವಾಗಿ [illegible] ಅಂದಿನ ಅಭ್ಯಾಸ ನಮ್ಮ ಕೈಗಳಲ್ಲಿ ಅವಲಂಬಿಸುತ್ತದೆ. ಸ್ವಲ್ಪ [illegible] [illegible] ಅವರಲ್ಲಿ ಎಂಥ ದಿವ್ಯ ವಿಷಯಗಳು ತುಂಬಿವೆ ಎಂದು ನಮ್ಮಲ್ಲಿ ಆಶ್ಚರ್ಯ ಉದ್ಭವಿಸಿತು. ಅವರು ಬರೆಯುತ್ತಿದ್ದ ಕೆಲವು ಪುಸ್ತಕಗಳ ಭಾಷೆ ಕೂಡ ನಮಗೆ ಹೊಸದಾಗಿ ಕಾಣುತ್ತಿತ್ತು. ನಮಗೆ ಈ ಉಪಾಧ್ಯಾಯರ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕೆಂಬ ಮನಸ್ಸಾಯಿತು. ನಮ್ಮ ಹಿರಿಯ ವಿದ್ಯಾರ್ಥಿಗಳಿಂದ ತಿಳಿದು ಬಂದ ಇತರ ವಿಷಯಗಳು ಅವರ ಬಗ್ಗೆ ನಮ್ಮ ಗೌರವವನ್ನು ಹೆಚ್ಚಿಸಿದುವು.

ಅವರಿಗೆ [illegible] ಹಿನ್ನೆಲೆಯಿದ್ದಿತು. [illegible] ಅವರ ಮೇಲೆ ಪ್ರಭಾವ [illegible]. ಅದಕ್ಕೂ [illegible] ಅವರು ಅನೇಕ ಗ್ರಂಥಗಳನ್ನು ಗುರುಮುಖೇನ ಅಭ್ಯಾಸ ಮಾಡಿದ್ದರು. ಅವರಿಗೆ ಅನೇಕ ಭಾಷೆಗಳು ಬರುತ್ತಿದ್ದುವು. ಅದ್ಭುತವಾದ ಸ್ಮರಣಶಕ್ತಿ [illegible], ಇಡೀ ಗ್ರಂಥರಾಶಿಯ ನಡುವೆ ಬಾಳುವ ವ್ಯಕ್ತಿ. [illegible] ಗಾಢವಾದ ಆಸಕ್ತಿಯುಳ್ಳವರು ಇತ್ಯಾದಿ ಅನೇಕ ವಿವರಗಳಿಂದ ನಮಗೆ ಅವರ ಬಗ್ಗೆ ಗೌರವವುಂಟಾಯಿತು. ಕನ್ನಡ ಆನರ್ಸ್ ತರಗತಿಯಲ್ಲಿ ನಾವಿಬ್ಬರೇ ವಿದ್ಯಾರ್ಥಿಗಳು. ಎಚ್.ಎಂ.ಶಂಕರನಾರಾಯಣರಾಯರು ಮತ್ತು ನಾನು. ಒಂದು ವರ್ಷವಾದ ಮೇಲೆ ಎನ್.ಬಿ. ಪರಮೇಶ್ವರಭಟ್ಟರು ಬಂದು ಸೇರಿಕೊಂಡರು ಮೊದಲನೆಯ ವರ್ಷಕ್ಕೆ. ನಮ್ಮ ಮೂವರಿಗೂ ಒಟ್ಟಿಗೆ ಪಾಠವಾಗುತ್ತಿದ್ದುದೂ ಉಂಟು. ನಮ್ಮ ಮೂವರಿಗೂ ಕುತೂಹಲ ಹೆಚ್ಚು. ಪ್ರಶ್ನೆಗಳನ್ನು ಹೆಚ್ಚಾಗಿ ಕೇಳುತ್ತಿದ್ದೆವು. [illegible] ಕೇಳುತ್ತಿದ್ದರೆ ಅವರು ಮುಂದಕ್ಕೆ ಬಗ್ಗಿ ಒಂದು ಕಡೆಯ ಕಿವಿಯನ್ನು [illegible] ಮತ್ತೆ ಕೇಳಿ ಉತ್ತರವನ್ನು ನೀಡುತ್ತಿದ್ದರು. ಉತ್ತರವನ್ನು ನೀಡುವ ಅವರ ರೀತಿ ತುಂಬ ವಿವರಗಳಿಂದ ಕೂಡಿದ್ದು ದೀರ್ಘವಾಗಿರುತ್ತಿದ್ದವು. ಮತ್ತೆ ಯಾವ ಅನುಮಾನವೂ ಬಾರದ ರೀತಿಯಲ್ಲಿ ಅವರು ಮಾತನಾಡುತ್ತಿದ್ದರು.

ಮಹಾರಾಜಾ ಕಾಲೇಜಿನ ಅಧ್ಯಾಪಕವರ್ಗದ ಮಹಾಪ್ರತಿಭಾವಂತರಾದ ಎನ್.ಎಸ್. ಸುಬ್ಬರಾವ್, ಜೆ.ಸಿ.ರಾಲೋ, ಬಿ.ಎಂ.ಶ್ರೀ., ಎಂ.ವಿ.ಗೋಪಾಲಸ್ವಾಮಿ, [illegible], ಡಾ|| ಎಂ.ಎಚ್. ಕೃಷ್ಣ, ಎ.ಆರ್.ವಾಡಿಯಾ ಮುಂತಾದ ಪ್ರಾಧ್ಯಾಪಕರ ಸಮುದಾಯದಲ್ಲಿ ಶ್ರೀಕಂಠಶಾಸ್ತ್ರಿಗಳೂ ತಮ್ಮ ವ್ಯಕ್ತಿತ್ವವನ್ನು ಬೆಳಗಿಸಿಕೊಳ್ಳುತ್ತಿದ್ದರು. ಬಿ.ಎಂ.ಶ್ರೀ ಅವರ [illegible] ಗಳನ್ನು ಶಾಸ್ತ್ರಿಗಳು ವಿಮರ್ಶಿಸುತ್ತಿದ್ದ ರೀತಿ ತುಂಬ ಅರ್ಥಪೂರ್ಣವಾಗಿತ್ತು. ಗಂಗರ ಕಾಲದ ಶಾಸನಗಳ ಬಗ್ಗೆ ಅವರ ವಿವರಗಳು ತುಂಬ ಸ್ವಾರಸ್ಯವಾಗಿರುತ್ತಿದ್ದವು. ಪಾಶ್ಚಾತ್ಯರಿಗೆ ಭಾರತದ ಚರಿತ್ರೆ ಹೇಗೆ ಸರಿಯಾಗಿ ಅರ್ಥವಾಗಿಲ್ಲ ಎಂಬುದನ್ನು ಆಧಾರಪೂರ್ವಕವಾಗಿ ತಿಳಿಸುತ್ತಿದ್ದರು. ಆರ್ಯರ ಆಗಮನದ ಬಗ್ಗೆ [illegible] ಬಗ್ಗೆ [illegible]

ನಿಟಿಲ ನೇತ್ರನ ವರದ ಸುತನೆ
ನಾಗಭೂಷಣ ಪ್ರೀಯನೆ ॥
ಕಟಿತಟಾಂಕಿತ ಕೋಮಲಾಂಗನೆ
ಕರ್ಣ ಕುಂಡಲಧಾರನೆ ॥

ಬಟ್ಟಮುತ್ತಿನ ಪದಕಹಾರನೆ
ದಿವ್ಯಬಾಹು ಚತುಷ್ಕನೆ ॥
ಇಟ್ಟತುಡುಗೆಯ ಹೇಮಕಾರನೆ
ಪಾಶ ಅಂಕುಶಧಾರನೆ ॥

ಕಕ್ಷಿಮಹಲಂಬೋದರನೇ
ಇಕ್ಷುಚಾಪನ ಗೆಲಿದನೇ ॥
ಪಕ್ಷಿವಾಹನನಾದ ಪುರಂದರ
ವಿಠ್ಠಲನ ನಿಜದಾಸನೇ ॥

ಇದು ವಿಷಯಾಂತರವಾಯಿತು. ಇರಲಿ ! ಇಂಥ ವಿಷಯಗಳಲ್ಲಿ ಶಾಸ್ತ್ರಿಗಳು ನಮಗೆ ಮಾರ್ಗದರ್ಶಕರು. ಅವರು ಒಮ್ಮೆ ಚೆನ್ನಾಗಿ ವ್ಯಾಸಂಗಮಾಡಿದ ಮೇಲೆಯೇ ಯಾವ ಬಗ್ಗೆ ಆಗಲಿ ತೀರ್ಮಾನವನ್ನು ನೀಡುತ್ತಿದ್ದರು. ಒಮ್ಮೆ ಅವರು ತೀರ್ಮಾನಮಾಡಿದ ಮೇಲೆ ಏನೇ ಆದರೂ ಅದಕ್ಕೆ ಅಂಟಿಬಿಡುತ್ತಿದ್ದರು. ಅದನ್ನು ಬದಲಿಸಲು ಒಪ್ಪುತ್ತಿರಲಿಲ್ಲ. ಶಾಸ್ತ್ರಿಗಳು ಗ್ರಂಥ ಗಳಲ್ಲಿ 1) ಭಾರತೀಯ ಸಂಸ್ಕೃತಿ, 2) ಐತಿಹಾಸಿಕ ಮಹಾಪುರುಷರು 3) ಪ್ರಪಂಚ ಚರಿತ್ರೆಯ ರೂಪರೇಖೆಗಳು, 4) ಹೊಯ್ಸಳ ವಾಸ್ತುಶಿಲ್ಪ ಮುಂತಾದುವು ಎಂದೆಂದಿಗೂ ಬೆಲೆಬಾಳುವ ಕೃತಿಗಳಾಗಿವೆ. ಇವುಗಳನ್ನು ಪುನರ್ಮುದ್ರಿಸುವ ಅಗತ್ಯವಿದೆ.

ಶಾಸ್ತ್ರಿಗಳ ಲೇಖನಗಳಲ್ಲಿ ಅನೇಕ ಲೇಖನಗಳು ಅತಿಮುಖ್ಯವಾದ ವಿವರಗಳನ್ನು ನೀಡುತ್ತವೆ. ಅವುಗಳಲ್ಲಿರುವ ಅಭಿಪ್ರಾಯಗಳು ಶಾಶ್ವತರೂಪದಲ್ಲಿ ನಮಗೆ ದೊರಕಬೇಕು. ಹಂಚಿಹೋಗಿರುವ ಅವುಗಳನ್ನು ಕ್ರೋಡೀಕರಿಸಿ ಪುಸ್ತಕರೂಪದಲ್ಲಿ ಪುನರ್ಮುದ್ರಿಸುವ ಆವಶ್ಯಕತೆ ಇದೆ. ವಿಶ್ವವಿದ್ಯಾನಿಲಯವಾಗಲಿ, ಸಾಹಿತ್ಯ ಅಕಾಡೆಮಿಯಾಗಲಿ, ಸಾಹಿತ್ಯ ಪರಿಷತ್ತಾಗಲಿ ಈ ಕಾರ್ಯವನ್ನು ಕೂಡಲೆ ಮಾಡಬೇಕು. ಶಾಸ್ತ್ರಿಗಳ ಜನ್ಮ ಶತಾಬ್ದವನ್ನು ಆಚರಿಸುವ ಈ ಸಮಯದಲ್ಲಿ ಈ ಗ್ರಂಥಗಳನ್ನು ಮುದ್ರಿಸುವುದರ ಪ್ರಾಧಾನ್ಯವನ್ನು ಹೆಚ್ಚು ಒತ್ತಾಯದಿಂದ ಹೇಳಬೇಕಾಗಿಲ್ಲ.

ಶಾಸ್ತ್ರಿಗಳ ನೆನಪು ಹಸುರಾಗಿರುವಂತೆ ಈ ಕಾರ್ಯವನ್ನು ಕೈಗೊಳ್ಳಬೇಕಾಗಿದೆ.

ಗ್ರೀಕ್‌ನಾಟಕಗಳ ಅನುವಾದಕ ಕೆ.ವಿ.ರಾಘವಾಚಾರ್
(1904-1977)

ಇಪ್ಪತ್ತನೆಯ ಶತಮಾನದ ಮೊದಲ ದಶಕದಲ್ಲಿ ಜನಿಸಿದ ಅನೇಕ ಹಿರಿಯ ಸಾಹಿತಿಗಳ ಶತಮಾನದ ಸಮಾರಂಭಗಳು ಈ ಶತಮಾನದ ಈಚಿನ ವರ್ಷಗಳಲ್ಲಿ ಉತ್ಸಾಹದಿಂದ ನೆರವೇರಿಸಲ್ಪಟ್ಟಿವೆ. ಅಂಥ ಕೆಲವು ಸಮಾರಂಭಗಳು ಸರಕಾರದ ಕನ್ನಡ ಸಂಸ್ಕೃತಿ ಇಲಾಖೆಯಿಂದ ದೊರೆತ ಧನದ ಸಹಾಯದಿಂದ ವೈಭವಪೂರಿತವಾಗಿ ನೆರವೇರಿವೆ. ಅಲ್ಲದೆ ಆ ಸಮಾರಂಭಗಳು ಕನ್ನಡ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ವ್ಯಾಪಕವಾಗಿ ಆಚರಿಸಲ್ಪಟ್ಟಿವೆ. ಆದರೆ ಆನಂದ, ಕೆ. ಗೋಪಾಲಕೃಷ್ಣರಾವ್, ವೆಂಕಟರಾವ್ ಬೆಂಗೇರಿ ಮುಂತಾದ ಅನೇಕರ ನೆನಪು ಕೂಡ ನಮ್ಮ ಜನರಿಗೆ ಮೂಡಲಿಲ್ಲ. ಶಿವರಾಮಕಾರಂತ, ಡಿ.ಎಲ್.ಎನ್., ತೀನಂಶ್ರೀ, ಮುಗಳಿ, ಸಿದ್ದವ್ವನಹಳ್ಳಿ ಕೃಷ್ಣಶರ್ಮ, ಶ್ರೀರಂಗ, ರಾಜರತ್ನಂ, ಶಿವರಾಮ್ (ರಾಶಿ), ಕಸ್ತೂರಿ ಮುಂತಾದವರ ಹೆಸರಿನಲ್ಲಿ ವ್ಯಾಪಕವಾಗಿ ಅಲ್ಲದಿದ್ದರೂ ಅಲ್ಲಲ್ಲಿ ಅವರ ಶಿಷ್ಯ ಮಿತ್ರರ ಪ್ರಭಾವದಿಂದ ಶತಮಾನೋತ್ಸವಗಳು ನೆರವೇರಿವೆ - ಅಲ್ಪಪ್ರಚಾರದೊಡನೆ. ಮತ್ತೆ ಕೆಲವರ ಹೆಸರಂತೂ ಸಂಪೂರ್ಣವಾಗಿ ಮರೆತೇ ಹೋಯಿತು. ಹೀಗೆ ಮರೆತುಹೋದವರ ಪೈಕಿ ಕೆ.ವಿ. ರಾಘವಾಚಾರ್ಯರು ಒಬ್ಬರು. ಅವರು ಅವರ ಪ್ರಾರಂಭದ ದಿನಗಳಲ್ಲಿ ಇಂಗ್ಲಿಷ್-ಕನ್ನಡ ನಿಘಂಟಿನ ಕಾರ್ಯದಲ್ಲಿ ಮುಳುಗಿಹೋದರು. ನಿವೃತ್ತರಾದ ಬಳಿಕ ದೆಹಲಿಯ ವಿಶ್ವವಿದ್ಯಾನಿಲಯದಲ್ಲಿ ಭಾಷಾಶಾಸ್ತ್ರದ ಅಧ್ಯಾಪಕರಾಗಿ ಪಾಠಮಾಡುತ್ತ ಕನ್ನಡ ನಾಡಿಗೆ

ಸಂಪೂರ್ಣವಾಗಿ ಇಲ್ಲವಾದರು. ಹಾಗಾಗಿ ಅವರನ್ನು ಮರೆತುದಕ್ಕೆ ಸ್ವಲ್ಪ ಮಟ್ಟಿಗೆ ಈ ಪರಿಸ್ಥಿತಿ ಕಾರಣವಾಗಿರಬಹುದು.

ಆದರೂ ಕೆ.ವಿ.ರಾಘವಾಚಾರ್ಯರ ವಿದ್ಯಾರ್ಥಿಗಳು ಕೆಲವರು ಅವರನ್ನು ನೆನೆದು ಅವರ ಹೆಸರಿನಲ್ಲಿ ಒಂದು ಶತಮಾನದ ಸಮಾರಂಭವನ್ನು ನೆರವೇರಿಸಬೇಕೆಂದು ಸಂಕಲ್ಪ ಮಾಡಿದರು. ಅವರಲ್ಲಿ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಮುಖ್ಯರು. ರಾಘವಾಚಾರ್ಯರು ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ, ಅವರ ಸೇವೆಯ ಕೊನೆ ಕೊನೆಯ ದಿನಗಳಲ್ಲಿ ಡಾ॥ ವೆಂಕಟಾಚಲಶಾಸ್ತ್ರಿಗಳು ಅವರ ಸಹಪಾಠಿಗಳೂ ಆಗಿದ್ದರು. ಈ ಸಂಬಂಧವನ್ನು ನೆನೆದು ಅವರು ಶತಮಾನದ ಸಮಾರಂಭವನ್ನು ಏರ್ಪಡಿಸಿದುದು ನಿಜವಾಗಿ ಸ್ತುತ್ಯವಾದುದು. ಈ ಗುರುಕಾರ್ಯವನ್ನು – ಅದರ ಎಲ್ಲ ಅರ್ಥದಲ್ಲಿ – ಏರ್ಪಾಟು ಮಾಡಿದ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿಗಳನ್ನು ನಾವು ಅಭಿನಂದಿಸಬೇಕು. ಇದು ಕೇವಲ ಸ್ತುತಿಪಾಠದ ಸಮಾರಂಭವಾಗಲಿಲ್ಲ. ರಾಘವಾಚಾರ್ಯರ ವಿದ್ವತ್ತು ಮತ್ತು ಸಾಹಿತ್ಯ ರಚನೆಯನ್ನು ಕುರಿತ ಒಂದು ವಿಚಾರ ಸಂಕಿರಣವಾಗಿತ್ತು. ಆಚಾರ್ಯರ ಅನೇಕ ಶಿಷ್ಯರು ಈ ವಿಚಾರಸಂಕಿರಣದಲ್ಲಿ ಮಾತನಾಡಿದಾಗ ಅನೇಕ ಅಪ್ರಕಟಿತ ವಿವರಗಳು ಹೊರಮೂಡಿದವು.

ಆಧುನಿಕ ಕನ್ನಡದ ನಿಜವಾದ ಬೆಳವಣಿಗೆಗೆ ಮೂಲಭೂತವಾಗಿ ಅಗತ್ಯವಾಗಿದ್ದ ವಿದ್ವತ್ತು ನಿರ್ಮಾಣವಾದುದು 20ನೆಯ ಶತಮಾನದ ಮೊದಲ ಅರ್ಧದಲ್ಲಿ. ಬಿ.ಎಂ.ಶ್ರೀಯವರು ಇಂಗ್ಲಿಷಿನ ಅಧ್ಯಾಪಕರಾಗಿ ಸಂಸ್ಕೃತ, ಕನ್ನಡ, ತಮಿಳು, ಗ್ರೀಕ್ ಮುಂತಾದ ಭಾಷೆಗಳನ್ನು ಆಳವಾಗಿ ಅಭ್ಯಾಸಮಾಡಿ ತರಗತಿಗಳಲ್ಲಿಯೂ ಸಾರ್ವಜನಿಕ ಭಾಷಣಗಳಲ್ಲಿಯೂ ಮಾಡಿದ ಪ್ರಚಾರದ ಪ್ರಭಾವವನ್ನು ಅಳೆಯುವುದು ಸಾಧ್ಯವಿಲ್ಲ. ಕೇವಲ ಪ್ರಚಾರದಿಂದ ಏನೂ ಆಗುತ್ತಿರಲಿಲ್ಲ. ಆದುದರಿಂದ ಅವರೇ ಮೊದಲು ಮಾಡಿದ 'ಕನ್ನಡ ಮಾತು ತಲೆ ಎತ್ತುವ ಬಗೆ' ಎಂಬ ಧಾರವಾಡದ ಭಾಷಣ ಕನ್ನಡದ ನವೋದಯಕ್ಕೆ ಕಾರಣವಾಯಿತು. ಸ್ವತಃ ಶ್ರೀಯವರೇ ಹೊಸಗನ್ನಡ ಕವಿತೆಗಳನ್ನು ರಚಿಸಿದರು. ಇವು ಆಂಗ್ಲಕವಿತೆಗಳ ಅನುವಾದಗಳಾಗಿದ್ದವು. ಅವುಗಳ ಛಂದಸ್ಸು, ಭಾಷೆ, ವಸ್ತು ಎಲ್ಲವೂ ಕನ್ನಡಿಗರಿಗೇ ಹೊಸದಾಗಿ ಕಂಡವು. ಅವರು ಗ್ರೀಕ್ ಭಾಷೆಯಿಂದ ಕನ್ನಡಕ್ಕೆ ತಂದ 'ಅಶ್ವತ್ಥಾಮನ್' ನಾಟಕವೂ ಒಂದು ಕ್ರಾಂತಿಯನ್ನೇ ಮಾಡಿತು. ಅಶ್ವತ್ಥಾಮನಂಥ ಚಿರಂಜೀವಿಯನ್ನು ಆತ್ಮಹತ್ಯೆ ಮಾಡಿಕೊಂಡ ಯೋಧನನ್ನಾಗಿ ಮಾಡಿದ್ದು ತುಂಬ ಚರ್ಚೆಗೆ ಒಳಗಾಯಿತು. ಕಠಿನವಾದ ಟೀಕೆಗಳಾದವು. ಆದರೂ ಆ ಒಂದು ನಾಟಕದಲ್ಲಿ ಆದ ಆತ್ಮಹತ್ಯೆಯ ಚಿತ್ರದಿಂದ ಕನ್ನಡದ ನವೋದಯ ಉದ್ಭವವಾಯಿತು. ಹೊಸಗನ್ನಡದ ಸಾಹಿತ್ಯಕ್ಕೆ ಬುನಾದಿ ನಿರ್ಮಿತವಾಯಿತು. ಶ್ರೀಯವರ ಶಿಷ್ಯರೂ ಮಿತ್ರರೂ ಸ್ನೇಹಿತರೂ ಆ ಬಳಿಕ ಸೃಷ್ಟಿ ಮಾಡಿದ ಸಾಹಿತ್ಯದ ರಾಶಿ ಅಪಾರವಾಗಿ ಇನ್ನೂ ಬೆಳೆಯುತ್ತಲೇ ಇದೆ. ಬೆಳೆಯುವುದಷ್ಟೇ ಅಲ್ಲ ಶಾಖೋಪಶಾಖೆಗಳಾಗಿ ಅನೇಕ ರೂಪಾಂತರಗಳನ್ನು ಪಡೆದು ಹೊಸಹೊಸರೂಪಗಳನ್ನು ಪಡೆದು ಈಗಲೂ ನೂತನ ಪ್ರಯೋಗಗಳು ನಡೆಯುತ್ತಲೇ ಇವೆ.

ಹೊಸಗನ್ನಡದ ಸಾಹಿತ್ಯಸೃಷ್ಟಿಯಲ್ಲಿ ಅಭೂತಪೂರ್ವವಾದ ಕಾರ್ಯಗಳನ್ನು ನಿರ್ವಹಿಸಿದ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಟಿ.ಎಸ್.ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ ಇವರೆಲ್ಲ ಶ್ರೀಯುತರ ಶಿಷ್ಯರು. ಡಿ.ವಿ.ಜಿ. ಶ್ರೀಯವರ ಆಪ್ತಮಿತ್ರರು. ಇವರೆಲ್ಲ ಮೊದಲ ತಲೆಮಾರಿನ ವಿದ್ಯಾರ್ಥಿಗಳು ಮತ್ತು ಲೇಖಕ ವಿದ್ವಾಂಸರು. ಇವರ ಮುಂದೆ ಬಂದ ತೀ.ನಂ.ಶ್ರೀ., ಡಿ.ಎಲ್.ಎನ್. ಮುಂತಾದವರಿಂದ ಹಿಡಿದು ಮುಂದೆ ಹತ್ತು ವರ್ಷಗಳ ಕಾಲ ಶ್ರೀಯವರ ಶಿಷ್ಯರಾದ ನೂರಾರು ವಿದ್ವಾಂಸರು, ಲೇಖಕರು, ಹೊಸಗನ್ನಡದ ಅಭಿವೃದ್ಧಿಗೆ ಬೇರೆಬೇರೆ ರೀತಿಯಲ್ಲಿ ಕಾರಣರಾದರು. ಮುಖ್ಯವಾಗಿ ಈ ಎಲ್ಲ ಶ್ರೀ ಶಿಷ್ಯರೂ ಅವರ ಪ್ರಭಾವಕ್ಕೆ ಒಳಗಾಗಿದ್ದ ಕನ್ನಡದ, ಇಂಗ್ಲೀಷಿನ ಅಧ್ಯಾಪಕರುಗಳು. ಈ ದೊಡ್ಡ ತಂಡ ಮಾಡಿರುವ ಸಾಹಿತ್ಯ ಕಾವ್ಯ ಪರಂಪರೆಯನ್ನು ಬೇರೊಂದು ಅಧ್ಯಾಯವಾಗಿ ಹೊಸ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಿರೂಪಿಸಬೇಕಾಗಿದೆ. ಈ ದಶಕದಲ್ಲಿ ಆ ಕಾರ್ಯವನ್ನು ಯಾರಾದರೂ ಮಾಡಿಯಾರು!

ಮೈಸೂರು ವಿಶ್ವವಿದ್ಯಾನಿಲಯವು 1916-17ರಲ್ಲಿ ಸ್ಥಾಪಿತವಾಯಿತು. ಅಲ್ಲಿಯ ತನಕ ಕನ್ನಡ ನಾಡಿನ ವಿದ್ಯಾರ್ಥಿಗಳೆಲ್ಲ ಮದ್ರಾಸು ವಿಶ್ವವಿದ್ಯಾನಿಲಯದ ಪದವಿಯನ್ನು ಪಡೆಯುತ್ತಿದ್ದರು. ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾದುದು 1916-17 ಆದರೂ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯುವ ಅನುಕೂಲವಿರಲಿಲ್ಲ. ಮದ್ರಾಸು ವಿಶ್ವವಿದ್ಯಾನಿಲಯದ ವಿದ್ವಾನ್ ಪದವಿಯನ್ನು ಪಡೆಯಬೇಕಾಗಿತ್ತು. ಅಥವಾ ಮೈಸೂರಿನಲ್ಲಿಯೇ ವಿದ್ಯಾಭ್ಯಾಸ ಇಲಾಖೆಯ ಆಶ್ರಯದಲ್ಲಿ ಏರ್ಪಾಟಾಗಿದ್ದ ಅಪ್ಪರ್ ಸೆಕೆಂಡರಿ ಅಥವಾ ಅದರ ಮುಂದಿನ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕಾಗಿತ್ತು. ಅಂಥವರಿಗೆ ಪ್ರೌಢಶಾಲೆಯ ಅಧ್ಯಾಪಕರಾಗುವ ಸಾಧ್ಯತೆ ಇತ್ತು. ಈ ಸ್ಥಿತಿಯನ್ನು ಸರಿಪಡಿಸಲು ಬಿ.ಎಂ.ಶ್ರೀಯವರಂಥ ಶ್ರದ್ಧಾಳುಗಳು ಬರಬೇಕಾಗಿತ್ತು. ಅವರ ನೇತೃತ್ವದಲ್ಲಿ 1928ರಲ್ಲಿ ಕನ್ನಡ ಎಂ.ಎ. ತರಗತಿಗಳು ಪ್ರಾರಂಭವಾದವು. ಹೀಗೆ ಪ್ರಾರಂಭವಾದ ಶಿಕ್ಷಣದಲ್ಲಿ ಮೊದಲನೆಯ ವರ್ಷದಲ್ಲಿ ವಿದ್ಯಾರ್ಥಿಗಳಾಗಿ ಸೇರಿಕೊಂಡವರು ತೀ.ನಂ.ಶ್ರೀ., ರಾಜರತ್ನಂ, ರಾಘವಾಚಾರ್ ಇವರುಗಳು. ಬಳಿಕ ಬಂದವರು ಡಿ.ಎಲ್.ಎನ್. ಕುವೆಂಪು, ಅನಂತರಂಗಾಚಾರ್ ಮುಂತಾದವರು. ಇವರೆಲ್ಲರಿಗೂ ಬಿ.ಎಂ.ಶ್ರೀ., ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ ಇವರುಗಳ ಮಾರ್ಗದರ್ಶನವಿತ್ತು. ಮಾಸ್ತಿಯವರು ಎಂಸಿಎಸ್ ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಪಡೆದು ಆಡಳಿತದಲ್ಲಿ ಮುಂದುವರಿದರು. ಹೀಗೆ ಬಿ.ಎಂ.ಶ್ರೀಯವರನ್ನು ಉತ್ತಮೋತ್ತಮ ಉಪಾಧ್ಯಾಯರೆಂದೋ ಪ್ರಭಾವಶಾಲಿ ವಕ್ತಾರರೆಂದೂ, ಮಹಾವಿದ್ವಾಂಸರೆಂದೂ ಆತ್ಮೀಯ ಮಾರ್ಗದರ್ಶಿ ಎಂದೋ ಸ್ವೀಕರಿಸಿ ಅವರ ಬೋಧನೆಯ ಬೆಳಕಿನಲ್ಲಿ ಬೆಳೆದವರು ಇವರು. ಶ್ರೀಯವರು ಉಪಾಧ್ಯಾಯರೇ ಅಲ್ಲವೆಂದೂ ಭಾಷಣಕಾರರು ಮೊದಲೇ ಅಲ್ಲವೆಂದೂ ತೆಗಳಿದವರು ಬಹಳಿದ್ದಾರೆ. ಆದರೆ ಆ ಅಭಿಪ್ರಾಯ ಅವರೊಬ್ಬರದೇ.

ಈ ಹಿನ್ನೆಲೆಯಲ್ಲಿ ಮಹಾರಾಜರ ಕಾಲೇಜಿನಲ್ಲಿ ವಿಶ್ವವಿದ್ಯಾನಿಲಯದ ಮೊದಲ ಕನ್ನಡ ಎಂ.ಎ. ಪದವಿಯನ್ನು ಪಡೆದವರು ತೀನಂಶ್ರೀ ಕೆ.ಪಿ. ರಾಘವಾಚಾರ್ ಮತ್ತು ರಾಜರತ್ನಂ ಜಿ.ಪಿ. ಇವರಿಗೆ ಎಂ.ಎ. ಪದವಿಯೇನೋ ದೊರಕಿತು. ಆದರೆ ಉದ್ಯೋಗ ಮಾತ್ರ ದೊರಕಲಿಲ್ಲ. ಮಹಾರಾಜರ ಕಾಲೇಜಿನಲ್ಲಿ ಈ ಹಿಂದೆಯೇ ನೇಮಕಗೊಂಡಿದ್ದ ಪಂಡಿತರುಗಳೂ, ಟಿ.ಎಸ್. ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ ಮುಂತಾದವರೂ ಇದ್ದರು. ಪ್ರೌಢಶಾಲೆಗಳಲ್ಲಿ ಪಂಡಿತರನ್ನು ಮಾತ್ರ ನೇಮಕ ಮಾಡುತ್ತಿದ್ದರು. ಈ ಸ್ಥಿತಿಯಲ್ಲಿ ರಾಘವಾಚಾರ್ಯರಿಗೆ ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಸ್ವಲ್ಪ ಕಾಲ ಉಪನ್ಯಾಸಕರಾಗಿ ಕೆಲಸ ಸಿಕ್ಕಿತು. ಕನ್ನಡ ಎಂ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಉದ್ಯೋಗ ನೀಡುವ ಉದ್ದೇಶದಿಂದಲೇ ಇಂಗ್ಲಿಷ್-ಕನ್ನಡ ನಿಘಂಟನ್ನು ಸಿದ್ಧಪಡಿಸುವ ಒಂದು ಯೋಜನೆ ತಯಾರಾಯಿತು. ಆ ಯೋಜನೆಯ ಅಡಿಯಲ್ಲಿ ನಿಘಂಟು ರಚನಾ ಸಮಿತಿಯ ಕೆಲಸದಲ್ಲಿ ದುಡಿಯಲು ಕೆಲವರು ಸಾಹಿತ್ಯ ಸಹಾಯಕರು ಎಂದು ಮೂವರನ್ನು ನೇಮಿಸಿಕೊಂಡರು. ಅವರೇ ಕೆ.ಪಿ.ರಾಘವಾಚಾರ್ಯರು, ಎಲ್.ಗುಂಡಪ್ಪನವರು ಆ ಬಳಿಕ ಎಂ.ವಿ.ಸೀತಾರಾಮಯ್ಯನವರು. ಇವರು ಮೂವರೂ ನಿಘಂಟಿನ ಕಚೇರಿಯಲ್ಲಿ ಸಾಹಿತ್ಯಸಹಾಯಕರಾಗಿ ಒಂಬತ್ತು ವರ್ಷಗಳ ಕಾಲ ಕೆಲಸ ಮಾಡಿದರು. ನಿಘಂಟಿನ ಕೆಲಸ ಪೂರ್ತಿಸುತ್ತ ಬಂದ ಮೇಲೆ ಒಬ್ಬೊಬ್ಬರಾಗಿ ಅಲ್ಲಿಂದ ಬಿಡುಗಡೆ ಹೊಂದಿ ಕಾಲೇಜುಗಳಲ್ಲಿದ್ದ ಅವರ ಸ್ಥಳಕ್ಕೆ ಬಂದು ಸೇರಿಕೊಂಡರು. ಹಾಗೆ ಮೊದಲು ಬಂದು ಸೇರಿಕೊಂಡವರು ಕೆ.ಪಿ.ರಾಘವಾಚಾರ್ಯ. ಅವರು ಸೇರಿಕೊಂಡ ಜಾಗ ಮೈಸೂರಿನ ಮಹಾರಾಜ ಕಾಲೇಜಿನ ಕನ್ನಡ ಪಂಡಿತನ ಸ್ಥಾನ. ಅಲ್ಲಿ ನಾನು ತಾತ್ಕಾಲಿಕವಾಗಿ 40 ರೂಪಾಯಿಗಳ ಸಂಬಳದ ಮೇಲೆ 5 ವರ್ಷ ಕೆಲಸ ಮಾಡುತ್ತಿದ್ದೆ. ಅವರು ಬಂದ ಮೇಲೆ ನಾನು ಉದ್ಯೋಗವಿಲ್ಲದವನಾಗಿ ಅಲೆಯಬೇಕಾಯಿತು. ಅದರ ಮುಂದಿನ ಕಥೆ ದೊಡ್ಡದು. ಅದನ್ನು ಬೇರೆಯೇ ಕಡೆ ವಿವರಿಸಬೇಕು.

ರಾಘವಾಚಾರ್ಯರು ಮೈಸೂರಿಗೆ ಬಂದು ಮಹಾರಾಜರ ಕಾಲೇಜಿನಲ್ಲಿ ಬೋಧನೆ ಮಾಡಲು ಪ್ರಾರಂಭಿಸಿದ ಮೇಲೆಯೇ ಅವರ ಸಾಹಿತ್ಯ ರಚನಾಕಾರ್ಯ ಮೊದಲಾಯಿತು. ಅವರು ಮೊದಲು ಮಾಡಿದ ಕಾರ್ಯ-ಜನ್ನನ ಯಶೋಧರ ಚರಿತೆಯನ್ನು ಸಂಗ್ರಹಿಸಿ ಅದಕ್ಕೆ ಒಂದು ಉತ್ತಮವಾದ ಟೀಕೆಯನ್ನು ಬರೆದುದು. ಅದು ಎಲ್ಲರ ಮೆಚ್ಚುಗೆಯನ್ನು ಸಂಪಾದಿಸಿತು. ಜೊತೆಗೆ ಬಹುಬೇಗ ಇಂಟರ್ ಮೀಡಿಯೇಟ್ ತರಗತಿಗೆ ಪಠ್ಯಪುಸ್ತಕವಾಯಿತು. ನಾನು ಅದನ್ನು ಎರಡು ವರ್ಷ ಬೇರೆಬೇರೆ ಸಮಯಗಳಲ್ಲಿ ಪಾಠಮಾಡಿದ್ದೇನೆ. ಅದರ ಸುಖವನ್ನು ಅನುಭವಿಸಿದ್ದೇನೆ. ಅಮೃತಮತಿಯ ಪಾತ್ರದ ಮಾನಸಿಕ ಸ್ಥಿತಿಯನ್ನು ಮನಶ್ಶಾಸ್ತ್ರದ ದೃಷ್ಟಿಯಿಂದ ಅಭ್ಯಾಸ ಮಾಡಬೇಕಾದುದು. ಆ ಕೆಲಸ ಇನ್ನೂ ಖಚಿತವಾಗಿ ಆಗಿಲ್ಲ. ಆ ಮಾತು ಬೇರೆ. ಆ ಕಾವ್ಯವಂತೂ ತುಂಬ ಸುಂದರವಾದ ಕಾವ್ಯ ಎಂಬ ಬಗ್ಗೆ ಅನುಮಾನವಿಲ್ಲ.

[illegible] ಅನುವಾದಗಳೂ [illegible] [illegible] ಅನುವಾದ ಮಾಡಿದ್ದಾರೆ. [illegible] ಅನುವಾದ ಮಾಡಿದ್ದಾರೆ. [illegible] ಅನುವಾದ ಮಾಡಿದ್ದಾರೆ. [illegible] ನಾಟಕಗಳ ಅನುವಾದಗಳ ಬಗೆ [illegible] ಬಗ್ಗೆ [illegible].

[illegible] ಬಗ್ಗೆ ಒಂದು [illegible] 'ವ್ಯಾಕರಣಗಳು' [illegible] ಅವರೂ ಸಹಾಯ ಮಾಡಿರುವ ಸೂಚನೆಯಿದೆ.

[illegible] ಬಗ್ಗೆ ಅನುಮಾನವಿಲ್ಲ.

[illegible] ೬೦೦ [illegible] ಕೆಲಸವೂ ನನ್ನ ಮೇಲೆಯೇ ಬಿತ್ತು.

[illegible] ಪತ್ರಿಕಾಯುಕ ಎಂಬ [illegible] 'ಒಂದು ಪತ್ರಿಕಾಯುಕವಲ್ಲವೆ' [illegible] ಪತ್ರಿಕಾಯುಕ [illegible] 'ಒಂದು

ವೃತ್ತಿ ಕಾಯಕವಲ್ಲದೆ' ಎಂದು [illegible] ಮಾತಿಗೆ ಬೆಲೆ ಬಂದು ಆ ಶಬ್ದ ಬಿದ್ದುಹೋಯಿತು.

ಮತ್ತೊಂದು ಶಬ್ದ 'ಕುಂಗೆ' ಎಂಬುದು. [illegible] (ನೋಡಿ 118-42 : 1061) [illegible] ಮಾಡಿದರು.

[illegible]

ಬಹು ಆಳ ಪ್ರಾಂತದಲ್ಲಿರಬೇಕು. ಅಂದರೆ ಧಾರವಾಡದ ಉತ್ತರ ಪ್ರದೇಶದ ಆದಿವಾಸಿಗಳಲ್ಲಿದ್ದ ಬಹಳ ಶಬ್ದಗಳು ಸಂಸ್ಕೃತ ನಿಘಂಟುಗಳಾಗಿ ತಯಾರಾಗಿದ್ದ ಪಟ್ಟಿಕೆಯಲ್ಲಿ ದಾಖಲಾಗಿಲ್ಲವೇನಾಯಿತು. ಬಂದ ಮತ್ತಷ್ಟು ಶಬ್ದಗಳ ಅಲ್ಲಿ ಹೋಗಿದೆಯೇ ಹೇಳುವವರು ಯಾರು. ಕನ್ನಡದೇಶದ ಎಲ್ಲ ಭಾಗಗಳಲ್ಲಿ ಭಾಷಾ ಸರ್ವೆ ನಡೆಯದೆ ಯಾವ ನಿಘಂಟೂ ಪೂರ್ಣವಾಗುವುದಿಲ್ಲ. ನಿಘಂಟು ಎಂದೂ ಪೂರ್ಣವಾಗುವುದೇ ಇಲ್ಲ. ಭಾಷೆ ಬೆಳೆಯುತ್ತಲೇ ಇರುತ್ತದೆ. ಶಬ್ದಗಳು ಮಾಯವಾಗುತ್ತಲೇ ಇರುತ್ತವೆ. ಹೊಸ ಶಬ್ದಗಳು ಬರುತ್ತಲೇ ಇರುತ್ತವೆ. ಅದ್ದರಿಂದ ಯಾವ ಪ್ರದೇಶದಲ್ಲಿಯಾದರೂ ಒಂದು ನಿಘಂಟು ಸಂಕಲಿತವಾಗಿದ್ದರೆ ಅದನ್ನು ಮುಂದಿಡಬೇಕು. ಬೇಗನೆ ಕೃಷ್ಣಭಟ್ಟರು ಅಲ್ಲಿ ಇದ್ದರ ನಿಘಂಟನ್ನೇ ಮುದ್ರಿಸಿದ ಹಾಗೆ ಬಸವೇಶ್ವರ ನಿಘಂಟನ್ನೂ ಮುದ್ರಿಸುವ ಅಗತ್ಯ ಇನ್ನೂ ಇದೆ. ಈ ಸತ್ಯ ನನಗೆ ಖಚಿತವಾದುದು ಈ ಹುಂಗೆ ಬಿಟ್ಟರ ಚಿಂತೆಯಿಂದ. ರಾಘವಾಚಾರ್ಯರ ಬಗ್ಗೆ ಬರೆಯುವಾಗ ಅಥವಾ ಮಾತನಾಡುವಾಗಲೆಲ್ಲ ನನಗೆ ಈ ಘಟನೆ ನೆನಪಿಗೆ ಬರುತ್ತದೆ.

ರಾಘವಾಚಾರ್ಯರು ಸಂಸ್ಕೃತದ ವಿಷಯದಲ್ಲಿ ಕೆಲವು ವೇಳೆ ಹಿರಿಯ ಪಟ್ಟನ್ನು ಹಿಡಿಯುತ್ತಿರಲಿಲ್ಲ. ಅವರಿಗೆ ಅವರ ನಿರ್ಧಾರ ಅಷ್ಟು ಖಚಿತವಾಗಿರುತ್ತಿತ್ತು. ದೊಡ್ಡ ಭಾಷಾ ವಿದ್ವಾಂಸರಾದವರಿಗೆ ಹೀಗೆ ಹಟಮಾರಿತನ ಒಂದು ಗುಣವಾಗುತ್ತದೆ. ನಮ್ಮ ಹಿಂದಿನ ತಲೆಮಾರಿನಲ್ಲಿ ತಮಿಳು ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸಮಾಡಿಕೊಂಡಿದ್ದವರಲ್ಲಿ ರಾಘವಾಚಾರ್ಯರು ಮುಖ್ಯರಾಗಿದ್ದರು. ಉಭಯ ವೇದಾಂತವನ್ನೂ ಅವರು ಬಲ್ಲವರಾಗಿದ್ದರು. ಭಾಷಾಶಾಸ್ತ್ರ ಅವರ ಕಾಲದಲ್ಲಿ ಇದ್ದುದಕ್ಕಿಂತ ಅತ್ಯಧಿಕವಾಗಿ ವ್ಯಾಪಕವಾಗಿ ಬೆಳೆದುಬಿಟ್ಟಿದೆ ಈಗ. ಅದರ ವ್ಯಾಪಕತೆಯನ್ನು ಅನುಸರಿಸಿಕೊಂಡು ಅದನ್ನು ವಿಸ್ತರಿಸಿಕೊಳ್ಳುವುದು ಅನಿವಾರ್ಯವಾಗುತ್ತಿದೆ. ಅವರ ದ್ರಾವಿಡ ಭಾಷೆಗಳೆಂದು ನಾವು ಕರೆಯುವ ಭಾಷೆಗಳ ವ್ಯುತ್ಪತ್ತಿಗಳನ್ನು ಪರದೇಶದವರು ಸಂಕಲಿಸಿ DED ನಿಘಂಟನ್ನು ತಯಾರುಮಾಡಬೇಕಾಯಿತು. ನಮ್ಮಲ್ಲಿರುವ ಎಲ್ಲ ಭಾಷೆಗಳ ವಿದ್ವಾಂಸರು ಇಂಥ ಕಾರ್ಯವನ್ನು ಕೂಡಿ ಮಾಡಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಚಿಂತನೆ ಮೂಡುತ್ತದೆ. ಆದರೆ ಅದಕ್ಕೆ ನಾಲ್ಕಾರು ಸರಕಾರಗಳು ಕೈಗೊಳ್ಳಬೇಕು. ಯಾವ ಸರಕಾರಕ್ಕೆ ತಾನೆ ಭಾಷೆಯ ಬಗ್ಗೆ ಕಾಳಜಿ ಇದ್ದೀತು!

ರಾಘವಾಚಾರ್ಯರ ಬಹಿರಂಗ ಸ್ವಲ್ಪ ಒರಟಾಗಿತ್ತು. ಮಾತು ಹಿತವಾಗಿರುತ್ತಿರಲಿಲ್ಲ. ಆದರೆ ಅವರ ಅಂತರಂಗ ಬೆಣ್ಣೆಯಂತೆ ಮೃದುವಾಗಿತ್ತು. ಜನರನ್ನು ಉಪಚರಿಸುವುದರಲ್ಲಿ ಸತ್ಕಾರ ಮಾಡುವುದರಲ್ಲಿ ತುಂಬ ಉದಾರರಾಗಿದ್ದರು. ಶಕ್ತಿಮೀರಿ ಪರೋಪಕಾರ ಮಾಡುತ್ತಿದ್ದರು. ವಿದ್ಯಾರ್ಥಿಗಳಿಗೆ ತುಂಬ ಪ್ರೀತಿಯಿಂದ ಸಹಾಯಮಾಡುತ್ತಿದ್ದರು. ಎಷ್ಟೋ ವೇಳೆ ಬಡವಿದ್ಯಾರ್ಥಿಗಳನ್ನು ಕರೆದುಕೊಂಡುಹೋಗಿ ಸಹಾಯವನ್ನು ನೀಡಿದ್ದುಂಟು. ಅಂಥ ಒಂದೆರಡು ಸನ್ನಿವೇಶಗಳ ನೆನಪು ನನ್ನಲ್ಲಿವೆ. ಈ ವಿಚಾರದಲ್ಲಿ ಅವರೂ ತ.ಸು.ಶಾಮರಾಯರೂ ಒಂದೇ ನಾಣ್ಯದ ಎರಡು ಮುಖಗಳಾಗಿದ್ದರು.

[illegible]

[illegible]

ಅನುವಾದ ಪ್ರೌಢಿಮೆಯ ಟಿ.ಎನ್.ಶ್ಯಾಮರಾಯರು
(1906-2000)

ಟಿ.ಎನ್. ಶ್ಯಾಮರಾಯರಿಗೆ ಕುವೆಂಪು ಅವರು ಬರೆದಿದ್ದ ಒಂದು ಪತ್ರ ಹೀಗಿದೆ :

ಉದಯರವಿ
ವಾ.ವಿ.ಪುರಂ
ಮೈಸೂರು-2

"ಪ್ರಿಯ ಶ್ಯಾಮರಾಯರೇ,

ಇವೊತ್ತು ನನಗೆ ಅಚ್ಚರಿಗಳಲ್ಲಿ ಅಚ್ಚರಿ ! ವರ್ಷಗಳಿಂದ ನಿಮ್ಮನ್ನು ಪತ್ತೆಹಚ್ಚಲು ಪ್ರಯತ್ನಿಸಿ ಹತಾಶನಾಗಿದ್ದೆ. ದೇ.ಜ.ಗೌಡರೂ ಅವರು ಕುಲಪತಿಯಾಗಿದ್ದಾಗಲೂ ಒಂದೆರಡು ಸಾರಿ ನಿಮ್ಮ ಮನೆಗೆ ಬೀಗ ಹಾಕಿದ್ದನ್ನು ನೋಡಿ, ಎಲ್ಲಿಗೆ ಹೋದರು ಎಂದು ಯಾರೂ ಹೇಳದಿದ್ದುದರಿಂದ ನಿರಾಶರಾಗಿ ಬಂದಿದ್ದರು. ಮೊನ್ನೆ ಮೊನ್ನೆಯೂ ನಾನೂ ಅವರೂ ನೀವು ಏನಾಗಿ ಹೋದಿರೋ ಎಂದು ಚಿಂತಿಸಿದ್ದೆವು. ನಿಮ್ಮ ಆರೋಗ್ಯ ಚೆನ್ನಾಗಿರಲಿಲ್ಲ ಎಂದು ಗೊತ್ತಿದ್ದು, ನಮಗೆ ನೀವು ಇದ್ದೀರೋ ಇಲ್ಲವೋ ಎಂದು ಭಯವಾಗಿತ್ತು. ಸದ್ಯ ಇದ್ದೀರಲ್ಲ ! ಭಗವಂತನ ದಯೆ! ಕೃಪೆ! ನಾನಂತೂ ಅವನಿಗೆ ತುಂಬ ಕೃತಜ್ಞ! ನಿಮಗೆ ದೇಜಗೌ ಕಾಗದ ಬರೆಯುತ್ತಾರೆ. ನಾನೂ ಬರೆಯುತ್ತೇನೆ. ಈ ಕಾಗದವನ್ನು ಅವಸರವಸರವಾಗಿ

ಗೀಚುತ್ತಿದ್ದೇನೆ. ಕ್ಷಮಿಸಬೇಕು. ನಿಮ್ಮ ಆರೋಗ್ಯ ಕೆಡದಂತೆ ಪ್ರಯತ್ನಿಸಿ ಎಂದು ಬೇಡುತ್ತೇನೆ. ಶ್ರೀ ರಾಮಾಯಣ ದರ್ಶನಂ ಇಂಗ್ಲಿಷಿಗೆ ಭಾಷಾಂತರವಾಗುವುದಿರಲಿ ! ಧಾರವಾಡದ ಅಂಗಡಿ ಮತ್ತು ಮನೆಜೀಸ್ ಪ್ರಯತ್ನಿಸಿ ಕೈಬಿಟ್ಟರು. ಕನ್ನಡ ಅಧ್ಯಯನ ಸಂಸ್ಥೆಯ ಡಾ|| ಮಾನಪ್ಪ ನಾಯಕರು ಅದರ ಹೊಣೆ ಹೊತ್ತಿದ್ದಾರೆ. ಏನಾಗುತ್ತಿದೆಯೋ !

ನಮಸ್ಕಾರಗಳು
ಕುವೆಂಪು''

ಈ ಅಂಚೆಯ ಕಾರ್ಡಿನಲ್ಲಿ ಆರ್/15/7/75 ಎಂದು ಶ್ಯಾಮರಾಯರು ತಮಗೆ ತಲುಪಿದ ತಾರೀಖನ್ನು ಗುರುತಿಸಿದ್ದಾರೆ.

ಕುವೆಂಪು ಅವರಿಗೆ ಅವರ ಅತ್ಯಂತ ಶ್ರೇಷ್ಠ ಕೃತಿಯಾದ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವು ಇಂಗ್ಲಿಷಿಗೆ ತರ್ಜುಮೆಯಾಗಿ ಇಂಗ್ಲಿಷನ್ನು ಮಾತ್ರ ಬಲ್ಲವರಿಗೂ ಅದು ತಲುಪಬೇಕೆಂಬ ಆಸೆ ಇತ್ತು. ಆ ಅನುವಾದವು ಶ್ಯಾಮರಾಯರ ಮೂಲಕ ಆಗಿದ್ದರೆ ಅದು ತುಂಬ ಚೆನ್ನಾಗಿರುತ್ತಿತ್ತು ಎಂಬುದು ಕುವೆಂಪು ಅವರಿಗೆ ತಿಳಿದಿತ್ತು. 'ಕುವೆಂಪು-ಹಿಸ್ ವಿಷನ್ ಅಂಡ್ ವಾಯ್ಸ್' ಎಂಬ ಹೆಸರಿನ ಲೇಖನದಲ್ಲಿ ಶ್ಯಾಮರಾಯರು ಕುವೆಂಪು ಅವರ ಅನೇಕ ಕವನಗಳನ್ನು ಬಹು ಸಮರ್ಥವಾಗಿ ಇಂಗ್ಲಿಷಿಗೆ ಅನುವಾದ ಮಾಡಿದ್ದರು. ಹೀಗೆ ಅವರು ಅನುವಾದ ಮಾಡಿದ ಕವನಗಳ ಇಂಗ್ಲಿಷ್ ಭಾಷಾಂತರವು ಈಗಲೂ ಒಂದೇ ಕಡೆ ದೊರಕುತ್ತವೆ. ಅಲ್ಲಿ ಕುವೆಂಪು ಅವರ 51 ಕವನಗಳ ಅನುವಾದಗಳಿವೆ. ಈ ಅನುವಾದಗಳನ್ನು ನೋಡಿದಾಗಲೆಲ್ಲ ಕುವೆಂಪು ಅವರು ಶ್ಯಾಮರಾಯರಿಗೆ ತಮ್ಮ ಮೆಚ್ಚಿಗೆಯನ್ನು ಸೂಚಿಸಿ ಬರೆದ ಪತ್ರಗಳಿವೆ. ಅವುಗಳಲ್ಲಿ ಕೆಲವು ವಾಕ್ಯಗಳನ್ನ ಆರಿಸಿ ಇಲ್ಲಿ ದಾಖಲಿಸುತ್ತೇನೆ.

1. ನೀವು ಕಳುಹಿಸಿರುವ ಭಾಷಾಂತರಗಳು ನನ್ನ ಮನಸ್ಸಿಗೆ ತುಂಬಾ ಹಿಡಿಸಿವೆ.

2. ನಿಮ್ಮ ಭಾಷಾಂತರಗಳನ್ನು ಓದಿದಾಗ ನನಗೆ ತುಂಬಾ ಸೊಗಸಾಗಿವೆ ಎನ್ನಿಸಿತು. ಒಬ್ಬ ಮಿತ್ರರಿಗೂ ನೋಡಲು ಕೊಟ್ಟಿದ್ದೆ. ಅವರೂ magnificent, they almost look like the originals ಎಂದೆಲ್ಲಾ ಹೊಗಳಿದ್ದಾರೆ.

3. ನಿಮ್ಮ ಭಾಷಾಂತರ ಶಕ್ತಿ ಅದ್ಭುತ ಎಂದು ನನ್ನ ಅಭಿಪ್ರಾಯ. 'ಅವತಾರ' ಕವನವಂತೂ ಅದ್ಭುತವಾಗಿ ಬಂದಿದೆ.

4. 'ಶ್ಮಶಾನ ಕುರುಕ್ಷೇತ್ರ' ಕೃತಿಯನ್ನು ಇಂಗ್ಲಿಷಿಗೆ ಭಾಷಾಂತರಿಸುವ ಉದ್ದೇಶವನ್ನು ತಿಳಿಸಿದ್ದೀರಿ. ಸಂತೋಷದಿಂದ ಒಪ್ಪಿಗೆ ನೀಡುತ್ತೇವೆ. ಅದು ಇನ್ನೂ ಇಂಗ್ಲಿಷಿಗೆ ಭಾಷಾಂತರವಾಗಿಲ್ಲ.

ಶ್ಯಾಮರಾಯರ ಭಾಷಾಂತರ ಮಾಡುವ ಸಾಮರ್ಥ್ಯದ ಬಗ್ಗೆ ಅಷ್ಟು ಮೆಚ್ಚುಗೆಯಿದ್ದ ಕುವೆಂಪು ಅವರಿಗೆ ಇಂಥ ಸಮರ್ಥರಿಂದಲೇ ಶ್ರೀ ರಾಮಾಯಣ ದರ್ಶನಂ ಕಾವ್ಯವು ಅನುವಾದಗೊಂಡರೆ ಚೆನ್ನ ಎಂದು ಅಭಿಪ್ರಾಯವಿದ್ದರೆ ಆಶ್ಚರ್ಯವೇನಿಲ್ಲ. ಆದರೆ ಆ ಸಂದರ್ಭದ ಕೋರಿಕೆ ಶ್ಯಾಮರಾಯರಿಗೆ ಇನ್ನೂ ಮುಂಚೆ ಬಂದಿದ್ದರೆ ಫಲಪ್ರದವಾಗುತ್ತಿತ್ತೋ ಏನೋ ! ಅವರಿಗೆ ಆ ಕೋರಿಕೆ ಮೈಸೂರು ವಿಶ್ವವಿದ್ಯಾನಿಲಯದಿಂದ ಬರುವ ಹೊತ್ತಿಗೆ ತುಂಬ ತಡವಾಗಿದ್ದು ಅವರು 'I regret to inform you of my inability to take up the assignment you have proposed because of indifferent health and poor eyesight' ಎಂದು ಡಾ. ಜವರೇಗೌಡರಿಗೆ ಬರೆಯಬೇಕಾಯಿತು.

ಇಂಥ ಸಾಮರ್ಥ್ಯವನ್ನು ಪಡೆದಿದ್ದ ಶ್ಯಾಮರಾಯರ ಬಗ್ಗೆ ಈಗಿನ ಜನತೆಗೆ ಕೆಲವು ವಿವರಗಳು ತಿಳಿದಿರಬೇಕಾದುದು ಮುಖ್ಯ. ಆ ದೃಷ್ಟಿಯಿಂದ ಅವರ ಜೀವನವನ್ನೂ ಸಾಹಿತ್ಯ ಕಾರ್ಯವನ್ನೂ ಕುರಿತು ಕೆಲವು ವಿವರಗಳನ್ನು ಇಲ್ಲಿ ದಾಖಲಿಸಲಾಗಿದೆ.

ಟಿ.ಎಸ್. ಶ್ಯಾಮರಾಯರು ಹುಟ್ಟಿದ್ದು ಗೌರಿಬಿದನೂರು ತಾಲ್ಲೂಕಿನ ತೊಂಡೇಬಾವಿಯಲ್ಲಿ. ಅವರ ತಂದೆ ಟಿ. ನರಸಿಂಗರಾಯರು ಶೇಖ್‌ದಾರರಾಗಿ ಸರಕಾರದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದರು. ಅವರು ಊರಿಂದ ಊರಿಗೆ ಹೋಗಬೇಕಾಗಿದ್ದರಿಂದ ಶ್ಯಾಮರಾಯರು ಬೇರೆ ಬೇರೆ ಊರುಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಬೇಕಾಯಿತು. ಬಾಲ್ಯದಲ್ಲಿಯೇ ಸಾಹಿತ್ಯದಲ್ಲಿ ಆಸಕ್ತಿಯು ಬೆಳೆದು ಇಂಗ್ಲಿಷ್ ಮತ್ತು ಕನ್ನಡ ಸಾಹಿತ್ಯವನ್ನು ಆಳವಾಗಿ ಆಸಕ್ತಿಯಿಂದ ಅಭ್ಯಾಸ ಮಾಡುತ್ತಿದ್ದರು. ಇಂಗ್ಲಿಷ್ ಭಾಷೆಯಲ್ಲಿ ಅವರಿಗೆ ಹಿಡಿತ ಚೆನ್ನಾಗಿಯೇ ಇತ್ತು. ತುಮಕೂರಿನ ಕೊಲಿಜಿಯೇಟ್ ಹೈಸ್ಕೂಲಿನಲ್ಲಿ ಅವರು ವ್ಯಾಸಂಗ ಮಾಡುತ್ತಿದ್ದಾಗ ಹೆಸರಾಂತ ಸಾಹಿತಿಗಳಾಗಿದ್ದ ಎಂ.ಆರ್. ಶ್ರೀನಿವಾಸಮೂರ್ತಿಗಳು ಅವರಿಗೆ ಅಧ್ಯಾಪಕರಾಗಿದ್ದರು. ಅವರ ಪ್ರೋತ್ಸಾಹದಿಂದ ಶ್ಯಾಮರಾಯರು ಕನ್ನಡದಲ್ಲಿಯೂ ಆಸಕ್ತಿಯನ್ನು ಬೆಳೆಸಿಕೊಂಡರು.

ಕೊಲಿಜಿಯೇಟ್ ಹೈಸ್ಕೂಲಿನಲ್ಲಿ ಆಗಿನ ಕಾಲದಲ್ಲಿಯೇ 'School Folk' ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಆ ಪತ್ರಿಕೆಗೆ ಶ್ಯಾಮರಾಯರು ಅನೇಕ ಲೇಖನಗಳನ್ನು ಬರೆದರು. ಬಿ.ಎಂ.ಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತಗಳು' ಎಂಬ ಅನುವಾದಿತ ಕವನ ಸಂಕಲನವನ್ನು ಕುರಿತು ಶ್ಯಾಮರಾಯರು ಬರೆದ ಲೇಖನವನ್ನು 'ಶ್ರೀ'ಯವರು ಮೆಚ್ಚಿಕೊಂಡರೆಂದು ಓದಿದಾಗ ಮನಸಿನಲ್ಲಿ ಪುಳಕ ಏಳುತ್ತಿತ್ತು. ಶ್ಯಾಮರಾಯರಿಗಿದ್ದ ಇಂಗ್ಲಿಷ್ ಭಾಷೆಯ ಪ್ರಭುತ್ವದಿಂದ ಅವರಿಗೆ ಕನ್ನಡದ ಹಲವು ಕವನಗಳನ್ನು ಇಂಗ್ಲಿಷಿಗೆ ಅನುವಾದ ಮಾಡಬೇಕು ಎಂಬ ಉತ್ಸಾಹವುಂಟಾಯಿತು. ಈ ಉತ್ಸಾಹಕ್ಕೆ ಎಂ.ಆರ್. ಶ್ರೀನಿವಾಸಮೂರ್ತಿಗಳ ಪ್ರೋತ್ಸಾಹವೂ ಸೇರಿಕೊಂಡಿತು. ಹೀಗೆ ಪ್ರಕಟವಾದ ಅನೇಕ

ಅನುವಾದಗಳು. ಆದರೆ ಅನುವಾದಗಳನ್ನು ಮಾಡುವುದಕ್ಕೆ ಮುಂಚೆಯೇ ಅವರು ಕನ್ನಡ ಸಾಹಿತ್ಯದ ನವೋದಯದ ಬಗ್ಗೆ ಮತ್ತು ಆಗ ಪ್ರಸಿದ್ಧರಾಗಿದ್ದ ಕವಿಗಳ ಬಗ್ಗೆ ಅವರು 'New voice in Kannada poetry' ಎಂಬ ದೀರ್ಘವಾದ ಲೇಖನವೊಂದನ್ನು ರಚಿಸಿದರು. ಇದು ಕೊಲಿಜಿಯಟ್ ಹೈಸ್ಕೂಲಿನ 'School Folk' ಪತ್ರಿಕೆಯಲ್ಲಿ 1928ನೇ ಇಸವಿಯ 'ಫೆಬ್ರವರಿ-ಮಾರ್ಚ್' ತಿಂಗಳ ಸಂಚಿಕೆಗಳಲ್ಲಿ ಎರಡು ಕಂತುಗಳಲ್ಲಿ ಪ್ರಕಟವಾಯಿತು. ಆಗ ಅವರಿಗೆ ಕೇವಲ 22 ವರ್ಷ ವಯಸ್ಸು. ಅಷ್ಟು ಚಿಕ್ಕ ವಯಸ್ಸಿನಲ್ಲಿ ಅವರು ಬರೆದಿರುವ ಲೇಖನದಲ್ಲಿ ಎಷ್ಟು ಪ್ರೌಢಿಮೆ ಇದೆ ಎಂಬುದನ್ನು ಗಮನಿಸಿದರೆ ಆಶ್ಚರ್ಯವುಂಟಾಗುತ್ತದೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕದಲ್ಲಿ ನಡೆದ ಇಂಗ್ಲಿಷ್ ಭಾಷಾ ಸಾಹಿತ್ಯಗಳ ಅಭ್ಯಾಸದಿಂದ ಕನ್ನಡದಲ್ಲಾದ ಎಚ್ಚರವನ್ನು ಅವರು ಗುರುತಿಸಿದ್ದಾರೆ. ಇಂಗ್ಲಿಷ್ ಸಾಹಿತ್ಯದ ತಿಳಿವಳಿಕೆಯಿಂದ ಶಿಕ್ಷಣ ಪಡೆದ ಸುಸಂಸ್ಕೃತ ಯುವಕರಲ್ಲಿ ಕನ್ನಡ ಸಾಹಿತ್ಯದ ಮಹಾ ಕಾವ್ಯಗಳ ಕಡೆಗೆ ಗಮನ ಹರಿಯಿತು. ಅವುಗಳ ಸ್ವಾರಸ್ಯವನ್ನು ಅರಿಯಬೇಕೆಂಬ ಹಾತೊರೆಯುವಿಕೆ ಕಾಣಬಂತು. ಎಸ್.ಜಿ.ನರಸಿಂಹಾಚಾರ್ ಮತ್ತು ಎಂ.ಎ.ರಾಮಾನುಜ ಅಯ್ಯಂಗಾರ್ಯರ ಪ್ರಯತ್ನದಿಂದ ಕಾವ್ಯಮಂಜರಿ (1892-1897) ಅನಂತರ 'ಕಾವ್ಯ ಕಲಾನಿಧಿ' (1899-1916) ಎಂಬ ಮಾಸ ಪತ್ರಿಕೆಗಳಿಂದಾದ ಹಳಗನ್ನಡ ಗ್ರಂಥಗಳ ಪ್ರಕಟಣೆಯ ಪ್ರಾಧಾನ್ಯವನ್ನೂ ಗುರುತಿಸಿ ದ್ದಾರೆ. ನಂದಳಿಕೆಯ ಲಕ್ಷ್ಮೀನಾರಾಯಣಪ್ಪನೆಂಬ ಕವಿ ತನ್ನ ಕೃತಿಗಳನ್ನೇ ಪ್ರಾಚೀನರು ಯಾರೋ ಬರೆದರೆಂದು ಪ್ರಕಟಿಸಿದ ರೀತಿ ಮುದ್ದಣನ ಕೃತಿಗಳಲ್ಲಿರುವ ಸಂವಾದಗಳ ಚಿತ್ರಗಳು, ಲಘು ಹಾಸ್ಯ. ವ್ಯಂಗ್ಯ, ಸರಸ ಶೈಲಿ ಮುಂತಾದವುಗಳ ವಿವರಣೆಯನ್ನು ನೀಡಿದ್ದಾರೆ. ಪ್ರಾಚೀನ ಕವಿಗಳ ಸಂಪ್ರದಾಯಬದ್ಧತೆಯನ್ನು ಎದುರಿಸಿ ಕನ್ನಡ ಸ್ವಂತ ಸಮಾಜದ ವಾಸ್ತವಿಕ ಚಿತ್ರವನ್ನು ಆ ಕವಿಯು ನೀಡಿರುವುದನ್ನೂ ವಿವರಿಸಿದ್ದಾರೆ.

ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಕಂಡ ಸಾಹಿತ್ಯ ಲೋಕದ ಚಟುವಟಿಕೆಗಳನ್ನು ಸೂತ್ರೀಕರಿಸಿ ವಿವರಿಸಿರುವುದು ಕಷ್ಟವೆಂದರೂ ಲೇಖಕರಲ್ಲಿ ವಿಶಾಲ ದೃಷ್ಟಿಯೂ ವಿಶ್ವದ ಎಲ್ಲ ಕಡೆ ನಡೆಯುವ ವ್ಯವಹಾರಗಳ ಬಗ್ಗೆ ಆಸಕ್ತಿಯೂ ಕಾವ್ಯ ರಚನೆಯಲ್ಲಿ ಹೊಸ ಕವನವನ್ನು ಬಯಸುವವರಲ್ಲಿರುವ ಸಂಕೇತವೂ ಕಂಡು ಬರುತ್ತದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಿ ದ್ದಾರೆ. ವಾಸ್ತವಿಕತೆಯ ಕಡೆಗೆ ಲೇಖಕರು ವಾಲುತ್ತಿದ್ದಾರೆ. ಹೊಸ ಆಲೋಚನೆಗಳೂ ಕಲ್ಪನೆ ಗಳೂ ಮೂಡುತ್ತಿವೆ. ಸಂಪ್ರದಾಯದ ಪಾಂಡಿತ್ಯದಿಂದ ಹೊರಬಿದ್ದು ಹೊಸ ಭಾವನೆಗಳ ಕಲ್ಪನೆಗಳ ಚಿತ್ರಣದಲ್ಲಿ ಯುವಕರು ಆಸಕ್ತರಾಗಿದ್ದಾರೆ. ಅವರು ಪ್ರಾಮಾಣಿಕವಾದ ಭಾವನೆ ಗಳನ್ನೂ ಉನ್ನತ ಧ್ಯೇಯಗಳನ್ನೂ ಹೊಂದಿದ್ದಾರೆ. ಇಂಗ್ಲಿಷ್ ಶಿಕ್ಷಣದಿಂದಲೇ ಈ ವ್ಯತ್ಯಾಸ ಗಳಾಗಿವೆ. ಯುವಕರ ಬುದ್ಧಿ ವೈಶಾಲ್ಯವೂ ಸಹನಶೀಲತೆಯೂ ತೌಲನಿಕ ದೃಷ್ಟಿಯೂ ವಿಕಾಸಿಸಿ ಸಾಹಿತ್ಯದಲ್ಲಿ ಸಣ್ಣಕತೆ, ಕಾದಂಬರಿ, ಪ್ರಬಂಧ ವಿಮರ್ಶೆ ಮುಂತಾದ ಪ್ರಕಾರದ ರಚನೆಗಳು ಕಾಣಿಸಿಕೊಳ್ಳುತ್ತವೆ - ಎಂದೆಲ್ಲ ವಿವರಣೆಯನ್ನು ನೀಡಿದ್ದಾರೆ. ಸುಮಾರು ಒಂದು

[illegible] ಈ ಲೇಖನವನ್ನು ನೋಡಿದರೆ ಅವರ ಸಮಕಾಲೀನರು ಎಷ್ಟು ಮಹತ್ವದ [illegible] ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ವ್ಯಾಸಂಗದಿಂದ ಪಕ್ವವಾದ ಬುದ್ಧಿ ಅವರಿಗೆ ಒಂದು ವಿಮರ್ಶಕನ ದೃಷ್ಟಿಯನ್ನು [illegible] [illegible] ವ್ಯಾಸಂಗದಿಂದ [illegible] ಲೇಖನಗಳಲ್ಲಿ [illegible] [illegible] ಅವರ ವೈಯಕ್ತಿಕ ವಿವರಗಳನ್ನೂ ಅವರ ಕೃತಿಗಳ [illegible] ಈ ಮಾಲಿಕೆಯಲ್ಲಿ ಬಿ.ಎಂ.ಶ್ರೀಕಂಠಯ್ಯನವರು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಿ.ವಿ.ಗುಂಡಪ್ಪ, ಆನಂದಕಂದ, [illegible], ಪಂಜೆ ಮಂಗೇಶರಾವ್, ಕಡಂಗೋಡ್ಲು ಶಂಕರಭಟ್ಟ, ಮೊದಲಾದ ಅವರ ಕೃತಿಗಳ ಬಗ್ಗೆ ಕ್ರಮವಾಗಿ ವಿವರಗಳನ್ನೂ ನೀಡಿದ್ದಾರೆ.

'ಶ್ರೀ' ಎಂಬ ಕಾವ್ಯನಾಮದಲ್ಲಿ ಬರೆಯುತ್ತಿದ್ದ ಬಿ.ಎಂ.ಶ್ರೀಕಂಠಯ್ಯನವರೇ ಈ ಕಾಲದ ಮೊದಲ ಕವಿ. ಅವರು ಇಂಗ್ಲಿಷ್ ಭಾಷೆಯಿಂದ ಸುಮಾರು ೬೦ ಕವನಗಳನ್ನು ಅನುವಾದ ಮಾಡಿ ಹೊಸ ಮಾರ್ಗವನ್ನು ತೋರಿಸಿಕೊಟ್ಟರು. ಈ ಅನುವಾದ ಕಾರ್ಯವನ್ನು ಅವರು ಪ್ರಾರಂಭದಲ್ಲಿ [illegible] ಮಾಡಿದರು. [illegible] ನವೋದಯದ ಮುಂದಾಳುಗಳಾದರು.

[illegible] ಅವರಿಂದ ಪ್ರಭಾವಿತರಾಗಿದ್ದಾರೆ. [illegible] ಭಾರತೀಯ ಸಂಸ್ಕೃತಿಯೂ ಇಂಗ್ಲಿಷ್ ಸಂಸ್ಕೃತಿಯೂ ಅವರಲ್ಲಿ [illegible]. ಇಂಗ್ಲೆಂಡ್ ಮತ್ತು ಭಾರತದ ಸಂಸ್ಕೃತಿಯಲ್ಲಿ [illegible] ತಮ್ಮ ಕವನ ಸಂಕಲನವನ್ನು [illegible] 'ಕಾಣಿಕೆ' ಮತ್ತು [illegible] ಎಂಬ [illegible] 'ಇಂಗ್ಲಿಷ್ ಗೀತಗಳು' ಎಂಬ ಗ್ರಂಥವನ್ನು ಇಂಗ್ಲಿಷಿನ 'The lyrical Ballads' ಎಂಬ ಕವನ ಸಂಕಲನಕ್ಕೆ ಹೋಲಿಸಬಹುದು. [illegible]

[illegible] ಕನ್ನಡದಲ್ಲಿ [illegible] (1884) [illegible]

ತುಮಕೂರಿನ ಕೊರೊನೇಷನ್ ಹೈಸ್ಕೂಲಿನಲ್ಲಿ ತೇರ್ಗಡೆಯಾದ ಮೇಲೆ ಶ್ಯಾಮರಾಯರು ಎಫ್.ಎ. ಪರೀಕ್ಷೆಯಲ್ಲಿ ವಿದ್ಯಾಭ್ಯಾಸವನ್ನು ನಿಲ್ಲಿಸಿ ಉಪಾಧ್ಯಾಯ ವೃತ್ತಿಯನ್ನು ಹಿಡಿದರು. ಮೈಸೂರಿನ ಶಾರದಾ ವಿಲಾಸ ಹೈಸ್ಕೂಲಿನಲ್ಲಿ ಅವರು ಕನ್ನಡದ ಬೋಧಕರಾಗಿದ್ದರು. ಆಗ ಅವರಿಗೆ ಬರುತ್ತಿದ್ದುದು 20 ರೂಪಾಯಿಗಳ ಮಾಸಿಕ ಸಂಬಳ. ಇವರ ಜೊತೆಯಲ್ಲಿ ಎಂ.ಎ., ಬಿ.ಎ. ಪದವಿಗಳನ್ನು ಪಡೆದಿದ್ದ ಗರ್ಗೇಶ್ವರಿ ವೆಂಕಟಸುಬ್ಬಯ್ಯನವರೂ ಉಪಾಧ್ಯಾಯರಾಗಿದ್ದರೆಂದು ಅವರೇ ಒಂದು ಕಡೆ ದಾಖಲಿಸಿದ್ದಾರೆ. ಅವರಿಗೆ ಬರುತ್ತಿದ್ದುದು 35 ರೂಪಾಯಿ ಸಂಬಳ. ಹೀಗೆ ಸಂಪಾದನೆ ಕಡಿಮೆಯಾಗಿದ್ದರೂ ಶ್ಯಾಮರಾಯರ ಸಾಹಿತ್ಯಾಸಕ್ತಿ ಕಡಿಮೆಯಾಗಲಿಲ್ಲ. ಕನ್ನಡದಿಂದ ಇಂಗ್ಲಿಷಿಗೆ ಕವನಗಳನ್ನು ಅನುವಾದ ಮಾಡುವುದರಲ್ಲಿ ತುಂಬ ಸಾಮರ್ಥ್ಯವನ್ನು ಗಳಿಸಿದರು. ಅದೇ ಸಮಯದಲ್ಲಿ ಅವರು 'Puttappa and modern kannada poetry' ಎಂಬ ಲೇಖನವನ್ನು ರಚಿಸಿದರು. ಇದು ಅವರು ಹಿಂದೆ ರಚಿಸಿದ್ದ ಇಂಗ್ಲಿಷ್ ಲೇಖನಕ್ಕೆ ಪೂರಕವಾದ ಎರಡನೆಯ ಲೇಖನ. ಅದಕ್ಕೆ ಅನುಬಂಧವಾಗಿ ಶ್ಯಾಮರಾಯರು ಪುಟ್ಟಪ್ಪನವರ ಕವನಗಳನ್ನು ಇಂಗ್ಲಿಷಿಗೆ ಅನುವಾದ ಮಾಡಲು ಪ್ರಾರಂಭಿಸಿದ ಕಾಲದಲ್ಲಿ ಬರೆದಿದ್ದ 'ಮಿಣುಕು ಹುಳುಗಳು' ಎಂಬ ಕವನ ಪುಟ್ಟಪ್ಪನವರಿಗೇ ಕಳುಹಿಸಿ ಅವರ ತಿದ್ದುಪಾಡುಗಳನ್ನು ಕಳುಹಿಸುವಂತೆ ಸೂಚಿಸಿದ್ದರು. ಅವರು ಕೆಲವು ಸಾಲುಗಳನ್ನು ತಾವೇ ಅನುವಾದ ಮಾಡಿದರೂ ಅವುಗಳ ಪಕ್ಕದಲ್ಲಿ 'ಇದೂ ಪಕ್ವವೇ ! ಏನು ಮಾಡೋಣ ?' ಎಂದು ಬರೆದು ಹಿಂದಕ್ಕೆ ಕಳುಹಿಸಿದ್ದರು. ಆ ಪತ್ರದ ನೆರಳಚ್ಚನ್ನು ಶ್ಯಾಮರಾಯರು ಮುದ್ರಿಸಿದ್ದಾರೆ.

ಶಾರದಾ ವಿಲಾಸ ಪ್ರೌಢಶಾಲೆಯಲ್ಲಿ ಶ್ಯಾಮರಾಯರು ವಿದ್ಯಾರ್ಥಿಗಳಿಗೆ ಪ್ರಿಯರಾಗಿ ಅಧ್ಯಾಪಕ ವರ್ಗದೊಡನೆ ಸ್ನೇಹಶೀಲರಾಗಿ ಜನಪ್ರಿಯರಾಗಿದ್ದರು. ಜೀವನದಲ್ಲಿ ಗಾಂಧೀ ತತ್ತ್ವಗಳನ್ನು ಅನುಸರಿಸುತ್ತ ಖಾದಿಧಾರಿಗಳಾಗಿ ಬದುಕಿದರು. ಈ ಸಮಯ ದಲ್ಲಿಯೇ ಪುಟ್ಟಪ್ಪನವರ ಜಿ.ಪಿ.ರಾಜರತ್ನಂ ಅವರ ಪು.ತಿ.ನರಸಿಂಹಾಚಾರ್ಯರ ಬಗ್ಗೆಯೂ ಲೇಖನಗಳನ್ನು ಬರೆದಿದ್ದಾರೆ. ಕವನಗಳನ್ನು ಇಂಗ್ಲಿಷಿಗೆ ಅನುವಾದಿಸಿಯೂ ಇದ್ದಾರೆ. ಈ ಲೇಖನಗಳೆಲ್ಲ ಹೈದರಾಬಾದಿನ ರಾಮಕೋಟೇಶ್ವರ ರಾಯರು ಪ್ರಕಟಿಸುತ್ತಿದ್ದ 'ತ್ರಿವೇಣೀ' ಪತ್ರಿಕೆಯಲ್ಲಿ ಪ್ರಕಟವಾದವು. ಆ ಲೇಖನಗಳ ಬಗ್ಗೆ ಕೆಲವು ವಿವರಗಳನ್ನು ಗಮನಿಸಬಹುದು.

ಪುಟ್ಟಪ್ಪನವರ ಕಾವ್ಯದ ಬಗ್ಗೆ ಶ್ಯಾಮರಾಯರು ಬರೆದಿರುವ ಲೇಖನದಲ್ಲಿ ಪ್ರಾರಂಭದಲ್ಲಿ ಭಾರತದ ಏಳಿಗೆ ಸ್ವಾಮಿ ವಿವೇಕಾನಂದರ, ರವೀಂದ್ರನಾಥ ಠಾಗೋರರ ಬೋಧನೆಯಿಂದಲೂ ಗಾಂಧಿಯವರ ತತ್ತ್ವ ಪ್ರಚಾರದಿಂದಲೂ ಒಂದು ನವೋದಯ ಕಾಣುತ್ತಿದ್ದುದನ್ನು ವಿವರಿಸುತ್ತಾರೆ. ರಾಷ್ಟ್ರೀಯ ಭಾವನೆಯ ವಾತಾವರಣದಲ್ಲಿ ಅನೇಕ ಭಿನ್ನ ಪರೀಕ್ಷೆಗಳ ಕವನಗಳು ಪ್ರಕಟವಾಗುತ್ತಿದ್ದವು. ಕನ್ನಡದಲ್ಲಿ ಶ್ರೀಯವರ 'ಇಂಗ್ಲಿಷ್ ಗೀತಗಳು' ಪ್ರಕಟಣೆಯಿಂದ ಹೊಸ ಹುರುಪು ಉಂಟಾಗಿತ್ತು. ಮೈಸೂರಿನ ಮಹಾರಾಜರ

ಬೆಳೆದ ಹೂವಾಗುವುದಿಲ್ಲ. ಪುಸ್ತಕ ಭಂಡಾರದಿಂದ ಆಯ್ದ ವಸ್ತುಗಳಾಗುತ್ತವೆ. ಕೆಲವು ವೇಳೆ ಆತ್ಮಪ್ರತ್ಯಯದ ಕಾರಣವಾಗಿ ಆತ್ಮವಿಶ್ಲೇಷಣೆಯಿಲ್ಲದೆ ಹೋಗುತ್ತದೆ.

ಪುಟ್ಟಪ್ಪನವರಿಗೆ ಅವರದೇ ಆದ ಸ್ವಂತ ವ್ಯಕ್ತಿತ್ವವಿದೆ. ಅವರಲ್ಲಿ ಕವಿ ಬೇರೆ ವ್ಯಕ್ತಿ ಬೇರೆ ಆಗಿಲ್ಲ. ಅವರ ವ್ಯಕ್ತಿತ್ವದಲ್ಲಿ ಆಕರ್ಷಣೆ ಇದೆ. ಅವರ ವಿನಯದಿಂದ ಅಪರಿಚಿತರನ್ನೂ ಆಕರ್ಷಿಸುತ್ತಾರೆ. ಆದರೆ ಯಾರಿಗೂ ಆ ನಗುಮುಖದ ವ್ಯಕ್ತಿತ್ವದ ಹಿಂದೆ ಇರುವ ಗಾಢ ಶಾಂತತೆಯನ್ನು ಅರಿಯಲಾಗುವುದಿಲ್ಲ.

ಇಂಥ ವಿವರಗಳುಳ್ಳ ಲೇಖನವನ್ನು ರಚಿಸಿದ್ದು 1935ಕ್ಕೆ ಹಿಂದೆ ಎಂಬುದನ್ನು ನೆನಪಿಡಬೇಕು. Rajaratnam the Kannada Poet ಎಂಬುದು ಶ್ಯಾಮರಾಯರ ಮತ್ತೊಂದು ಲೇಖನ. ಇಂಗ್ಲಿಷಿನಲ್ಲಿ ರಚಿತವಾದದ್ದು. ಸುಮಾರು ಮೂವತ್ತು ಪುಟಗಳಷ್ಟು ದೀರ್ಘವಾದ ವಿಮರ್ಶನ ಲೇಖನದಲ್ಲಿ ಶ್ಯಾಮರಾಯರು ಜಿ.ಪಿ. ರಾಜರತ್ನಂ ಅವರ 'ರತ್ನನ ಪದಗಳು' ಕವನ ಸಂಕಲನವನ್ನು ಆಳವಾಗಿ ವಾಚನ ಮಾಡಿದ ಪರಿಣಾಮವಾಗಿ, ಒಂದು ಸುಂದರ ವಿಶ್ಲೇಷಣಾತ್ಮಕ ಮೌಲ್ಯಮಾಪನವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅನೇಕ ಪದಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿ ಅವುಗಳನ್ನು ಉಲ್ಲೇಖಿಸಿ ವಿಮರ್ಶಿಸಿದ್ದಾರೆ. ಇದೊಂದು ಪಾಂಡಿತ್ಯಪೂರ್ಣವಾದ ಕಾರ್ಯ.

ಒಂದು ಸುಂದರ ಹೊಸಗನ್ನಡ ಕಾವ್ಯಕ್ಕೆ ಬೆಳ್ಳಿಯ ಹಬ್ಬದ ಸುವರ್ಣ ಪದಕವನ್ನು ಗಳಿಸಿದ ರಾಜರತ್ನಂ ಅವರು ಇದಕ್ಕಿದ್ದಂತೆ ಗ್ರಾಮ್ಯ ಭಾಷೆಯಲ್ಲಿ ರಚಿತವಾದ ಕಾವ್ಯದ ಮಟ್ಟಕ್ಕೆ ಇಳಿದುದನ್ನು ಕಂಡು ಆಶ್ಚರ್ಯವಾಯಿತು. ಈ ಗ್ರಂಥದ ಭಾಷೆ ಕೇವಲ ಗ್ರಾಮ್ಯವಲ್ಲ. ಅದು ಹೆಂಡ ಕುಡುಕರ ಭಾಷೆ. ಆದರೆ ಗ್ರಂಥದ ಪದಗಳನ್ನು ಓದುತ್ತ ಓದುತ್ತ ಇದು ಕೇವಲ ಓದುಗರನ್ನು ನಗಿಸುವ ಹಾಸ್ಯದ ರಚನೆಯಲ್ಲವೆಂದೂ ಓದುಗರನ್ನು ಚಿಂತನೆಗೆ ಹಚ್ಚುವ ಗಾಂಭೀರ್ಯವುಳ್ಳದ್ದೆಂದೂ ತಿಳಿದು ಬಂತು. ಓದುಗರಿಗಿಂತ ಹೆಚ್ಚು ಸಂಸ್ಕಾರ ಹೊಂದಿದ ಕವಿಯು ತನ್ನ ಪ್ರಪಂಚ ತಂತ್ರಜ್ಞಾನದಿಂದ ಮಾನವ ಅನುಕಂಪವನ್ನೂ ಹಾಸ್ಯವನ್ನೂ ಆನಂದವನ್ನೂ ಅನುಭವಿಸುವವನಾಗಿದ್ದಾನೆ ಎಂಬುದು ಖಚಿತವಾಯಿತು.

ಮೊದಲ ಕವನದಲ್ಲಿ ನಿರಕ್ಷರಕುಕ್ಷಿಯಾದ ಒಬ್ಬ ಕುಡುಕನು ಕುಡಿದ ಅಮಲಿನಲ್ಲಿ ಏನನ್ನೋ ಹಾಡಿಕೊಳ್ಳುತ್ತಾನೆ. ಅದನ್ನು ಹೇಳುವವರಾಗಲಿ ಕೇಳುವವರಾಗಲಿ ಇಲ್ಲದ ಒಬ್ಬ ಹೇಗೆ ಬರವಣಿಗೆಯಲ್ಲಿ ದಾಖಲು ಮಾಡುತ್ತಾನೆ. ವ್ಯಾಸನ ಭಾರತವನ್ನು ಗಣೇಶ ಬರೆದ ಹಾಗೆ! ಆ ಪದಗಳಲ್ಲಿ ಬಡವ ಬಲ್ಲಿದರ ನಡುವಿನ ವ್ಯತ್ಯಾಸದ ಚಿತ್ರಗಳಿವೆ.

ಇವುಗಳನ್ನು ನೋಡುತ್ತ ಹೋದ ಹಾಗೆಲ್ಲ ಶ್ಯಾಮರಾಯರಿಗೆ ರಾಜರತ್ನಂ ಅವರ ಮಾರ್ಗ ಸರಿಯೇ ಎಂಬ ಅನುಮಾನ ಬಂದಿದ್ದು, ಶೋಷಿತರ ಬಗ್ಗೆ ಅನುಕಂಪವಿರಬೇಕಾದದ್ದು ಸರಿಯೇ ! ಶಿವರಾಮ ಕಾರಂತರು ಜೋಮನ ದುಡಿಯಲ್ಲಿ ಮಾನವ

ಅನುಕಂಪವನ್ನು ತೋರಿಸಿಲ್ಲವೆ! ಅದು ಗಾಢವಾದ ಪರಿಣಾಮವನ್ನು ಮಾಡಿ ಶೋಷಣೆಯ ತಪ್ಪನ್ನು ಸ್ಫುಟಿಸಿ ಬಿಡುತ್ತದೆ. ಆದರೆ ರತ್ನನ ಪದಗಳು ಸಂತೋಷವನ್ನುಂಟು ಮಾಡಿ ಉತ್ಸಾಹವನ್ನು ತುಂಬುತ್ತವೆ!

ರಾಜರತ್ನಂ ಯಾವ ಒಂದು ಪೂರ್ವ ನಿಶ್ಚಿತವಾದ ಯೋಜನೆಯನ್ನು ಹಾಕಿಕೊಂಡು ಈ ಪದಗಳನ್ನು ರಚಿಸಲಿಲ್ಲ. ಒಂದು ವಸ್ತುವಿನಿಂದ ಬೇರೆ ವಸ್ತುವಿಗೆ ಹೋಗುತ್ತ ಅವರಿಗೆ ತಮ್ಮ ಪದಗಳ ಅರ್ಥವ್ಯಾಪ್ತಿ ಗೋಚರವಾಯಿತು. ಪ್ರಕೃತಿ ಮತ್ತು ಮಾನವ ಪ್ರಕೃತಿಯನ್ನು ಕುರಿತು ತಮ್ಮ ಚಿಂತನೆಗಳನ್ನು ದಾಖಲಿಸುವುದು ಅವರ ಉದ್ದೇಶವಾಯಿತು.

ಆದರೆ ಈ ಕವನಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯ ಧ್ಯೇಯೋದ್ದೇಶಗಳ ಚಿತ್ರಣದಲ್ಲಿ ಗಾಂಭೀರ್ಯವೂ ತರ್ಕಶುದ್ಧಿಯೂ ಸ್ಪಷ್ಟವಾಗಿ ಗೋಚರಿಸುತ್ತದೆ. ಈಗ ಈ ಪದಗಳು ಕರ್ನಾಟಕದ ಹೆಮ್ಮೆಯ ರಚನೆಗಳಾಗಿವೆ.

ರಾಜರತ್ನಂ ಅವರಿಗೆ 'ಪುಟ್ಟತ್ತಿ' ಎಂಬ ಕವನ ಸಂಕಲನವನ್ನು ರಚಿಸಬೇಕೆಂಬ ಆಸೆಯಿತ್ತಂತೆ. ಅದನ್ನು ಶ್ಯಾಮರಾಯರೆದುರಿಗೆ ಅವರೇ ಹೇಳಿಕೊಂಡಿದ್ದರಂತೆ. ಆದರೆ ಅದೇಕೆ ರೂಪುಗೊಳ್ಳಲಿಲ್ಲವೋ ತಿಳಿಯದು. ಅಂಥ ಒಂದು ಕವನ ಸಂಕಲನ ರಚಿತವಾಗಿ ಇದ್ದರೆ 'ರತ್ನನ ಪದಗಳು' ಗ್ರಂಥಕ್ಕೆ ಒಂದು ಪೂರ್ಣತೆಯನ್ನೂ ಸೌಂದರ್ಯವನ್ನೂ ತಂದು ಕೊಡುತ್ತಿತ್ತು. ರತ್ನನ ಜೀವನದಲ್ಲಿ ಆದ ವಿಯೋಗಕ್ಕೆ ಅದರಿಂದ ಎಂಥ ಸಾಂತ್ವನ ಒದಗುತ್ತಿತ್ತು ಎಂದು ವ್ಯಥೆ ಪಡುತ್ತಾರೆ ಶ್ಯಾಮರಾಯರು.

ರತ್ನನ ಪದಗಳನ್ನು ಪರಿಶೀಲಿಸಿದಾಗ ಅದರಲ್ಲಿರುವ ಗುಣಗಳ ಜೊತೆಯಲ್ಲಿ ಕೆಲವು ಕೊರತೆಗಳೂ ಎದ್ದು ಕಾಣುತ್ತವೆ. ಇವುಗಳಲ್ಲಿ ಸಿರಿವಂತರ ಗಾಂಪತನವನ್ನು ಮಾತ್ರ ಚಿತ್ರಿಸಿದೆ. ಅವರಲ್ಲಿಯೂ ಅನುಕಂಪೆಯುಳ್ಳವರನ್ನೂ ಪ್ರದರ್ಶಿಸಬೇಡವೇ ?

ಗ್ರಾಮ್ಯ ಭಾಷೆಯಲ್ಲಿ ಪ್ರಾಸವನ್ನು ಹೊಂದಿಸುವುದು ಕಠಿಣ. ಆದರೆ ರಾಜರತ್ನಂ ಈ ಕಾರ್ಯವನ್ನು ಸಾಧಿಸಿದ್ದಾರೆ. ಈ ಕವನಗಳಲ್ಲಿರುವ ಆಕರ್ಷಣೆಗೂ ಶಕ್ತಿಗೂ ಅದೇ ಮುಖ್ಯ ಕಾರಣವಾಗಿದೆ. ಗ್ರಾಮ್ಯ ಭಾಷೆಯಾದರೂ ಯಾವೊಂದು ಅಶ್ಲೀಲ ಪದಗಳಾಗಲೀ ಗಾಂಭೀರ್ಯವನ್ನು ಮೀರಿದ ಪದಗಳಾಗಲಿ ನುಸುಳಿಲ್ಲ. ಕನ್ನಡದಲ್ಲಿ ಇಂಥ ಕವನಗಳನ್ನು ಹೋಲಿಸುವುದಕ್ಕೆ ಬೇರೆ ಯಾವುದೂ ಇಲ್ಲ. ಇದೇ ಇದಕ್ಕೆ ಹೋಲಿಕೆ ಅಷ್ಟೆ. ಇಂಗ್ಲಿಷಿನಲ್ಲಿರುವ ಥಾಮಸ್ ಹುಡ್‌ನ 'Biglow Papers' ಅನ್ನು ಹೋಲುತ್ತದೆ ಎನ್ನಬಹುದು.

ರತ್ನನ ಪದಗಳಲ್ಲಿ ವಿರುದ್ಧ ಗುಣಗಳನ್ನು ಜೊತೆ ಜೊತೆಯಲ್ಲಿ ತರಲಾಗಿದೆ - ವಾಸ್ತವಿಕತೆ - ಧ್ಯೇಯವಾದ, ಸರಳತೆ, ಕಲಾ ನೈಪುಣ್ಯ, ಶಬ್ದಜಾಲ, ಸ್ವೋಪಜ್ಞತೆ, ಅಪರಿಚಯ, ಚಿರಪರಿಚಯ ಹೀಗೆ! ಇವುಗಳಿಗೆ ದೃಷ್ಟಾಂತಗಳನ್ನು ತೋರಿಸಬಹುದು.

[illegible]

[illegible] ರಸಾರ್ದ್ರತೆ ಸೇರಿಕೊಂಡಿತು.

[illegible]

[illegible]

ಕನ್ನಡದ ಮಹತ್ವದ ಗಂಡ್ಯ ಕವಿಯಾದ ಪು.ತಿ. ನರಸಿಂಹಾಚಾರ್ಯರ 'ಗಂಧ ಕಣಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿ ಆ ಕವಿಯ ಮಹತ್ವವನ್ನು ಸಾರಿದ್ದಾರೆ. ಅವರ 'ಹಂ' ಎಂಬ ನಾಟಕವನ್ನು ಸಂಕ್ಷೇಪವಾಗಿ ಇಂಗ್ಲಿಷಿಗೆ ಅನುವಾದಿಸಿದ್ದಾರೆ.

ಹೀಗೆ 1931ಕ್ಕೆ ಹಿಂದೆಯೇ ಕನ್ನಡ ಸಾಹಿತ್ಯದಲ್ಲಿ ಆದ ಬದಲಾವಣೆ, ವಿಸ್ತಾರವಾಗಿ ಪ್ರಕಟಿಸುವುದಕ್ಕೆ ಮುಂಚೆಯೇ ಆಧುನಿಕ ಕನ್ನಡ ಸಾಹಿತ್ಯದ ಹಿರಿಮೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದು ತಿಳಿಸಿದರು. ಮತ್ತು ಆಧುನಿಕರನ್ನು ಮೊದಲು ಭಾರತದ ಇತರ ಭಾಷೆಗಳ ಸಾಹಿತಿ ವರ್ಗಕ್ಕೆ ಪರಿಚಯ ಮಾಡಿ ಕೊಟ್ಟ ಶ್ರೀನಿವಾಸ ಅಯ್ಯಂಗಾರರು. ಆದರೆ ಅವರ ಕೃತಿಗಳು ಹಿಂದುಗಳು ಶ್ರೀನಿವಾಸರಂಥವರ ಒಟ್ಟು ಕಾರ್ಯವಾಗಿದೆ ಎಂಬುದರ ಅರಿವೇ ಇಲ್ಲ, ಹಾಗೆ ಅವರ ಲೇಖನಗಳು ಹಳೆಯ ಪತ್ರಿಕೆಗಳಲ್ಲಿ ಧೂಳು ತಿನ್ನುತ್ತ ಕುಳಿತಿವೆ.

ಇಂಥ ಸಮಯದಲ್ಲಿ ಶ್ರೀನಿವಾಸರ ಲೇಖನಗಳನ್ನು ಸಂಗ್ರಹಿಸಿ (1932-1942) New Voices in Kannada poetry ಎಂಬ ಹೆಸರಿನಿಂದ ಶ್ರೀ ಎಂ. ಬಿ. ಸಂಪಾದಿಸಿ ಪ್ರಕಟಿಸಿದ್ದಾರೆ. ಇದು ಓದುಗರಿಗೆ ತುಂಬ ಪ್ರಯೋಜನಕಾರಿಯಾಗಿದೆ.

ಈ ಎಲ್ಲ ಬರಹಗಳಿಗಿಂತಲೂ ಶ್ರೀನಿವಾಸರು ಮೈಸೂರಿನ ಶಾರದಾ ವಿಲಾಸ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿದ್ದ ರಾಮರಾವ್ ಅವರಿಗೆ ಬರೆದಿದ್ದ ಸುಮಾರು ಹತ್ತಕ್ಕೆ 10 ಪತ್ರಗಳನ್ನು ಎಂದು ಹಿಂದೆ ತಿಳಿಸಿದ್ದೇನೆ. ಅವು ಮೂಲತಃ ಇಂಗ್ಲಿಷ್ ನಲ್ಲಿ ಬರೆದ ಪತ್ರಗಳಾದರೂ ಬರಹ ಬೆರಳೆಣಿಕೆಯಷ್ಟಾಗಿ ಕನ್ನಡ ಸಾಹಿತ್ಯದ ಅಗ್ರಮಾನ್ಯರಾಗಿ ಅವರು ನಡೆದು ಬಂದ ಇಂಗ್ಲಿಷ್ ಭಾಷೆಯ ದೇಶೀಯ ಅಭ್ಯಾಸಕರಾಗಿದೆ. ಅವರ ಶತಮಾನದ ಮಹದ್ದೇವ ಸಮೀಪದಲ್ಲಿ ಮೈಸೂರಿನ ವಿಶ್ವವಿದ್ಯಾನಿಲಯದಲ್ಲಿ ಕೂಡ ಕೆಲಸ ಇದ್ದ ಅಧ್ಯಾಪಕರು ಬೆಳ್ಳಾವೆಯವರ ಎಂದು ಕರೆಯಲ್ಪಡುವ ಕೃತಿಯನ್ನು ಬಹುಮಟ್ಟಿಗೆ ಗಮನಿಸಬೇಕು. ಅವರ ಶ್ರೀನಿವಾಸರ ಅನುವಾದಗಳ ಸತ್ವ ಇಂದಿಗೂ ಹೊಸತಾಗಿರುವ ಬಗೆಯನ್ನು ನಾವು ಈ ಅನುವಾದಗಳಿಂದ ಅರಿಯಬಹುದು.

ಅವರ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ವಿಷಯಗಳಿಂದ ಈ ಬರಹವನ್ನು ಪ್ರಾರಂಭಿಸಿದೆ. ಶಾರದಾ ವಿಲಾಸ ವಿದ್ಯಾಸಂಸ್ಥೆಯಲ್ಲಿ ಅವರ ಕಾಲದಲ್ಲಿ ಅಧ್ಯಾಪಕರಿಗೆ ದುಡಿದ ಸಂಬಳಕ್ಕಿಂತ ಹೆಚ್ಚು ಹಣಕ್ಕೆ ಸೇವೆಯನ್ನು ನೀಡುತ್ತಿದ್ದರಷ್ಟೆ! ಇಡೀ ಬಿಡಿ ನಾಮನಿರ್ದೇಶನ ಪತ್ರಕಾರ್ಯಗಳನ್ನು ಬರೆದ ಬಳಿಕ ಶಾಲೆಗಳಲ್ಲಿ ಶ್ರೀನಿವಾಸರಿಗೆ ಇದು ತುಂಬ ಅನ್ಯಾಯದ ಅಧ್ಯಾಪಕ ವೃತ್ತಿಯೆಂದು ಕೇಳಿ ಬಂದು ಎಷ್ಟೋ ಅವರು ಗಾಢ ಅನುಭವವಾಗಿದ್ದವು! ಈ ಬಗ್ಗೆ ಅವರು ಪತ್ರ ಬರೆದು ಶಾಲೆ ಮಂಡಳಿ ನಾಯಕರವನ್ನೇ ಸರಿಯಾದ ಹಣವನ್ನು ಸಲ್ಲಿಸಬೇಕೆಂದು ಒತ್ತಾಯ ಮಾಡಿದರು. ಇದರಿಂದ ಅವಶ್ಯಕರಾದರು

ಅವರಿಗೆ ಕಿರುಕುಳ ಕೊಡಲು ಮೊದಲು ಮಾಡಿದರೆಂದೂ ಅವರು ಬೇಸರಗೊಂಡು ಕೆಲಸಕ್ಕೆ ರಾಜೀನಾಮೆಯನ್ನು ನೀಡಿ ಹೊರ ಬಂದರೆಂದೂ ತಿಳಿದುಬಂದಿದೆ. ಇಂಥ ದೊಡ್ಡ ವಿದ್ವಾಂಸರೂ ಹೀಗೆ ತೊಂದರೆಗೆ ಒಳಗಾದರೆಂಬ ಕತೆ ಬಹು ವ್ಯಥೆಯನ್ನುಂಟುಮಾಡುತ್ತದೆ. ಬಳಿಕ ಶ್ಯಾಮರಾಯರು ಕೆಲವು ಕಾಲ ಗುಬ್ಬಿಯ ಚಿದಂಬರಾಶ್ರಮದಲ್ಲಿದ್ದು ಮುಂದೆ ಕೊಂಗನಹಳ್ಳಿ ಎಂಬ ಊರಿನಲ್ಲಿ ಗ್ರಾಮೋದ್ಧಾರದ ಕಾರ್ಯದಲ್ಲಿ ನಿರತರಾಗಿದ್ದರು. ಹಳ್ಳಿಯ ರಾಜಕೀಯವೂ ನಗರ ರಾಜಕೀಯಕ್ಕಿಂತ ಕಡಿಮೆಯಿಲ್ಲವೆಂಬ ಅನುಭವ ಬಂದು ತಮ್ಮ ಕೊನೆಯ ಕೆಲವು ವರ್ಷಗಳನ್ನು ಬೆಂಗಳೂರಿನ ಜಯನಗರದಲ್ಲಿ ತಮ್ಮ ಸ್ವಂತ ಮನೆಯಲ್ಲಿದ್ದು ಕಳೆದರು. ಜನರ ಜೊತೆ ಹೆಚ್ಚು ಮಿಶ್ರವಾಗುತ್ತಿರಲಿಲ್ಲವಾದುದರಿಂದಲೂ ಹೆಚ್ಚು ಮಾತಿನವರಲ್ಲದುದರಿಂದಲೂ ಅವರಿದ್ದುದು ಸಹಿತ ಹೆಚ್ಚು ಜನಕ್ಕೆ ಗೊತ್ತಿರಲಿಲ್ಲ.

ಶಾರದಾವಿಲಾಸ ಕಾಲೇಜಿನಲ್ಲಿ ಅವರ ಜೊತೆ ಸಹ ಅಧ್ಯಾಪಕರಾಗಿದ್ದ ಗರ್ಗೇಶ್ವರಿ ವೆಂಕಟಸುಬ್ಬಯ್ಯನವರಿಗೂ ಅವರಿಗೂ ಪರಸ್ಪರ ಸ್ನೇಹವಿತ್ತು. ಇಬ್ಬರೂ ಸಮಾನ ಧರ್ಮಿಗಳಾಗಿದ್ದರು. ನಾನು ಒಂದೆರಡು ಸಲ ಗರ್ಗೇಶ್ವರಿಯವರೊಡನೆ ಶ್ಯಾಮರಾಯರನ್ನು ಕಂಡು ಸ್ವಲ್ಪ ಕಾಲ ಮಾತುಕತೆಗಳಲ್ಲಿ ನಿರತನಾಗಿದ್ದುದು ನೆನಪಿಗೆ ಬರುತ್ತದೆ.

ಇಂಥ ಶ್ಯಾಮರಾಯರ 80ನೆಯ ಹುಟ್ಟು ಹಬ್ಬವನ್ನು ಬೆಂಗಳೂರಿನ ನರಸಿಂಹರಾಜ ಕಾಲೋನಿಯ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಆಚರಿಸಿದರು. ಆ ಸಮಯದಲ್ಲಿ ಶ್ರೀಯುತರನ್ನು ಸಾರ್ವಜನಿಕವಾಗಿ ಸನ್ಮಾನ ಮಾಡಲಾಯಿತು. ಈ ಸಮಾರಂಭಕ್ಕೆ ಕುವೆಂಪು ಅವರು ವಿಶೇಷವಾದ ಒಂದು ಸಂದೇಶವನ್ನು ಕಳುಹಿಸಿದ್ದರು. 6-12-2000 ರಂದು ಅವರ 94ನೆಯ ವರ್ಷದಲ್ಲಿ ಅವರು ತೀರಿಕೊಂಡಾಗ ಅದು ಪತ್ರಿಕಾ ವಾರ್ತೆಯಾಗಲಿಲ್ಲ.

ಆಳವಾದ ವಿದ್ವತ್ತಿನಿಂದ ಪ್ರಖರವಾದ ಅಂತರಂಗದ ಬೆಳಕನ್ನು ಹೊಂದಿದ್ದ ಜೀವ ಅನಂತದಲ್ಲಿ ಲೀನವಾಯಿತು.

ಅನುವಾದ ಕುಶಲಿ ಪರಮೇಶ್ವರಭಟ್ಟರು
(1914-2000)

ದಿವಂಗತ ಪರಮೇಶ್ವರ ಭಟ್ಟರನ್ನು ನೆನೆದರೆ ನನಗೆ ವಿದ್ಯಾರ್ಥಿ ದೆಸೆಯಲ್ಲಿ ನಾವು ಮೂರು ಜನ - ದಿವಂಗತ ಪ್ರೊ. ಶಂಕರನಾರಾಯಣರಾಯರೂ ದಿವಂಗತ ಪ್ರೊ ಪರಮೇಶ್ವರ ಭಟ್ಟರೂ ನಾನೂ ಒಡನೆ ಓದಿ, ಒಡನೆ ಆಡಿ, ಒಡನೆ ಬೆಳೆದ ದಿನಗಳು ಮರುಕಳಿಸಿ ದಂತಾಗುತ್ತದೆ. ಆದ್ದರಿಂದ ಆ ದಿನಗಳನ್ನು ಕುರಿತು ಅವರಿಬ್ಬರೂ ಬರೆದಿರುವುದನ್ನು ಓದುಗರ ನೆನಪಿಗೆ ತಂದು ಆ ಬಳಿಕ ನಮ್ಮ ಮಾತುಗಳನ್ನು ಬರಹಕ್ಕೆ ಇಳಿಸುತ್ತೇನೆ.

ಶಂಕರನಾರಾಯಣರಾಯರ ಮಾತು ಹೀಗಿದೆ : ''ವಿದ್ಯಾರ್ಥಿಯಾಗಿದ್ದ ದಿನ ಗಳಿಂದ ಇಂದಿನವರೆಗೆ ಒಂದೇ ಸಮನಾಗಿ ನನ್ನಲ್ಲಿ ವಿಶ್ವಾಸಪಟ್ಟು ಬೆಂಬಲವಾಗಿ ನಿಂತಿರುವ ಇಬ್ಬರು ಆಪ್ತಸ್ನೇಹಿತರಲ್ಲಿ ನನಗಿಂತಲೂ ಹಿರಿಯರಾದ ಜಿ.ವೆಂಕಟಸುಬ್ಬಯ್ಯನವರು ಒಬ್ಬರು. ನನಗಿಂತ ಕಿರಿಯರಾದ ಎಸ್.ವಿ. ಪರಮೇಶ್ವರಭಟ್ಟರು ಮತ್ತೊಬ್ಬರು. ಇವರಿಬ್ಬರ ಹಿರಿಯ ಕಿರಿಯತನದಲ್ಲಿ ಇರುವ ಕಾಲದ ಅಂತರ ಕೇವಲ ಮೂರೇ ಮೂರು ತಿಂಗಳು.''

ಎಸ್.ವಿ. ಪರಮೇಶ್ವರಭಟ್ಟರ ಮಾತು ಹೀಗಿದೆ :

''ಕಾಲೇಜಿನೊಳಗೆನಗೊಬ್ಬಿಬ್ಬರಾದರು
ಪರಮಾಪ್ತರಾಜೀವಸಖರು

ಅಂದಿನಿಂದವರೇಕರೀತಿಯೊಳಿರುವರು
ಬಾಳಿಗೆ ಜೇನೂಡುತಿಹರು

ಒಬ್ಬರು ಶಂಕರನಾರಾಯಣಾಖ್ಯರು
ಪರಮಾಪ್ತರಾದರು ಸಖರು
ದೊರಕಿದರಿನೊಬ್ಬರಂತಹ ಹಿತವರು
ವೆಂಕಟಸುಬ್ಬಯ್ಯನವರು''

ಈ ಇಬ್ಬರ ಮಾತೂ ಅಕ್ಷರಶಃ ಸತ್ಯವಾದುದೆಂಬುದನ್ನು ಅಂದಿನ ನಮ್ಮ ಮೂವರ ಸಮಾನದಾರಿದ್ರ್ಯದ ಮೇಲೆ ಆಣೆಯಿಟ್ಟು ಹೇಳಬಲ್ಲೆ ! ಕಾಸಿಲ್ಲದೆ ಒಂದೊಂದು ದಿನ ಮೂವರು $^1/_3$ ಕಾಫಿಯನ್ನು ಮಾತ್ರ ಕಾಲೇಜಿನ ಹಲ್ತ್ ಕಿಚನ್ನಿನಲ್ಲಿ ಕುಡಿದು ಬಾಯಾರಿಕೆಯನ್ನು ದೂರಮಾಡಿ ಕುಕ್ಕನಹಳ್ಳಿಯ ಕೆರೆಯ ಏರಿಯ ಕಲ್ಲುಬೆಂಚಿನ ಮೇಲೆ ಕುಳಿತು ಕನಸು ಕಂಡದ್ದನ್ನು ನಾನು ನೆನೆಯುತ್ತೇನೆ. ಆಗಿನ ಕಾಲದಲ್ಲಿ ಕನ್ನಡವನ್ನು ವಿದ್ಯಾಭ್ಯಾಸಕ್ಕೆ ಆರಿಸಿಕೊಂಡ ನಮಗೆ ಬೇಕಾದ ಹಳಗನ್ನಡದ ಪಠ್ಯಪುಸ್ತಕಗಳು ದೊರೆಯುತ್ತಿರಲಿಲ್ಲ. ಅವುಗಳನ್ನು ಅಧ್ಯಾಪಕರಿಂದಲೋ ಪುಸ್ತಕ ಭಂಡಾರದಿಂದಲೋ ಎರವಲು ತಂದು ಬರೆದುಕೊಳ್ಳ ಬೇಕಾಗಿತ್ತು. ನಾವು ಮೂವರೂ ಹೀಗೆ ಪಠ್ಯಪುಸ್ತಕಗಳನ್ನು ಪೂರ್ತಿ ಬರೆದುಕೊಂಡದ್ದು ಉಂಟು. ನಮಗೆಲ್ಲರಿಗೂ ಫೀಜು ಮಾಫಿಯಾದುದರಿಂದ ನಾವು ವಿದ್ಯಾಭ್ಯಾಸವನ್ನು ಮುಂದುವರಿಸುವುದು ಸಾಧ್ಯವಾಯಿತು. ನಮ್ಮ ನಡವಳಿಕೆಯಲ್ಲಿ ದೈನ್ಯವೂ ಓಡಾಟದಲ್ಲಿ ಸಂಕೋಚವೂ ಸುವ್ಯಕ್ತವಾಗಿದ್ದು ನಮ್ಮನ್ನು ಕಂಡ ಇತರ ಕ್ಷೇತ್ರಗಳ ವಿದ್ಯಾರ್ಥಿಗಳು ಕನ್ನಡದ ತ್ರಿಮೂರ್ತಿಗಳೆಂದು ಕರೆಯುತ್ತಿದ್ದರು. ಸ್ವಲ್ಪ ಕಾಲ ಕಳೆದ ಬಳಿಕ ಯೂನಿಯನ್ನಿನ ಚರ್ಚಾಕೂಟಗಳಲ್ಲಿ ಭಟ್ಟರೂ ನಾನೂ ಪ್ರತಿಕಕ್ಷಿಗಳಾಗಿ ವಾದಗಳನ್ನು ಹೂಡಿದ ಮೇಲೆ ಇತರ ವಿದ್ಯಾರ್ಥಿಗಳಲ್ಲಿ ನಮ್ಮನ್ನು ಕುರಿತು ಸ್ವಲ್ಪ ವಿಶೇಷವಾದ ವಿಶ್ವಾಸ ಹುಟ್ಟಿಕೊಂಡಿತು. ನಮ್ಮ ನಮ್ಮಲ್ಲಿ ಆತ್ಮವಿಶ್ವಾಸ ತುಂಬಿಕೊಂಡಿತು. ನಮ್ಮ ಅದೃಷ್ಟದಿಂದ ಮಹಾರಾಜಾ ಕಾಲೇಜಿನ ಪುಸ್ತಕ ಭಂಡಾರಿಗಳಾಗಿದ್ದ ಕೃಷ್ಣಗಿರಿ ಕೃಷ್ಣರಾಯರು ನಮಗೆ ಎಷ್ಟು ಪುಸ್ತಕಗಳನ್ನಾದರೂ ಒಟ್ಟಿಗೆ ಎರವಲು ಕೊಟ್ಟು ಪ್ರೋತ್ಸಾಹಿಸಿದರು.

ನಮ್ಮ ಮೂವರಿಗೂ ಸಮಾನವಾದ ಸಾಂಸ್ಕೃತಿಕ ಹಿನ್ನೆಲೆಯಿದ್ದುದು ನಮ್ಮನ್ನು ಹೆಚ್ಚು ಹತ್ತಿರಕ್ಕೆ ತಂದಿತು. ಶಂಕರನಾರಾಯಣರಾಯರಿಗೆ ಅರ್ಚಕರ ವಂಶದ ಹಿನ್ನೆಲೆಯಿತ್ತು, ಭಟ್ಟರಿಗೆ ಯಕ್ಷಗಾನದ ಹಿನ್ನೆಲೆಯಿತ್ತು. ನನಗೆ ನಮ್ಮ ತಂದೆಯವರ ವೇದೋಪನಿಷತ್ತುಗಳ ಮತ್ತು ಪ್ರವಚನೋಪನ್ಯಾಸಗಳ ಹಿನ್ನೆಲೆ ಇತ್ತು. ಇದರಿಂದ ನಮ್ಮ ವ್ಯಾಸಂಗ ಸುಲಭವಾಯಿತು. ನಮ್ಮ ಅಧ್ಯಾಪಕರು ವ್ಯಾಸಂಗದ ಸೂಕ್ಷ್ಮ ಕ್ರಮಗಳನ್ನು ಮನದಟ್ಟು ಮಾಡಿ ಮಾರ್ಗದರ್ಶನ ಮಾಡಿದರು. ವಿದ್ಯಾಭ್ಯಾಸದಲ್ಲಿ ನಮಗೆ ಯಾರಿಗೂ ಯಾವ ತೊಂದರೆಯೂ ಆಗಲಿಲ್ಲ.

ಪರಮೇಶ್ವರ ಭಟ್ಟರು ವರ್ಡ್ಸ್‌ವರ್ತ್ ಕವಿಯ 'ಮೈಕೇಲ್' ಕವನವನ್ನು ಅನುವಾದ ಮಾಡಿ ಬಿ.ಎಂ.ಶ್ರೀಯವರ ಹೆಸರಿನ ಬಂಗಾರದ ಪದಕವನ್ನು ಗೆದ್ದುಕೊಂಡರು. 1934ರ ಸುಮಾರಿಗೆ ಭಟ್ಟರ ಮದುವೆಯಾಗಿ ಅವರು ಸ್ವಂತ ಸಂಸಾರವನ್ನು ಹೂಡಿದರು. ಶ್ರೀಮತಿ ರಾಜಲಕ್ಷ್ಮಿ ಸುಸಂಸ್ಕೃತ ಕುಟುಂಬಕ್ಕೆ ಸೇರಿದ ಹುಡುಗಿ. ಹಾಡುಗಾರಿಕೆಯಿತ್ತು. ಕುಮಾರವ್ಯಾಸ ಭಾರತವನ್ನು ತುಂಬ ಸೊಗಸಾಗಿ ಹಾಡುತ್ತಿದ್ದರು. ಈ ಸಂಸಾರ ನೋಡಿದವರಿಗೆಲ್ಲ ಮೆಚ್ಚಿಕೆಯಾಗಿತ್ತು.

ಕೆಲವು ವರ್ಷಗಳ ಕಾಲ ಈ ಜೋಡಿ ತುಮಕೂರು ಶಿವಮೊಗ್ಗಗಳಲ್ಲಿ ವಾಸಿಸಿ ನೆರೆಹೊರೆಯವರ ಪ್ರೀತಿ ವಿಶ್ವಾಸ ಗೌರವಗಳನ್ನು ಸಂಪಾದನೆ ಮಾಡಿತು. ಶ್ರೀಮತಿ ರಾಜಲಕ್ಷ್ಮಿಗೆ ಮೂರನೆಯ ಹೆರಿಗೆಯಾದ ಬಳಿಕ ಮಾನಸಿಕ ಅನಾರೋಗ್ಯವುಂಟಾಗಿ ಪರಮೇಶ್ವರ ಭಟ್ಟರ ಬಾಳಿಗೆ ದೊಡ್ಡ ಆಘಾತವಾಯಿತು. ಸ್ವಲ್ಪ ಕಾಲ ಸರಿ ಹೋದಂತೆ ಕಂಡರೂ ಅದು ಸರಿಹೋಗಲಿಲ್ಲ. ಮಕ್ಕಳ ಪೋಷಣೆಯೂ ಹೆಂಡತಿಯ ಪೋಷಣೆಯೂ ಭಟ್ಟರೊಬ್ಬರ ಮೇಲೆಯೇ ಬಿದ್ದು ಅವರು ಬಳಲಿ ಹೋದರು. ವ್ಯಾಸಂಗ ಕೃತಿರಚನೆ ಮೂಲೆಗೆ ಬಿದ್ದವು. ಆದರೂ ಈ ಎಲ್ಲ ಸಾಂಸಾರಿಕ ಕ್ಲೇಶಗಳನ್ನು ಪರಮೇಶ್ವರ ಭಟ್ಟರು, ವಿಷವನ್ನು ನುಂಗಿದ ಪರಮೇಶ್ವರನಂತೆ ನುಂಗಿ ಜೀರ್ಣಿಸಿಕೊಂಡು ಬಾಳನ್ನು ಮುಂದುವರಿಸಿದರು. ಈ ಕಾಲದ ತಮ್ಮ ಅನುಭವವನ್ನು ಅವರು ಒಂದು ಸಾಂಗತ್ಯದಲ್ಲಿ ದಾಖಲೆ ಮಾಡಿದ್ದಾರೆ. ಯಮಧರ್ಮನಿಗೆ ವಿಧಿ ಎಂದೂ ಧರ್ಮರಾಜ ಎಂದೂ ಹೆಸರುಗಳಿವೆ. ಅದನ್ನು ನೆನಪಿಟ್ಟು ಈ ಸಾಂಗತ್ಯವನ್ನು ರಚಿಸಿದ್ದಾರೆ.

ಸಂಸಾರದೊರಳಿಗೆ ವಿಧಿ ರುಬ್ಬುಗುಂಡಾಗಿ
ಚಟ್ನಿ ಮಾಡಿದನೆನ್ನ ತಿರುವಿ
ತಿರುವಿದರಿನ್ನಷ್ಟು ಹೋದೀತು ಹಾಳಾಗಿ
ಧರ್ಮನೆ ನೀನೆಂದು ಬರುವಿ (ಇಂದ್ರಗೋಪದ ಸಂಸಾರ ಸಾಗರದಲ್ಲಿ ಪು.12)

ಸಂಸಾರದಲ್ಲಿ ಹಿಂಸೆ ಇದ್ದರೂ ಅಧಿಕಾರದಲ್ಲಿ ಉನ್ನತಿ ಉಂಟಾಯಿತು. ಮಂಗಳೂರಿನಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯ ಸ್ನಾತಕೋತ್ತರ ತರಗತಿಗಳಿಗೆ ಪರಮೇಶ್ವರಭಟ್ಟರು ನಿರ್ದೇಶಕರಾಗಿ ವರ್ಗವಾದರು. ಮಂಗಳೂರಿನಲ್ಲಿ ಅವರೊಬ್ಬರೇ ನಿಂತು ಅವರೆಲ್ಲ ಸಾಹಿತ್ಯ ಸಾಧನೆಗಳನ್ನು ಪೂರೈಸಿದರು. ದಕ್ಷಿಣ ಕನ್ನಡದಲ್ಲಿ ಸ್ಥಗಿತಗೊಂಡಿದ್ದ ಸಾಹಿತ್ಯ ಚಟುವಟಿಕೆಗಳಿಗೆ ಪರಮೇಶ್ವರಭಟ್ಟರು ಚಾಲನೆ ನೀಡಿದರು. ಆಹ್ವಾನ ಮಾಡಿದ ಕಡೆಗಳಿಗೆಲ್ಲ ಹೋಗಿ ಉಪನ್ಯಾಸಮಾಡಿ ಸಾಹಿತ್ಯದ ಕಾರ್ಯಗಳಿಗೆ ಪ್ರೋತ್ಸಾಹ ಮಾಡಿದರು. ಈ ಕಾಲದಲ್ಲಿ ಅವರು ಹೋಗದ ಹಳ್ಳಿಯೇ ಇಲ್ಲ. ದಕ್ಷಿಣ ಕನ್ನಡದಲ್ಲಿ ಬಹುಬೇಗ ಅವರು ದೊಡ್ಡ ವಿದ್ವಾಂಸರೆಂದೂ ಅತ್ಯುತ್ತಮ ಭಾಷಣಕಾರರೆಂದೂ ಪ್ರಸಿದ್ಧಿಪಡೆದರು. ದಕ್ಷಿಣ ಕನ್ನಡದ ಜನ ಅವರನ್ನು ತುಂಬ ಗೌರವದಿಂದ ನಡೆಸಿಕೊಂಡರು. ಇಲ್ಲಿದ್ದಾಗಲೇ ಅವರು ಹಿಂದೆ ಪ್ರಾರಂಭಿಸಿದ್ದ

ಅನುವಾದ ಕಾರ್ಯಗಳು ಮುಂದುವರಿದವು. ಕಾಳಿದಾಸನ ಎಲ್ಲ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಕಾಳಿದಾಸ ಮಹಾಸಂಪುಟವನ್ನು ಪ್ರಕಟಿಸಿದರು. ಮುಂದೆ ಅಶ್ವಘೋಷ, ಭರ್ತೃಹರಿ, ಭಾಸ, ಭವಭೂತಿ, ಹರ್ಷ, ಅಮರುಕ, ಜಯದೇವ, ಮುಂತಾಗಿ ಅನೇಕ ಸಂಸ್ಕೃತ ಕವಿಗಳ ಸಂಪೂರ್ಣ ಕೃತಿಗಳನ್ನು ಅನುವಾದ ಮಾಡಿ ದೊಡ್ಡ ದೊಡ್ಡ ಸಂಪುಟಗಳನ್ನು ಪ್ರಕಟಿಸಿದರು. ಈ ಪ್ರಕಟಣ ಕಾರ್ಯದಲ್ಲಿ ವ್ಯವಹಾರ ಕುಶಲವಿಲ್ಲದ ಕಾರಣ ತೊಡಕಿಗೆ ಸಿಕ್ಕಿಕೊಂಡರು. ಅವರ ಕಥೆಯೇ ಬೇರೆ ಲೇಖನಕ್ಕೆ ವಸ್ತುವಾಗಿದೆ. ಅವರ ದಕ್ಷಿಣ ಕನ್ನಡದ ಶಾರದಾಮುದ್ರಣಾಲಯವೂ ಬ್ಯಾಂಕುಗಳೂ ಅವರ ನೆರವಿಗೆ ಬಂದು ಸಂಕಟದಿಂದ ಅವರನ್ನು ಪಾರು ಮಾಡಿದವು. ದಕ್ಷಿಣ ಕನ್ನಡದಲ್ಲಿ ಅವರ ಶಿಷ್ಯವರ್ಗದ ಸಾವಿರಾರು ಜನ ಅವರನ್ನು ಅಪಾರ ಗೌರವದಿಂದ ಕಾಣುತ್ತಾರೆ. ಕವಿಗಳು, ಗದ್ಯಲೇಖಕರು ಇವರು ರಚಿಸುತ್ತಿದ್ದ ಬರಹವನ್ನು ಕೆಲವರು ಕಟುವಾಗಿ ವಿಮರ್ಶಿಸುತ್ತಿದ್ದರು. ಅದನ್ನು ಗಮನಿಸಿ ಅಂಥವರಿಗೆ ಭಟ್ಟರು ನೀಡಿದ ಬುದ್ಧಿವಾದ ಬಹಳ ಸ್ವಾರಸ್ಯವಾಗಿದೆ.

ಅತ್ತರು ತಿಳಿಯದು ನಕ್ಕರು ತಿಳಿಯದು
ಹಲ್ಲುಬ್ಬಿ ಹೇಗಿದ್ದರೇನು ?
ಪದ್ಯವು ತಿಳಿಯದು ಗದ್ಯವು ತಿಳಿಯದು
ಅರಸಿಕಗೆಂತಿದ್ದರೇನು ?

ಕೆಲವರು ತಮ್ಮ ತಮ್ಮ ಕಾವ್ಯವೇ ಅತಿಶ್ರೇಷ್ಠವೆಂದು ಗುಂಪುಕಟ್ಟಿ ಪ್ರಚಾರ ಮಾಡುತ್ತಿದ್ದರು. ಅವರಿಗೆ ಪರಮೇಶ್ವರ ಭಟ್ಟರ ಸಮಾಧಾನ ಹೀಗಿದೆ :-

ಪ್ರತಿಭೆಯೊಂದಿರಬೇಕು ವ್ಯುತ್ಪನ್ನ ಮತಿಬೇಕು
ಅಭ್ಯಾಸ ಗುರುಸೇವೆ ಬೇಕು
ಈ ಹಳೆಯ ಪಟ್ಟಿಗಿನ್ನೊಂದು ಸೇರಿಸಬೇಕು
ಕವಿಗೆ ಜಾಹಿರಾತು ಬೇಕು.

ದೇವರು ಪರಮೇಶ್ವರಭಟ್ಟರಿಗೆ ವಿನೋದದ ಒಂದು ಅಪೂರ್ವ ದೃಷ್ಟಿಯನ್ನು ಕೊಟ್ಟಿದ್ದಾನೆ. ಅವರು ಆ ಶಕ್ತಿಯನ್ನು ಸದಾ ಎಚ್ಚರಿಕೆಯಿಂದಲೇ ಉಪಯೋಗಿಸುತ್ತಿದ್ದರು. ಆ ಶಕ್ತಿಯಿಲ್ಲದಿದ್ದರೆ ಅವರು ಇಷ್ಟು ದೀರ್ಘಕಾಲ ಬದುಕುವುದು ಸಾಧ್ಯವಾಗುತ್ತಿರಲಿಲ್ಲ. ಅವರ ಜತೆಯಿದ್ದಾಗಲೆಲ್ಲ ಶಂಕರನಾರಾಯಣರಾಯರೂ ನಾನು ಗಂಟೆಗಟ್ಟಲೆ ನಕ್ಕಿದ್ದೇವೆ. ಎಂದೂ ಅವರ ಹಾಸ್ಯ ದೃಷ್ಟಿ ಗೌರವದ ಮಟ್ಟವನ್ನು ಮೀರಲಿಲ್ಲ. ತರಗತಿಗಳನ್ನು ವಿನೋದದ ಲೇಪನದಲ್ಲಿ ಬೇಗ ಸಾಹಿತ್ಯದ ಸೂಕ್ಷ್ಮ ಸ್ವಾರಸ್ಯಗಳನ್ನು ಮನದಟ್ಟುಮಾಡುತ್ತಿದ್ದುದು ಅವರ ಬೋಧನೆಯ ವೈಶಿಷ್ಟ್ಯವಾಗಿತ್ತು. ಅವರ ಭಾಷಣಗಳಲ್ಲಿ ಹಲವು ಸಮಯಾಯಗಳ ಅತ್ಯುಚಿತ ವಿನೋದವನ್ನು ಅವುಗಳ ಸಂದರ್ಭಸಂಪನ್ನತೆಯನ್ನೂ ಅನುಭವಿಸಬಹುದಾಗಿತ್ತು. ಕನ್ನಡ ಸಾಹಿತ್ಯಕ್ಕೆ ದೊಡ್ಡ ಗ್ರಂಥರಾಶಿಯನ್ನು ಬಿಟ್ಟುಹೋಗಿದ್ದಾರೆ ಅವರು. ಧೀರ, ಉದಾತ್ತ,

ಸ್ನೇಹಶೀಲ ವಿದ್ವಾಂಸನ ಬಾಳು ಸಮಾಪ್ತಿಯಾಗಿ ಹೋಯಿತು. ಈ ಸಮಯದಲ್ಲಿ ಅವರೇ ರಚಿಸಿದ ಒಂದು ಸಾಂಗತ್ಯ ಘಟಕ ನೆನಪಿಗೆ ಬರುತ್ತದೆ.

ಎಳೆಕ್ಕಿಕ್ಕೆ ರೆನ್ನನು ತೂಗುವ ಕಾಲದು
ಸಿಲುಕಿ ಸಿಡಿಲ್ಲ ಬಂದೆ
ಎಂತಹ ಜೀವವನೊಯ್ದಿತು ಸಾವೆಂದು
ತಿಳಿಯಲಿ ಲೋಕವು ಮುಂದೆ.

ಅನುಬಂಧ

ಭಟ್ಟರಿಗೆ ಅರವತ್ತು ತುಂಬಿದ ಸಂದರ್ಭದಲ್ಲಿ ಬರೆದ ಲೇಖನ

(ಹಾಸ್ಯದಲ್ಲಿ ಪ್ರಸನ್ನತೆಯನ್ನು ಬಿತ್ತಿಗೊಳಿಸಿದ ಒಂದು ವಿದ್ವಾಂಸ)

ನನ್ನ ಮತ್ತು ಪರಮೇಶ್ವರಭಟ್ಟರ ಮೈತ್ರಿ ಬಹು ಹಳೆಯದು. 1938ರಷ್ಟು ಹಳೆಯದು. ಆ ಕಾಲದಲ್ಲಿ ಮೊಳಕೆಯೊಡೆದ ಅವರ ವಿದ್ವತ್ತಿನ ಚತುರತೆಗಳು ಅವರ ಬರಹದ ಕಳೆದ ಮೂರೂ ಬಂದೇ ರೀತಿಯಲ್ಲಿ ನನ್ನ ಬಾಳನ್ನು ಬೆಳಗಿವೆ. ಈಗ ನೆನೆಸಿಕೊಂಡರೆ ನಾವು ನಮ್ಮ ವಿದ್ಯಾರ್ಥಿ ದೆಸೆಯಲ್ಲಿ ಬರೆಸಿದ್ದು ಪ್ರತಿಯೊಂದು ಅಂದರೂ ಅಂದು ಎಷ್ಟು ಸೋಜಿಗ ಮೂಡಿಸುತ್ತಿತ್ತೋ ಅದಕ್ಕಿಂತ ಹೆಚ್ಚಾಗಿ ಇಂದು ಸಂತೃಪ್ತಿಯನ್ನು ತರುತ್ತಿವೆ. ಬಡತನದ ಆವರಣದಲ್ಲಿ ಬೆಳೆದು ಅನ್ನ ಬಟ್ಟೆಗಳಿಗೆ ಕೂಡ ಇತರರನ್ನೇ ಅವಲಂಬಿಸಬೇಕಾಗಿದ್ದ ಕಾಲದಲ್ಲಿ ಯಾವ ದೈವವು ನಮ್ಮನ್ನು ಕಾಪಾಡಿತೋ ಅದೇ ಇಂದಿಗೂ ನಮ್ಮನ್ನು ರಕ್ಷಿಸುತ್ತಾ ಇದೆ.

ಹಾಗೆ ನೋಡಿದರೆ ನಾವಿಬ್ಬರು ಮಿತ್ರರು ಎನ್ನುವುದಕ್ಕಿಂತ ನಾವು ಮೂವರು ಮಿತ್ರರು ಎನ್ನುವುದೇ ಹೆಚ್ಚು ಸೂಕ್ತ. ಆ ಮೂರನೆಯವರೆ ಪ್ರೊ. ಎಸ್. ಎಂ. ಶಂಕರನಾರಾಯಣ ರಾಯರು. ನಮ್ಮನ್ನು ಅನೇಕ ಬಂದು ವಿದ್ಯಾರ್ಥಿಗಳು ಕನ್ನಡದ ತ್ರಿಮೂರ್ತಿಗಳು ಎಂದು ಹಾಸ್ಯಮಾಡುತ್ತಿದ್ದುದು ಗೊತ್ತಿತ್ತು. ಆದರೆ ನಾವು ಮೂವರೂ ಹಾಗೆ ಬಿರುದನ್ನಾವದೆ ವಿದ್ಯಾವಂತರಾಗಬೇಕೆಂದು ಅರಿತುಕೊಂಡ ಈ ಕನ್ನಡದ ಅಭ್ಯಾಸದಲ್ಲಿ ಇತರರ ಹಾಸ್ಯ ಅವಮಾನಗಳನ್ನೇನೂ ತರಲಿಲ್ಲ. ಅದಕ್ಕೆ ಪ್ರತಿಯಾಗಿ ನಮ್ಮ ಅಭ್ಯಾಸದಲ್ಲಿ ಹೆಚ್ಚು ಆಸಕ್ತಿವಹಿಸುವುದರಲ್ಲಿ ಅದು ಸಹಾಯ ಮಾಡಿತು. ನಾವು ಮೂವರೂ ಒಂದು ಒಪ್ಪಂದಕ್ಕೆ ಬಂದಂತೆ ಕನ್ನಡದ ಕಲಿಕೆಯಲ್ಲಿ ಬಹುಸ್ತರದ ಚೈತನ್ಯವನ್ನು ಬೆಳೆಸಿಕೊಳ್ಳಲು ಪ್ರಯತ್ನಪಡುತ್ತಿದ್ದೆವು. ನಾವು ಮೂವರು ಬಿಟ್ಟಿಗೆ ನೆನೆದ ದಿನವೇ ಇರಲಿಲ್ಲ.

ಪರಮೇಶ್ವರ ಭಟ್ಟರು ನನಗಿಂತ ಒಂದು ವರ್ಷ ಚಿಕ್ಕವರು. ವಯಸ್ಸಿನಲ್ಲಿ ಆದರೆ ಜ್ಞಾನದಲ್ಲಿ ನನಗೆ ಹಿರಿಯರು ದೊಡ್ಡವರು. 'ಬಹುಮುಖಪ್ರತಿಭೆಯುಳ್ಳವರೆಂದು

[illegible] ನಿರತರಾಗಿದ್ದೆವು.

[illegible] ಪಾತ್ರರಾದ ನೆನಪಿದೆ.

[illegible] ನೀಡಿದ್ದೂ ಉಂಟು. ಆದರೆ ನಾಯಿ ಬಾಲ ಡೊಂಕೇ!

[illegible]

ಗುಂಡಪ್ಪನವರು ಅಧ್ಯಕ್ಷರಾಗಿದ್ದರು. ಚರ್ಚೆಯಾದ ಮೇಲೆ ಕೃಷ್ಣಶಾಸ್ತ್ರಿಗಳೂ ಗುಂಡಪ್ಪನವರೂ ನಮ್ಮಿಬ್ಬರನ್ನು ಹತ್ತಿರ ಕರೆದು ಅಭಿನಂದನೆಗಳನ್ನು ನೀಡಿದುದನ್ನು ನಾವು ಹೇಗೆ ತಾನೆ ಮರೆಯಲಾದೀತು. ಅಂದು ಬಿ.ಜಿ.ಎಲ್.ಸ್ವಾಮಿಯವರು ಈ ಕಾರ್ಯಕ್ರಮಗಳ ಕಾರ್ಯದರ್ಶಿಯಾಗಿದ್ದರು. ಅವರು ನಮ್ಮಿಬ್ಬರಿಗೂ ವಿಶೇಷ ಆತಿಥ್ಯನೀಡಿ ಅವರೇ ತಯಾರಿಸಿದ್ದ ಉಮ್ಮರ್ ಖಯ್ಯಾಮನ ಎರಡೆರಡು ಚಿತ್ರಗಳನ್ನು ಉಡುಗೊರೆಯಾಗಿ ನೀಡಿದ್ದರು. ಅವೆರಡು ಇಂದೂ ನನ್ನ ಬಳಿ ಇವೆ. ಭಟ್ಟರು ಏನು ಮಾಡಿದ್ದಾರೋ ತಿಳಿಯದು.

ನಾನು ಸೋಮಾರಿ ; ಭಟ್ಟರು ಸದಾ ಕಾರ್ಯನಿರತರು. ಅದನ್ನು ನೆನೆದರೆ ನನಗೆ ಆಶ್ಚರ್ಯವಾಗುತ್ತದೆ. ಅವರು ಎಷ್ಟು ಗ್ರಂಥಗಳನ್ನು, ಎಷ್ಟು ಅನುವಾದಗಳನ್ನು - ಭಾಸ, ಕಾಳಿದಾಸ, ಭರ್ತೃಹರಿ, ಹಾಲ, ಅಶ್ವಘೋಷ-ಕನ್ನಡಕ್ಕೆ ನೀಡಿದ್ದಾರೆ ! ಇನ್ನೂ ಈ ಬಗೆಯ ಕಾರ್ಯದಲ್ಲಿ ನಿರತರಾಗಿದ್ದಾರೆ. ಆನರ್ಸ್‌ನಲ್ಲಿ ಓದುತ್ತಿದ್ದಾಗ ವರ್ಡ್ಸ್‌ವರ್ತ್ ಕವಿಯ Michael ಕವನವನ್ನು 'ಮಾಚಯ್ಯ' ಎಂಬ ಹೆಸರಿನಲ್ಲಿ ಅನುವಾದಮಾಡಿ ಬಿ.ಎಂ.ಶ್ರೀಯವರ ರಜತೋತ್ಸವ ಸುವರ್ಣಪದಕವನ್ನು ಪಡೆದಂದಿನಿಂದ ಇಲ್ಲಿಯವರೆಗೆ ಒಂದೇ ಸಮನಾದ ಧ್ಯೇಯದಿಂದ ಕಾವ್ಯ ರಚನೆಮಾಡುತ್ತಿದ್ದಾರೆ. ಬಡತನದಿಂದ ಪ್ರೇರಿತರಾಗಿ ಕೃಷ್ಣರಾಜ ಒಡೆಯರ ವರ್ಧಂತ್ಯುತ್ಸವಕ್ಕೆಂದು ಷಟ್ಪದಿ ವೃತ್ತದಲ್ಲಿ ಒಂದು ಶತಕವನ್ನು ರಚಿಸಿ ಮಹಾರಾಜರಿಂದ 50 ರೂಪಾಯಿಗಳ ಬಹುಮಾನವನ್ನು ಪಡೆದ ನೆನಪು ನನಗೆ ಆಗಿಂದಾಗ ಅಂದಿನ ಕಾಲವನ್ನು ಸ್ಮರಣೆಗೆ ತರುತ್ತದೆ. ಭಟ್ಟರು ಕನ್ನಡದ ಬೊಕ್ಕಸವನ್ನು ತುಂಬಿರುವುದನ್ನು ಕುರಿತು ಬೇರೆಯೇ ಬರೆಯಬೇಕೆಂದಿದ್ದೇನೆ.

ಅಧ್ಯಾಪಕರಾಗಿ ಭಟ್ಟರು ಗಳಿಸಿದ ವಿದ್ಯಾರ್ಥಿಗಳ ಪ್ರೇಮವನ್ನು ಅಳೆಯಲಾಗುವುದಿಲ್ಲ. ಅವರ ಸೊಗಸು ಸಂಪನ್ನತೆಗಳನ್ನು ನಾನು ಬಹುಹತ್ತಿರದಿಂದ ನೋಡಿ ಸಂತೋಷಪಟ್ಟಿದ್ದೇನೆ. ಮಂಗಳೂರಿನಲ್ಲಿ ನೆಲೆಸಿದ ಮೇಲೆ ಆ ಜಿಲ್ಲೆಯಲ್ಲಿ ಸುತ್ತಾಡಿ, ಸಾವಿರಾರು ಕಡೆ ಭಾಷಣಮಾಡಿ, "ಭಟ್ಟರದ್ದಲ್ಲದೆ ಭಾಷಣವಿಲ್ಲ" ಎಂಬ ಕೀರ್ತಿಯನ್ನು ಗಳಿಸಿದರು. ಅವರ ಅರವತ್ತನೆಯ ಹುಟ್ಟುಹಬ್ಬಕ್ಕೆ ಮಂಗಳೂರಿನಲ್ಲಿದ್ದು, ಆ ಸಂಭ್ರಮದ ಉತ್ಸವದಲ್ಲಿ ಭಾಗವಹಿಸಿ ಭಾಷಣ ಮಾಡುವ ಸುಯೋಗವು ನನಗೆ ದೊರಕಿತ್ತು. ದಕ್ಷಿಣ ಕನ್ನಡ ಜನರ ಮನವನ್ನು ಹೇಗೆ ಗೆದ್ದಿದ್ದರೆಂಬುದನ್ನು ಅಂದು ಕಾಣಬಹುದಿತ್ತು. ಯಾವುದೋ ಕಾರ್ಯಕ್ಕಾಗಿ ಆವೂರಿಗೆ ಬಂದಿದ್ದ ಮಾಸ್ತಿ, ವಿ.ಸೀ, ರಾಜರತ್ನಂ ಮುಂತಾದ ಹಿರಿಯರೆಲ್ಲ ಆ ಸಭೆಗೆ ಬಂದಿದ್ದರು. ಎಲ್ಲರೂ ಭಟ್ಟರ ಆತ್ಮೀಯವಾದ ಮಾತುಗಳನ್ನು ಕೇಳಿ ಆನಂದಪಟ್ಟರು. ನಾನು ನನ್ನ ಭಾಷಣದಲ್ಲಿ ಮುದ್ದಣನ ಮಾತನ್ನು ನೆನೆದು ಇಂಥ ಕಾರ್ಯಮಾಡಿದ ಕವಿಗೆ "ರನ್ನಗಡಗಮುಂ ಪೊನ್ನಕಂಠಿಕೆಯುಂ ಮೆಚ್ಚು ಕೊಡಬೇಕು. ನನ್ನ ದಾರಿದ್ರ್ಯದಿಂದಾಗಿ ನಾನದನ್ನು ಮಾಡಲಾರೆ, ಪ್ರೀತಿಯಿಂದ ನಾನು ನೀಡುವ ಈ ಜರತಾರಿ ಪಂಚೆಯ ಜೊತೆಯನ್ನು ಸ್ವೀಕರಿಸಬೇಕು" ಎಂದು ಹೇಳಿ ಭಟ್ಟರ ಕೊರಳಿಗೆ ಅದನ್ನು ಹೊದ್ದಿಸಿದಾಗ ಸಭಾಭವನದಲ್ಲಿ ಆದ ಕಿವಿಗಡಚಿಕ್ಕುವ ಚಪ್ಪಾಳೆ ಇಂದಿಗೂ ನನ್ನ ಕಿವಿಗೆ ಕೇಳಿಸುತ್ತಾ ಇದೆ.

ಭಟ್ಟರ ಬಾಳಿನಲ್ಲಿ "ಉದ್ದನೆಯ ಮುಚ್ಚು ಕೊರಳಿನ ಕೋಟಿನ ಕಥೆ" ಬಹು ಪ್ರಧಾನವಾದುದು. ಈ ಕಥೆಯ ಪರಿಣಾಮವಾಗಿ ಭಟ್ಟರ ಎರಡು ವರ್ಷಗಳ ಸೇವೆ ಮೂಲೆಗೆ ಬಿದ್ದು ಅವರು ದಿಕ್ಕೆಟ್ಟಾಗ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರು ಅವರ ಕೈಹಿಡಿದೆತ್ತಿದರು. ಭಟ್ಟರು ಉಳಿದು ಬಾಳುವುದು ಅದರಿಂದ ಸಾಧ್ಯವಾಯಿತು.

ಒಂದು ಮುಖ್ಯವಾದ ವಿಚಾರವನ್ನು ಹೇಳದಿರಲಾರೆ. ಭಟ್ಟರು ವಿವಾಹವಾದಮೇಲೆ ಸಾಂಸಾರಿಕವಾಗಿ ಆ ದಂಪತಿಗಳು ಪಟ್ಟ ಸುಖವನ್ನು ಯಕ್ಷ ದಂಪತಿಗಳ ಸುಖಕ್ಕೆ ಹೋಲಿಸಬಹುದು. ಇದನ್ನು ಹತ್ತಿರದಿಂದ, ನಾವು ದಂಪತಿಗಳು ನೋಡಿ ನಲಿದಿದ್ದೇವೆ. ಯಾವ ದೈವಕ್ರೋಧವೋ! ಅಂಥ ಸಂಸಾರದಲ್ಲಿ ಅನಾರೋಗ್ಯ ಕಾಲಿಟ್ಟಿತು. ಬಾಲ್ಯದಿಂದಲೂ ಭಟ್ಟರು ಬೆಳೆಸಿಕೊಂಡು ಬಂದಿದ್ದ ಅವರ ಹಾಸ್ಯ ದೃಷ್ಟಿ ಅವರನ್ನು ಕಾಪಾಡಿತು. ಬಾಳಿಗೆ ಹೊಕ್ಕ ವಿಷಕೀಟವನ್ನು ಹಾಸ್ಯದ ಅಮೃತವರ್ಷದಿಂದ ಸವಿಕೂಟಮಾಡಿ ಅನೇಕರಿಗೆ ಮಾರ್ಗದರ್ಶಕರಾಗಿ ಬಾಳಿ ಬೆಳಗಿದ ಭಟ್ಟರ ಬದುಕು ಒಂದು ಸಂಕೀರ್ಣ ಕಾದಂಬರಿ. ಈ ಕಾದಂಬರಿಯ ಬಹುಮುಖಗಳನ್ನು ಹತ್ತಿರದಿಂದ ಬಲ್ಲವರು ಹೇಳಬೇಕಾದ್ದು ಬೇಕಾದಷ್ಟಿದೆ!

‘ನೀಲಿಯಾಕಾಶದಲಿ ನಾನೊಂದು ನಕ್ಷತ್ರ’- ಕೆ.ಎಸ್. ನರಸಿಂಹಸ್ವಾಮಿ
(1915-2003)

ಪ್ರಪಂಚದ ಉದ್ದ ಅಗಲಕ್ಕೂ ಪ್ರಣಯವನ್ನು ಕಂಡ ಕವಿ ಮೊನ್ನೆ ತಾನೆ ಇಲ್ಲಿಂದ ಅಗಲಿದ. ಆದರೆ ಎಲ್ಲೆಲ್ಲು ಇರುವ ದಿವ್ಯ ಚೇತನ - ಕೆ.ಎಸ್.ನರಸಿಂಹಸ್ವಾಮಿ. ‘ಮೈಸೂರ ಮಲ್ಲಿಗೆ’ ಪ್ರಕಟವಾದ ಒಂದು ವಾರದಲ್ಲಿ ಕನ್ನಡನಾಡಿನಲ್ಲೆಲ್ಲ ಮನೆಮಾತಾದ ಸರ್ವೋದಯದ ಪುಣ್ಯಫಲ. ಆ ಸನ್ನಿವೇಶದ ಅರುವತ್ತು ವರುಷದ ಬಳಿಕ ಅವರ ನೆನಪಿಗೆ ಅದು ನುಸುಳಿ ಅದರ ಬಗ್ಗೆ ಮತ್ತೊಂದು ಕವನವನ್ನು ರಚಿಸಿದ್ದಾರೆ. ಅದರ ಸೊಗಸನ್ನು ಆ ಕವನದಿಂದಲೇ ಆಸ್ವಾದಿಸಬೇಕು.

ಹೂವಿನಂಗಡಿಯಲ್ಲಿ

ಬಲು ಹಿಂದೆ ರಾಜಧಾನಿಯಲಿ ನಾನೂ ಒಂದು
ಹೂವಿನಂಗಡಿಯ ತೆರೆದಿದ್ದೆ. ಚಂಪಕ ಜಾಜಿ
ಮಲ್ಲಿಗೆ ಗುಲಾಬಿ ಪಾದರಿ ಪಾರಿಜಾತ
ಇವುಗಳದೆ ವ್ಯಾಪಾರ. ಎಲ್ಲ ಸಂಜೆಗಳಲ್ಲಿ
ದೊಡ್ಡ ಪೇಟೆಯ ತುಂಬ ಪರಿಮಳ ಹಬ್ಬುತಿತ್ತು.
ಈ ಹೂವ ವ್ಯಾಪಾರ ಚೆನ್ನಾಗಿ ನಡೆದಿತ್ತು.

ಮಾತಾಡುತ್ತ ಆಡುತ್ತ ಹೂವ ಕಟ್ಟುತ್ತಿದ್ದೆ.
ಮುಡಿಗೆ ಹೋದವು ಕೆಲವು, ಗುಡಿಗೆ ಹೋದವು ಕೆಲವು
ದೊಡ್ಡ ಗಡಿಯಾರದಲಿ ಮುಳ್ಳುಗಳು ಚಲಿಸುವುದ
ನಾನು ನೋಡುತಿದ್ದೆ. ಹೂವಿನ ಮೇಲೆ ಕಣ್ಣು
ಕಾಲದ ಮೇಲೆ ಕಣ್ಣು. ಎಷ್ಟು ಹಣ ಬಂತೆಂದು
ನನ್ನ ಕೇಳಲೆ ಬೇಡಿ, ಕೀರ್ತಿಯಂತೂ ಬಂತು.
ಆ ದಿನದ ಚಲುವ ನೆನದೇನು. ವರ್ಣಿಸಲಾರೆ.
ಪಾರದರ್ಶಕ ರವಿಕೆ ತೊಟ್ಟ ಒಬ್ಬಳು ಒಮ್ಮೆ
ಅಂಗಡಿಗೆ ಬಂದು ಹೂಗಳಲಿ ಕೈ ಆಡುತ್ತ
ವ್ಯಾಪಾರ ಮಾಡಿದಳು. ಅವಳ ಸೌಂದರ್ಯಕ್ಕೆ
ನಾನು ಬೆರಗಾಗಿರಲು, ಬಾಗಿದಂತೆಯೆಮಾಡಿ
ಪಾವಲಿಯನೂ ಕೊಡದೆ ಓಡಿಹೋದಳು ನಗುತ
ಅವಳು ಕೊಟ್ಟದ್ದೇನೋ ನಾನು ಹೇಳುವುದಿಲ್ಲ.
ಅವಳು ಕೊಟ್ಟದ್ದನ್ನು ನಾನು ಮರೆಯುವುದಿಲ್ಲ!
ಕರವಸ್ತ್ರದಿಂದ ಕೆನ್ನಯನೊರಸಿ ಮನೆಯತ್ತ
ಹೆಜ್ಜೆ ಹಾಕಿದೆ ನಾನು ಮುಸ್ಸಂಜೆಯಲ್ಲಿ.

'ಮೈಸೂರ ಮಲ್ಲಿಗೆ'ಯ ಪ್ರಭಾವವನ್ನು ಇದಕ್ಕಿಂತ ಹೆಚ್ಚು ಸೊಗಸಾಗಿ ಗದ್ಯದಲ್ಲಿ ವರ್ಣಿಸುವುದಸಾಧ್ಯ. ಇಂಥ ಕವನದ ಅರ್ಥ ಮೈಸೂರನ್ನು ನೋಡದ, ದೊಡ್ಡ ಪೇಟೆಯನ್ನು ಕಾಣದ, ದೊಡ್ಡ ಗಡಿಯಾರದ ಎತ್ತರವನ್ನು ತಿಳಿಯದ ಓದುಗರಿಗೆ ಸ್ಪಷ್ಟ ಆಗುವುದಿಲ್ಲ. ಆ ಆವರಣದ ಪರಿಚಯವಾದರೆ ಆಗ ಕವನ ಬೆಳ್ಳಂಬೆಳಕು.

ಪ್ರಣಯ ಲೋಕದ ಅನೇಕ ಮೋಹಕ ಚಿತ್ರಗಳನ್ನು ಮೂಡಿಸುವ ಐದು ಕವನ ಸಂಕಲನ ಗಳನ್ನು ಹತ್ತು ವರ್ಷಗಳಲ್ಲಿ ಪ್ರಕಟಪಡಿಸಿದರು ಈ ಕವಿ. ಆ ಸಂಕಲನಗಳಲ್ಲಿ ಕಾಣುವ ಗತಕಾಲದ ಯುವದಂಪತಿಗಳ ಪ್ರೇಮವ್ಯವಹಾರದ ಸೊಗಸಿನಿಂದ ಈ ಕಾಲ ವಂಚಿತವಾಗಿ ಹೋಗಿದೆ.

ಕೋಣೆಯೊಳಗೆ ಬಳೆಯ ಸದ್ದು
ನಗುವರತ್ತೆ ಬಿದ್ದು ಬಿದ್ದು
ಸುಮ್ಮನಿರಲು ಮಾವನವರು
'ಒಳಗೆ ಅಕ್ಕ, ಭಾವನವರು'
ಎಂದು ತುಂಟ ಹುಡುಗನು
ಗುಟ್ಟ ಬಯಲಿಗೆಳೆದನು

* * *

ನಿಮ್ಮ ತುಟಿಗಳಲಿರಲು
ತಾಂಬೂಲರಾಗ
ನನ್ನ ತುಟಿ ಕೆಂಪಾದುದೇ
ಕಿನಿಯ. ಬೇಗ ?

★ ★ ★

ಮೆಲುದನಿಯಲಿ ನಾದಿನಿ ಇಂತೆಂದಳು
'ಪದುಮಳು ಒಳಗಿಲ್ಲ' ನಕ್ಕಳು.
ರಾಯರು ನಗಲಿಲ್ಲ

★ ★ ★

ಈ ಬಗೆಯ ಸಾಲುಗಳು 'ಪ್ರಶ್ನೆಗೆ ಉತ್ತರ', 'ಬೇಕಲ್ಲವೆ ?', 'ತುಂಗಭದ್ರೆ', 'ಮಾಗಿಯ ಮನೆಗೆ ಈ ಹಾಡು', 'ಪ್ರಥಮ ರಾಜನಿಗೆ', 'ಅಕ್ಕಿಯಾರಿಸುವಾಗ' ಮುಂತಾದ ತುಂಬು ರಸವತ್ತಾದ ಕವನಗಳು ಪ್ರಕಟವಾದವು. 'ಶಿಲಾಲತೆ'ಯು ಪ್ರಕಟವಾಗುವ ಹೊತ್ತಿಗೆ ಕೆ.ಎಸ್.ನ. ಅವರ ಶೈಲಿಯಲ್ಲಿ ತುಂಬ ಬದಲಾವಣೆ ಬಂತು. ಆಡುಮಾತನ್ನು ಕಾವ್ಯದೆತ್ತರಕ್ಕೆ ಏರಿಸುವ ಸಾಮರ್ಥ್ಯವನ್ನು ಅವರ ಕವನಗಳಲ್ಲಿ ನಾವು ಅಲ್ಲಿ ಕಾಣಬಹುದು. ಛಂದಸ್ಸಿನ ಹೊಸಹೊಸ ಧ್ವನಿಪೂರ್ಣ ಪ್ರಯೋಗಗಳನ್ನು ಕಂಡರೂ ಕವಿಗೇ ಎಲ್ಲೋ ಒಂದು ಕೊರತೆ ಇರುವ ಭಾವನೆ ಮೂಡಿರುವಂತೆ ಕಂಡುಬರುತ್ತದೆ.

ಇಹದ ಪರಿಮಳವಿರದ ಹಾದಿ ಹಿಡಿದು
ಬದುಕು ದುರ್ಬಲವಾಯಿತು
ಕವಿತೆ ನೀರಸವಾಯಿತು

ಎಂಬಂಥ ಸಾಲುಗಳು ಕಾಣಸಿಗುತ್ತವೆ. ಈ ಬಗೆಯ ಮನಸ್ಸಿಗೆ 'ಇಹ'ದ ತಳಹದಿಯಿಂದ ನಟನ ನರ್ತನವನೇ ಹಂಬಲಿಸಿ ಹಾಡಾಗಬೇಕು' ಎಂಬ ಆಕಾಂಕ್ಷೆ ಕಾಡುತ್ತಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. 'ಮನೆಯಿಂದ ಮನೆಗೆ' ಕವನ ಸಂಕಲನ ಬರುವ ಹೊತ್ತಿಗೆ ಈ ಆಕಾಂಕ್ಷೆಗೆ ಫಲಮೂಡಿದಂತೆ ಕಾಣುತ್ತದೆ. ಅದೇ ಹೆಸರಿನ ಕವನದಲ್ಲಿ ಬರುವ ಈ ಸಾಲುಗಳ ಧ್ವನಿಯನ್ನು ಗಮನಿಸಿ :

ಮನೆಯಿಂದ ಮನೆಗೆ, ಹೊಸಮನೆಯಿಂದ ಹೊಸಮನೆಗೆ
ಮೊದಲ ಮನೆಯಿಂದ
ಅವರವರದ, ಕವಿವರದ, ಸಂಸಾರದ ಇನ್ನೊಂದು ಮನೆಗೆ
ಹೊಸತು ಹಳೆಯದು ಎಲ್ಲಿ ಯಾತ್ರೆ ಹೊರಟಿದ್ದೇವೆ.
ಅಲ್ಲಿ ತಡೆಯುವರಿಲ್ಲ;

ಒಳಗೆ ಕರೆಯುವರಿಲ್ಲ;
ಇನ್ನೊಂದು ಮನೆಯಿಲ್ಲ;
ಹೋದವರು ಹಿಂದಿರುಗಿ ಬರಲು ಹಾದಿಗಳಿಲ್ಲ;
ಅದೇ ಕಡೆಯ ಮನೆ!
ಬಾಂದಳದ ತಾರೆಗಳ ಓರೆಗಣ್ಣಿನ ಕೆಳಗೆ ಆಗಾಗ
ಬೀಸುವುದು ಬಯಲಗಾಳಿ.

ಜೀವನದ ದರ್ಶನದ ಕಡೆಗೆ ಮುಖಮಾಡಿರುವ ಕವಿಗೆ ಬಾಳಿನ ಅನೇಕ ಹೊಸ ಸಮಸ್ಯೆಗಳು ಎದುರಾಗುತ್ತವೆ. ಅವುಗಳ ವಿಶ್ಲೇಷಣೆಗೆ ಅವರು ತೊಡಗುತ್ತಾರೆ.

'ಚರಿತ್ರೆಯ ಪ್ರಶ್ನಪತ್ರಿಕೆ' ಎಂಬ ಒಂದು ಕವನದ ಪ್ರಭಾವ ಬಹುವ್ಯಾಪಕವಾದುದು. ಈ ಕವನದಲ್ಲಿ ಈ ಭೂಮಿಯಲ್ಲಿ ಬಾಳುವ ಮಾನವನ ನಡವಳಿಕೆಯನ್ನು ಒಂದು ಪರೀಕ್ಷೆಯಲ್ಲಿ ಚರಿತ್ರೆಯ ಪ್ರಶ್ನಪತ್ರಿಕೆಗೆ ಉತ್ತರ ಕೊಡುವ ವಿದ್ಯಾರ್ಥಿಗೆ ಹೋಲಿಸಿ, ಪ್ರಭಾವ ಪೂರ್ಣವಾದ ಚಿತ್ರವನ್ನು ಕವಿ ನೀಡಿದ್ದಾರೆ. ಕವನ ಪ್ರಾರಂಭವಾಗುವುದು ಹೀಗೆ :

ಚರಿತ್ರೆಯೋದದ ಹುಡುಗ ಪರೀಕ್ಷಾಭವನದಲ್ಲಿ
ಪತ್ರಿಕೆಯನ್ನು ಹಿಡಿದು ನೋಡಿದ್ದಾನೆ

ಕವನ ಕೊನೆಗೊಳ್ಳುವುದು ಹೀಗೆ :

ಸೊನ್ನೆ ಖಂಡಿತ ನಿನಗೆ ಚರಿತ್ರೆಯಲ್ಲಿ
ಪ್ರಶ್ನಪತ್ರಿಕೆಯ ಇಡು ಜೇಬಿನಲ್ಲಿ

ಈ ಮೊದಲೆರಡು ಕೊನೆಯೆರಡು ಸಾಲುಗಳ ನಡುವೆ ಪ್ರಪಂಚದ ಇತಿಹಾಸದ ಸೂಕ್ಷ್ಮವಾದ ವಿಶ್ಲೇಷಣೆಯಿದೆ. ಒಂದೊಂದು ದೃಷ್ಟಾಂತವನ್ನು ನೋಡುತ್ತ ಮಾನವ ಮಾಡಿರುವ ಆಘಾತಗಳ ಪಟ್ಟಿಯನ್ನೇ ನಮ್ಮ ಕಣ್ಮುಂದೆ ಸುರುಳಿಬಿಚ್ಚುತ್ತಾರೆ ಕವಿ. ಇದು ಪ್ರಜ್ಞಾವಂತನಾದ ಓದುಗನಿಗೆ ಒಂದು ಪರೀಕ್ಷೆ ಇದ್ದಂತೆ ಗೋಚರವಾಗುತ್ತದೆ.

ಮಾನವ ಚರಿತ್ರೆಯ ಏಮಾರು ಬಾಲಕ ವಿದ್ಯಾರ್ಥಿ ಅವನಿಗೆ ಏನೇನೂ ತಿಳಿಯದು. ಶೇಕಡ ಮೂವತ್ತೈದು ಅಂಕಗಳನ್ನು ಪಡೆದು ತೇರ್ಗಡೆಯಾಗುವುದೂ ಕಷ್ಟ. ಅದೂ ಪರೀಕ್ಷಕನ ಕೃಪೆಯಿಂದ ಪಾಸಾಗಬೇಕು. ಮಾನವನ ಚರಿತ್ರೆಯಲ್ಲಿ ಏನೇನು ನಡೆದಿದೆ ? ಈ ಲೋಕದಲ್ಲಿ ಎಲ್ಲ ದೇಶಗಳಲ್ಲಿ ಎಲ್ಲ ಕಾಲಗಳಲ್ಲಿ ಚರಿತ್ರೆಯಲ್ಲಿ ಯಾವುದು ಸತ್ಯ ಯಾವುದು ಸುಳ್ಳು ಎನ್ನುವುದನ್ನು ಹೇಳಲಾರದ ಸ್ಥಿತಿಯಲ್ಲಿ ನಾವಿದ್ದೇವೆ. ಖೂನಿ ಮಾಡಿದ ಅಪರಾಧಿ ತನ್ನ ಸುಳಿವು ಸಿಕ್ಕದಂತೆ ಏನೇನು ಮಾಡಬಹುದೋ ಅದೆಲ್ಲವನ್ನೂ ಮಾಡಿದ್ದಾನೆ. ಇವನ್ನು ಕವಿ 'ಕಳ್ಳಬೆರಳು' ಎನ್ನುತ್ತಾರೆ. ಈ ಕಳ್ಳಬೆರಳು ಚರಿತ್ರೆಯನ್ನು ರಚಿಸಿದ ಲೇಖಕನದು. ಅವನು ಯಾರ ಪರವಹಿಸಿದನೋ, ಆ ವ್ಯಕ್ತಿಯ ಪರವಾಗಿ ಪಂಕ್ತಿಗಳನ್ನು ಬದಲಿಸಿ ಮಾಡಿದ ಚಿತ್ರವನ್ನು

ಜೋಡಿಸಿಬಿಟ್ಟಿದ್ದಾನೆ. ಮುಂದಿನ ತಲೆಮಾರಿನವರು ಇದನ್ನೇ ಓದಿ, ಪಾಠ ಹೇಳಿ, ಪರೀಕ್ಷೆಯಲ್ಲಿ ಬರೆದು, ಕಂಚಿನ ಬೊಂಬೆಯನ್ನು ಮರಳಿನಲ್ಲಿ ತಿಕ್ಕಿತಿಕ್ಕಿ ವಿರೂಪಗೊಳಿಸುವಂತೆ ವ್ಯವಹಾರವನ್ನು ಎಸಗಿದ್ದಾರೆ. ವಿದ್ವಾಂಸರೇನೋ ಆಗಾಗ ಕೆಲವು ವಿಷಯಗಳ ಬಗ್ಗೆ ವಿವರಗಳ ಬಗ್ಗೆ ಅನುಮಾನಗಳನ್ನು ಸೂಚಿಸಿರುವುದುಂಟು. ಆದರೆ ಕೃತ್ರಿಮ ಆಧಾರಗಳು ಅಗಾಧವಾಗಿ ಬೆಳೆಯುತ್ತಿವೆ. ಪ್ರಾಕ್ತನಶಾಸ್ತ್ರದ ಪ್ರಯತ್ನ, ರಾಜಾಧಿರಾಜರ ಬಗೆಗೆ ಉಳಿದಿರುವ ಕಥಾನಕಗಳು, ಅಧಿಕಾರದಾಹದಿಂದ ಚಕ್ರವರ್ತಿಗಳು ನಡೆಸಿದ ಕೊಲೆಗಳು, ಗುಲಾಮರ ಕೈಲಿ ದುಡಿಸಿ ಕಟ್ಟಿಸಿದ ರಾಜರಾಣಿಯರ ಸ್ಮಾರಕ ಮಂದಿರಗಳು ಸತ್ಯವನ್ನು ನುಡಿದ ಶೂಲವೇರಿದ ಯೇಸುವಿನಂಥ ಮಹಾತ್ಮರು - ಇವರೆಲ್ಲರ ಕಥೆಗಳು - ಇವು ಕವನದ ಒಂದೊಂದು ಸಾಲಿನಲ್ಲಿ ಒಂದೊಂದು ಬೃಹದ್ಗ್ರಂಥದ ಅರ್ಥವನ್ನು ಸೃಷ್ಟಿಸಿ ಓದುಗನ ಮೇಲೆ ತೀವ್ರಗಾಢವಾದ ಪರಿಣಾಮವನ್ನು ಉಂಟುಮಾಡುತ್ತವೆ. ಈ ಕವನವನ್ನು ಓದುವ ಈಗಿನ ಮಾನವ ಈ ಎಲ್ಲ ಪ್ರಾಚೀನ ಕವನ ಪರಂಪರೆಗೆ ಹಕ್ಕುದಾರನೂ ಅದರ ಪರಿಣಾಮಕ್ಕೆ ಬಾಧ್ಯನೂ ಆಗಿ ಕಕ್ಕಾಬಿಕ್ಕಿಯಾಗುತ್ತಾನೆ. ಒಬ್ಬ ವ್ಯಕ್ತಿಯ ಮೇಲೆ ಬೀಳುವ ಈ ಪರಿಣಾಮದ ಆಘಾತ ಅಪಾರ. ಅಂತರಾರ್ಥವನ್ನು ಅರಿಯುವ ಅಳೆಯುವ ಓದುಗ ತನ್ನ ಸ್ಥಿತಿಯನ್ನು ಅರಿತು ಇಂದಿನ ಜನರ ಗತಿಯನ್ನು ಭಾವಿಸಿಕೊಂಡು ಚಿಂತಾಮಗ್ನನಾಗುತ್ತಾನೆ. ಕವಿ ಹೇಳುತ್ತಾರೆ :-

ನಿನಗಿಷ್ಟವಿಲ್ಲದೆಷ್ಟೋ ಕೆಲಸ ನಡೆದಿತ್ತು ತೊಟ್ಟಿಲಿಕ್ಕುವ
ಮೊದಲೆ ನಿನಗೆ !
ನೀನಲ್ಲ ಈ ನೆಲದ ಮೊದಲ ಬದುಕು ;
ನೀನಲ್ಲ ಈ ಜಗದ ಕಪ್ಪು ಹಲಗೆಯ ಮೇಲೆ ಬರೆದ ಮೊದಲಕ್ಷರದ
ಮೊದಲ ಹಾಡು ;
ನೀನು ಹುಟ್ಟುವ ಮೊದಲೆ
ಬಿರುಗಾಳಿ ಬೀಳಿಸಿದ ಹೆಮ್ಮರದ ಕೆಳಗೆ
ಹಸಿರುನೆತ್ತರ ಗರಿಕೆ ಬಯಲ ತುಂಬ
ಹುಚ್ಚು ಮಳೆಯೊಳಗೆ ಮೈ ತೊಳೆವ ಹಸಿರೆಲೆಗಿಂತ ಹೆಚ್ಚಿಲ್ಲ ನಿನ್ನ
ಹಿರಿಮೆ
ಪ್ರಶ್ನಿಸುವ ಅಧಿಕಾರವಿಲ್ಲ ನಿನಗೆ.
ಹಾಳೂರ ಕೋಟೆಗಳ ಕಲ್ಲನೊಂದೊಂದಾಗಿ
ಕಿತ್ತು ಸಾಗಿಸಿ ನೀನು ಕಟ್ಟಿದ ಮನೆಯೊಳಗೆ
ನೆಲಸಿದ ಚರಿತ್ರೆ. ನೀನಲ್ಲಗಳೆದರು ಸರಿಯೆ.
ಚರಿತ್ರೆಯೊಡಲು ಉದಾರ
ನೀನು ಸಣ್ಣ ವಿಚಾರ

> ಸೊನ್ನೆ ನಿನಗೆ ಖಂಡಿತ ಚರಿತ್ರೆಯಲ್ಲಿ
> ಪ್ರಶ್ನಪತ್ರಿಕೆಯನ್ನು ಇಡು ಜೇಬಿನಲ್ಲಿ

ಹೀಗೆ ಬದುಕನ್ನೂ ವಿದ್ಯಾಭ್ಯಾಸ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶಬ್ದಗಳನ್ನೂ ರೂಪಕಗಳನ್ನೂ ಬಳಸುತ್ತ ಕವಿ ಮಾನವ ಎಷ್ಟು ಅಸಮರ್ಥನಾಗಿದ್ದಾನೆ - ಈ ಪರಸ್ಪರ ವಿರುದ್ಧಶಕ್ತಿಗಳ ಹೋರಾಟದಲ್ಲಿ ಎನ್ನುವ ಸತ್ಯವನ್ನು ಸ್ಪಷ್ಟಪಡಿಸಿ ಸಿದ್ಧಾಂತಕ್ಕೆ ಮುಟ್ಟುವಂತೆ ನುಡಿಯುತ್ತಾರೆ- ಚರಿತ್ರೆಯೊಡಲು ಉದಾರ, ನೀನು ಸಣ್ಣ ವಿಚಾರ. ಆದುದರಿಂದ ನಿನ್ನೊಬ್ಬನಿಂದ ಯಾವ ಮಹಾ ಘಟನೆಯೂ ಸಾಧ್ಯವಿಲ್ಲ. ನಿನಗೆ ಅಪಾರ ಜನಶಕ್ತಿ, ಧನಶಕ್ತಿ ಇವುಗಳನ್ನು ಒದಗಿಸುವ ದೇಶಕಾಲಗಳ ಅವಕಾಶ ಮುಂತಾದುವನ್ನು ನೀನು ತಿಳಿಯಬೇಕು ಎನ್ನುತ್ತಾರೆ. ಆದುದರಿಂದಲೇ

> ಸೊನ್ನೆ ನಿನಗೆ ಖಂಡಿತ ಚರಿತ್ರೆಯಲ್ಲಿ
> ಪ್ರಶ್ನಪತ್ರಿಕೆಯನ್ನು ಇಡು ಜೇಬಿನಲ್ಲಿ

ಪರೀಕ್ಷಾಭವನದಲ್ಲಿ ಪ್ರಶ್ನಪತ್ರಿಕೆಯನ್ನು ಜೇಬಿನಲ್ಲಿ ಇಟ್ಟು ಮಾಡುವ ಮುಂದಿನ ಕೆಲಸವಾವುದು. ಪರೀಕ್ಷಾಭವನವನ್ನು ಬಿಟ್ಟು ಹೊರಗೆ ಹೋಗುವುದು. ಮಾನವನಿಗೂ ಅದೇ ಗತಿ, ಬಾಳಿನಲ್ಲಿ ಸೊನ್ನೆ ಪಡೆದು ಹೆಸರು ಬಿಡದೆ ಮರೆಯಾಗುವುದು. ಇದು ಜೀವನ. ಇಂಥ ಜೀವನವನ್ನು ಪ್ರಭಾವಪೂರ್ಣವಾಗಿ ಚಿತ್ರಿಸುವ ಕವನ ಇದು - ಓದಿದಷ್ಟೂ ಹೆಚ್ಚು ಅರ್ಥವನ್ನು ಬಿಟ್ಟುಕೊಡುವ ಕವನ.

ಓದಿದ ಉದ್ಗ್ರಂಥಗಳ ಲೇಖಕರ ಬಗ್ಗೆ ಕವಿ ಕೆ.ಎಸ್.ನ. ತಿಳಿಸುವ ಸ್ವಂತ ಅಭಿಪ್ರಾಯಗಳು ತುಂಬ ಸ್ವಾರಸ್ಯಪೂರ್ಣವಾಗಿರುತ್ತವೆ. ಪ್ರೊ.ಕೃಷ್ಣಶಾಸ್ತ್ರಿಗಳ ವಚನ ಭಾರತವನ್ನು ಈ ಕವಿ ಓದಿದುದು ಆಸ್ಪತ್ರೆಯಲ್ಲಿ ರೋಗಿಯಾಗಿ ಮಲಗಿದ್ದಾಗ. ಆಸ್ಪತ್ರೆಯ ವ್ಯವಹಾರವನ್ನೂ ಭಾರತದ ಓದನ್ನೂ ಸಮಸಮವಾಗಿ ಹೊಂದಿಸಿ ಆ ಗ್ರಂಥವನ್ನು ಓದಿ ಪೂರೈಸಿದರು. ಆ ಬಳಿಕ ಅದರ ಬಗ್ಗೆ ಹೀಗೆ ಕವನಿಸಿದರು :-

> ನನಗೆ ಒಂದೇ ಪ್ರಶ್ನೆ : ಶಾಸ್ತ್ರಿಗಳು ಕವಿಗಳೆ ?
> ಹುತ್ತವನು ಕೆದಕಿ ಹಾವಿನ ಹೆಡೆಯ ಹಿಡಿದಂತೆ
> ಉತ್ತರದ ಹಾದಿ. ಬ್ಲ್ಯಾಂಕ್ ವರ್ಸಿನಲಿ ಭಾರತದ
> ಕಥೆಯ ಬರೆದವರೆಲ್ಲ ಕವಿಗಳೇ ಎನಬಹುದೆ ?
> ದೇವರನು ಬೆಳಗಿ ತೊಳೆವಂತೆ, ಕನ್ನಡ ನುಡಿಯ
> ನಾನೂರು ಪುಟದ ನವರತ್ನ ಸೀಮೆಗಳಲ್ಲಿ
> ಭಾರತದ ಕಥೆಯನರಳಿಸಿದ ಬೆರಳಿಗೆ ಬಂದ
> ಧನ್ಯತೆಗೆ ಮಾತ್ರ ಕೈಮುಗಿವುದೇ ಉತ್ತರಂ.

ಪದಪಂಕ್ತಿ ಪುಟ ಪರ್ವ ಯಜ್ಞಾಶ್ವ ಗಮನದಲಿ
ಕಾಣುವುದು ಕೃಷ್ಣಶಾಸ್ತ್ರಿಗಳಪೂರ್ವ ಸಾಹಸಂ ;
ಗೆದ್ದವರು [illegible]ವರು, ಸೋತವರು [illegible]
ಗೆದ್ದವರು ಇಲ್ಲಿ ಶಾಸ್ತ್ರಿಗಳು. ಕವಿಗಳ ಹಿಡಿದು
ಕವಿತೆಯಲಿ ನಿಲಿಸಿ ಹರಸುವ ಕೈಗೆ ತಲೆಬಾಗಿ
ಒಪ್ಪಿಸುವೆಸಿದನು ; ಇದು ಪದ್ಯವೇ ಗದ್ಯವೇ
ಎಂಬ ಸಂಶಯ ಮಾತ್ರ ಉಳಿದಿರಲಿ ನನಗೆ.

ಸ್ವೀಕರಿಸಿದ ಮಾತುಗಳನ್ನು ಸ್ಪಷ್ಟವಾಗಿ ಪ್ರಕಟಿಸಿ, ತಮಗೆ ನಾಡಿನಲ್ಲೆಲ್ಲ ಕೀರ್ತಿಯನ್ನು ತಂದಿತ್ತ ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳಿಗೆ ಕೆ.ಎಸ್.ನ. ವಂದನೆಯನ್ನು ಸಲ್ಲಿಸುವ ರೀತಿ ಇದು.

'ಮನೆಯಿಂದ ಮನೆಗೆ' ಪ್ರಕಟವಾದ ಮೇಲೆ ನರಸಿಂಹಸ್ವಾಮಿಯವರು ಆಗಿಂದಾಗ ಕವನಗಳನ್ನು ರಚಿಸುತ್ತಿದ್ದರೂ ಅವು ಪುಸ್ತಕ ರೂಪದಲ್ಲಿ ಪ್ರಕಟವಾಗಲಿಲ್ಲ. ಸುಮಾರು 19 ವರ್ಷಗಳ ಕಾಲ (1960–1979) ಅವರ ಕಾವ್ಯ ರಚನೆಗೆ ಗ್ರಹಣ ಹಿಡಿದಿತ್ತು. ಇದಕ್ಕೆ ಸಾಂಸಾರಿಕವಾದ ಹಲವು ತೊಂದರೆ ಇದ್ದರೂ ಅದು ಸ್ಪಷ್ಟವಾಗಿ ತಿಳಿಯದು. ಅವರ ಎರಡನೆಯ ಕವನ ಸಂಕಲನವಾದ 'ತೆರೆದ ಬಾಗಿಲು' ಪ್ರಕಟವಾದದ್ದು 1979ರಲ್ಲಿ. ಆದರೆ ಈ ಎರಡು ದಶಕಗಳಲ್ಲಿ ನರಸಿಂಹಸ್ವಾಮಿಯವರ ಹಿಂದೆ ರಚಿಸಿದ್ದ ಕವನಗಳೇ ಬೇಕಾದಷ್ಟು ವಾದ ಸಂವಾದ ವಿವಾದಗಳಿಗೆ ಒಳಗಾಗಿದ್ದವು. ನವ್ಯರ ಮೂದಲಿಕೆಗೆ ಅವರು ಉತ್ತರ ಕೊಟ್ಟಾಗಿತ್ತು. ಅವರಿಗೆ ಪ್ರಶ್ನೆಯ ಪರಾಕು ಕವನಕ್ಕೆ ಉತ್ತರ ದೊರಕಿತ್ತು. ನವ್ಯರ ಆಹ್ವಾನಕ್ಕೆ ಉತ್ತರವಾದ ಕವನ ಗಡಿಯಾರದಂಗಡಿಯ ಮುಂದೆ ರಚಿತವಾಗಿತ್ತು. ಆ ಕವನವು ಗಡಿಯಾರಕ್ಕೆ ಕೊಟ್ಟ ಪ್ರಾರ್ಥನೆಯ ಪರಿಣಾಮವಾಗಿ ಅದು ಕಾಲವನ್ನು ಕುರಿತ ವಿಶ್ಲೇಷಣೆ ಎಂಬ ತೀರ್ಮಾನವಾಗಿ ಕೆಲವರು ಆ ಕವನದ ಅರ್ಥವಿವರಣೆಗೆ ಪ್ರಯತ್ನ ಪಟ್ಟರೂ ಅಸ್ಪಷ್ಟವಾದ ಕವನಕ್ಕೆ ಅಸ್ಪಷ್ಟವಾದ ವಿವರಣೆಯನ್ನು ನೀಡಿದರು. ಆದರೆ ಆ ಕವನವು ಇಂದಿಗೂ ಓದುಗರಿಗೆ ಒಂದು ಆಹ್ವಾನವಾಗಿಯೇ ಉಳಿದಿದೆ. ಹೀಗಾಗಿ ನರಸಿಂಹಸ್ವಾಮಿಯವರು ಮತ್ತೊಂದು ಸಂಕಲನವನ್ನು ಪ್ರಕಟಿಸದಿದ್ದರೂ ಜೀವಂತ ಪ್ರಭಾವವಾಗಿಯೇ ಇದ್ದರು. **ತೆರೆದ ಬಾಗಿಲು** ಪ್ರಕಟವಾದ ಮೇಲೆ ಅದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವು ದೊರಕಿ ಆ ಗ್ರಂಥವು ಓದುಗರ ಕುತೂಹಲವನ್ನು ಕೆರಳಿಸಿತು. ಗಡಿಯಾರದಂಗಡಿಯಲ್ಲಿರುವ ಸಂಕೀರ್ಣತೆಯ ಪ್ರಭಾವ ಈ ತೆರೆದ ಬಾಗಿಲು ಎಂಬ ಕವನದಲ್ಲಿಯೂ ಇಲ್ಲದೆ ಇಲ್ಲ. ಇಲ್ಲಿ ಮಾಟ್ಟಿಕಾವ್ಯಗಳ ಪ್ರಭಾವ ಕವನದ ಮೇಲೆಯೇ ಇದೆ ವಿಚಿತ್ರ ಅನುಭವದ ಸೃಷ್ಟಿ ಈ ಕವನದಲ್ಲಿದೆ. ಈ ಕವನದ ಬಗ್ಗೆ ಕವಿಗಳೇ ಕೊಡುವ ಸೂಚನೆ ಕೂಡ ಅಲ್ಲೇ ಅಡಗಿದೆ.

ಇಲ್ಲುಂಟು ಅಗೆವ ಬುದ್ಧಿಗನಂತ ಅವಕಾಶ
ಹೊಳೆದದ್ದು ತಾರೆ, ಉಳಿದದ್ದು ಆಕಾಶ.

ಈ ಸಂಕಲನದಲ್ಲಿರುವ 'ರೈಲ್ವೆ ನಿಲ್ದಾಣದಲ್ಲಿ' ಕಾಣುವ ಪ್ರಶ್ನೆ-ಉತ್ತರಗಳ ಕಥೆಯಿಂದ ಸ್ಪಷ್ಟವಾಗುವ ಸಾಂಸಾರಿಕ ಭಾವತೀವ್ರತೆ, ಆತ್ಮೀಯತೆಗಳ ಸಂಬಂಧ ತುಂಬ ಅಪೂರ್ವವಾಗಿದೆ. ನರಸಿಂಹಸ್ವಾಮಿಗಳ ಕಾವ್ಯಗುಚ್ಛಗಳಲ್ಲಿ 'ತೆರೆದ ಬಾಗಿಲು' ಬಹು ಪ್ರಧಾನವಾದ ಕೃತಿಯಾಗಿ ಉಳಿದಿದೆ ಈಗಲೂ. ಈ ಕವನ ಸಂಕಲನ ಬಂದ ಮೇಲೆ ಈವರೆಗೆ ಪ್ರೇಮಕವಿ, ಭಾವಗೀತೆಗಳ ಕವಿ ಆಗಿದ್ದ ನರಸಿಂಹಸ್ವಾಮಿಯವರು ವ್ಯಂಗ್ಯ, ಹಾಸ್ಯ, ಅಧ್ಯಾತ್ಮ, ದಿವ್ಯತೆ, ಸಾಮಾಜಿಕ ನ್ಯಾಯ ಮುಂತಾದವುಗಳಲ್ಲಿಯೂ ಸಾಕಷ್ಟು ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂಬುದು ರುಜುವಾತಾಯಿತು. ಜನತೆ ಅವರ ಕಾವ್ಯಕ್ಕೆ ಹೆಚ್ಚು ಒಲಿಯಿತು. ಪ್ರಶಸ್ತಿಗಳ ಮೇಲೆ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದವು. ಜನಪ್ರಿಯತೆಗೆ ಸೀಮೆ ಸಾಲದಾಯಿತು. ಆದರೆ ಅವರ ಆರೋಗ್ಯ ಹಿಂದೆ ಸರಿದು ಸೋಲು ಸ್ವಲ್ಪ ತೊಂದರೆ ಕೊಟ್ಟಿತು. ಆಗಲೇ ಅವರು ಹೇಳಿದ್ದು ಅವರ ನಂಬಿಕೆಯನ್ನು ಕುರಿತ ಮಾತು.

ಹೊರಗಣ್ಣು ಮುಚ್ಚಿದರೆ ಒಳಗಣ್ಣು ತೆರೆಯುವುದು
ಕಾಣುವುದು ಎಲ್ಲೆಲ್ಲು ವಿಶ್ವರೂಪ
ಕಷ್ಟದಲಿ ಸೀನೆನ್ನ ಕೈಬಿಟ್ಟೆಯೆನ್ನದೆಯ
ಭಜಿಸುವೆನು, ನನಗಿಲ್ಲ ಇಷ್ಟು ಕೋಪ.
ಕೊನೆಯಿರದ ದಾರಿಯಲಿ ನಾನು ಮುಂಬರಿಯುತ್ತ
ನಿನ್ನ ನೆನೆಯುತ್ತೇನೆ ಭಕ್ತಿಯಲ್ಲಿ
ನಿನ್ನೊಲವು ನನ್ನ ಸಂರಕ್ಷಿಸುತ ಬರುತಿಹುದು
ನನಗೆ ನಂಬಿಕೆ ನಿನ್ನ ಶಕ್ತಿಯಲ್ಲಿ.

ದೈಹಿಕವಾಗಿ ದುರ್ಬಲವಾದರೂ ನರಸಿಂಹಸ್ವಾಮಿಯವರ ಬೌದ್ಧಿಕ ಸಾಮರ್ಥ್ಯ ಅವರನ್ನು ಕೊನೆಯತನಕ ಕೈಬಿಡಲಿಲ್ಲ. ಮನಸ್ಸು, ಬುದ್ಧಿಗಳೆರಡೂ ಸಮತೂಕವಾಗಿ ಸಶಕ್ತವಾಗಿಯೇ ಇದ್ದುವು. ಈ ಕೊನೆಯ ಮೂರು ವರ್ಷಗಳಲ್ಲಿ ಅವರು ಐದು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ ಎನ್ನುವುದು ಆಶ್ಚರ್ಯಕರವಾಗಿದೆ. ಈ ಸಮಯದಲ್ಲಿಯೂ ಅವರನ್ನು ಹಿಂದೆ ಹಾಸ್ಯಮಾಡಿದ್ದ ಗೋಪಾಲಕೃಷ್ಣ ಅಡಿಗರ ಕವನ 'ಪುಷ್ಪಕವಿಯ ಪರಾಕು' ನೆನಪನ್ನು ಎಲ್ಲೋ ಕುಕ್ಕಿರಬೇಕು. ಅವರು ಈಗ ಅದನ್ನು ನೆನೆದು ಒಂದು ಕವನವನ್ನು ರಚಿಸಿದ್ದಾರೆ.

ಅಡಿಗರ ಮಾತು

ಗೋಪಾಲಕೃಷ್ಣ ಅಡಿಗರು ಒಮ್ಮೆ ಹೇಳಿದರು
ನನ್ನ ಅನುಭವವೆ ತೆಳುವೆಂದು : ಒಪ್ಪುತ್ತೇನೆ.
ಅವರವರ ಪ್ರತಿಭೆ ಅವರವರದಾಗಿರುವಾಗ
ನನ್ನ ದನಿ ಅಡಿಗರದು ಎಂತು ಆದೀತು, ಬಿಡಿ.

ಅವರ ದನಿ ಯಕ್ಷಗಾನದ ರೀತಿ ; ನನ್ನ ದನಿ
ತಂಪಾದ ಸಂಜೆಯಲಿ ಗೆಳೆಯರಿಬ್ಬರು ಕುಳಿತು
ಎತ್ತರಕ್ಕೇರದೆಯೆ ಮಾತನಾಡುವ ರೀತಿ.
ಅವರವರ ಅನುಭವದ ಆಯ್ಕೆ ಅವರವರಿಷ್ಟ.
ಅವರ ನಂಬಿಕೆ ಅವರ ದೇವರಾಗಿರುವಾಗ
ಆದ ಹೊತ್ತು ಮುಂದುವರಿಯುವುದು ಸೌಜನ್ಯ.
ಕವಿತೆಯುತ್ಸವದಲಿ ಡೊಂಕುನುಡಿಗಳು ಬೇಡ ;
ಅಡ್ಡದಾರಿಯ ಹಿಡಿದು ಮಾತನಾಡುವುದು ಬೇಡ.
ಕವಿತೆಗಿಂತಲು ಬದುಕು ಜಟಿಲ. ಈ ಲೋಕ
ನಮ್ಮ ಅರಿವಿಗೆ ಮೀರಿಹುದು ಇಲ್ಲಿ ಉಟ್ಟರೂ
ಬೆತ್ತಲೆ, ಉಂಡರೂ ಹಸಿವು.

ಇದು ಕವಿಗಳಿಗೆಲ್ಲರಿಗೂ ಹೇಳಿದ ಮಾತು ನಿಜ. ಆದರೆ ಅಡಿಗರ ಸತ್ವವನ್ನ ಯಕ್ಷಗಾನಕ್ಕೆ ಹೋಲಿಸಿರುವುದರ ಹಿಂದೆ ಇರುವ ಸತ್ಯ ಎಷ್ಟು ಗಾಢವಾದದ್ದು ಎಂಬುದನ್ನು ಚಿಂತಿಸಿದರೆ ನರಸಿಂಹಸ್ವಾಮಿಯವರ ವಿಶ್ಲೇಷಣೆಯ ಸತ್ಯ ನಮಗೆ ಗೋಚರವಾಗುತ್ತದೆ. ಹಾಗೆಯೇ ಈ ಕವಿಗೆ ವಿ.ಸೀತಾರಾಮಯ್ಯನವರ ಮಾರ್ಗದರ್ಶನದಲ್ಲಿ ತಾವು ಬೆಳೆದುದರ ಸಾಂದ್ರ ಅನುಭವ ಎಚ್ಚೆತ್ತು ಮತ್ತೊಂದು ಕವನವನ್ನು ರಚಿಸಿದ್ದಾರೆ ತುಂಬ ಕೃತಜ್ಞತೆಯಿಂದ – ಕವಿಯ ವಿನಯದ ದ್ಯೋತಕ.

ನಿನ್ನ ಆಶೀರ್ವಾದ ನನ್ನ ಮೇಲಿರುವಾಗ
ಭಯವೆಂಬುದೆನಗಿಲ್ಲ, ನನ್ನ ಗುರುವೆ ;
ಸಂತಸದಿ ಹಾಡುವೆನು ಕದತೆರೆದು ನೋಡುವೆನು
ನಿನಗಾಗಿ ಕಾಯುವೆನು, ನನ್ನ ಗುರುವೆ.

ನೀನು ಹತ್ತಿರ ಬಂದು ಬಬೆನ್ನ ತಟ್ಟಿದ ಬಳಿಕ
ಬಲವಾಯಿತು ನನ್ನ ದನಿ, ನನ್ನ ಗುರುವೆ ;
ಸಂಜೆಯಲಿ ಕೆಂಪುಪೂ ಸಾಲ್ಮರನ ಹಾದಿಯಲಿ
ಕರೆದೊಯ್ದೆ ನೀನು ನನ್ನನು ಕವಿತೆಗೆ.

ನೀನು ಹಾಡಿದೆ ನನ್ನ ಗೀತವನು ಪ್ರೀತಿಯಲಿ
ನಾನು ಕೇಳಿದೆ ಅದನು ಅಚ್ಚರಿಯಲಿ ;
ಕಷ್ಟಗಳನನುಭವಿಸಿ ಅವುಗಳಿಗೆ ಜಗ್ಗದೆಯೆ
ನೀನು ಸಂತಸವನ್ನು ಹಾಡಿಹೋದೆ.

ಚೆಲುವನಾರಾಧಿಸಿದೆ, ನಿನ್ನ ಕಣ್ಮಿಂಚಿನಲಿ
ಹೊಸದೊಂದು ಲೋಕವನು ನನಗೆ ತೆರೆದೆ
ನೊಂದ ನೋವನು ಯಾರ ಕಿವಿಗೂ ಹಾಕದ ನಡೆದೆ,
ನೆನೆದ ಚೆಲುವನು ತೆರೆದೆ ಹಾಡಿನಲ್ಲಿ

ನಾನು ಕವಿ, ನೀನು ಕವಿ ಸಾಗಿತ್ತು ಈ ಪಯಣ
ಲೋಕಲೋಕಾಂತರದ ಚರ್ಚೆಗಳಲಿ;
ನಿನ್ನಂಥ ಇನ್ನೊಬ್ಬರನು ಕಾಣೆನು ನಾನು,
ನಿನ್ನ ಹಾಡೇ ಹಾಡು ಜೀವನದಲಿ.

* * *

ನಮ್ಮ ಇಬ್ಬರ ನಡುವೆ ಎಲ್ಲವೂ ನಿಶ್ಶಬ್ದ
ಈ ಮೌನ ಒಂದು ಸಾವಿರ ನಾಲಗೆ.

ಟೀಕೆಗಳಿಗೆ ಗಮನ ಕೊಡದ ಕವಿ ನರಸಿಂಹಸ್ವಾಮಿ. ತಮ್ಮ ಸತ್ವದಲ್ಲಿ ಸ್ಥಿರವಾದ ವಿಶ್ವಾಸ. ಅದಕ್ಕೆ ಒಂದು ಕಡೆ ಹೇಳುತ್ತಾರೆ:

ಯಾರು ಏನೆಂದರೂ ಸುಮ್ಮನಿರಬೇಕೆಂದು
ನನಗೆ ಹೇಳಿದ್ದುಂಟು ನನ್ನ ಕವಿತೆ.

ಇದೇ ಅವರ ತೀರ್ಮಾನ.

ಈ ವರ್ಷ ಪ್ರಕಟವಾದ ಎರಡು ಕವನ ಸಂಕಲನಗಳಲ್ಲಿ ಎಷ್ಟೊಂದು ಸುಂದರ ಕವನಗಳಿವೆ. ಅವರ ಸಮಗ್ರ ಕವನಗಳ ಸಂಕಲನ ಈಗ ಪ್ರಕಟವಾಗಬೇಕು – ಅಚ್ಚುಕಟ್ಟಾಗಿ.

ಸ್ವಂತ ಕವನಗಳಲ್ಲದೆ ಕೆಲವು ಅನುವಾದ ಕವನಗಳಿವೆ. ಇಂಗ್ಲಿಷ್ ಕವನಗಳ ಪ್ರಭಾವ ಮತ್ತೆ ಕೆಲವು ಕವನಗಳಲ್ಲಿ ಕಾಣುತ್ತವೆ. 'ಹೊಸಕೆರೆಯ ಹುಡುಗಿ' ಎಂಬ ಒಂದು ಕವನವನ್ನು ನಾನು ಓದಿದಾಗ Sally in our alley ಎಂಬ ಇಂ[illegible]ವು ನೆನಪಿಗೆ ಬಂತು. ಮತ್ತೆ ಓದಿದರೆ ಗೊತ್ತಾಯಿತು ಕೊನೆಯೆರಡು ಸಾಲು ಮಾತ್ರ ಆ ಇಂಗ್ಲಿಷ್ ಕವನದ್ದು ಮಿಕ್ಕದ್ದೆಲ್ಲ ಬೇರೆಯೇ ಅನುವಾದದಲ್ಲಿಯೇ ನರಸಿಂಹಸ್ವಾಮಿಯವರ ಚೈತನ್ಯ ಹರಿದು 'ಮೀಡಿಯಾ' ಎಂಬ ಗ್ರೀಕ್ ನಾಟಕದ ಅನುವಾದದಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು ಈಚೆಗೆ ಅವರು ಕೆಲವು ಚೀನೀ ಕವನಗಳನ್ನು ಅನುವಾದಮಾಡಿದ್ದಾರೆ. ಆ ಅನುವಾದಗಳ ಸೊಗಸನ್ನು ತಿಳಿಸಲು ಒಂದು ಅನುವಾದಿತ ಕವನವನ್ನು ಇಲ್ಲಿ ಉದಾಹರಿಸುತ್ತೇನೆ. ಇದು Chang Chi (768-830) ಅವನ ಕವನ-ಹೆಸರು 'Song of a chaste wife.'

ಸಾಧ್ವಿಯೊಬ್ಬಳ ಗೀತೆ

ನೀವೆನಗೆ ಹೊಳೆವ ಮುತ್ತಿನ ಜೋಡಿಯನು ಕಳಿಸಿದಾಗ
ನನಗೊಬ್ಬ ಗಂಡನಿರುವುದು ನಿಮಗೆ ಗೊತ್ತಿತ್ತು.
ನಿಮ್ಮ ಸುಖವಾದ ಭಾವನೆಗಳಿಗೆ ನಾನು ಆಭಾರಿ,
ಪಾರದರ್ಶಕ ಕೆಂಪು ರವಿಕೆಯ ಮೇಲೆ ನಾನದನು ಧರಿಸಿದೆನು.
ಪಕ್ಕದ ರಾಜವೈಭವದ ಬಯಲಿನಲ್ಲಿಹುದು ನನ್ನ ಎತ್ತರದ ಭವನ
ಉಜ್ವಲ ಅರಮನೆಯಲ್ಲಿ ಎನ್ನವನು ದಂಡಧಾರಿ.
ರವಿಯಂತೆ, ಶಶಿಯಂತೆ ಪರಿಶುದ್ಧವಾಗಿಹುದು
ನಿಮ್ಮ ಹೃದಯ, ಇದು ನನಗೆ ಗೊತ್ತು ;
ನನ್ನ ಗಂಡನ ಸೇವೆಗೈಯುತ್ತ ಬದುಕಿನಲಿ ಸಾವಿನಲಿ
ನಾನು ಅವನೊಂದಿಗಿರುವೆನೆಂದು ಪ್ರಮಾಣ ಮಾಡಿಹೆನು ;
ಆದ್ದರಿಂದಲೇ ನಾನು ಈಗ ನೀವೆನಗೆ ಕಳಿಸಿರುವ
ಹೊಳೆವ ಮುತ್ತಿನ ಜೋಡಿಯನು ಹಿಂದಿರುಗಿಸುತ್ತಲಿಹೆನು
ಅವುಗಳ ಮೇಲಿಹುದು ನನ್ನ ಒಂದೊಂದು ಕಂಬನಿ,
ಮದುವೆಯಾಗುವ ಮೊದಲೆ ನೀವೆನಗೆ
ಸಿಕ್ಕಲಿಲ್ಲ ಎನುವ ಕೊರಗು ನನ್ನಲ್ಲುಂಟು.

ಇಂಥ ಇತರ ಅನುವಾದಗಳೂ **ಕೆಲವು ಚೀನೀ ಕವನಗಳು** ಎಂಬ ಸಣ್ಣ ಪುಸ್ತಿಕೆಯ ಕಾಣಬರುತ್ತವೆ.

ನರಸಿಂಹಸ್ವಾಮಿಗಳ ಕೆಲವು ಕವನಗಳು ಮೊದಲ ಓದಿಗೆ ಅಸಂಪೂರ್ಣವಾಗಿರ ವಂತೆ ಕಾಣಬರುತ್ತವೆ. ಆದರೆ ಮನಸ್ಸಿಟ್ಟು ಚಿಂತಿಸಿ ವಿಶ್ಲೇಷಣೆ ಮಾಡಿದರೆ ಅದ ಅಸಂಪೂರ್ಣತೆಯೇ ಅದರ ಸೊಗಸು ಎನ್ನುವುದು ತಿಳಿಯಬರುತ್ತದೆ. ಅಂಥ ಒಂದ ಕವನವನ್ನು ಓದುಗರ ಪರಿಚಯಕ್ಕೆ ತರಬಯಸುತ್ತೇನೆ.

ತಿಳಿದಷ್ಟನ್ನೆ ಹಾಡಿ

ಬೆಟ್ಟ ನಿಂತಿರುವುದೂ ಹೊಳೆ ಹರಿಯುತಿರುವುದೂ
ನನಗಾಗಿ ಅಲ್ಲವೆಂಬುದು ನನಗೆ ಗೊತ್ತು ;
ನಾನು ಹುಟ್ಟುವ ಮೊದಲೆ ಹುಟ್ಟಿದವು ಇವು, ಗೊತ್ತು –
ಪ್ರಶ್ನಿಸುವ ಅಧಿಕಾರ ಯಾರಿಗಿತ್ತು ?
ನನ್ನ ಕೇಳಿದೆ ನೀನು ಹೊಳೆಯಾಳವೆಷ್ಟೆಂದು,
ಎಲ್ಲಿಂದ ತರಲಿ ನಾನುತ್ತರವನು ?

ದಡದ ಬಳಿ ಆಳುದ್ದ; ತೆಪ್ಪ ಸರಿದಂತೆಲ್ಲ
ಹೆಚ್ಚುವುದದರ ಆಳ, ನನಗೆ ಗೊತ್ತು.
ಹೊಳೆಯ ವೇಗದ ಪ್ರಶ್ನೆಯನ್ನು ಕೇಳಿದೆ ನೀನು,
ಉತ್ತರವ ಹೊಂದಿಸುವೆನದಕೆ ನಾನು ;
ನೀರ ವೇಗವೆ ಬೇರೆ, ತೆಪ್ಪದ ವೇಗವೆ ಬೇರೆ
ಯಾವುದು ಹೊಳೆಯ ವೇಗ, ನನಗೆ ತಿಳಿಯದು ನೋಡಿ-
ನಿಮಗೆ ತಿಳಿದಷ್ಟನ್ನೆ ನನಗೆ ಹಾಡಿ.

ಇಲ್ಲಿಗೆ ಈ ಕವನ ನಿಲ್ಲುತ್ತದೆ. ನದಿಯ ದಡದಲ್ಲಿ ನಿಂತ ಹೆಂಡತಿ ಕೇಳಿದ ಪ್ರಶ್ನೆ ಎರಡು. ಎರಡಕ್ಕೂ ಉತ್ತರವೆಂಬಂತೆ ಗಂಡ ಹಾರುತ್ತರವ ನೀಡಿದ್ದಾನೆ. ಕೊನೆಗೆ ಹೆಂಡತಿ ಕೇಳುತ್ತಾಳೆ ಈ ಕವನದ ಕೊನೆಯ ಎರಡು ಸಾಲುಗಳಲ್ಲಿ - ನಿಮಗೆ ತಿಳಿದಷ್ಟನ್ನೆ ಹಾಡಿ. ಇದು ಪ್ರಶ್ನೆ. ಇದಕ್ಕೆ ಉತ್ತರವಿಲ್ಲ. ಮುಂದಿರುವುದು ಹೊಳೆ- ಜೀವನದ ಹೊಳೆ, ಬದುಕಿನ ನದಿ. ಅದರ ವೇಗ ಯಾರಿಗೆ ಗೊತ್ತು. ಕವಿಯ ಮೌನವೇ ಅದಕ್ಕೆ ಉತ್ತರ. ಆದ್ದರಿಂದ ಕವನದಲ್ಲಿ ಉತ್ತರವಿಲ್ಲ. ಇದೇ ಅದರ ಕಲೆ.

ನರಸಿಂಹಸ್ವಾಮಿಯವರು ಭಾಗವಹಿಸಿದ ಸಾರ್ವಜನಿಕ ಸಭೆಗಳಲ್ಲಿ ಕೊನೆಯದು ಒಂದು ತಿಂಗಳ ಹಿಂದೆ ಅವರ ಮನೆಯಲ್ಲಿ ನಡೆದ ಅವರ ಭಾವಗೀತೆಗಳಲ್ಲಿ ಸಂಗೀತಕ್ಕೆ ಅಳವಡುವ ಕವನಗಳ ಸಂಕಲನದ ಬಿಡುಗಡೆಯ ಸಮಾರಂಭ. ಹಾಡುವುದಕ್ಕೆ ಅನುಕೂಲವಲ್ಲದ ಕವನಗಳನ್ನು ನಮ್ಮ ಸಂಗೀತಗಾರರು ಹಾಡಿಗೆ ಅಳವಡಿಸಿ ಬಿಡುತ್ತಾರೆ. ಅದು ಸುಶ್ರಾವ್ಯವಾಗುವುದಿಲ್ಲ. ಆದುದರಿಂದ ನರಸಿಂಹಸ್ವಾಮಿಗಳು ತಮ್ಮ 75 ಕವನಗಳನ್ನು ಆರಿಸಿ ಅವುಗಳನ್ನು ಮಾತ್ರ ಸುಗಮ ಸಂಗೀತಕ್ಕೆ ಉಪಯೋಗಿಸಿಕೊಳ್ಳುವುದು ಉತ್ತಮವೆಂದು ತಿಳಿದು ಅಂಥ ಸಂಕಲನಕ್ಕೆ **ಹಾಡು-ಹಸೆ** ಎಂದು ಹೆಸರಿಟ್ಟು ಪ್ರಕಟಿಸಿದ್ದಾರೆ. ಇದನ್ನು ಸಂಗೀತಗಾರರು ಗಮನಿಸಿದರೆ ಉತ್ತಮ.

ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡ ಮೇಲೆಯೂ ಅವರು ಇಷ್ಟೊಂದು ಕವನಗಳನ್ನು ರಚಿಸಿದರು ಎಂಬುದು ಎಷ್ಟು ಆಶ್ಚರ್ಯವಲ್ಲವೆ ! ಅವರೇನೋ ಹೊರಗಣ್ಣು ಕಾಣದಾದರೂ ಒಳಗಣ್ಣಿನಲ್ಲಿ ಚಿತ್ರರೂಪ ಕಾಣುವುದೆಂದು ಹೇಳಿದ್ದಾರೆ. ಅದು ನಿಜವೆ ! ಅವರೆ ಇತರರಿಗೆ ಅದು ಮುಟ್ಟಬೇಕಲ್ಲ ! ಈ ವಿಚಾರದಲ್ಲಿ ನಮಗೆಲ್ಲ ಪ್ರಿಯರಾದ ಶ್ರೀ ಎಂ.ವಿ.ವೆಂಕಟೇಶ ಮೂರ್ತಿಯವರು ಕವಿಗಳಿಗೆ ಬಿಡೆಬಿಡದೆ ಸಹಾಯಮಾಡಿ, ಕವಿ ಹೇಳಿದ ಕವನಗಳನ್ನೆಲ್ಲ ಬರೆದುಕೊಂಡು, ಅದನ್ನು ಮತ್ತೆ ಓದಿಹೇಳಿ ತಿದ್ದಿಸಿ ಮುದ್ರಣಕ್ಕೆ ಸರಿ ಹೊಂದಿಸಿ ಈ 6-7 ಸಂಕಲನಗಳು ಮುದ್ರಣಗೊಂಡು ಓದುಗರ ಕೈ ಸೇರಲು ಸಹಾಯ ಮಾಡಿದ್ದಾರೆ. ಹಿಂದೆ ವಿ.ಸೀತಾರಾಮಯ್ಯನವರಿಗೂ ಹೀಗೆಯೇ ಸಹಾಯ ಮಾಡಿ ಅವರ ಗ್ರಂಥಗಳು ಮುದ್ರಣವಾಗಲು ಸಹಾಯಮಾಡಿ ವೆಂಕಟೇಶ ಮೂರ್ತಿಯವರು (ಕಾವ್ಯನಾಮ - ಸುಮನಾ)

ಎರಡನೆಯದಾಗಿ ನರಸಿಂಹಸ್ವಾಮಿಗಳ ಲಿಪಿಕಾರರಾಗಿ ದುಡಿದಿದ್ದಾರೆ. ಅವರ ಈ ಸಾಹಿತ್ಯ ಕಾರ್ಯಕ್ಕಾಗಿ ಕನ್ನಡಿಗರೆಲ್ಲ ಅವರಿಗೆ ಕೃತಜ್ಞರಾಗಿರಬೇಕು.

ಇತ್ತೀಚೆಗೆ ನರಸಿಂಹಸ್ವಾಮಿಗಳಿಗೆ ಅವರ ಸಾವು ಸಮೀಪಿಸುತ್ತಿರುವುದರ ಅರಿವು ಉಂಟಾಗಿತ್ತು. ಕೆಲವು ಕವನಗಳಲ್ಲಿ ಅದರ ಸೂಚನೆಯನ್ನು ನೀಡಿದ್ದರು. ಒಂದು ಕವನದ ಮೊದಲ ನಾಲ್ಕು ಸಾಲುಗಳು ಈಗಲೂ ಅರ್ಥಪೂರ್ಣವಾಗಿದೆ.

ನೀಲಿಯಾಕಾಶದಲಿ ನಾನೊಂದು ನಕ್ಷತ್ರ
ದೂರ ತೀರಕೆ ಸರಿದ ಕಪ್ಪು ಹಡಗು
ಮುಟ್ಟಿದರೆ ತೆರೆವ ಬಾಗಿಲು ನಾನು, ಕಿಟಕಿಯಲಿ
ಹಬ್ಬಿರುವ ಮಲ್ಲಿಗೆಯ ಬಳ್ಳಿ ನಾನು.

ಈ ಪದ್ಯದಲ್ಲಿ ತಮ್ಮ ಸಾವನ್ನೂ ತಾವು ಹಿಂದೆ ಬಿಟ್ಟಿರುವ ಸಾಹಿತ್ಯ ಸಂಪತ್ತನ್ನೂ ಸೂಕ್ಷ್ಮವಾಗಿ ಹೇಳಿದ್ದಾರೆ. ನಮಗೆ ಅದೇ ಈಗ ಇರುವ ಸಮಾಧಾನ. ಅವರು ಬಿಟ್ಟಿರುವ ಸಾರಸ್ವತ ಸಂಪತ್ತನ್ನು ಮುಟ್ಟಿ ಬಾಗಿಲು ತೆರೆದು ಅದರ ಸೌಂದರ್ಯವನ್ನು ಸವಿಯುತ್ತಾ ಅವರ ನೆನಪಿನಲ್ಲಿ ಸಂತೋಷಪಡಬೇಕು. ಅವರು ಬದುಕಿದ್ದಾಗ ನಾವೂ ಅವರೊಡನೆ ಇದ್ದೆವಲ್ಲ, ಅವರನ್ನು ಕಣ್ಣಾರ ಕಂಡೆವಲ್ಲ ಎಂಬುದೇ ಇರುವ ಸಮಾಧಾನ.

ಮೌನಿಯಾಗಿದ್ದ ವಿದ್ವಾಂಸ ಡಾ॥ ಜಿ. ವರದರಾಜರಾಯರು

(1918-1985)

ಡಾ॥ ಜಿ.ವರದರಾಜರಾಯರು ಕನ್ನಡ ದಾಸ ಸಾಹಿತ್ಯದ ಸಂಶೋಧನೆಗೆ ತಮ್ಮ ಎಲ್ಲ ಕಾಲವನ್ನೂ ವಿನಿಯೋಗ ಮಾಡಿದ್ದ ಸಮರ್ಥ ವಿದ್ವಾಂಸರಾಗಿದ್ದರು. ಮಾಧ್ವಮತದ ಗಂಭೀರ ಅನುಯಾಯಿಯಾಗಿ ದ್ವೈತಮತದ ಪ್ರಕರಣ ಗ್ರಂಥಗಳನ್ನು ಸಾಂಗವಾಗಿ ಅಭ್ಯಾಸ ಮಾಡಿದ್ದರು. ಅವರು ಅವಸಾನ ಹೊಂದುವ ವೇಳೆಗೆ ಕವಿ ವಿದ್ವಾಂಸರಾಗಿದ್ದ ವಾದಿರಾಜರನ್ನು ಕುರಿತ ತಮ್ಮ ಬೃಹದ್ಗ್ರಂಥವನ್ನು ಪೂರೈಸಲು ಸಿದ್ಧತೆಯನ್ನು ಮಾಡಿಕೊಂಡಿದ್ದರು. ಅವರ ಸಾವಿನಿಂದ ಅನಿರೀಕ್ಷಿತವಾಗಿ ಅವರು ಮಾಡಿದ್ದ ಎಲ್ಲ ಬರಹದ ವ್ಯಾಪ್ತಿಯೂ ಅದನ್ನು ಸಮರಸಗೊಳಿಸಲು ಮಾಡಿದ್ದ ಆಲೋಚನೆಯೂ ಅಳಿಸಲಾಗದ ಮಬ್ಬಿನಲ್ಲಿ ಮರೆಯಾಗಿಹೋದುವು.

13-1-1918ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ವರದರಾಜರಾಯರು ಅದೇ ಸ್ಥಳದ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿ ವ್ಯಾಸಂಗವನ್ನು ಪೂರೈಸಿದರು. ಅವರಿಗೆ ಕನ್ನಡವನ್ನು ಬೋಧಿಸುತ್ತಿದ್ದ ಪ್ರಸಿದ್ಧ ವಿದ್ವತ್ಕವಿಯಾದ ವಿ.ಸೀತಾರಾಮಯ್ಯನವರ ಪ್ರಭಾವಕ್ಕೆ ಒಳಗಾಗಿ ವಿಜ್ಞಾನ ವಿಷಯಗಳನ್ನು ಬಿಟ್ಟು ಸಾಹಿತ್ಯವನ್ನು ಅಭ್ಯಾಸ ಮಾಡಬೇಕೆಂದು ತೀರ್ಮಾನಿಸಿದರು. ಆದುದರಿಂದ ಅವರು ತಮ್ಮ ಪ್ರೌಢ ವ್ಯಾಸಂಗಕ್ಕಾಗಿ ಮೈಸೂರಿಗೆ ಪ್ರಯಾಣ ಮಾಡಬೇಕಾಯಿತು. ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ ಅವರು ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳ ಪ್ರಭಾವಕ್ಕೆ ಒಳಗಾದರು. ಈ ಆಚಾರ್ಯರು ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಮಹಾವಿದ್ವಾಂಸರಾಗಿದ್ದು ಕನ್ನಡದ ಪ್ರಗತಿಗಾಗಿ ಅತ್ಯಂತ

ನಿಷ್ಠೆಯಿಂದ ದುಡಿಯುತ್ತಿದ್ದ ವಿದ್ವಶಕ್ತಿಯಾಗಿದ್ದರು. ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಾತ್ರವಲ್ಲದೆ ನಗರದಲ್ಲಿ ಯಾವ ಸಾಹಿತ್ಯದ ಕಾರ್ಯಕ್ರಮವಾದರೂ ಅದು ಕೃಷ್ಣಶಾಸ್ತ್ರಿಗಳ ಕಣ್ಗಾವಲಿನಲ್ಲಿ ನೆರವೇರುತ್ತಿತ್ತು. ಇಂಥ ಅಧ್ಯಾಪಕರ ಕಾರ್ಯನಿಷ್ಠುರವಾದ, ಪ್ರೀತಿಮಯವಾದ ಆಶ್ರಯದಲ್ಲಿಯೂ ಮಾರ್ಗದರ್ಶನದಲ್ಲಿಯೂ ವರದರಾಜರಾಯರು ಎಂ.ಎ.ಪದವಿಯನ್ನು ಪ್ರಥಮಶ್ರೇಣಿಯಲ್ಲಿ ಪ್ರಥಮರಾಗಿ ಸಂಪಾದಿಸಿದರು. ಬಳಿಕ ಪ್ರೊ.ಡಿ.ಎಲ್. ನರಸಿಂಹಾಚಾರ್ಯರ ಸುಪ್ರಸನ್ನ ಮಾರ್ಗದರ್ಶನದಲ್ಲಿ ನಂಜುಂಡಕವಿಯ ರಾಮನಾಥ ಚರಿತ್ರವೆಂಬ ಸಾಂಗತ್ಯಗ್ರಂಥವನ್ನು ಕುರಿತು ಆಳವಾಗಿ ಸಂಶೋಧನೆಯನ್ನು ಮಾಡಿದರು. ಡಾಕ್ಟೊರೇಟ್ ಪದವಿಗೆ ಅವರು ಸಿದ್ಧಪಡಿಸಿದ ಈ ಸಂಶೋಧನ ಗ್ರಂಥವು ನರಸಿಂಹಾ ಚಾರ್ಯರ ಮೆಚ್ಚಿಗೆಯನ್ನು ಸಂಪಾದಿಸಿತು. ಅವರು ಮೆಚ್ಚಿದರೆಂಬುದೇ ಡಾಕ್ಟೋರೇಟ್ ಪದವಿ ದೊರಕಿದುದಕ್ಕಿಂತ ಅಧಿಕವಾದ ಸಂತೋಷವನ್ನು ನೀಡಿತು, ವರದರಾಜರಾಯರಿಗೆ. ಈ ಸಂಶೋಧನ ಪ್ರಬಂಧದಲ್ಲಿ ವರದರಾಜರಾಯರ ಶ್ರದ್ಧೆ, ನಿರಂತರ ಶ್ರಮ, ಮತ್ತು ಸಂಶೋಧನ ಕಾರ್ಯದಲ್ಲಿರುವ ಗಾಢವಾದ ಪ್ರೀತಿ ಇವುಗಳು ಸ್ಪಷ್ಟವಾಗಿ ಕಾಣಬರುತ್ತವೆ. ಆ ವೇಳೆಗೆ ಸಿದ್ಧವಾದ ಪಿಹೆಚ್.ಡಿ ಪ್ರಬಂಧಗಳಲ್ಲಿ ರಾಯರ ಮಹಾಪ್ರಬಂಧಕ್ಕೆ ಪ್ರಮುಖವಾದ ಸ್ಥಾನ ದೊರೆಯಿತು. ರಾಯರು ವಿದ್ವಾಂಸರೆಂಬಂತ ಪ್ರಸಿದ್ಧವಾಗಿ ಸ್ಥಾಪಿತವಾಯಿತು. ಸಂಶೋಧನೆಯ ಜೊತೆಗೆ ರಾಯರು ಕವಿತಾ ರಚನೆಯನ್ನು ಆಗಾಗ ಮಾಡುತ್ತಿದ್ದರು. ಹಾಗೆ ರಚಿಸಿದ ಕವನಗಳ ಕಿರುಸಂಕಲನವಾದ 'ತೋರಣ'ಕ್ಕೂ ಓದುಗರ ಮತ್ತು ವಿಮರ್ಶಕರ ಮೆಚ್ಚುಗೆ ದೊರೆಯಿತು.

ರಾಯರ ಮಾತೃಭಾಷೆ ತೆಲುಗು. ಈ ವಿಷಯವೂ ಕನ್ನಡ ಭಾಷೆಯ ಅಭ್ಯಾಸಕ್ಕೆ ತುಂಬ ಪೂರಕವಾಗಿ ಒದಗಿಬಂತು. 'ತೋರಣ' ಕವನಕ್ಕೆ ಬಿ.ಎಂ.ಶ್ರೀಯವರ ಹೆಸರಿನ ಸುವರ್ಣ ಪದಕವು ದೊರೆತು ಅದು ಸ್ಪರ್ಧೆಯಲ್ಲಿ ಗೆಲವನ್ನು ಸಂಪಾದಿಸಿತು. ಪ್ರತಿವರ್ಷವೂ ಅತ್ಯಂತ ಶ್ರೇಷ್ಠ ಕವನಕ್ಕೆ ಮಾತ್ರ ದೊರಕುವ ಸುವರ್ಣಪದಕ ಅದು. ಯುವಕರಿಗೆ ಪ್ರೋತ್ಸಾಹ ನೀಡುವುದಕ್ಕಾಗಿಯೇ ಸ್ಥಾಪಿತವಾಗಿರುವುದು. ವರದರಾಜರಾಯರು ಪ್ರಥಮಸ್ಥಾನ ಪಡೆದು ಎಂ.ಎ. ಪದವಿಯನ್ನು ಪಡೆದಿದ್ದುದರಿಂದ ಅವರಿಗೆ ಕೇಣಿ ಸಿದ್ಧಪ್ಪನವರ ಸುವರ್ಣ ಪದಕವೂ ದತ್ತವಾಯಿತು. ರಾಯರಿಗೆ ಈ ಎರಡು ಪದಕಗಳ ಜೊತೆಗೆ ಅನೇಕ ಬಹುಮಾನಗಳೂ ಸನ್ಮಾನಗಳೂ ದೊರಕಿದ್ದವು. ಅವರು ನಾಲ್ಕು ಕವನ ಸಂಕಲನಗಳನ್ನೂ ಸಾಹಿತ್ಯ ವಿಮರ್ಶೆಯ ಐದು ಗ್ರಂಥಗಳನ್ನೂ ಪ್ರಕಟಿಸಿದ್ದಾರೆ. 'ಅಪ್ರತಿಮ ವೀರಚರಿತಂ' ಎಂಬ ಪ್ರಾಚೀನವಾದ ಅಲಂಕಾರಗ್ರಂಥವನ್ನು ಸಂಪಾದನೆಮಾಡಿ ಪ್ರಕಟಿಸಿದ್ದಾರೆ. ತಿರುಮಲಾರ್ಯನ ಈ ಗ್ರಂಥವು ಬಹುದಿನಗಳಿಂದ ಪ್ರಚಾರದಲ್ಲಿರಲಿಲ್ಲ. ಅದನ್ನು ಹೊಸಮುದ್ರಣದಲ್ಲಿ ದೊರಕಿಸಿದುದು ಒಂದು ಉತ್ತಮ ವಿದ್ವತ್ಕಾರ್ಯವಾಯಿತು.

ಡಾ|| ವರದರಾಜರಾಯರು ಉತ್ತಮ ಉಪಾಧ್ಯಾಯರು ಎಂಬ ಕೀರ್ತಿಯನ್ನೂ ಸಂಪಾದಿಸಿದ್ದರು . ಅವರ ಕಾರ್ಯಕ್ಷೇತ್ರವು ಸಾಹಿತ್ಯ ವಿಮರ್ಶೆಯಿಂದ ಬೇರೆಯಾಗಿ ಗ್ರಂಥ

ಸಂಪಾದನೆಯು ಕಡೆಗೆ ಬದಲಾವಣೆ ಹೊಂದಿತು. ಈ ಕ್ಷೇತ್ರದಲ್ಲಿ ಅವರು ಮಾಡಿದ ಕಾರ್ಯವೇ ಅತ್ಯಂತ ಪ್ರಧಾನವಾದುದು. ಅವರ ಜೀವನದಲ್ಲಿ ಈ ಕಾರ್ಯಕ್ಕೇ ಅವರು ಹೆಚ್ಚು ಕಾಲವನ್ನು ವಿನಿಯೋಗಿಸಿದರು.

ಹರಿದಾಸ ಸಾಹಿತ್ಯದಲ್ಲಿ "ಶ್ರೀಪಾದರಾಯರ ಕೃತಿಗಳು" ಎಂಬ ಗ್ರಂಥವನ್ನು ರಾಯರು ಸಂಪಾದಿಸಿದ್ದಾರೆ. ಪ್ರಾಚೀನ ದಾಸ ಸಾಹಿತ್ಯದ ಸಂಪಾದನ ಕ್ಷೇತ್ರದಲ್ಲಿ ಈ ಗ್ರಂಥವನ್ನು ಒಂದು ಪ್ರಧಾನ ಘಟಕವೆಂದು ಬಗೆಯಲಾಗಿದೆ.

ಈ ಗ್ರಂಥದ ಸಂಪಾದನೆಯಲ್ಲಿ ರಾಯರ ವೇದಾಂತತತ್ತ್ವಗಳಲ್ಲಿ ಅವರು ಪಡೆದಿದ್ದ ಗಾಢವಾದ ತಿಳುವಳಿಕೆಯೂ ತರ್ಕಶಕ್ತಿಯೂ ಪುಟಪುಟಗಳಲ್ಲಿಯೂ ವ್ಯಕ್ತವಾಗುತ್ತವೆ. ಇಂಥ ಇತರ ಮಹಾದಾಸಶ್ರೇಷ್ಠರ ಕೃತಿಗಳನ್ನು ಸಂಪಾದಿಸಲು ಇದನ್ನು ಮಾದರಿಯಾಗಿ ಗಣಿಸಬೇಕಾಗುತ್ತದೆ ಎಂಬ ವಿಷಯವು ರಾಯರ ಕೀರ್ತಿಯನ್ನು ಸ್ಥಾಪಿಸುತ್ತದೆ. 'ದಾಸ ಸಾಹಿತ್ಯಸಾರ' ಎಂಬುದು ಅವರ ಮತ್ತೊಂದು ಪ್ರಸಿದ್ಧ ಗ್ರಂಥ. ಇದರಲ್ಲಿ ಕನ್ನಡದಲ್ಲಿ ದಾಸಸಾಹಿತ್ಯವನ್ನು ರಚಿಸಿದ ಎಲ್ಲ ಪ್ರಸಿದ್ಧ ರಚನಕಾರರನ್ನೂ ಗಮನದಲ್ಲಿರಿಸಿ ಪ್ರತಿಯೊಬ್ಬರ ವೈಶಿಷ್ಟ್ಯವನ್ನೂ ಸಾಧಾರವಾಗಿ ನಿರೂಪಿಸಿರುವ ರೀತಿ ಎಲ್ಲ ಓದುಗರಿಗೂ ಪ್ರಯೋಜನಕರವಾಗಿದೆ. ಕೀರ್ತನೆಗಳ ಸ್ವರೂಪವನ್ನೂ ಅದರ ವಸ್ತುವನ್ನೂ ಬೇರೆಬೇರೆಯಾಗಿ ವಿವೇಚನೆಗೆ ಒಳಗು ಮಾಡಲಾಗಿದೆ ಈ ಗ್ರಂಥದಲ್ಲಿ.

ರಾಯರು ಒಳ್ಳೆಯ ಮಾತುಗಾರರಾಗಿದ್ದರು. ಅವರ ವಿದ್ವತ್ತೂ ವಿಶಾಲವಾದ ವಾಚನವೂ ವಾಕ್ಪ್ರೌಢಿಮೆಯೂ ಅವರ ಮಾತುಗಾರಿಕೆಯಲ್ಲಿ ಒಡಮೂಡುತ್ತಿದ್ದವು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಅವರ ಸೇವಾವಧಿಯ ಕೊನೆಯ ಭಾಗದಲ್ಲಿ ಅವರನ್ನು ಮಂಗಳೂರು ವಿಭಾಗದ ಸ್ನಾತಕೋತ್ತರ ಕೇಂದ್ರದಲ್ಲಿ ನಿರ್ದೇಶಕರನ್ನಾಗಿ ನೇಮಿಸಲಾಯಿತು. ಆ ಸ್ಥಾನದಲ್ಲಿ ಅವರಿಗಿಂತ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಪ್ರಸಿದ್ಧ ವಿದ್ವಾಂಸರಾಗಿದ್ದ ಪ್ರೊ. ಪರಮೇಶ್ವರ ಭಟ್ಟರ ಕಾರ್ಯವನ್ನು ಚೆನ್ನಾಗಿ ಮುಂದುವರಿಸಿದರು. ಹೀಗೆ ಅಲ್ಲಿಯ ವಿದ್ಯಾರ್ಥಿಗಳ ಮತ್ತು ಅಧ್ಯಾಪಕ ವರ್ಗದ ಪ್ರೀತಿ ಗೌರವಗಳನ್ನು ಸಂಪಾದಿಸಿದರು. ರಾಯರ ವಿನಯ ವಿದ್ವತ್ತು ಪ್ರೀತಿ-ಇವುಗಳು ಸರ್ವತೋಮುಖವಾದ ಸಾಹಿತ್ಯ ಕಾರ್ಯಕ್ಕೆ ಸಹಾಯಕವಾಯಿತು. ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದ ಮಾದರಿ ದೊರಕಿತು.

ವಿದ್ವತ್ತು ಅವರ ವ್ಯಕ್ತಿತ್ವದಲ್ಲಿ ಎಂದೂ ಪ್ರಖರವಾಗಿ ಪ್ರಕಟವಾಗಲಿಲ್ಲ. ಆದರೆ ಅರ್ಹರಾಗಿದ್ದ ಯಾರನ್ನೂ ಅವರು ಮುಂದೆ ತಳ್ಳದೆ ಬಿಡಲಿಲ್ಲ. ಅವರೆಲ್ಲರ ಪ್ರಗತಿ ತನ್ನ ಕರ್ತವ್ಯ ಎಂದು ಭಾವಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ಅವರೆಲ್ಲ ಇಂದೂ ತಮ್ಮ ಕೃತಜ್ಞತೆಯನ್ನು ತಮ್ಮ ಕೃತಿಗಳಲ್ಲಿ ಸ್ಪಷ್ಟಪಡಿಸುತ್ತಿದ್ದಾರೆ.

ಮಂಗಳೂರಿನ ತಮ್ಮ ಅಧಿಕಾರಾವಧಿಯಲ್ಲಿ ರಾಯರು ಗೋವಿಂದಪೈಗಳ ಎಲ್ಲ ಸಂಶೋಧನ ಲೇಖನಗಳನ್ನೂ ಸಂಪಾದನೆಗೊಳಗುಮಾಡಿ ಪ್ರಕಟಿಸುವ ಸಿದ್ಧತೆಯಲ್ಲಿದ್ದರು. ಅವರ ಮಾರ್ಗದರ್ಶನದಲ್ಲಿ ಅನೇಕರು ಸಂಶೋಧನೆ ಮಾಡಿ ಡಾಕ್ಟೊರೇಟ್ ಪದವಿಯನ್ನು ಸಂಪಾದಿಸಿದರು. ಸಾವು ಅವರನ್ನು ಕದ್ದೊಯ್ದಾಗ ಅವರಿನ್ನೂ ಕೆಲವರಿಗೆ ಮಾರ್ಗದರ್ಶಕರಾಗಿ ತಿಳಿವಳಿಕೆಯನ್ನು ನೀಡುತ್ತಿದ್ದರು.

ರಾಯರು ಇಷ್ಟೆಲ್ಲ ಮಾಡುತ್ತಿದ್ದರೂ ತಮ್ಮ ಬಗ್ಗೆ ಎಂದೂ ಹೆಚ್ಚು ಮಾತನಾಡಿದವರಲ್ಲ. ಬಹುವಾಗಿ ಈ ವಿಚಾರದಲ್ಲಿ ಅವರು ಮೌನಿಯಾಗಿದ್ದರು. ಆದರೆ ವ್ಯಂಗ್ಯವನ್ನು ಪ್ರಕಟಿಸ ಬೇಕೆಂದರೆ ಅವರಷ್ಟೆ ಕಟುವಾಗಿ ಬರೆಯುವುದು ಇತರರಿಗೆ ಕಷ್ಟವಾಗುತ್ತಿತ್ತು. ಕನ್ನಡದ ನವ್ಯ ಪಂಥದ ವ್ಯವಹಾರವನ್ನು ಕುರಿತು ಅವರು ರಚಿಸಿದ ಒಂದು ದೀರ್ಘ ಕವನ ಅವರ ವ್ಯಂಗ್ಯ ಸಾಮರ್ಥ್ಯಕ್ಕೆ ದೃಷ್ಟಾಂತವಾಗಿ ಇಂದಿಗೂ ಜನರ ನೆನಪಿನಲ್ಲಿದೆ. ಇದು ಅವರ ಪ್ರಾಚೀನ ಹಳಗನ್ನಡದ ಸಾಹಿತ್ಯದ ಪ್ರೇಮ ನವೋದಯದ ಹಿರಿಮೆಯ ಮೇಲಿನ ಗೌರವಗಳಿಂದ ಪ್ರೇರಕವಾದ ಒಂದು ಅಭಿವ್ಯಕ್ತಿ.*

ದಾಸಸಾಹಿತ್ಯಕ್ಕೆ ವರದರಾಜರಾಯರು ಮಾಡಿರುವ ಸೇವೆಯನ್ನು ಕನ್ನಡಿಗರು ಎಂದೂ ಮರೆಯಲಾರರು. ದಾಸಸಾಹಿತ್ಯದ ಯಾವ ಮುಖವನ್ನು ಅಭ್ಯಾಸ ಮಾಡಬೇಕಾದರೂ ಈಗಿನವರು ಡಾ॥ ವರದರಾಜರಾಯರ ಕೃತಿಗಳನ್ನು ಅಭ್ಯಾಸ ಮಾಡಲೇಬೇಕಾಗುತ್ತದೆ. ಇದೆ ಈ ಮೌನಿಯಾದ ವಿದ್ವಾಂಸ ಮಾಡಿರುವ ಮಹಾಕಾರ್ಯ.

ಡಾ॥ ವರದರಾಜರಾಯರ ಡಾಕ್ಟೊರೇಟ್ ಪಡೆಯುವುದಕ್ಕೆ ರಚಿಸಿದ ಮಹಾಪ್ರಬಂಧವು ನಂಜುಂಡ ಕವಿಯ 'ರಾಮನಾಥ ಚರಿತ' ಎಂಬ ಗ್ರಂಥವನ್ನು ಕುರಿತದ್ದು ಎಂದು ಈ ಲೇಖನದ ಪ್ರಾರಂಭದಲ್ಲಿ ತಿಳಿಸಿದೆಯಷ್ಟೆ! ಅದು ಅವರ ಸಾಹಿತ್ಯ ಸಂಶೋಧನೆಯ ಮಹಾಕೃತಿ ಅದರ ಸಾರಸರ್ವಸ್ವವನ್ನು 'ಕುಮ್ಮಟಕೇಸರಿ' ಎಂಬ ಗ್ರಂಥದಲ್ಲಿ ಸಂಗ್ರಹಿಸಿದ್ದಾರೆ. ಸ್ವಲ್ಪ ವಿವರವಾಗಿ ಆ ಕೃತಿಯ ಬಗ್ಗೆ ತಿಳಿಸಲು ಪ್ರಯತ್ನ ಪಟ್ಟು ಈ ಲೇಖನವನ್ನು ಪೂರೈಸುತ್ತೇನೆ.

ಕುಮ್ಮಟಕೇಸರಿ

ನಂಜುಂಡಕವಿಯ ರಾಮನಾಥ ಚರಿತವು ಬಹು ಪ್ರಸಿದ್ಧವಾದ ಕನ್ನಡದ ಸಾಂಗತ್ಯ ಗ್ರಂಥ. ಇದು ಕಂಪಿಲ ರಾಜ್ಯದ ಚರಿತ್ರೆಯನ್ನೂ ಪರದಾರ ಸೋದರನೆಂದು ಕೀರ್ತಿ ಪಡೆದ ರಾಮನಾಥನ ಕಥೆಯನ್ನೂ ನಿರೂಪಿಸುತ್ತದೆ. ಈ ಗ್ರಂಥದಲ್ಲಿ ಚರಿತ್ರೆ, ಪುರಾಣ, [illegible]ಜಾಲ, ನಾಡ ಮುಂತಾದುವೆಲ್ಲವೂ ಸೇರಿಕೊಂಡಿರುವುದರಿಂದ ಇದಕ್ಕೆ ತುಂಬ ಜನಪ್ರಿಯತೆ ಉಂಟಾಗಿದೆ. ನಂಜುಂಡನ ಕಾವ್ಯವಲ್ಲದೆ ನಮ್ಮ ನಾಡಿನಲ್ಲಿ ಈ ಕಥೆಯನ್ನು ಹೇಳುವ ಅನೇಕ

* ಈ ಪುಸ್ತಕದಲ್ಲಿರುವ [illegible] ಚಂದ್ರಶರ್ಮರನ್ನು ಕುರಿತ ಲೇಖನದ[illegible] ಕವನ [illegible]ತವಾಗಿದೆ.

ಕಾವ್ಯಗಳಿವೆ. ಅವುಗಳಲ್ಲಿ ಪಾಂಚಾಳಗಂಗ ಮತ್ತು ಮಹಲಿಂಗ ಸ್ವಾಮಿ ಎಂಬ ಇಬ್ಬರು ಮುಖ್ಯರು. ಈ ಕಥೆಯನ್ನು ಹೇಳುವ ಇತರ ಕಾವ್ಯಗಳೆಲ್ಲಾ ಪಾಂಚಾಳಗಂಗನ ಕಾವ್ಯದ ಪಾಠಾಂತರಗಳಾಗಿರಬೇಕೆಂದು ಡಾ॥ ವರದರಾಜರಾಯರು, ತಮ್ಮ ದೀರ್ಘ ವ್ಯಾಸಂಗ ಮತ್ತು ಸಂಶೋಧನೆಗಳ ಪರಿಣಾಮವಾಗಿ ಅಭಿಪ್ರಾಯಪಡುತ್ತಾರೆ. ಈ ಬೇರೆ ಬೇರೆ ಕಥೆಗಳಿಗೆ ಅಲ್ಪ ಸ್ವಲ್ಪ ವ್ಯತ್ಯಾಸಗಳಿವೆ. ಆದರೂ ಈ ಮೂರೂ ಬೇರೆ ಬೇರೆ ರೀತಿಯ ಪ್ರಾಧಾನ್ಯವನ್ನು ಪಡೆದಿವೆ.

ಕುಮಾರರಾಮನ ಕತೆ ಮತ್ತು ಅದನ್ನು ಕುರಿತು ಕಾವ್ಯಗಳ ಪಾಠ ನಿರ್ಧಾರ ಬಹುಗೋಜಾದ ಕೆಲಸ. ಡಾ॥ ವರದರಾಜರಾಯರು ಈ ಕೆಲಸವನ್ನು ಬಹು ಶ್ರಮಪಟ್ಟು ಸಂಶೋಧನೆ ಮಾಡಿದ್ದಾರೆ. ಅವರ ಸಂಶೋಧನ ಗ್ರಂಥದ ಪ್ರಕಟನೆಯಾಗದೆ ಕನ್ನಡಿಗರಿಗೆ ಅವರ ಶ್ರಮದ ಫಲ ಇನ್ನೂ ದೊರಕದೆ ಹೋಗಿದೆ.

ಕುಮಾರರಾಮನ ಕಥೆಯ ತಡಿಕೆಯೇನೋ ಬಹು ಸರಳವಾದುದೇ. ಕಂಪಿಲನ ಕಿರಿಯ ಹೆಂಡತಿ ರತ್ನಾಜಿಯು ತನ್ನ ಅಂತಃಪುರಕ್ಕೆ ಬಿದ್ದ ಕುಮಾರ ರಾಮನ ಆಟದ ಚೆಂಡನ್ನು ಹಿಡಿದು ಅವನನ್ನೇ ಬರಮಾಡಿಕೊಂಡು ಪ್ರೇಮಾಲಾಪಮಾಡುತ್ತಾಳೆ. ಪರದಾರ ಸೋದರನಾದ ರಾಮನು ಬಿಡಿಸಿಕೊಂಡುಬರಲು ರತ್ನಾಜಿಯು ಕಂಪಿಲನಿಗೆ ಸುಳ್ಳು ಹೇಳಿ ರಾಮನ ಮೇಲೆ ತನ್ನನ್ನು ಕೆಣಕಿದ ಅಪರಾಧವನ್ನು ಹೊರಿಸುತ್ತಾಳೆ. ರಾಜನು ಮಗನಿಗೆ ಮರಣಶಿಕ್ಷೆಯನ್ನು ವಿಧಿಸುತ್ತಾನೆ. ಮಂತ್ರಿಯು ಜಾಣತನದಿಂದ ಅವನನ್ನು ಬಚ್ಚಿಟ್ಟು ಶತ್ರುಸೇನೆಗಳು ರಾಜ್ಯದ ಮೇಲೆ ಬಿದ್ದಾಗ ರಾಮನನ್ನು ಹೊರತರುತ್ತಾನೆ.

ಇಷ್ಟು ಕಥೆಯನ್ನು ಸುಮಾರು 5000 ಪದ್ಯಗಳ ವಿಸ್ತಾರದ ಕೃತಿಯನ್ನಾಗಿ ಮಾಡಿದ್ದಾನೆ ಕವಿ ನಂಜುಂಡ. ಅದರಲ್ಲಿ ವರ್ಣನೆಗಳು ತುಂಬಿವೆ. ಅಲ್ಲದೆ ಕುಮಾರರಾಮನು ಅರ್ಜುನನ ಅವತಾರವೆಂದೂ, ರತ್ನಾಜಿಯು ಊರ್ವಶಿಯ ಅವತಾರವೆಂದೂ, ಇವರಿಬ್ಬರೂ ಶಿವ ಪಾರ್ವತಿಯರ ಇಷ್ಟಾನುಸಾರ ಇಹದಲ್ಲಿ ಜನ್ಮ ತಳೆದರೆಂದೂ ಹೇಳುವ ಪೌರಾಣಿಕ ಹಿನ್ನೆಲೆ ಬೇರೆ ಸೇರಿಬಿಟ್ಟಿದೆ.

ಈ ಕಥೆಯ ಸಾರವನ್ನು ಸರಳವೂ ಸುಂದರವೂ ಆದ ಶೈಲಿಯಲ್ಲಿ 'ಕುಮ್ಮಟ ಕೇಸರಿ' ಎಂಬ ಹೆಸರಿನಿಂದ ಈ ಲೇಖಕರು ರಚಿಸಿದ್ದಾರೆ. ರಾಮನಾಥನು ರಕ್ಷಣೆ ಮಾಡಿದ 'ಕುಮ್ಮಟ' ದುರ್ಗದಿಂದ ಅವನಿಗೆ ಈ ಹೆಸರು ಬಂದಿದೆ. ರಾಮನಾಥನ ಕಾವ್ಯದ ಆಸ್ವಾದನೆಗೆ ಈ ಗ್ರಂಥವು ಉಪಯುಕ್ತವಾದ ತೋರುಗಂಬವಾಗಿದೆ. ಕಿರಿದಾದರೂ ಪ್ರೌಢವಾಗಿರುವ ಪ್ರಸ್ತಾವನೆಯು ಈ ಕಥೆಯ ಗೊಂದಲದ ಪರಿಚಯ ಮಾಡಿಕೊಡುತ್ತದೆ. ಶೃಂಗಾರ ಪ್ರಧಾನ ವಾದ ಈ ಕಥೆಯನ್ನು ಗಂಭೀರವಾಗಿ ರಚಿಸಿರುವುದು ಲೇಖಕರ ಕೌಶಲವನ್ನು ವ್ಯಕ್ತಪಡಿಸುತ್ತದೆ. ಗ್ರಂಥದ ಹೊರ ಒಳಮೈಗಳೆರಡೂ ಸುಂದರವಾಗಿವೆ. ಇದೊಂದು ಓದಲರ್ಹವಾದ ಕೃತಿ.

ಜಾನಪದ ಕಾಳಜಿಯ ಎಚ್.ಎಲ್. ನಾಗೇಗೌಡ

ಕನ್ನಡ ಸಾಹಿತ್ಯ ಸಂಸ್ಕೃತಿಗಳ ಉಪಾಸಕರಲ್ಲಿ ಹಲವು ವಿಧ. ಸಾಹಿತ್ಯ ಜೀವಿಯಾಗಿ ನಿರಂತರ ಅಭ್ಯಾಸ, ಸತತ ಪರಿಶ್ರಮ, ಕಾವ್ಯ ಗ್ರಂಥಗಳ ರಚನೆ ಮಾಡುತ್ತಿರುವವರು ಸಾಮಾನ್ಯವಾಗಿ ಕಾಣಸಿಗುವವರು. ಆದರೆ ಸರ್ಕಾರದ ಅನೇಕ ಉನ್ನತಾಧಿಕಾರಿಗಳಲ್ಲಿದ್ದು, ಬಿಡುವಿಲ್ಲದ ಸೇವೆಯನ್ನು ಸಮರ್ಪಕವಾಗಿ ಮಾಡುತ್ತ, ಬಿಡುವು ದೊರೆತಾಗಲೆಲ್ಲ ಸಾಹಿತ್ಯದ ಅಭ್ಯಾಸ, ಚಿಂತನ, ರಚನೆಗಳ ಕಡೆಗೆ ಗಮನ ಹರಿಸಿ, ಆ ಕ್ಷೇತ್ರದಲ್ಲಿಯೂ ಉತ್ತಮವಾದ, ಶ್ಲಾಘ್ಯವಾದ ಕೆಲಸ ಮಾಡುವವರು ಬಹುವಿರಳ. ಅಂತಹವರಲ್ಲಿ ನಾಗೇಗೌಡರೊಬ್ಬರು.

ನಾಗೇಗೌಡರು 1916ನೇ ಇಸವಿಯಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಪರಗನಹಳ್ಳಿಯಲ್ಲಿ ರೈತ ಕುಟುಂಬವೊಂದರಲ್ಲಿ ಜನ್ಮ ತಾಳಿದರು. ಪ್ರಕೃತಿಯ ಮಡಿಲಿನಲ್ಲಿ ಗ್ರಾಮಜೀವನ, ಗ್ರಾಮೀಣ ಸಂಸ್ಕೃತಿಗಳನ್ನು ಮೈಗೂಡಿಸಿಕೊಂಡು ಬೆಳೆದರು.

ನಾಗೇಗೌಡರ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಗಳು ನಡೆದದ್ದು ಬಹುತೇಕವಾಗಿ ಹಳ್ಳಿಯ ಶಾಲೆಗಳಲ್ಲಿ- ಚನ್ನಪಟ್ಟಣದಲ್ಲಿ ಪ್ರೌಢಶಾಲೆಯ ವ್ಯಾಸಂಗ. ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಉನ್ನತ ವ್ಯಾಸಂಗ ನಡೆಸಿ ವಿಜ್ಞಾನ ಪದವೀಧರರಾದರು. 1939ರಲ್ಲಿ ಪುಣೆಯ ಲಾ ಕಾಲೇಜಿನಲ್ಲಿ ನ್ಯಾಯಶಾಸ್ತ್ರದ ಪದವಿಯನ್ನು ಪಡೆದು ಅದೇ ವರ್ಷ ಮುನ್ಸಿಫ್ ಕೋರ್ಟಿನಲ್ಲಿ ಹೆಡ್ ಮುನ್ಷಿಯಾಗಿ ಸರ್ಕಾರಿ ಸೇವೆಯನ್ನು ಪ್ರಾರಂಭಿಸಿದರು. 1940ರಲ್ಲಿ ನಮ್ಮ ದೇಶದಲ್ಲಿನ ಅತಿ ಉನ್ನತ ಪದವಿಯಾಗಿದ್ದ ಎಂ.ಸಿ.ಎಸ್.ನಲ್ಲಿ ಉತ್ತೀರ್ಣರಾದರು. ಅವರ

ನೇರವಾಗಿ 1941ರಲ್ಲಿ ರೆವಿನ್ಯೂ ಪ್ರೊಬೇಷನರ್ ಆಗಿ ನೇಮಕರಾದರು. ಪ್ರೊಬೇಷನರ್ ಆಗಿ ನೇಮಕವಾದ ನಂತರ ಎರಡು ವರ್ಷಗಳ ತರಬೇತಿಯನ್ನು ಪಡೆದು 1943ರಲ್ಲಿ ಹಂಪದ ತಾಲ್ಲೂಕಿನ ನಾಗೇಗೌಡರು ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, 1978ರಲ್ಲಿ ರಾಜ್ಯ ಲೋಕಸೇವಾ ಆಯೋಗದ ಸದಸ್ಯರಾಗಿ ನಿವೃತ್ತಿ ಹೊಂದಿದರು.

ಉನ್ನತ ಶ್ರೇಣಿಗೆ

1961ರಲ್ಲಿ ಐ.ಎ.ಎಸ್. ಶ್ರೇಣಿಗೆ ಸೇರ್ಪಡೆ ಹೊಂದಿದ ಇವರು 1961ರಿಂದ 63ರವರೆಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳಾಗಿ ಅಲ್ಲೊಂದು ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದರು. 1963 ರಿಂದ 95ರವರೆಗೆ ಚಿಕ್ಕಮಗಳೂರು ಜಿಲ್ಲಾಧಿಕಾರಿಯಾಗಿ ಹಾಗೂ ಮೈಸೂರು ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಅಧ್ಯಕ್ಷರಾಗಿ ನಿಷ್ಠೆಯಿಂದ ಅವಿರತ ನಡೆಸಿ ಆ ಸಂಸ್ಥೆಯ ಪ್ರಗತಿಗೆ ಕಾರಣರಾದರು. ಈ ಅವಧಿಯಲ್ಲಿ ಅವರು ಪಡೆದ ಅನುಭವ, ವಿಷಯಗಳ ಸೂಕ್ಷ್ಮ ವೀಕ್ಷಣೆ ಮತ್ತು ಸಂಗ್ರಹಗಳ ಫಲವೇ ಅವರು ರಚಿಸಿದ ಬೆಟ್ಟದಿಂದ ಬಟ್ಟಲಿಗೆ ಎಂಬ ಕೃತಿ ಸ್ವಾರಸ್ಯವಾದ ಕಾಫಿಯ ಕಥೆ.

ಇದು ಶ್ರೀಯುತರ ವ್ಯಕ್ತಿತ್ವದ ಒಂದು ಮುಖವಾದರೆ, ಸಾಹಿತಿಯಾಗಿ ನಾಗೇಗೌಡರು ನಡೆಸಿದ ಸಾಧನೆ, ಪಡೆದ ಸಿದ್ಧಿ ವಿಶೇಷ ರೀತಿಯದು. ಪುಣೆಯಲ್ಲಿ ನ್ಯಾಯಶಾಸ್ತ್ರ ವ್ಯಾಸಂಗ ನಡೆಸುತ್ತಿದ್ದಾಗಲೇ ಇವರಲ್ಲಿ ಸುಪ್ತವಾಗಿದ್ದ ಕವಿ ಎಚ್ಚರಗೊಂಡನು. ಆ ತರುಣದಲ್ಲಿ ಅವರು ರಚಿಸಿದ ಮತ್ತು ಅನುವಾದಿಸಿದ ಕವನಗಳು ಮುಂದಿನ ವರ್ಷಗಳಲ್ಲಿ ''ನಾನಾಗುವೆ ಗೀಜಗನ ಹಕ್ಕಿ'' ಮತ್ತು ''ಕಥೆ ವ್ಯಥೆ'' ಎಂಬ ಎರಡು ಕವನ ಸಂಕಲನಗಳಾಗಿ ಪ್ರಕಟಗೊಂಡವು. ಅಂದು ಉಗಮವಾದ ಸಾಹಿತ್ಯದ ಹೊನಲು ಇಂದಿನವರೆಗೆ ದೀರ್ಘವಾಗಿ, ವೈವಿಧ್ಯ ಪೂರ್ಣವಾಗಿ, ರಂಜಕವಾಗಿ ಹರಿಯುತ್ತ ಬಂದಿದೆ. ಅವರ ವಿಶಿಷ್ಟ ಕೊಡುಗೆಗಳಿಂದ ಕನ್ನಡ ಸಾರಸ್ವತವು ಶ್ರೀಮಂತವಾಗಿದೆ.

''ಕನಿಲ್ ವರ್ತ್'' ಇಂಗ್ಲೀಷಿನಿಂದ ಸಂಗ್ರಹಿಸಿ ಅನುವಾದಿಸಿದ ಕಾದಂಬರಿಯಾದರೆ ''ದೊಡ್ಡಮನೆ'', ''ಸೊನ್ನೆಯಿಂದ ಸೊನ್ನೆಗೆ'' ಮತ್ತು ''ಭೂಮಿಗೆ ಬಂದ ಗಂಧರ್ವ'' ಅವರ ಸ್ವತಂತ್ರ ಕಾದಂಬರಿಗಳು. ಅವರ ''ಮಾರ್ಕೊ ಪೋಲೋ'' ಪ್ರವಾಸ ಕಥನ ಮತ್ತು ಆರು ಬೃಹತ್ ಸಂಪುಟಗಳಲ್ಲಿ ಮೈತಳೆದಿರುವ ''ಪ್ರವಾಸಿ ಕಂಡ ಇಂಡಿಯಾ'' ಇವು, ಯಾವ ಭಾಷೆ, ಸಾಹಿತ್ಯವಾದರೂ ಹೆಮ್ಮೆಪಡಬಹುದಾದ, ಉಪಯುಕ್ತವೂ ಅಪೂರ್ವವೂ ಆದ ಕೃತಿಗಳು. ''ಪ್ರವಾಸಿ ಕಂಡ ಇಂಡಿಯಾ'' ಮಹಾಕೃತಿಯ ಇನ್ನೂ ನಾಲ್ಕು ಸಂಪುಟಗಳು ಹೊರಬರಬೇಕಾಗಿದೆ. ಶ್ರೀಯುತರ ಆಳವಾದ ಚಾರಿತ್ರಿಕ ಅಭ್ಯಾಸದ ಫಲಗಳು ಈ ಕೃತಿಗಳು. ''ಸರೋಜಿನಿ ದೇವಿ'' ಇವರು ಬರೆದ ಜೀವ ಚರಿತ್ರೆಯಾದರೆ ''ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚ'' ಎಂಬುದು ಅನುವಾದಿತ ಆತ್ಮ ಕಥನ. ''ನನ್ನೂರು'' ಶ್ರೀಯುತ ಮಣ್ಣಿನ ಮಕ್ಕಳ ಬಗ್ಗೆ ಹೊಂದಿರುವ ಕಳಕಳಿಯನ್ನು ಯಥಾವತ್ತಾಗಿ ಬಿಡಿಸುವ ಗ್ರಾಮೀಣ ಚಿತ್ರ. ಹೃದ್ಯವಾದ

ಗದ್ಯ ಶೈಲಿ, ಗ್ರಾಮೀಣ ಭಾಷೆಯ ಸೊಬಗು ಸೊಗಡುಗಳನ್ನು ಅವರ ಈ ಕೃತಿಗಳಲ್ಲಿ ಕಾಣಬಹುದಾಗಿದೆ.

ನಾಗೇಗೌಡರ ಸಹಜ ವ್ಯಕ್ತಿತ್ವವನ್ನು, ಅನುಪಮ ಆಸಕ್ತಿಯನ್ನು, ನಿಜವಾದ ಒಲವನ್ನು ಅವರ ಜಾನಪದ ಸಾಹಿತ್ಯ, ನೃತ್ಯ ಮತ್ತು ಕೃತಿಗಳ ರೂಪದಲ್ಲಿ ಕಾಣಬಹುದು. ಜನಪದ ಸಾಹಿತ್ಯದ ಬಗೆಗೆ ವಿದ್ಯಾವಂತರೆನಿಸಿಕೊಂಡವರಲ್ಲಿ ಕಂಡುಬರುವ ಅನಾದರಣೆಯಿಂದ ಗೌಡರಿಗೆ ಬಹು ದುಃಖ, ಬಲು ಬೇಸರ. ಬಾಲ್ಯದಿಂದ ತಮ್ಮ ಕಿವಿಗಳನ್ನು ತುಂಬಿದ ಅಮೃತವನ್ನು ಸಂಗ್ರಹಿಸಬೇಕು, ಹಳ್ಳಿಯ ಹೆಣ್ಣು ಮಕ್ಕಳ ಸವಿಯಾದ ಸಹಜವಾದ ಕೊರಳಿನಿಂದಲೇ ಅವುಗಳನ್ನು ಹಾಡಿಸಿ ಧ್ವನಿಮುದ್ರಣ ಮಾಡಿಕೊಳ್ಳಬೇಕೆಂಬ ಗೀಳು ಅವರಿಗೆ. ''ಸೋಬಾನೆ ಚಿಕ್ಕಮ್ಮನ ಪದಗಳು'' ಮತ್ತು ''ಪದವವೆ ನಮ್ಮ ಎದೆಯಲ್ಲಿ'' ಎಂಬ ಎರಡು ಜಾನಪದ ಸಂಕಲನಗಳನ್ನು ಹೊರತಂದಿದ್ದಾರೆ. ''ಹೆಳವರು ಮತ್ತು ಅವರ ಹಾಡುಗಳು'' ಎಂಬ ಸಂಶೋಧನಾತ್ಮಕ ಜಾನಪದ ಗ್ರಂಥವನ್ನು ಪ್ರಕಟಿಸುವವರಿದ್ದಾರೆ. ಅವರಲ್ಲಿ ಈಗ ಒಂದು ಅಮೂಲ್ಯವಾದ ಜಾನಪದ ಧ್ವನಿ ಮುದ್ರಿಕೆಗಳ ಭಂಡಾರವೇ ಇದೆ. ಜಾನಪದ ಪ್ರಚಾರ ಪ್ರಸಾರಗಳಿಗಾಗಿ, ಅದರ ಸೊಗಸು ಸೊಗಡುಗಳನ್ನು ಜನರಿಗೆ ತಿಳಿಸಲು ಮಂಗಳೂರು ಮತ್ತು ನಾಗಮಂಗಲಗಳಲ್ಲಿ ಜಾನಪದ ಸಮ್ಮೇಳನಗಳನ್ನು ನಡೆಸಿದ್ದಾರೆ. ಗ್ರಾಮೀಣ ವಿಶ್ವಕೋಶವನ್ನು ರಚಿಸಬೇಕು ಮತ್ತು ರಾಜ್ಯದಲ್ಲಿ ಜಾನಪದ ಅಕಾಡೆಮಿಯ ಸ್ಥಾಪನೆಯಾಗಬೇಕು ಎಂಬ ಮಹಾದಾಸೆ ಅವರಿದೆ.

ಪ್ರಶಸ್ತಿ

ಗೌಡರ ''ವೆರಿಯರ್ ಎಲ್ವಿನ್‌ನ ಗಿರಿಜನ ಪ್ರಪಂಚ, ''ದೊಡ್ಡಮನೆ'' ''ಬೆಟ್ಟದಿಂದ ಬಟ್ಟಲಿಗೆ'' ಮತ್ತು ''ಸೋಬಾನ ಚಿಕ್ಕಮ್ಮನ ಪದಗಳು'' — ಈ ಕೃತಿಗಳು ಕರ್ನಾಟಕ ಸಾಹಿತ್ಯ ಕಾಡೆಮಿಯ ಪ್ರಶಸ್ತಿಯನ್ನು ಪಡೆದಿವೆ. ಅವಿರತವಾದ ಸಾಹಿತ್ಯ ಚಿಂತನೆ, ಸಾಹಿತ್ಯ ಕೃಷಿ ನಡೆಸಿರುವ ನಾಗೇಗೌಡರು ಕನ್ನಡ ಸಾಹಿತ್ಯ ಪರಿಷತ್ತಿನ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳ ಪ್ರಕಟಣ ಸಮಿತಿಗಳ ಸದಸ್ಯರಾಗಿದ್ದಾರೆ. ಇಂತಹ ತುಂಬು ಜೀವನವನ್ನು ನಡೆಸಿರುವ ಸಾಹಿತಿ, ಜಾನಪದ ಕವಿ ನಾಗೇಗೌಡರಿಗೆ ಈಗ ಅರವತ್ತೆರಡರ ಹರೆಯ. ಅವರ ಸಾಹಿತ್ಯ ಕೈಂಕರ್ಯವು ಇನ್ನೂ ಅಧಿಕ ಪ್ರಮಾಣದಲ್ಲಿ ನಡೆದು, ಅವರಿಂದ ಅನೇಕ ಅಮೂಲ್ಯ ಕೃತಿಗಳು ಹೊರಬಂದು, ಅವರ ಕನಸುಗಳೆಲ್ಲ ನನಸಾಗುವ ಕಾಲ ಬೇಗ ಬರಲೆಂಬುದು ಕನ್ನಡಿಗರೆಲ್ಲರ ತುಂಬು ಹೃದಯದ ಹಾರೈಕೆ. ಆದರೆ ಅವರು ಅನಾರೋಗ್ಯದಿಂದ ಈಚೆಗೆ ಅವಸಾನ ಹೊಂದಿದರು.

ಸಮೂಹಮಾಧ್ಯಮಕ್ಕೆ ಮೆರುಗಿತ್ತ ತಂತ್ರಕುಶಲಿ

ಡಾ|| ಎಚ್.ಕೆ. ರಂಗನಾಥ

(1924-2003)

ಮೈಸೂರಿನ ವೀವರ್ಸ್‌ಲೈನ್ಸ್ ಎಂಬ ಹರಹಿನಲ್ಲಿ ವಾಸಮಾಡುತ್ತಿದ್ದ ಕನ್ನಡದ ಹಿರಿಯ ವಿದ್ವಾಂಸರಾದ ಟಿ.ಎಸ್. ವೆಂಕಣ್ಣಯ್ಯನವರ ಮನೆಯ ಎದುರಿಗೆ ಎಚ್.ಕೆ. ರಂಗನಾಥ ಅವರು ವಾಸ ಮಾಡುತ್ತಿದ್ದರು. ಬೆಳಗ್ಗೆ ಎದ್ದು ವೆಂಕಣ್ಣಯ್ಯನವರು ವಾಯು ವಿಹಾರಕ್ಕೆ ಹೋಗುತ್ತಿದ್ದುದು ಉಂಟು. ಹೇಗೋ ಒಂದು ಸಲ ಅವರೊಡನೆ ತಾವೂ ವಾಯು ವಿಹಾರಕ್ಕೆ ಹೊರಟು ಬಿಟ್ಟ ಹುಡುಗ ರಂಗನಾಥ. ಇದೇ ಅಭ್ಯಾಸವಾಗಿ ಹೋಯಿತು. ಈ ವಾಯುವಿಹಾರದ ವ್ಯಾಯಾಮ ರಂಗನಾಥನಿಗೆ ದೊಡ್ಡವರಂತೆ ಬಾಳುವ ಶಿಕ್ಷಣವಾಗಿ ಹೋಯಿತು. ಬಾಲಕನೊಡನೆ ಏನೇನೋ ಹರಟುತ್ತ ಅವನನ್ನು ನಗಿಸುತ್ತ ಆ ವಿದ್ವಾಂಸರು ಹುಡುಗನಲ್ಲಿ ಅನೇಕ ಭವಿಷ್ಯದ ಕನಸುಗಳನ್ನು ಕಟ್ಟಿಬಿಟ್ಟರು. ಹೀಗೆ ದೊರೆತ ಜೀವನ ದರ್ಶನ ರಂಗನಾಥನಿಗೆ ಮುಂದಿನ ಜೀವನದಲ್ಲಿ ಸದಾ ಮೇಲ್ಪಂಕ್ತಿಯಾಯಿತು - ವ್ಯವಹರಿಸುವುದಕ್ಕೆ.

ಇಂಥ ಅವಕಾಶ ಅದೆಷ್ಟು ಜನಕ್ಕೆ ದೊರಕೀತು! ರಂಗನಾಥನು ಕಾಲೇಜು ವಿದ್ಯಾಭ್ಯಾಸವನ್ನು ಮಾಡಬೇಕಾದಾಗ ವೆಂಕಣ್ಣಯ್ಯನವರು ತೀರಿಕೊಂಡರು. ಆದರೆ ಅವರು ಕಟ್ಟಿದ್ದ ಆದರ್ಶ ಮಾತ್ರ ಆತನ ಮನಸ್ಸಿನಲ್ಲಿ ಸದಾ ಎಚ್ಚರವಾಗಿತ್ತು. ಕಾಲೇಜು ಸೇರುವ ಹೊತ್ತಿಗೆ ರಂಗನಾಥನಿಗೆ ಸಾಕಷ್ಟು ಸಂಗೀತದ ಕಲಿಕೆಯಾಗಿತ್ತು. ನಾಟಕದಲ್ಲಿ ಪಾತ್ರಗಳನ್ನು

ಹಾಡಿ ನಟಿಸುವ ಹವ್ಯಾಸ ಬೆಳೆಯಿತು. ಶಿವರಾಮ ಕಾರಂತರು 'ಕಿಸಾಗೋತಮಿ' ಎಂಬ ಗೀತನಾಟಕವನ್ನು ರಂಗನಾಥನಿಗಾಗಿ ಬರೆದರೋ ಎನ್ನುವಂತೆ ಆ ಹೆಣ್ಣು ಪಾತ್ರವನ್ನು ಅಭಿನಯಿಸಿ ಅವನು ಪ್ರಸಿದ್ಧಿಯನ್ನು ಪಡೆದನು. ನಾಟಕದ ಮನೆಯಿಂದ ನಾಮದೇಯವನ್ನು ಬೇಡಿತರಲು ರಂಗದ ಮೇಲೆ ನಟಿಸುತ್ತಿದ್ದ ರಂಗನಾಥನ ಚಿತ್ರ ಇಂದಿಗೂ ನನ್ನ ಕಣ್ಣಿಂದೆ ಕಟ್ಟಿದಂತಿದೆ. ಅನೇಕ ನಾಟಕಗಳಲ್ಲಿ ಪ್ರಸಿದ್ಧ ನಟರೊಡನೆ ಸ್ತ್ರೀಪಾತ್ರಧಾರಿಯಾಗಿ ಅವನ ಕೀರ್ತಿ ಬೆಳೆದಿತ್ತು.

ಸುಮಾರು 1936ರ ವೇಳೆಗೆ ಮೈಸೂರಿಗೆ ಆಕಾಶವಾಣಿಯ ಪ್ರವೇಶವಾಯಿತು. ಪ್ರಸಿದ್ಧ ಮನಶ್ಶಾಸ್ತ್ರಜ್ಞರಾಗಿದ್ದ ಡಾ|| ಎಂ.ವಿ.ಗೋಪಾಲಸ್ವಾಮಿಯವರು ತಮ್ಮ ಸ್ವಂತ ಖರ್ಚಿನಿಂದ ಪ್ರಸಾರಮಾಧ್ಯಮವನ್ನು ತಂದು ಹುಟ್ಟು ಹಾಕಿದ್ದರು. ಆಗ ತಾನೆ ಬಂದ 'ರೇಡಿಯೋ' ಎಂಬ ಹೆಸರು ಮೈಸೂರಿನ ಜನತೆಯ ಬಾಯಲ್ಲಿ ಚಲಾವಣೆಗೆ ಬಂತು. ಗೋಪಾಲಸ್ವಾಮಿ ಅವರ ಮನೆಯ ಮಹಡಿಯ ಮೇಲೆ ಈ ಪ್ರಸಾರ ಯಂತ್ರಾಗಾರವು ಸ್ಥಾಪಿತವಾಗಿತ್ತು. ಸಂಜೆಯ ಹೊತ್ತು ಅವರ ಮನೆಯ ಮುಂದಿನ ಬಯಲಿನಲ್ಲಿ ಜನ ಕಲೆತು ರೇಡಿಯೋ ವಾರ್ತೆಗಳನ್ನೂ ವಿದ್ವಾಂಸರ ಭಾಷಣಗಳನ್ನೂ ಕಿರುನಾಟಕಗಳನ್ನೂ ಕೇಳುತ್ತ ಇದ್ದರು. ನಾವೆಲ್ಲ ಅಲ್ಲಿಯೇ 30 ನಿಮಿಷದ ಭಾಷಣಗಳನ್ನು ಮಾಡಿದ್ದು. ಈ ವ್ಯವಸ್ಥೆಯಲ್ಲಿ ರಂಗನಾಥನಿಗೆ ವಾರ್ತೆಗಳನ್ನು ಓದುವ ಅವಕಾಶ ಸಿಕ್ಕಿತು. ರಂಗನಾಥನಿಗೆ ಅವಕಾಶ ಸಿಕ್ಕಿತೋ ಆಕಾಶವಾಣಿಗೆ ರಂಗನಾಥ ಸಿಕ್ಕಿದನೋ ಹೇಳುವುದು ಕಷ್ಟ. ಅಲ್ಲಿಂದ ಮುಂದೆ ರಂಗನಾಥನ ಜೀವನ ಆಕಾಶವಾಣಿಯ ಜೊತೆ ಸೇರಿಕೊಂಡು ಎರಡು ಪಕ್ಷಗಳೂ ಅಭಿವೃದ್ಧಿ ಪಡೆದವು. ಆಕಾಶವಾಣಿಯ ನಾಟಕ ವಿಭಾಗದ ನಿರ್ದೇಶಕನಾಗಿ ರಂಗನಾಥ ಅಪಾರ ಯಶಸ್ಸು ಪಡೆದನು.

ಅಲ್ಲಿಂದ ಮುಂದೆ (ನಾನು ಈಗ ಬಹುವಚನವನ್ನು ಪ್ರಯೋಗಿಸುತ್ತೇನೆ) ಎಚ್.ಕೆ. ರಂಗನಾಥ್ ನಾಟಕ ವಿಭಾಗದ ಪ್ರಬಂಧಕ್ಕೆ ಡಾಕ್ಟೊರೇಟ್ ಪದವಿಯನ್ನು ಪಡೆದು ದೆಹಲಿಯ ಆಕಾಶವಾಣಿ ಕೇಂದ್ರದಲ್ಲಿ ಸಂಗೀತನಾಟಕ ವಿಭಾಗದ ಮುಖ್ಯಾಧಿಕಾರಿಯಾಗಿ ಪ್ರಸಾರ ಮಾಧ್ಯಮಕ್ಕೆ ಹಿರಿಮೆಯನ್ನು ತಂದುಕೊಟ್ಟರು.

ನಾಟಕದ ನಿರ್ದೇಶಕ, ಸಂಗೀತದ ಮಾರ್ಗದರ್ಶಕ, ಜಾನಪದ ಕಲೆಗಳ ಪ್ರಸಾರಕ ಮತ್ತು ಸಾಂಸ್ಕೃತಿಕ ವಿನಿಮಯ ವ್ಯವಸ್ಥೆಯ ನಿರ್ಮಾಪಕ – ಹೀಗೆ ಹಲವು ದೃಷ್ಟಿಯಿಂದ ರಂಗನಾಥರು ಮಾಡಿದ ಕಾರ್ಯ ಮಹತ್ವದ್ದು . ವಿಶ್ವದ ಅನೇಕ ದೇಶಗಳಿಗೆ ಭಾರತದ ಜಾನಪದ ಕಲೆಯನ್ನು ಪರಿಚಯ ಮಾಡಿದರು. ಯಕ್ಷಗಾನ, ಸೂತ್ರದ ಗೊಂಬೆಯಾಟ ತೊಗಲುಗೊಂಬೆಯಾಟ, ಇತರ ಅನೇಕ ಜಾನಪದ ನೃತ್ಯಗಳು ಇತ್ಯಾದಿಗಳನ್ನೆಲ್ಲ ಇತರ ದೇಶಗಳವರಿಗೆ ಪರಿಚಯ ಮಾಡಿಕೊಟ್ಟರು. ಎಲ್ಲಕಡೆ ಜನ ಇವರ ಪ್ರದರ್ಶನಗಳನ್ನು ಮಂತ್ರಮುಗ್ಧರಾಗಿ ವೀಕ್ಷಿಸಿದರು. ಈ ಕಾರ್ಯಕ್ಕೆ ರಂಗನಾಥರನ್ನು ಬಿಟ್ಟರೆ ಇತರರು ಯಾರೂ ಇಲ್ಲ ಎನ್ನುವ ಮಟ್ಟಿಗೆ ಅವರ ಕೀರ್ತಿ ಬೆಳೆಯಿತು.

ಕನ್ನಡದಲ್ಲಿ ಅನೇಕ ಗ್ರಂಥಗಳನ್ನು ರಂಗನಾಥ ಬರೆದಿದ್ದಾರೆ. ಅವರ ಕನ್ನಡದ ಶೈಲಿಯಲ್ಲಿ ನುಸುಳುತ್ತಿದ್ದ ಲಘುಹಾಸ್ಯದ ಮಿಂಚು ಅದರ ವಿಶಿಷ್ಟವಾದ ಗುಣವಾಗಿತ್ತು. ಬರಹದ ನಡುವೆ ಏನಾದರೂ ಅನುಮಾನ ಬಂದರೆ ನೇರವಾಗಿ ನನಗೆ ದೂರವಾಣಿ ಬರುತ್ತಿತ್ತು. ಮಧ್ಯಾಹ್ನ 4–5 ಗಂಟೆಗಳ ನಡುವೆ ದೂರವಾಣಿ ಬಂದರೆ ಅದು ರಂಗನಾಥರದೇ ಇರಬೇಕು ಎಂದು ನಮ್ಮ ಮನೆಯವರಿಗೆ ನಿಶ್ಚಯವಾಗಿತ್ತು.

ನನ್ನನ್ನು ಕಂಡಾಗಲೆಲ್ಲ 'ಮೇಷ್ಟ್ರೇ ಬನ್ನಿ' ಎನ್ನುವುದು ಅವರ ರೀತಿ. ಅವರು ಮೈಸೂರಿನ ಕಾಲೇಜಿನಲ್ಲಿ ಓದುತ್ತಿದ್ದಾಗ ನಾನು ಅಲ್ಲಿ ಅಧ್ಯಾಪಕನಾಗಿದ್ದೆ. ಆಗಿನಿಂದ ಇದೇ ರೀತಿ ನಡೆದುಬಂದಿತ್ತು. ನಮ್ಮಿಬ್ಬರ ನಡುವೆ ಒಂದು ವಿಶ್ವಾಸ ಶಾಶ್ವತವಾಗಿ ಬೆಳೆದಿತ್ತು. ಅದನ್ನು ಅವರು ಅವರ ಅದೃಷ್ಟ ಎಂದು ಕರೆಯುತ್ತಿದ್ದರು. ನಾನು ಅದನ್ನು ಹಿರಿಯರ ಪುಣ್ಯ ಎನ್ನುತ್ತಿದ್ದೆ.

ನ್ಯಾಯವಾಗಿ ಹೇಳಿದರೆ ಅವರ ಗ್ರಂಥಗಳಲ್ಲಿರುವ ಸ್ವಾರಸ್ಯವನ್ನು ಹೇಳಬೇಕಾದರೆ ಅದಕ್ಕಾಗಿಯೇ ಬೇರೆ ಲೇಖನವನ್ನು ಬರೆಯಬೇಕು. ಅಷ್ಟು ಸ್ವಾರಸ್ಯಗಳಿವೆ. ಈ ಸಂದರ್ಭ ದಲ್ಲಿ ನನಗೆ ಅಷ್ಟು ಅವಕಾಶವಿಲ್ಲದೆ ಅದನ್ನು ಕೈ ಬಿಟ್ಟಿದ್ದೇನೆ. ಅದನ್ನು ಯಾವಾಗಲಾದರೂ ಒಂದು ಉಪನ್ಯಾಸದಲ್ಲಿ ವಿವರಿಸಿ ನನ್ನ ಮನಸ್ಸಿಗೆ ಸಂತೋಷವನ್ನು ತಂದುಕೊಳ್ಳುತ್ತೇನೆ.

ಇದ್ದಕ್ಕಿದ್ದಂತೆ ದೂರವಾಣಿ ನನ್ನನ್ನು ಎಚ್ಚರಿಸಿದಾಗ ಅವರದೇ ಕರೆ ಎಂದುಕೊಂಡಿದ್ದೆ. ಆದರೆ ಬಂದದ್ದು ಆಘಾತದ ವರ್ತಮಾನ. ಅಂದು ನನಗೆ ಆರೋಗ್ಯ ತುಂಬ ಕೆಟ್ಟಿದ್ದು ಅವರ ಅಂತ್ಯದರ್ಶನ ಮಾಡಲೂ ಆಗಲಿಲ್ಲ. ಆದರೆ ನನ್ನ ಮನಸ್ಸಿನಲ್ಲಿ ನಿಂತಿರುವ ಕೆಲವು ಶಾಶ್ವತ ಚಿತ್ರಗಳಲ್ಲಿ ಅವರದ್ದು 'ಒಂದು ಸದಾ ಮುಗುಳ್ನಗೆಯನ್ನು ಬೀರುತ್ತ ಇರುತ್ತದೆ. ಇಂಥ ಸದ್ಗುಣಗಳಿಗೆ ಸದ್ಗತಿ ದೊರಕುವುದರಲ್ಲಿ ಆಶ್ಚರ್ಯವೇನು ?

ಬಿ.ಸಿ. ರಾಮಚಂದ್ರಶರ್ಮ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ

(1925-2006)

1952ನೆಯ ಇಸವಿ ಅಕ್ಟೋಬರ್ 17ರಲ್ಲಿ ಪ್ರಕಟವಾದ 'ಜನಪ್ರಗತಿ' ಪತ್ರಿಕೆಯ ದೀಪಾವಳಿ ಸಂಚಿಕೆಯಲ್ಲಿ ನಾನು 'ಸಾಹಿತ್ಯ ಪ್ರದರ್ಶನ' ಎಂಬ ಒಂದು ಕಿರು ಪ್ರಬಂಧವನ್ನು ಪ್ರಕಟಿಸಿದ್ದೆ. ಅದರ ಮೊದಲ ಪ್ಯಾರಾ ಈ ರೀತಿ ಇದೆ :-

"ಶರ್ಮನಿಗೆ ಬೇಸರವಾದಾಗ ನಮ್ಮ ಮನೆಗೆ ಬಂದು ನನ್ನೊಡನೆ ಹರಟೆ ಹೊಡೆಯುವುದು ಪದ್ಧತಿ. ನನಗೂ ಈ ಮಾತಿನ ಕಾಲಹರಣದಿಂದ ಸುಖ ಒದಗುವುದರಿಂದ ನಾನು ಅದಕ್ಕೆ ಅಡ್ಡಿ ತಂದಿಲ್ಲ. ನೆನ್ನೆ ಸಂಜೆ ಅವನು ಬಂದ. ನಮ್ಮ ಮಾತು ಪ್ರಪಂಚವನ್ನೆಲ್ಲಾ ಸುತ್ತಿ ಸಜ್ಜನರಾಯರ ಸರ್ಕಲ್ಲಿಗೆ ಬಂದು ನಿಂತಿತು. ಅಲ್ಲಿಯ ದೇವಸ್ಥಾನದ ಗೋಪುರದ ಪಕ್ಕದಲ್ಲಿ ಈಗ ಹೊಸದಾಗಿ ಈಕಡೆಗೆರಡು ಆಕಡೆಗೆರಡು ವಿಮಾನಗಳನ್ನು ಕಟ್ಟಿ ಪುರಾಣ ಕಥೆಯ ಯಾವುದೋ ಒಂದು ಸನ್ನಿವೇಶವನ್ನು ನೆನಪಿಗೆ ತರುವಂತೆ ಬಣ್ಣದ ಬೊಂಬೆಗಳನ್ನು ನಿರ್ಮಿಸಿದ್ದಾರೆ. ಬಣ್ಣ ಜೋರಾಗಿರುವುದರಿಂದ ಎಲ್ಲರ ಕಣ್ಣನ್ನೂ ಸೆಳೆಯುತ್ತದೆ. ಇದರ ವಿಚಾರವಾಗಿ ಮಾತು ಮೊದಲಾಯಿತು. "ಈ **ವರ್ಣಪ್ರದರ್ಶನ** ನನಗೆ ಹಿಡಿಸಲಿಲ್ಲ" ಎಂದೆ. "ನಿಮ್ಮ ಪ್ರಗತಿಶೀಲ ಸಾಹಿತ್ಯದಂತೆ" ಎಂದು ಶರ್ಮ ಟೀಕಿಸಿದ. ಅಷ್ಟೇ ಅಲ್ಲದೆ **ವರ್ಣಪ್ರದರ್ಶನ** ಎನ್ನುವುದಕ್ಕಿಂತ **ರಾಗಪ್ರದರ್ಶನ** ಎಂದರೆ ಇನ್ನೂ ಚೆನ್ನಾಗಿ ಅನ್ವಯಿಸುತ್ತದೆ" ಎಂದೂ ಸೇರಿಸಿದ. ಆ ಶ್ಲೇಷಾರ್ಥದಿಂದ ನನಗೂ ಆನಂದವಾದರೂ ಆ ಮಾತು ಸತ್ಯವಲ್ಲ ಎಂದೆನಿಸಿತು." ಮುಂದಿನ ಭಾಗ ಹಾಗಿರಲಿ.

ಈ ದಾಖಲೆ ನಾನೂ ಶರ್ಮರೂ 1947 ರಿಂದ ಒಂದು ಆರೇಳು ವರ್ಷ ಹೀಗೆ ಒಟ್ಟು ಸೇರಿ ಸಾಹಿತ್ಯದ ವಿಷಯವಾಗಿ ಮಾತನಾಡುತ್ತಿದ್ದೆವು ಎನ್ನುವುದನ್ನು ಚಾರಿತ್ರಿಕವಾಗಿ ಸಾಬೀತು ಪಡಿಸುತ್ತದೆ.

ಆ ಕಾಲ ಮೈಸೂರು ಸಂಸ್ಥಾನದಲ್ಲಿ ಖಾಸಗಿ ಕಾಲೇಜುಗಳು ಸ್ಥಾಪಿತವಾದ ಸಮಯ. ಬೆಂಗಳೂರಿನಲ್ಲಿ ವಿಜಯ ಕಾಲೇಜು, ನ್ಯಾಷನಲ್ ಕಾಲೇಜು ಮತ್ತು ಎಂ.ಇ.ಎಸ್. ಕಾಲೇಜು ಇವುಗಳೂ ಒಂದೇ ಸಮಯದಲ್ಲಿ ಪ್ರಾರಂಭವಾದವು. ಮೈಸೂರಿನಲ್ಲಿ ಶಾರದಾವಿಲಾಸ ಕಾಲೇಜು ಪ್ರಾರಂಭವಾದುದೂ ಆಗಲೆ. ಬೆಂಗಳೂರಿನಲ್ಲಿ ವಿಜಯ ಕಾಲೇಜೂ ಬೆಂಗಳೂರು ಹೈಸ್ಕೂಲು ಇವೆರಡೂ ಒಂದೇ ಕಟ್ಟಡದಲ್ಲಿ ಕಾರ್ಯವನ್ನು ಸಾಗಿಸುತ್ತಿದ್ದುವು. ಕಾಲೇಜಿನ ಕೆಲಸ ಬೆಳಗ್ಗೆ 7.30ರಿಂದ 10.30ರವರೆಗೂ ಬೆಂಗಳೂರು ಹೈಸ್ಕೂಲು 11ರಿಂದ ಸಂಜೆಯವರೆಗೂ ಕೆಲಸ ಮಾಡುತ್ತಿದ್ದುವು. ನಾನು ವಿಜಯ ಕಾಲೇಜಿನಲ್ಲಿದ್ದೆ. ಬೆಂಗಳೂರು ಹೈಸ್ಕೂಲಿನಲ್ಲಿ ರಾಮಚಂದ್ರಶರ್ಮರು ಕೆಲಸಕ್ಕೆ ಸೇರಿದರು. ಸುಮಾರು 1947ರಲ್ಲಿ ನಾನು ಶರ್ಮರನ್ನು ಮೊದಲ ಸಲ ಕಂಡದ್ದು. ಎಂ.ವಿ.ಸೀತಾರಾಮಯ್ಯನವರಿಂದ ಶರ್ಮರ ಪರಿಚಯ ನನಗೆ ಆಗಿತ್ತು. ಆದರೆ ಅವರನ್ನು ನಾನು ಕಂಡಿರಲಿಲ್ಲ. ಅವರು ಸೀತಾರಾಮಯ್ಯನವರ ಸೋದರಳಿಯ. ಶರ್ಮರ ತಂದೆ ಬೊಂಬಾಯಿಯಲ್ಲಿ ಇಂಗ್ಲಿಷ್ ಬೋಧಕರಾಗಿ ಹೆಸರನ್ನು ಸಂಪಾದಿಸಿದ್ದರು. ಅಲ್ಲದೆ 'ಪ್ರಬೋಧಕ' ಎಂಬ ಮಾಸಪತ್ರಿಕೆಯನ್ನು ಕನ್ನಡ ಭಾಷೆಯಲ್ಲಿ ಪ್ರಕಾಶಪಡಿಸುತ್ತಿದ್ದರು. ಶರ್ಮರಿಗೆ 7 ವರ್ಷವಾಗಿದ್ದಾಗ ಅವರ ತಂದೆ ಬಿ.ಚಂದ್ರಶೇಖರ ಶರ್ಮರು (1932) ಪೂರ್ವ ವಯಸ್ಸಿನಲ್ಲಿ ಅವಸಾನ ಹೊಂದಿದರು. ಅಲ್ಲಿಂದ ಮುಂದೆ ಶರ್ಮರ ಕುಟುಂಬದವರೆಲ್ಲ ಮೈಸೂರಿನಲ್ಲಿ ವಾಸಮಾಡುವಂತಾಯಿತು. ಶರ್ಮರ ವಿದ್ಯಾಭ್ಯಾಸವೂ ಮೈಸೂರಿನಲ್ಲಿ ನಡೆಯಿತು. ವಿದ್ಯಾರ್ಥಿಯಾಗಿ ಶರ್ಮ ತುಂಬ ಪ್ರತಿಭಾಶಾಲಿಯಾಗಿದ್ದುದನ್ನು ಅವರ ಅಧ್ಯಾಪಕರು ನನಗೆ ತಿಳಿಸಿದ್ದಾರೆ. ಗಣಿತಶಾಸ್ತ್ರದಲ್ಲಿ ಎಂದೂ ನೂರಕ್ಕೆ ನೂರು ಅಂಕಗಳನ್ನು ಪಡೆಯುತ್ತಿದ್ದುದನ್ನೂ ಅಂಥ ಬುದ್ಧಿವಂತ ವಿದ್ಯಾರ್ಥಿಗಳ ತಂಡದಲ್ಲಿ ಶರ್ಮ ಪ್ರಮುಖವಾಗಿದ್ದುನ್ನೂ ಅವರು ನೆನೆಯುತ್ತಿದ್ದರು. ಬಿ.ಟಿ. ಪರೀಕ್ಷೆಯಲ್ಲಿ ಶರ್ಮ ಮೊದಲ ರ್ಯಾಂಕ್ ಪಡೆದು ಅಧ್ಯಾಪಕರ ವೃತ್ತಿಗೆ ಸೇರಿದರು. ಬೆಂಗಳೂರು ಹೈಸ್ಕೂಲಿನಲ್ಲಿ ಆಗಲೇ ನಾನು ಅವರನ್ನು ಕಂಡುದು.

ಸ್ಫುರದ್ರೂಪಿಯಾದ ಆತ ಬಹುಬೇಗ ಗೆಳೆತನವನ್ನು ಸಂಪಾದಿಸುತ್ತಿದ್ದ. ಹಿರಿಯರೊಡನೆ ಸರಳತನದಿಂದ ನಡೆದುಕೊಳ್ಳುತ್ತಿದ್ದ. ಆತನು ಸಂಭಾಷಣೆಯಲ್ಲಿ ಬಳಸುತ್ತಿದ್ದ ಇಂಗ್ಲಿಷ ಭಾಷೆ ಸಾಮಾನ್ಯರ ಭಾಷೆಯಿಂದ ಬೇರೆಯಾಗಿತ್ತು. ಅದರಲ್ಲಿ ಒಂದು ಹೊಸತನವಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಆತನ Ready Retort ತುಂಬ ಹಾಸ್ಯಯುತವಾಗಿರುತ್ತಿತ್ತು. ಇತರರೊಡನೆ ಆತ ಸರಳವಾಗಿ ಸಹಜವಾಗಿ ಸ್ವೀಕರಿಸುತ್ತಿದ್ದ ಸ್ವಾತಂತ್ರ್ಯದಲ್ಲಿಯೂ ಆಡುವ ಮಾತಿನಲ್ಲಿಯೂ ಒಂದು ಆಕರ್ಷಣೆಯಿತ್ತು. ಇದರಿಂದ ನಾನು ಆತನೊಡನೆ ಸ್ನೇಹ

ಬೆಳಸುವುದು ಸಾಧ್ಯವಾಯಿತು. ನನ್ನೊಡನೆ ಮಾತನಾಡುವುದು ಆತನಿಗೆ ಬೇಕಾಗಿದ್ದುದನ್ನು ನಾನು ಕಂಡುಕೊಂಡೆ. ಹೀಗೆ ನಾವು ಹತ್ತಿರವಾದೆವು. ತನ್ನನ್ನೇ ಹಾಸ್ಯಕ್ಕೆ ಒಳಗು ಮಾಡಿಕೊಳ್ಳುವ ಪ್ರವೃತ್ತಿ ಹಾಸ್ಯದ ಬಹುನವಿರಾದ ಅಂಶ. ತನ್ನ ಬಗ್ಗೆ ತಾನೆ ಹಾಸ್ಯ ಮಾಡಿಕೊಂಡು ನಗುವಿನಲ್ಲಿರುವ ಆಕರ್ಷಣೆಯಿಂದ ಇತರರೂ ತಮ್ಮ ಬಗ್ಗೆ ಆದ ಹಾಸ್ಯವನ್ನು ಸ್ವೀಕರಿಸುವುದು ಸುಲಭವಾಗುತ್ತದೆ. ಹೀಗಿದ್ದುದರಿಂದ ಶರ್ಮನ ಸಮಾನ ವಯಸ್ಕರಾದ ಉಪಾಧ್ಯಾಯರೆಲ್ಲ ಒಟ್ಟಾಗಿ ಓಡಾಡುವುದು. ಒಟ್ಟಾಗಿ ಆಟವಾಡುವುದು, ಒಟ್ಟಾಗಿಯೇ ಹೋಟಲಿಗೆ ಹೋಗುವುದು, ಒಟ್ಟಾಗಿ ಚರ್ಚೆ ಮಾಡುವುದು ಸಾಮಾನ್ಯವಾಗಿತ್ತು. ಅವರೆಲ್ಲರಿಗಿಂತ 10-12 ವರ್ಷಗಳಷ್ಟು ಹಿರಿಯನಾದ ನಾನೂ ಒಟ್ಟಿಗೆ ಸೇರುವುದು ಸಾಧ್ಯವಾಯಿತು.

ಅದು ನಮಗೆಲ್ಲರಿಗೂ ಬಡತನವು ಕಾಡುತ್ತಿದ್ದ ಕಾಲ. ತಿಂಗಳ ಕೊನೆಯವಾರ ಎಲ್ಲರ ಜೇಬೂ ಖಾಲಿ. ಹೋಟಲಿನ ತಿಂಡಿ ಇರಲಿ ಬರಿಯ ಕಾಫಿಗೂ ಬೈಟು ಬಂದ ಕಾಲ. ಇಂಥ ಸ್ಥಿತಿಯಲ್ಲಿ ಹೈಸ್ಕೂಲಿನ ಮೂವರು ಅಧ್ಯಾಪಕರು ಒಂದು ಒಪ್ಪಂದವನ್ನು ಮಾಡಿಕೊಂಡರು. ಆ ಮೂವರು ಇವರು – ಜಿ. ಗೋಪಾಲರಾವ್, ರಾಘವಾಚಾರ್, ರಾಮಚಂದ್ರಶರ್ಮ ಎಲ್ಲರ ಎದುರಿಗೆ ಒಬ್ಬರನ್ನು ಇನ್ನೊಬ್ಬರು ಸಾಲವನ್ನು ಕೇಳಬಾರದು. ಅದು ಸಾಲಕೇಳುವವರಿಗೆ ಅವಮಾನ. ಆದರೆ ಸಾಲ ಬೇಕೇಬೇಕು. ಏನು ಮಾಡುವುದು. ಅವರ ತೀರ್ಮಾನ ಹೀಗಿತ್ತು. ಯಾರು ಕೆಂಪುಟೈ ಅನ್ನು ಧರಿಸಿ ಬರುತ್ತಾರೋ ಅವರ ಬಳಿ ಹಣ ಇಲ್ಲ ಎಂದರ್ಥ. ಇತರರು ಅವರಿಗೆ ಸಹಾಯ ಮಾಡಬೇಕು. ಯಾವ ಅಧ್ಯಾಪಕರಿಗೂ ಗೊತ್ತಾಗದೆ ಈ ಒಪ್ಪಂದ ಸ್ವಲ್ಪಕಾಲ ನಡೆದುಬಂತು. ಆದರೆ ಒಮ್ಮೆ ಮೂವರೂ ಕೆಂಪು ಟೈ ಧರಿಸಿ ಬಂದಾಗ ಅವರಿಗೆ ಒಪ್ಪಂದದ ವಿಫಲತೆ ಗೊತ್ತಾಗಿ ಮೂವರೂ ದೊಡ್ಡದಾಗಿ ನಕ್ಕು ನಗುವನ್ನೇ ಕಾಫಿಯನ್ನಾಗಿ ಸ್ವೀಕರಿಸಿ ಸುಮ್ಮನಾದರು. ಆದರೆ ಅಂದೇ ಆ ಒಪ್ಪಂದದ ಕಥೆ ಹೈಸ್ಕೂಲಿನಲ್ಲೆಲ್ಲಾ ಪ್ರಚಾರ ವಾಯಿತು. ಹೀಗೆ ಬಡತನದಲ್ಲಿ ಸುಖವನ್ನೂ ಕಂಡು ಉಪಾಧ್ಯಾಯರು ಬದುಕಿದ್ದ ಕಾಲದ ಪರಿಚಯವನ್ನು ತಿಳಿಸಲು ಈ ಘಟನೆಯನ್ನು ಉಲ್ಲೇಖಿಸಿದ್ದೇನೆ.

ಒಮ್ಮೆ ಈ ಯುವಕರೆಲ್ಲ ಇಸ್ಪೀಟಾಟದಲ್ಲಿ ನಿರತರಾಗಿ ಕಾಲಹರಣ ಮಾಡುತ್ತಿದ್ದಾಗ ನಾನು ಶರ್ಮರಿಗೆ ಹೇಳಿದೆ : "ಶರ್ಮ There is a poet in you. Don't kill him" ಇತರರಿಗೆ ಈ ಮಾತು ಆಶ್ಚರ್ಯವಾಯಿತು. ಶರ್ಮರು ಕವನಗಳನ್ನು ರಚಿಸುತ್ತಿದ್ದುದು ಇತರರಿಗೆ ತಿಳಿದಿರಲಿಲ್ಲ. ನನ್ನ ಮಾತಿನಿಂದ ಶರ್ಮರಿಗೆ ಯಾವ ಪರಿಣಾಮವಾಯಿತೋ ನಾನು ಕಾಣೆ. ಕೆಲವು ದಿನಗಳ ಬಳಿಕ ಅವರು ನನ್ನ ಬಳಿಗೆ ಬಂದು ಅವರು ರಚಿಸಿದ್ದ ಕೆಲವು ಕವನಗಳನ್ನು ತಂದುಕೊಟ್ಟರು. ಅವುಗಳನ್ನು ಓದಿ ನನಗೆ ಸಂತೋಷವಾಯಿತು. ಅಲ್ಲದೆ ಆತನು ತುಂಬ ಶಕ್ತನಾದ ವ್ಯಕ್ತಿ. ಕನ್ನಡವನ್ನೂ ಇಂಗ್ಲಿಷನ್ನೂ ಚೆನ್ನಾಗಿ ಓದಿಕೊಂಡಿರುವುದು ತಿಳಿಯಬಂತು. ಅಂದಿನಿಂದ ಅವರ ಕವನಗಳನ್ನು ನಾನು ಓದಿ ವಿಮರ್ಶಿಸುವುದು ಅಲ್ಲಿ ಕಾಣುವ ಶಬ್ದಗಳ ಸ್ವರೂಪವನ್ನೂ ಛಂದಸ್ಸನ್ನೂ ಕುರಿತು ಮಾತನಾಡುವುದೂ ಸಾಮಾನ್ಯ ವಾಯಿತು. ಕನ್ನಡ ಛಂದಸ್ಸಿನ ಚರಿತ್ರೆಯನ್ನೇ ಅವರು ನನ್ನೊಡನೆ ಚರ್ಚಿಸಿದರು. ಆ ಬಗ್ಗೆ

ಅವರಿಗಿದ್ದ ಆಸಕ್ತಿ ನನಗೂ ಆಸಕ್ತಿಯನ್ನುಂಟುಮಾಡಿತು. Stanza pattern free Verse, ಕನ್ನಡದ ಷಟ್ಪದಿಗಳು ಸಂಸ್ಕೃತದ ವೃತ್ತಗಳು, ಅಂಶಗಣದ ರಚನೆಗಳು ಇವನ್ನೆಲ್ಲ ಕುರಿತು ನನ್ನೊಡನೆ ಅವರು ಮಾತನಾಡಿದರು. ಮುಖ್ಯವಾಗಿ ಕವಿಗಳು ಏಕೆ ಬೇರೆ ಬೇರೆ ವೃತ್ತಗಳನ್ನು ರಚಿಸುತ್ತಾರೆ ? ಇವರಲ್ಲಿ ಏನಾದರೂ ಉದ್ದೇಶವಿದೆಯೇ ಎಂಬುದನ್ನು ವಿವರಿಸಿದೆ ; ಅವರು ನನ್ನಿಂದ ತಿಳಿದುಕೊಳ್ಳಲು ಬಯಸಿದರು. ನಾನು ಪಂಪ, ರನ್ನರ ಬೇರೆ ಬೇರೆ ವೃತ್ತಗಳನ್ನು ಓದಿ ಹೇಗೆ ಆಯಾ ವೃತ್ತದ ಅರ್ಥಕ್ಕೆ ಛಂದಸ್ಸು ಸಹಾಯ ಮಾಡುತ್ತದೆ ಎಂಬುದನ್ನು ಅರ್ಥ ಮಾಡಿ ಕೊಂಡು ಸಂತೋಷಪಟ್ಟರು. ನಾನು ಛಂದಸ್ಸನ್ನು ಉನ್ನತ ತರಗತಿಗೆ ಪಾಠ ಮಾಡಿದವನು. ಯಾವ ಒಬ್ಬ ವಿದ್ಯಾರ್ಥಿಯೂ ಶರ್ಮರ ಹಾಗೆ ಆಸಕ್ತಿಯನ್ನು ತೋರಿಸಿದುದು ನನಗೆ ನೆನಪಿಲ್ಲ. ಈ ಸರಿಸುಮಾರಿನಲ್ಲಿ ಅವರು ಅವರ ಕವನಗಳ ಒಂದು ಪುಟ್ಟ ಸಂಕಲನವನ್ನು ಪ್ರಕಟಿಸಬೇಕೆಂದು ಮನಸ್ಸು ಮಾಡಿದರು. ಅದಕ್ಕೆ ಅವರ ಕವನಗಳಲ್ಲಿ ಅರ್ಹವಾದವನ್ನು ಆರಿಸುವ ಕೆಲಸವನ್ನು ನನಗೆ ವಹಿಸಿದರು. ಅದಕ್ಕೆ ಅಡಿಗರಿಂದಲೂ ಎಕ್ಕುಂಡಿ ಅವರಿಂದಲೂ ಹಿನ್ನುಡಿಯನ್ನು ಬರೆಸಿದರು. ಅವರ ಮಿತ್ರರಾಗಿದ್ದ ಶ್ರೀ ರಂಗಸ್ವಾಮಿಯವರು ಅದನ್ನು ಮುದ್ರಿಸಲು ಸಹಾಯ ಮಾಡಿದರು ಹೀಗೆ 1952ರಲ್ಲಿ ಶರ್ಮರ **ಹೃದಯಗೀತ** ಪ್ರಕಟವಾಯಿತು. ಅದನ್ನು ಪ್ರಕಟಿಸುವ ಮುಂಚೆ ಆ ಸಂಕಲನವನ್ನು ನನಗೆ ಸಮರ್ಪಣೆ ಮಾಡುವುದಾಗಿ ಹೇಳಿದರು. ನಾನು ಅವರ ತಂದೆಯವರು ಕನ್ನಡಕ್ಕೆ ಮಾಡಿದ ಸೇವೆಯನ್ನು ನೆನೆದು ಅವರ ರಕ್ತದ ನೆನಪಿನಿಂದ ಅವರಿಗೇ ಅದನ್ನು ಸಮರ್ಪಿಸಬೇಕೆಂದು ಸಲಹೆಮಾಡಿದೆ. ಅವರು ಹೇಳಿದರು. 'ನಮ್ಮ ತಂದೆ ತೀರಿಕೊಂಡಾಗ ಅವರ ಶವವನ್ನು ರುದ್ರಭೂಮಿಗೆ ಒಯ್ಯುವಾಗ ಆ ಗಾಡಿಯ ಹಿಂದೆ ಅವರ ಕಾಲುಗಳೆರಡು ಮಾತ್ರ ನನಗೆ ಕಂಡವು. ನನಗೆ ಅಷ್ಟೇ ಅವರ ನೆನಪು !' ಅವರ ಎಳೆತನದಲ್ಲಿ ತಂದೆಯನ್ನು ಕಳೆದುಕೊಂಡ ನೆನಪಾಗಿ ಅವರ ಕಣ್ಣಿನಲ್ಲಿ ನೀರು ಬಂತು. ಆದರೆ ನನ್ನ ಸಲಹೆಗೆ ಒಪ್ಪಿ ಕವನ ಸಂಕಲನವನ್ನು ಅವರ ತಂದೆಗೆ ಅರ್ಪಿಸಿದರು. ಆ ಪುಸ್ತಕದ ಕೊನೆಯಲ್ಲಿ ನನ್ನನ್ನು ಕುರಿತ ಒಂದು ಕವನವಿದೆ.

ಈಚೆಗೆ ರಾಮಚಂದ್ರಶರ್ಮರು ಅವರ ತಂದೆಯನ್ನು ಕುರಿತು ಒಂದು ಕವನ ರಚಿಸಿದ್ದಾರೆ. ಅದು ಹೀಗಿದೆ :

ತಂದೆ

ನೆಲದಂತೆ ನೀನೂ ಫಲವತಿಯಾದೆಯೆಂದೇ
ನನ್ನ ಅಸ್ತಿತ್ವ ನಿನ್ನಿವೊತ್ತಿನ ಹೆಕ್ಕಳಿಕೆ
ತಳಕ್ಕೆ ಎಲ್ಲೋ ಪ್ರಾಣಜಲ ಹರಿದ ನಂಬಿಕೆ
ಬೆಳೆದು, ಅವ್ವ ಅಗೆದಾಗ ಸಿಕ್ಕಿದ್ದ ತಂದೆ.
ಪೊರೆ ತೆಗೆದ ಕಣ್ಣ ಕನ್ನಡಕದಂತೆ ದಪ್ಪ
ಗಾಜ ಕೈಗಡಿಯಾರದಲ್ಲಿ ನಿಶ್ಚಲ ಮುಳ್ಳು-

ಅವನು ಸತ್ತ ವಿಷಮಕ್ಷಣಕೊಂದು ದಾಖಲು.
ಹೋದವನಿಗಿಲ್ಲ, ಹಿಂದುಳಿದ ಹೆಣ್ಣಿಗೆ ಶಾಪ.
ಬರಸಿಡಿಲಾಗಿ ಬಂದು ಬಡಿದಿದ್ದಕ್ಕೆ ಕೋಪ
ಮರವಟ್ಟಂತೆ.... ಮೇಜಮೇಲೊಂದೆರಡು ಪೆನ್ನು
ಅರೆ ಬರೆದ ಕಾದಂಬರಿಯ ಹಸ್ತಪ್ರತಿಯನ್ನು
ಚಿತ್ತಾಗಿಸಿದ ಮನೆ.... ಪುಸ್ತಕಗಳ ರಾಶಿ....
ಗಕ್ಕನವತರಿಸಿ ಅವಸರದಲ್ಲಿ ಹೋದವನ
ಕುರುಹಿದೆಯಾದರೂ ಅಸ್ಪಷ್ಟ ಅವನ ವದನ.

ದುರಂತಚಿತ್ರ ಕರುಳ ಹಿಂಡುತ್ತದೆ.

ಆ ಸಂಕಲನದಲ್ಲಿ ಮತ್ತೆ ಕೆಲವು ಕವನಗಳನ್ನು ಸೇರಿಸಬೇಕೆಂದು ಆಸೆಪಟ್ಟರು. ನಾನು ಅವುಗಳ ಸ್ವಾರಸ್ಯ ಈ ಸಂಕಲನದ ಮಟ್ಟಕ್ಕೆ ಬರುವುದಿಲ್ಲ ಎಂದು ಖಂಡಿತವಾಗಿ ಹೇಳಿದೆ. ಅದು ಅವರ ಮನಸ್ಸಿಗೆ ಬೇಸರವನ್ನು ತಂದಿರಬೇಕು. ಪುಸ್ತಕವು ಮುದ್ರಣವಾದಮೇಲೆ, ಅದನ್ನು ನನಗೆಂದೆ ತೆಗೆದಿಟ್ಟ ಪ್ರತಿಯಲ್ಲಿ ಹೀಗೆ ಬರೆದಿದ್ದಾರೆ :-

ಒಮ್ಮೊಮ್ಮೆ ನಿನ್ನ ನುಡಿ ಬಲುಕಟು
ಮದ್ದು ಮೆಣಸಿನಸಾರು ಮಘವಲ್ಲ ಕಣಾ ಜೀವಿ !
ಕೃತಜ್ಞ ಹೃದಯದ ಒಲವಿನ ಉಡುಗೊರೆ
ರಾಮಚಂದ್ರ ಶರ್ಮ 20-11-52

ಆ ಪ್ರತಿಯನ್ನು ಈಗಲೂ ನನ್ನ ಪುಸ್ತಕ ಭಂಡಾರದಲ್ಲಿ ಇಟ್ಟಿದ್ದೇನೆ.

ರಾಮಚಂದ್ರಶರ್ಮರ ಪ್ರಥಮ ಕಾವ್ಯಸಂಕಲನದ ಬಗ್ಗೆ ಕೆಲವು ವಿವರಗಳನ್ನು ಹೇಳಲು ಬಯಸುತ್ತೇನೆ. ಈ ಕವಿ ಕಾವ್ಯರಚನೆಗೆ ಕೈಹಾಕುವ ಆಲೋಚನೆ ಇರುವುದಕ್ಕೆ ಒಂದು ಹಿನ್ನೆಲೆ ಇದೆ. ಇವರ ಮನೆತನದಲ್ಲಿಯೇ ಕವಿಗಳಾದವರೂ ವಿದ್ವಾಂಸರೂ ಇದ್ದರು. ಇವರ ಸಂಬಂಧಿಕರಾದ ಹಿರಿಯ ವಿದ್ವಾಂಸ ಕವಿ ಬಿ.ಎಂ.ಶ್ರೀಯವರ ಕನ್ನಡ ನವೋದಯದ ಕನಸು ಅನೇಕರನ್ನು ಕಾಡಿದಂತೆ ಇವರನ್ನೂ ಕಾಡಿತು. ಅಲ್ಲದೆ ಕನ್ನಡವನ್ನು ತಾಯಿ, ದೇವತೆ ಎಂದು ಪೂಜಿಸುವ ಅಗತ್ಯವೂ ಇತ್ತು. ಕನ್ನಡ ಚೇತನ ಎಚ್ಚೆತ್ತಿತ್ತು. ಕನ್ನಡಮ್ಮನ ಪಾದಗಳಿಗೆ ಹೂವನರ್ಪಿಸುವ ಭಾವನೆಯೂ, ಮಾತೂ ನಾಡಿನಲ್ಲೆಲ್ಲ ಪ್ರಚಾರವಾಗುತ್ತಿತ್ತು. ಅದು ಅತಿಯಾಯಿತೆನ್ನುವ ಯುವಕರು ಸತ್ವವನ್ನು ಕೂಡಿಸಿಕೊಳ್ಳುತ್ತಿದ್ದರು. ಶ್ರೀಕಂಠಯ್ಯನವರ ಶಿಷ್ಯರ ಗುಂಪನ್ನು ಶ್ರೀಕಂಠಮಠದ ಹೆಸರಿನಲ್ಲಿ ಗುರುತಿಸುತ್ತ ಇದ್ದರು.

'ಭಾರತ ಜನನಿಯ ತನುಜಾತೆ', 'ತಾಯೆ ಬಾರ ಮೊಗವ ತೋರ' 'ಕನ್ನಡವ ಬಿಟ್ಟೆನಗೆ ಅನ್ಯ ಜೀವನವಿಲ್ಲ' ಎಂಬಂಥ ಮಾತುಗಳು ಕನ್ನಡ ಜನಸಾಮಾನ್ಯರನ್ನು ಹೊಡೆದೆಬ್ಬಿಸುತ್ತಿದ್ದುವು.

ಅಂದಿನ ಹಿರಿಯರ ಭಾಷಣಗಳನ್ನು ಕೇಳಲು ಸಾವಿರಾರು ಸಂಖ್ಯೆಯಲ್ಲಿ ಜನ ಸೇರುತ್ತಿದ್ದರು. ಈ ಭಾಷಣಕಾರರು ಎರಡು, ಮೂರು ಗಂಟೆ ಭಾಷಣ ಮಾಡುತ್ತಿದ್ದರು. ಇದೆಲ್ಲ, ಈ ಕನ್ನಡ ಪೂಜ್ಯ ಭಾವನೆ ಎಂಥ ಉದ್ವೇಗದಿಂದ ಕೂಡಿರುತ್ತಿತ್ತು ಎಂಬುದರ ಪರಿವೆ ಇಂದಿನ ಕವಿಗಳಿಗಾಗಲಿ, ವಿದ್ವಾಂಸರಿಗಾಗಲಿ ಇಲ್ಲ. ಈಗ ಕನ್ನಡ ಭಾಷೆ, ಸಾಹಿತ್ಯ ಇವು ಪ್ರಬುದ್ಧವಾಗಿವೆ. ಎಂಥ ಕೆಲಸವನ್ನು ಬೇಕಾದರೂ ಈ ಭಾಷೆಯಲ್ಲಿ ಮಾಡಬಹುದು. ಸಾಹಿತ್ಯದ ಸತ್ವದಲ್ಲಿ, ವೈಪುಲ್ಯದಲ್ಲಿ ಭಾರತದ ಯಾವ ಭಾಷಾಸಾಹಿತ್ಯಕ್ಕೂ ಎರಡನೆಯ ಸ್ಥಾನದಲ್ಲಿ ನಿಲ್ಲಬೇಕಾಗಿಲ್ಲ. ಆದರೆ ಇಂಥ ಗೌರವವು ಕನ್ನಡಕ್ಕೆ ಅಲ್ಪಪ್ರಮಾಣದಲ್ಲಿಯೂ ಇಲ್ಲದಿದ್ದ ಕಾಲದಲ್ಲಿ ಪ್ರಚಾರದ ಭರಾಟೆ ಇಲ್ಲದಿದ್ದರೆ, ಅನೇಕ ಉತ್ತೇಜಕ್ಷಯ ವಿವರಣೆಗಳು ಇಲ್ಲದಿದ್ದರೆ ಇಂದಿನ ಆತ್ಮವಿಮರ್ಶೆಯ ಎತ್ತರದ ವ್ಯಕ್ತಿತ್ವವುಳ್ಳ ತಲೆಮಾರೇ ಉತ್ಪಾದನೆಯಾಗುತ್ತಿರಲಿಲ್ಲ.

ರಾಮಚಂದ್ರಶರ್ಮರು ಬರೆಯಲು ಮೊದಲು ಮಾಡಿದ ಕಾಲದಲ್ಲಿ ಶ್ರೀಕಂಠಮತಕ್ಕೆ ಸೇರಿದ್ದೂ ಅದರಿಂದ ಬೇರೆಯಾಗಿ ಬೆಳೆಯುವ ತೀರ್ಮಾನಮಾಡಿಕೊಂಡು ಅದಕ್ಕೆ ಸಿದ್ಧರಾಗುತ್ತಿದ್ದ ಒಂದು ತಲೆಮಾರು ಕಾರ್ಯಮುಖವಾಗಿತ್ತು. ಅಡಿಗ, ಎಕ್ಕುಂಡಿ, ಶರ್ಮ ಇವರೆಲ್ಲ ಆ ಗುಂಪಿಗೆ ಸೇರುವವರು. ಆದ್ದರಿಂದಲೇ ಅವರು ರಚಿಸಿದ ಕವನಗಳಲ್ಲಿ ಕನ್ನಡವನ್ನು ಗೌರವಿಸುವ ದೃಷ್ಟಿಯೂ ಆ ಭಾಷೆಯನ್ನು ಸಮರ್ಥವಾಗಿ ಉಪಯೋಗಿಸಿ ಅದಕ್ಕೆ ಸತ್ವವನ್ನು ತುಂಬಿಕೊಡುವ ಕೆಲಸವೂ ಜೊತೆಜೊತೆಯಾಗಿ ನೆರವೇರಿತು. ಆ ಬಳಿಕ ಬಂದ ತರುಣ ಲೇಖಕರಿಗೆ ಕನ್ನಡ ಭಾಷೆಯು ದೇವಿಯೂ ಅಲ್ಲ, ತಾಯಿಯೂ ಅಲ್ಲ. ಈಗ ಕನ್ನಡವನ್ನು ಪೂಜ್ಯದೃಷ್ಟಿಯಿಂದ ಕಾಣುತ್ತಿಲ್ಲ. ಈಗ ಕನ್ನಡ ಎಲ್ಲ ಉಪಯೋಗಕ್ಕೆ ಬರುವ ಸಮರ್ಥ ಭಾಷೆಯಾಗಿ, ಕಾರ್ಯಸಾಧಕವಾದ ಒಂದು ಸಾಧನವಾಗಿ (instrument) ಮಾತ್ರ ಕಾಣಬರುತ್ತದೆ. ಈ ಬಗೆಯ ಬೆಳವಣಿಗೆ ಸರಿಯಾದುದೇ, ನನಗೂ ಅನುಮಾನವಿಲ್ಲ. ಆದರೆ ಇಂಥ ಬೆಳವಣಿಗೆಯಾದುದು ಯಾವ ಕ್ರಮದಿಂದ, ಯಾರ ದಯೆಯಿಂದ ಎಂಬ ಕೃತಜ್ಞತಾಭಾವವಾದರೂ ಆಗಾಗ ಹೊರತೋರಬೇಕು !

'ಹೃದಯಗೀತ'ದಲ್ಲಿ ನನಗೆ ಕಾಣುವ ಕವಿದೃಷ್ಟಿ ಇದು :-

ನೆಮ್ಮದಿಯನೆನ್ನೆದೆಗೆ ಕರೆಯುವೆನು ಜನಪದೆಯು
ನೋವುನಲವನು ನುಡಿವ ಹಾಡುಹಾಡಿ
ಒಳಗಣ್ಣು ಕಂಡ ಇಳೆಯೆಸೆವ ಸೌಂದರ್ಯವನು
ನೆರೆಯ ಗೆಳೆಯರು ಕಾಣುವಂತೆ ಮಾಡಿ.

ಪ್ರಪಂಚದ ಅನೇಕ ಹಿರಿಯ ಕವಿಗಳ ಕವನಗಳ ಅನುವಾದವನ್ನು ನಾವು ಇಲ್ಲಿ ಕಾಣಬಹುದು. ಎಲ್ಲ ಕಡೆ ಈ ಕವಿಗೆ ಹೊಸತನ್ನು ಹುಡುಕುವ ಹೊಸ ಬಗೆಯಲ್ಲಿ ನುಡಿವ ಕಾತರವಿದೆ. ಅದನ್ನು ಸಾಧಿಸುವ ಹಟವಿದೆ. ಹಿಮಾಲಯವನ್ನು ಹತ್ತುವ ಪರ್ವತಾರೋಹಿಯ ಉತ್ಸಾಹವಿದೆ. ಪ್ರಯೋಗಶೀಲನಾದ ಈ ಕವಿಯು ಉಪಯೋಗಿಸುವ ಛಂದಸ್ಸಿನ

ವೈವಿಧ್ಯವನ್ನೂ ಅರಸುವ ಪದಪುಂಜಗಳ ಹೊಸತನವನ್ನೂ ಭಾಷಾಪ್ರಯೋಗದಲ್ಲಿ ತುಂಬುವ ಅತ್ಯಂತ ನವೀನವಾದ ಪ್ರತಿಮೆಗಳನ್ನೂ ರೂಪಕಗಳನ್ನೂ ಸ್ವಲ್ಪ ಸ್ನೇಹಶೀಲದೃಷ್ಟಿಯಿಂದ ಪರಿಶೀಲಿಸಿದರೆ ಈ ಕವಿ ತುಂಬ ಎತ್ತರಕ್ಕೆ ಬೆಳೆಯಬಲ್ಲನೆಂಬ ಸುಳಿವು ತಾನಾಗಿ ಗೋಚರವಾಗುತ್ತದೆ. ಇವು ರಚಿತವಾಗುತ್ತಿದ್ದಾಗಲೇ ಅವನ್ನು ಗಮನಿಸಿ ಆಶ್ಚರ್ಯಪಡುತ್ತಿದ್ದ ನನಗೆ ಈತನ ಸಾಮರ್ಥ್ಯದ ಬಗ್ಗೆ ಸಂಪೂರ್ಣ ನಂಬಿಕೆ ಇದ್ದಿತು. ಆ ನಂಬಿಕೆ ಹುಸಿಯಾಗಲಿಲ್ಲವೆಂಬುದು ಈಗ ನನ್ನ ಸಂತೋಷ.

ಹೃದಯಗೀತದ ಕವನಗಳಲ್ಲಿ ಓದುಗರ ಗಮನಕ್ಕೆ ನಾನು ಈ ಕವನಗಳನ್ನು ನಿಧಾನವಾಗಿ ಎರಡು ಸಲವಾದರೂ ಓದಿ ಸವಿಯಬೇಕೆಂದು ಸೂಚಿಸುತ್ತೇನೆ. 1) ಹೃದಯಗೀತ 2) ಮಾಯೆ ಮಲಗಿತ್ತು 3) ಹಾಡಿನೊಳಗೊಂದು ಹಾಡು, 4) ಮಳೆ ಬಂತು ಮತ್ತು 5) ಎಂಟಿಗೆ ಇತರ ಕವನಗಳಲ್ಲಿ ಸೊಗಸಿಲ್ಲವೆಂದಲ್ಲ. ಈ ಕವನಗಳಲ್ಲಿ ಓದುಗನನ್ನು ಸವಾಲಿಟ್ಟು ಕರೆಯುವ ಅಂತಸ್ಸತ್ವವಿದೆ.

ಈ ಮೊದಲ ಕವನ ಸಂಕಲನ ಬಹು ಬೇಗ ಮಾರಾಟವಾಯಿತು. ಕವಿಗೆ ಜನಪ್ರಿಯತೆ ಬಂತು. ಶರ್ಮ ಒಬ್ಬ ಕವಿಯಾದ ಓದುಗರ ಎಣಿಕೆಯಲ್ಲಿ. ಇದರ ಬಗ್ಗೆ ನಾವು ತುಂಬ ಸಂತೋಷದಿಂದ ಮಾತನಾಡುತ್ತಿದ್ದೆವು.

ನಾವಿಬ್ಬರೂ ಮನಶ್ಶಾಸ್ತ್ರಕ್ಕೆ ಸ್ವಲ್ಪ ಮಣ್ಣು ಹೊತ್ತವರು. ಇಬ್ಬರೂ ಪ್ರೊ. ಎಂ.ವಿ. ಗೋಪಾಲಸ್ವಾಮಿಯವರ ವಿದ್ಯಾರ್ಥಿಗಳು. ಅವರ ಪ್ರಭಾವದಿಂದ ಫ್ರಾಯಿಡ್, ಜೂಲಾಂಗ್ ಮತ್ತು ಆಡ್ಲರರ ಗ್ರಂಥಗಳನ್ನು ಓದಿದ್ದವರು.

ಹೃದಯಗೀತವು ಪ್ರಕಟವಾದ ಬಳಿಕ, ಕೇವಲ ಒಂದೇ ವರ್ಷದಲ್ಲಿ 'ಏಳು ಸುತ್ತಿನ ಕೋಟೆ' ಪ್ರಕಟಣೆಗೆ ಸಿದ್ಧವಾಯಿತು. ಜನರ, ಸ್ನೇಹಿತರ ಪ್ರೋತ್ಸಾಹದ ಪರಿಣಾಮ ಕವಿ ಓದುವುದನ್ನೂ ಬರೆಯುವುದನ್ನೂ ಸತತವಾಗಿ ಮಾಡುತ್ತಿದ್ದ. ವಿರಾಮವಾದಾಗ ನಮ್ಮ ಮನೆಯ ಕಾಂಪೌಂಡಿನಲ್ಲಿದ್ದ ಸಂಪಗೆ ಮರದ ಕೆಳಗಿನ ಕಲ್ಲು ಬೆಂಚಿನಲ್ಲಿ ಕುಳಿತೋ ಲಾಲಬಾಗಿನ 'ಪಂಚವಟಿ' ಎಂಬ ನಾಲ್ಕೈದು ಮರಗಳ ನೆರಳಿನಲ್ಲಿದ್ದ ಬೆಂಚಿನ ಮೇಲೋ ಕುಳಿತು ಅನೇಕ ವಿಷಯಗಳ ಬಗ್ಗೆ ಮಾತನಾಡುತ್ತಿದ್ದೆವು. ಮನಶ್ಶಾಸ್ತ್ರದ ಅನೇಕ ವಿವರಗಳನ್ನು ನಮ್ಮ ಅನುಭವದ ಬೆಳಕಿನಲ್ಲಿ ಪರೀಕ್ಷೆ ಮಾಡುತ್ತಿದ್ದೆವು. ಶರ್ಮರಿಗೆ ನಾನು ತೀನಂಶ್ರೀಯವರ 'ಕಾವ್ಯಮೀಮಾಂಸೆ'ಯನ್ನು ಐ.ಎ. ರಿಚರ್ಡ್ಸ್‌ನ ಮತ್ತು ಆಗ್ಡನ್ನನ ಗ್ರಂಥಗಳನ್ನೂ ಕೊಟ್ಟಿದ್ದೆ. ಅವರು ಆಗಲೇ ಎಲಿಯಟ್, ಆಡೆನ್, ಮಯಕೋವ್‌ಸ್ಕಿ ಮುಂತಾದವರನ್ನು ಆಳವಾಗಿ ಅಭ್ಯಾಸ ಮಾಡಿದ್ದರು. ನನಗೆ ಮಯಕೋವ್‌ಸ್ಕಿ ಪರಿಚಯವಿರಲಿಲ್ಲ. ಈ ಸಂವಾದದ ಸಮಯದಲ್ಲಿಯೇ ನಾನೂ ಮಯಕೋವ್‌ಸ್ಕಿಯನ್ನು ಓದುವುದು ಸಾಧ್ಯವಾಯಿತು. ವಿಮರ್ಶೆಯ ತತ್ವಗಳನ್ನು ಅರ್ಥಮಾಡಿಕೊಳ್ಳುವುದಕ್ಕಿಂತ ಕಾವ್ಯವು ನಿರ್ಮಾಣಗೊಳ್ಳುವ ವಿಧಾನದಲ್ಲಿ ಶರ್ಮರಿಗೆ ತುಂಬ ಆಸಕ್ತಿಯಿತ್ತು. ಅದನ್ನು ಅವರು ವೈಜ್ಞಾನಿಕವಾಗಿ ಪ್ರಾಸಂಗ

ಮಾಡುತ್ತಿದ್ದರು. Gestation ಬಗ್ಗೆ ಅವರಿಗೆ ಅಪಾರ ಆಸಕ್ತಿ. ಆ ಶಬ್ದದ ಎರಡು ಅರ್ಥಗಳನ್ನೂ ಆಳವಾಗಿ ತಿಳಿಯಲು ಪ್ರಯತ್ನಪಟ್ಟರು. Sex Instinct ಎಂಬುದು Hungerಗಿಂತ ಕಡಿಮೆ ಪ್ರಭಾವವುಳ್ಳದ್ದಾದರೂ ಅದರ ಪ್ರಭಾವ ಕವಿಗೆ ಹೆಚ್ಚು ಗಾಢವಾಗಿ ಕಂಡಿತು. ಈ ಕಾಲದ ಕೆಲವು ಕವನಗಳಲ್ಲಿ ಆಗ ಅವರು ವ್ಯಾಸಂಗ ಮಾಡುತ್ತಿದ್ದ ಮನಶ್ಶಾಸ್ತ್ರ ಗ್ರಂಥಗಳ ಪ್ರಭಾವವು ಕಾಣಬರುತ್ತದೆ.

'ಏಳು ಸುತ್ತಿನ ಕೋಟೆ'ಯಲ್ಲಿ ಅಂಥ ಕೆಲವು ಕವನಗಳಿವೆ. ವಿಮರ್ಶಕರು 'ಏಳು ಸುತ್ತಿನ ಕೋಟೆ' ಮತ್ತು 'ಗೌರಿ ಶಂಕರ' ಎಂಬ ಎರಡು ಕವನಗಳಲ್ಲಿ ಕಾಮದ ಪ್ರಭಾವವನ್ನು ಗುರುತಿಸಿದ್ದಾರೆ. ಆದರೆ ಇತರ ಕವನಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದರೆ ಕಾಮದ ಪ್ರಭಾವ ಮಿನುಗುತ್ತದೆ. ಅವುಗಳಲ್ಲೆಲ್ಲ ಏಳು ಸುತ್ತಿನ ಕೋಟೆಯ ಪ್ರಭಾವವಿದೆ. ಗಾಢವಾಗಿ ವ್ಯಾಸಂಗ ಮಾಡಬೇಕು.

ಕನ್ನಡದ ನೆಲದಲ್ಲಿ ನವ್ಯತೆ ಮೂಡಿ ಸ್ವಲ್ಪ ದಿನಗಳಾಗಿತ್ತು. ಅದರ ಪ್ರಭಾವವೂ ಶರ್ಮರ ಮೇಲಾಗಿತ್ತು. ನವ್ಯದ ಪ್ರಭಾವದ ಪರಿಣಾಮವೇ ಶರ್ಮರ ಮೊದಲನೆಯ ಕವನ ಸಂಕಲನ – 'ಋಷಿ ನೀಡಿದ ಸ್ಫೂರ್ತಿ, ! ಆಗಿನ ಕಾಲದಲ್ಲಿ ಶರ್ಮರು ಆಕಾಶವಾಣಿಗೆ 'ಕವನ ಹುಟ್ಟಿತು' ಎಂಬ ಒಂದು ಶಬ್ದಚಿತ್ರವನ್ನು ಸಿದ್ಧಪಡಿಸಿದರು. ಅದರ ಪ್ರಸಾರದಲ್ಲಿ ನಾನೂ ಒಂದು ಪಾತ್ರವನ್ನು ವಹಿಸಿದ್ದೆ. ಅದು ತುಂಬ ಹೆಸರು ಮಾಡಿತು. ಆದರೆ ಅರ್ಥವಾಗಲಿಲ್ಲ ವೆಂಬ ಅಭಿಪ್ರಾಯವೂ ಮೂಡಿಬಂತು. ಶರ್ಮರ ನವ್ಯ ದೃಷ್ಟಿಯ ರಚನೆಗಳು ಈ ಸಂಕಲನದಲ್ಲಿ ತುಂಬಿವೆ. ಈ ಸಂಕಲನದಲ್ಲಿರುವ 'ಮಸಣ ಹೂ ಜಿಡುವಂತೆ ಮಾಡುವೆ' ಎಂಬ ಪದ್ಯ ನಾಟಕವು ಆಕಾಶವಾಣಿಯಲ್ಲಿ ಪ್ರಸಾರವಾಯಿತು. ಇವುಗಳೆಲ್ಲದರ ಪರಿಣಾಮವಾಗಿ ಶರ್ಮರ ಕಾವ್ಯಕ್ಕೆ Highbrow ಎಂಬ ಕೀರ್ತಿಬಂತು. Highbrow ಎಂಬ ಶಬ್ದಕ್ಕೆ ಬೌದ್ಧಿಕ ಪ್ರಾಗಲ್ಭ್ಯವನ್ನು ಪ್ರದರ್ಶಿಸುವ ಸ್ವಭಾವ ಎಂಬ ಆಲಂಕಾರಿಕ ಅರ್ಥವಿದೆ ಇಂಗ್ಲಿಷಿನಲ್ಲಿ. ಇಂಗ್ಲಿಷ್ ಭಾಷೆಯನ್ನೂ ಸಾಹಿತ್ಯವನ್ನೂ ಬಲ್ಲವರೇ ಈ ಮಾತನಾಡಿದ್ದು. ಆದರೆ ಈ ಕವನ ಸಂಕಲನದಲ್ಲಿ 'ಪ್ರಶ್ನೆ', 'ದೀಪಹೋಯಿತು.... ಬಂತು', 'ವೈಶಾಖ ಶುದ್ಧ ಪೂರ್ಣಿಮೆ' ಮತ್ತು 'ಋಷಿ ನೀಡಿದ ಸ್ಫೂರ್ತಿ' ಎಂಬ ಕವನಗಳಲ್ಲಿ ಪ್ರತಿಮೆಗಳು ಹೊಸ ಹೊಸ ಪ್ರತಿಮೆಗಳು ಹೇಗೆ ಸಾಲುಸಾಲಾಗಿ ಬರುತ್ತವೆ ಎಂದು ಗಮನಿಸಿದರೆ ಆ ಕವನಗಳ ಸ್ವಾರಸ್ಯ ಗೊತ್ತಾಗುತ್ತದೆ. ಶರ್ಮರ ಯಾವ ಕವನವೂ ಒಂದೆ ಓದಿಗೆ ತಮ್ಮ ಸ್ವಾರಸ್ಯವನ್ನು ಬಿಟ್ಟು ಕೊಡುವುದಿಲ್ಲ.

ನವ್ಯ ಕಾವ್ಯವನ್ನು ಕುರಿತ ವ್ಯಂಗ್ಯ ಕನ್ನಡ ಸಾಹಿತ್ಯ ಲೋಕದ ಆಡುಮಾತಾಗಿತ್ತು ಕೆಲವು ವರ್ಷಗಳ ಕಾಲ. ಅದಕ್ಕೆ ಕಾರಣ ಈ ಕಾಲದ ನವ್ಯ ಕವನಗಳ ನಿರ್ಮಾಣದಲ್ಲಿದ್ದ ಮಾತಿನ ಪ್ರತಿಮಾ ವಿಧಾನ. ಪಾಶ್ಚಾತ್ಯ ಕವಿಗಳನ್ನು ಓದಿದ್ದವರಿಗೆ ಆ ಮಾರ್ಗ ಗೊತ್ತಿದ್ದುದರಿಂದ ಅರ್ಥ ಸುಲಭ. ಉದಾಹರಣೆಗೆ

"ನರೆತ ಗಡ್ಡದ ಕಲ್ಲು ಬಂಡೆಗಳ ಎದೆ ಮಿಡಿದೆ
ನನ್ನ ಹುಟ್ಟಿನ ಗಂಟ ಬಿಡಿಸಲೆಳಸಿ"

ಎಂಬ ಎರಡು ಸಾಲುಗಳ ಅರ್ಥ ಯಾರಿಗೆ ತಾನೆ ಆದೀತು - ಮೊದಲ ಸಲದ ಓದಿಗೆ. **ನರೆತಗಡ್ಡದ ಕಲ್ಲು ಬಂಡೆಗಳ ಎದೆ** ಎಂಬ ಶಬ್ದ ಪುಂಜಕ್ಕೆ fossil ಎಂಬ ಅರ್ಥಮೂಡಬೇಕಾದರೆ ನರೆತ ಗಡ್ಡಕ್ಕೆ ancient ಎಂದೂ, ಕಲ್ಲು ಬಂಡೆ ಎನ್ನುವುದಕ್ಕೆ rock ಎಂದೂ ಅರ್ಥಮಾಡಿ ಅವುಗಳನ್ನು ಕೂಡಿಸಿ fossils on rocks ಎಂಬ ಅರ್ಥ ಬರುತ್ತದೆ. ಅವಕ್ಕೆ ಸ್ವಲ್ಪ ತಿಣುಕಬೇಕು. ಆಗ ನಿಧಾನವಾಗಿ ಅರ್ಥ ಹೊರಹೊಮ್ಮುತ್ತದೆ. ಶರ್ಮರ ಈಚಿನ ಕಾವ್ಯದಲ್ಲಿಯೂ ಈ ತೊಂದರೆ ಇದ್ದೇ ಇದೆ.

ಈ ಸುಮಾರಿನಲ್ಲಿ ನವ್ಯ ಕಾವ್ಯವನ್ನು ಮೆಚ್ಚಲಾರದ ಓದುಗರ ಪರವಾಗಿ ಒಂದು ವ್ಯಂಗ್ಯ ಕವನ ಪ್ರಕಟವಾಯಿತು ಪ್ರಜಾವಾಣಿಯಲ್ಲಿ. ಅದನ್ನು ರಚಿಸಿದವರು ಜಿ. ವರದರಾಜ ರಾವ್ ಅವರು. ಈಗಿನ ಓದುಗರಿಗೆ ಅದು ದೊರಕದೆ ಇರಬಹುದು. ಅದ್ದರಿಂದ ಅದರ ಪರಿಚಯವು ಇಂದಿನವರೆಗೂ ಆಗಲಿ ಎಂದು ಆ ಕವನವನ್ನು ಇಲ್ಲಿ ದಾಖಲಿಸಿದ್ದೇನೆ.

ನವ್ಯಾಲಾಪ

ಅಬ್ಬಬ್ಬ ಎಂಥ ಹದಗೆಟ್ಟ ಗದ್ಯ ?
(ಶಾಂತಂ ಪಾಪಂ ! ಶಾಂತಂ ಪಾಪಂ !)
ಇದು ಸ್ವಚ್ಛಂದ ಪದ್ಯ !
ಕಟ್ಟುನಿಟ್ಟುಗಳು ಯಾವುದೂ ಇಲ್ಲ
ಅತ್ಯುತ್ತಮಕೆ ಅರ್ಥವೂ ಬೇಕಿಲ್ಲ!
ಗಣದ ಹಾವಳಿ ಇಲ್ಲ
ಮಾತ್ರೆಗಳ ಜಾತ್ರೆಯಿಲ್ಲ
ಪ್ರಾಸಗಳ ಪೋಣಿಸುವ ತ್ರಾಸವೇ ಇಲ್ಲ
ಗೇಯಕ್ಕೆ ಎಳ್ಳುನೀರು
ಯತಿಗತಿಗೆ ಗಡಿಪಾರು
ಲಯದ ವಿನ್ಯಾಸಕೆಂದೋ ಸನ್ಯಾಸವನು ಕೊಟ್ಟುದಾಯ್ತು
ಛಂದಸ್ಸಿನಾಯುಷ್ಯ ಮುಗಿದೆ ಹೋಯ್ತು !
ಕಂಡದ್ದು ಕಂಡಂತೆ ಕಕ್ಕುವುದೆ ದೀಕ್ಷೆ
ಉದ್ದಂಡ ಭಂಡತನವೊಂದೆ ಸಂರಕ್ಷೆ
ಕಸಪರಿಕೆ ಕೆಲಸವನು ಲೇಖನಿಯು ನಾಚಿಸಿತ್ತು
ಅಂಗಾಂಗ ವರ್ಣನೆಯು ವೈದ್ಯ ಪಠಗಳನು ಮೀರಿಸಿತ್ತು
ಪಂಕ್ತಿ ವಿನ್ಯಾಸಗಳು ವಕ್ರರೇಖೆಯನೆ ವಂಚಿಸಿತ್ತು

ಕಂಪಕಂಪವರ ನುಡಿಗಳನು ಕತ್ತರಿಸಿ, ತೇಪೆ ಹಾಕುತ್ತ
ಆಂಗ್ಲವೋ ಆರ್ಯವೋ ಏನಾದರೇನಂತೆ
ಕನ್ನಡದ ಕಾವ್ಯಕ್ಕೆ ಎಲ್ಲವೂ ಕವೆಯ ಕೋಲಂತೆ
ಒಂದು ಪಂಕ್ತಿಯೆ ಸಾಕು
ನೂರು ಪಂಕ್ತಿಯ ತೋಕೆ ಅದಕಿದ್ದೆ ಇರಬೇಕು !
ಇದೆಗೂ ಪ್ರತಿಮಾ ತಂತ್ರ !
ನವ್ಯ ಶೈಲಿಯ ಬೃಹಸ್ಮಂತ್ರ !
ನವ್ಯ ಪಂಥದೊಳು ಪಂಥವುಂಟು
ಒಬ್ಬರೊಬ್ಬರ್ಗಿಲ್ಲ ದೃಷ್ಟಿಸೃಷ್ಟಿಗಳ ನಂಟು
ಈತನಿದೋ ಕಾಮ ಪಾರಾಯಣದ ನಿಸ್ಸೀಮ
ಆತನದೋ ಆಕ್ರೋಶ ಆವೇಶಗಳ ಸಾರ್ವಭೌಮ
ಸ್ವರತಿಯ ಆರತಿಯ ನಿಷ್ಣಾತನಿವನು
ಸ್ವಪ್ನಸತ್ಯವನು ಸಾಧಿಸುವ ಮಲ್ಲನವನು
ಪ್ರತಕೆಟ್ಟು ನವ್ಯಸಂಕಲ್ಪವನು ತೊಟ್ಟಿರುವನಾತ
ಕನ್ನಡಾಂಗ್ಲಗಳ ಕನ್ನಡಕವನು ಹಾಕಿರುವನಾತ
ಇಬ್ಬಗೆಯ ಮಬ್ಬಿನಲಿ ಉಬ್ಬಿರುವನೊಬ್ಬ
ಹುಟ್ಟು ಹಾರಿಸುತ ಗರ್ಭಪಾತವನು ಚಿತ್ರಿಸುವನೊಬ್ಬ,
ಬೆತ್ತಲೆಗೆ ಬಿನ್ನವತ್ತಳೆಯ ನೀಡಿ
ಆಟಕಟ್ಟುವನಿವನು ಬಯಲಿನಲೆ ನಾಟಕವನು
ಲೋಕೋಭಿನ್ನರುಚಿಃ
"Fools rush where angels fear to tread"
ಕಾವ್ಯನರಕಕಿದೋ ಸುಸ್ವಾಗತ !
ಸರ್ವರಿಗು ಸುಸ್ವಾಗತ !
ಅಭದ್ರಂ, ಅಶುಭಂ, ಅಮಂಗಲಂ !

ಗೋಪಾಲಕೃಷ್ಣ ಅಡಿಗರ 'ಚಂಡಮದ್ದಳೆ', ಪ್ರಕಟವಾದ ತರುಣದಲ್ಲಿಯೇ 'ಬಿಡಿ ನೀಡಿದ ಸ್ಫೂರ್ತಿ' ಪ್ರಕಟವಾಯಿತೆಂಬುದನ್ನು ವಿಮರ್ಶಕರು ಗಮನಿಸುವುದಿಲ್ಲ ! 'ಚಂಡಮದ್ದಳೆ' ನವ್ಯವಾದರೆ 'ಬಿಡಿ ನೀಡಿದ ಸ್ಫೂರ್ತಿ' ನವ್ಯೇತರ. ನವ್ಯಕಾವ್ಯ ರಚನೆಯಲ್ಲಿ ಅಡಿಗ ಮತ್ತು ಶರ್ಮ ಇವರಿಬ್ಬರೆ ಬಹಳ ಪ್ರಖ್ಯಾತರು. ಆದರೆ ಈ ಇಬ್ಬರದೂ ಒಂದೇ ಶೈಲಿಯಲ್ಲ, ಇಬ್ಬರದೂ ಬೇರೆ ಬೇರೆ ಶೈಲಿಗಳು. ಒಬ್ಬರದು ಕರಾವಳಿಯ ಕನ್ನಡವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡರೆ ಶರ್ಮ ಸಂಪೂರ್ಣವಾಗಿ ನಗರ ಕನ್ನಡದ ಪ್ರತಿಬಿಂಬ. 'ಭೂಮಿಗೀತ'ವು ಪ್ರಕಟವಾಗುವ ವೇಳೆಗೆ ಶರ್ಮರು ಭಾರತವನ್ನು ಬಿಟ್ಟು ತಮ್ಮ ಆರ್ಥಿಕ

ಪರಿಸ್ಥಿತಿಯ ಅಭಿವೃದ್ಧಿಗಾಗಿ ಇಥಿಯೋಪಿಯಾ ದೇಶಕ್ಕೆ ಪ್ರಯಾಣ ಮಾಡಿದ್ದರು. ಆದ್ದರಿಂದ ಅವರ ಮುಂದಿನ ಕವನ ಸಂಕಲನ 'ಹೇಸರಗತ್ತೆ' 1969ರಲ್ಲಿ ಪ್ರಕಟವಾಯಿತು.

ಭಾರತವನ್ನು ಬಿಟ್ಟು ದೂರದ ಇಥಿಯೋಪಿಯಾ ಮತ್ತು ಇಂಗ್ಲೆಂಡ್ ಮುಂತಾದ ದೇಶಗಳಲ್ಲಿದ್ದರೂ ಶಿಕ್ಷಣ ಕ್ಷೇತ್ರದ ಸಂಬಂಧವನ್ನು ಹೊಂದಿದ್ದುದರ ಪರಿಣಾಮವಾಗಿ ಅವರಿಗೆ ಕನ್ನಡದ ಮತ್ತು ಕಾವ್ಯದ ಸಂಬಂಧವನ್ನು ಮುಂದುವರಿಸುವುದು ಸಾಧ್ಯವಾಯಿತು. ಪರದೇಶದಲ್ಲಿದ್ದು ಕನ್ನಡದ ಸತ್ವವನ್ನು ಉದ್ದಕ್ಕೂ ಕಾಯ್ದುಕೊಂಡಿದ್ದ ಮತ್ತೊಬ್ಬ ಕನ್ನಡ ಲೇಖಕ ಇಲ್ಲ. ಇದೂ ಒಂದು ದಾಖಲೆ ಶರ್ಮರ ಜೀವನದಲ್ಲಿ. ಇಲ್ಲಿ ಅವರಿಗೆ ಪ್ರಿಯವಾಗಿದ್ದ ಮನಶ್ಶಾಸ್ತ್ರವನ್ನೇ ಲಂಡನ್ನಿನಲ್ಲಿಯೂ ವ್ಯಾಸಂಗದ ವಿಷಯವನ್ನಾಗಿ ಆರಿಸಿಕೊಂಡು ತಮ್ಮ ಪಿಹೆಚ್.ಡಿ. ಪದವಿಯನ್ನು ಸಂಪಾದಿಸಿದರು. ಅಲ್ಲಿಂದ ಮುಂದೆ ಅದೇ ಅವರ ವೃತ್ತಿಯ ಕ್ಷೇತ್ರವೇ ಆಯಿತು. ಈ ಎರಡು ವಿಷಯಗಳನ್ನೂ - ಕನ್ನಡ - ಮನಶ್ಶಾಸ್ತ್ರ - ಒಡನೊಡನೆ ಪ್ರೀತಿಯ ವ್ಯಾಸಂಗ ಕ್ಷೇತ್ರಗಳನ್ನಾಗಿ ಮಾಡಿಕೊಂಡು ಕೆಲವು ಕವನಗಳನ್ನೂ ರಚಿಸಿದರು. ಆದರೆ ಇಲ್ಲಿಯೇ ಇದ್ದರೆ ಅವರೆಷ್ಟು ಕಾರ್ಯವನ್ನು ಸಾಧಿಸುವುದು ಸುಲಭವಾಗಿತ್ತೋ ಅಷ್ಟು ಸರಳವಾದ ಕೆಲಸ ಅದಾಗಲಿಲ್ಲ.

ಸ್ವದೇಶಕ್ಕೆ ಹಿಂದಿರುಗಿದಮೇಲೆಯೇ ಅವರು ಮತ್ತಷ್ಟು ಕಾವ್ಯವನ್ನೂ ಅತ್ಯುತ್ತಮವಾದ ಕೆಲವು ಅನುವಾದ ಕಾರ್ಯಗಳನ್ನೂ ಮಾಡುವುದು ಸಾಧ್ಯವಾಯಿತು. 'ಹೇಸರಗತ್ತೆ'ಯ ಅನುಭವ ಎರಡು ಪರದೇಶಗಳಿಗೆ ಸಂಬಂಧಿಸಿದ್ದು. ಒಂದು ಕಡೆ ಇಥಿಯೋಪಿಯಾ ಮತ್ತೊಂದು ಕಡೆ ಲಂಡನ್-ಬ್ರಿಟನ್ನಿಗೆ ಸೇರಿದ್ದು. ಹೇಸರಗತ್ತೆ ಎಂಬ ಪ್ರಾಣಿಯ ಪರಿಚಯ ಇದ್ದರೆ ಈ ಕವನದ ಅರ್ಥ ಸ್ಪಷ್ಟವಾಗುವುದು. ಇಲ್ಲದಿದ್ದರೆ ಕಷ್ಟ

ಪರದೇಶದಲ್ಲಿ ಅನಾಥ ಪ್ರಜ್ಞೆಯ ಅನುಭವವನ್ನು ಪಡೆದ ಕವಿ ತನ್ನ ಆತ್ಮಕಥೆಯನ್ನು ಈ ಕವನದಲ್ಲಿ ನಿರೂಪಿಸುತ್ತಿದ್ದಾನೆ. ಪ್ರತಿದಿನವೂ ವ್ಯರ್ಥ ಕಾಲಹರಣ. ಎರಡೂ ವಿರಹದ ಪರಿಣಾಮ. ಅಲ್ಲಿ ನೆರವೇರುವ ಉತ್ಸವಗಳೂ ಅಪಸ್ವರ ನೀಡುತ್ತವೆ. ಇಂಥ ಕಡೆ ಈ ಹೇಸರಗತ್ತೆ ಮಾಡಿದ್ದೇನು ? ಪ್ರತಿವಾರವೂ ಹಳೆಯ ಕೆಲಸವೇ !

ಶನಿವಾರ ಶನಿವಾರ ಸಂತೆಗೆ ಹೊತ್ತ ತಲೆಕೆಳಗು
ಹುಂಜ, ಈರುಳ್ಳಿ, ಉರುಳುಗೆಡ್ಡೆ.

ಹೇಸರಗತ್ತೆ ಇದು ಇಂಗ್ಲಿಷಿನ MULEಗೆ ಸಮಾನವಾದುದು. ಒಂದು ಗಂಡುಕತ್ತೆಯಿಂದ ಹೆಣ್ಣು ಕುದುರೆಯಲ್ಲಿ ಹುಟ್ಟಿದ ತಳಿ ಹೇಸರಗತ್ತೆ. ಅದು ಆಕಾರದಲ್ಲಿ ಕುದುರೆಯಂತೆ ಕಂಡರೂ ಅದರ ತಲೆ, ಕಿವಿಗಳು, ಪಿರ್ರೆ ಮತ್ತು ಬಾಲ ಕತ್ತೆಯ ಹಾಗೇ ಇರುತ್ತದೆ. ಈ ಪ್ರಾಣಿಯ ಭಾರಧಾರಣಶಕ್ತಿ ಅಪಾರ. ದೀರ್ಘಕಾಲ ಬದುಕಿರುತ್ತದೆ. ಇದು ಎಲ್ಲೂ ಜಾರದ ಕತ್ತೆ, ಎಡವದ ಕತ್ತೆ. ಇದಕ್ಕೆ ವಿವೇಕ ಹೆಚ್ಚಂತೆ. ಆದರೆ ಗಂಡು ಹೇಸರಗತ್ತೆಗಳು ನೀರಿಲ್ಲದವು. ಅವಕ್ಕೆ ಪುಂಸತ್ವವಿಲ್ಲ. ಹೆಣ್ಣು ಕತ್ತೆ ಮತ್ತು ಗಂಡು ಕುದುರೆಗೆ ಹುಟ್ಟುವ ಪ್ರಾಣಿಗೆ ಇಂಗ್ಲಿಷಿನಲ್ಲಿ 'ಹಿನ್ನೀ' ಎಂದು ಹೆಸರು (Hinny).

ಉಳಿದಾರು ದಿನ ಕಟ್ಟೆಗೆ ಹೊತ್ತ ಗಂಟೊಳಗೆ
ಕೊಳೆಚಡ್ಡಿ, ರವಿಕೆ, ಬಾಣಂತಿ ಬಟ್ಟೆ

ಕವಿಗೆ ರೇಸಿನ ಕುದುರೆಯ ಕನಸೂ ಬರುತ್ತದೆ. ಲಂಡನ್ನಿನ ಜೀವನ ಅಷ್ಟೇನು ಸೊಗಸೆನಿಸಲಿಲ್ಲ.

ಇಂಥ ಕಡೆ ಕವಿ

ಇಳಿಜಾರಿನಲ್ಲಿ ಜಾರದ ಹಾಗೆ
ಹೊರೆಹೊತ್ತು ನಡೆಯಬೇಕು

ಪುಂಸ್ತ್ವವನ್ನು ಕಳೆದುಕೊಂಡ ಅನುಭವ. ಅದನ್ನು ಪರಿಹರಿಸಲು ಸಾಧ್ಯವೇ ಇಲ್ಲ. ಭವಿಷ್ಯದಲ್ಲಿ ಏನಾದರೂ ಬೇರೆಯ ರೀತಿಯ ಬಾಳು ಸಾಧ್ಯವೇ ? ಊಹಿಸಬೇಕು.

'ಕೊರಗು' ಲಂಡನ್ನಿನ ಹೈಡ್‌ಪಾರ್ಕಿನಲ್ಲಿ ನಡೆದ ಒಂದು ಪ್ರಣಯ ಪ್ರಸಂಗದ ಚಿತ್ರ. ಇಲ್ಲಿ ಬರುವ **'ಖಾಸು ಬಂಗಲೆ'** ಶಬ್ದಕ್ಕೆ **'ಸೂಳೆಯ ಮನೆ'** ಎಂಬ ಅರ್ಥವನ್ನು ಒಬ್ಬ ವಿಮರ್ಶಕರು ನೀಡಿದ್ದರೆಂದು ಶರ್ಮರೇ ಹೇಳುತ್ತಿದ್ದರು. ಅದು ನವಿಲು, ಕಾಸುಬಂಗಲೆಯ ನವಿಲು ಎಂದರೆ ಮೈಸೂರಿನ **ಖಾಸ್ ಬಂಗಲೆ** ಅಂದರೆ ಪ್ರಾಣಸಂಗ್ರಹಸ್ಥಾನ. , zoo ಅಷ್ಟೇ ! ಇದರ ವರ್ಣನೆ ಹೆಣ್ಣಿಗೇನೇ ಅನ್ವಯಿಸುತ್ತದೆ. ಆದರೆ ಸೂಳೆಗಲ್ಲ ! ಇಲ್ಲಿಯ ಹೆಣ್ಣು ಗಂಡುಗಳ ಸಂಭಾಷಣೆಯು ಮತ್ತು ಅದರ ಪರಿಣಾಮ ಅರ್ಥವತ್ತಾಗಿದೆ. ಇದು ಪರದೇಶದ ಜೀವನ ವ್ಯವಹಾರದ ಒಂದು ಧೂರ್ತಚಿತ್ರ. 'ಪಾಪ' ಕವನವು ಪಾಪದ ಪಾಪವನ್ನು ಒಪ್ಪಮಾಡಿದ ಚಿತ್ರವನ್ನು ನೀಡುತ್ತದೆ. ಮಹಾಪರಾಧದ ತಂತ್ರಚಿತ್ರ.

'ಗುಬ್ಬಚ್ಚಿ' ಒಂದು ಸಂಭೋಗದ ಉತ್ಸಾಹದ ಆದಿ ಅಂತ್ಯಗಳ ಚಿತ್ರ. ಶರ್ಮರ ಕಾಮದ ವಸ್ತುವಿನ ಕವನಗಳಲ್ಲೆಲ್ಲ ಬಹು ಪ್ರಸಿದ್ಧವಾದದ್ದು. ತುಂಬ ಸುಂದರ ಕವನ. ಒಂದೇ ಒಂದು ಶಬ್ದದ ಅನುಚಿತ ಪ್ರಯೋಗದಿಂದ ಅದರ ಸಂಪೂರ್ಣ ಸೌಂದರ್ಯಕ್ಕೆ ಕುಂದು ಬಂದಿದೆ. ಈ ಕವನದಲ್ಲಿರುವ 'ಜಜ್ಜಿ' ಶಬ್ದದ ಸಾರ್ಥಕ್ಯ ಅಥವಾ ವ್ಯರ್ಥತೆಯನ್ನು ಪರಿಶೀಲಿಸಿದರೆ ನನ್ನ ಮಾತು ಸ್ಪಷ್ಟವಾಗುತ್ತದೆ.

ಅಡಿಗರ ರೀತಿಗೂ ಶರ್ಮರ ರೀತಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕಾದರೆ ಈ 'ಗುಬ್ಬಚ್ಚಿ'ಯನ್ನು ಅಡಿಗರ **'ಒಂದು ಸಂಜೆ'** ಕವನದೊಡನೆ ಹೋಲಿಸಿ ನೋಡಬೇಕು. ಅಡಿಗರ ಕವನ ಹೀಗಿದೆ :-

ಮೌನ ತಬ್ಬಿತು ನೆಲವ ; ಜುಮ್ಮನೆ ಪುಳಕಗೊಂಡಿತು ಧಾರಿಣೀ ;
ನೋಡಿ ನಾಚಿತು ಬಾನು ; ಸೇರಿತು ಕೆಂಪು ಸಂಜೆಯ ಕನಸಲಿ.
ಹಕ್ಕಿ ಗೊರಲಿನ ಸುರತಗಾನಕೆ ಬಿಗಿಯು ನಸುವೇ ಸಡಲಿತು
ಬೆಚ್ಚಬೆಚ್ಚನೆಯ ಕಿರುಸಂದದಿ ಗಾಳಿ ಮೆಲ್ಲನೆ ತೆವಳಿತು.

ಇರುಳ [illegible] ಕೇಳಲು ಬಾರದು, ಬಾನು ತೆರೆಯಿತು ಕಣ್ಣನು ;
[illegible] ಬಿಸಿಲು [illegible] ; [illegible] ಹುಲ್ಲನು.
[illegible], ಗಾಳಿ [illegible]
ತೆಂಗುಗಳ [illegible] ಮಲಗಿತು.

'[illegible]' ಕವನವು [illegible] ಕವಿಯ ಆತ್ಮಚರಿತ್ರೆಯ ರೀತಿಯಲ್ಲಿದೆ.

ಈ ಕವನದ '[illegible]' ಎಂಬ ಸಾಲು [illegible] '[illegible]' ಎಂದು ಕೊನೆಗಾಣುವ ಸಾಲಿನ [illegible] ನೆನಪಿಗೆ ತರುತ್ತವೆ. ಎಂಥ ಒಂದು ಕೃತಿ !

'[illegible]' [illegible] ನೋಡಿಕೊಂಡು ಬರುವ ತನಕ ಓದಿ ಪ್ರಯೋಜನವಿಲ್ಲ.

'[illegible]' [illegible] 'ಹುಣ್ಣಿಗಿಲ್ಲ [illegible]' ಅರ್ಥವತ್ತಾಗಿದೆ. [illegible] ದೇಶಗಳಲ್ಲಿ ಪ್ರವಾಸ ಮಾಡುವ ಭಾರತೀಯರಿಗೆ ಆಗುವ ಈ [illegible] '[illegible]', '[illegible] ದ್ವೀಪದಲ್ಲಿ' ಎಂಬ ಕವನಗಳು ಕೂಡ ಇಂಥವೇ.

'[illegible]'ದಲ್ಲಿ [illegible] ಒಂದೊಂದು ಒಂದೊಂದು ಘಟನೆಯ [illegible] ಅತಿಥಿ ಬಂದಾಗ ಆಗುವ [illegible] ದಾಂಪತ್ಯದ [illegible] – [illegible] 'ಗುಬ್ಬಚ್ಚಿಗಳೇ, [illegible] ?' ಎಂಬ ಸಾಲು ಶರ್ಮರ ಮತ್ತೊಂದು ಕವನ ಗುಬ್ಬಚ್ಚಿಯನ್ನು ನೆನಪಿಗೆ ತರುತ್ತದೆ.

[illegible] ಕವನಗಳಲ್ಲಿ ಈ ಸಂಕಲನದ ಇತರ ಕವನಗಳಿಗಿಂತ [illegible] ಹೆಚ್ಚಾಗಿದೆ. '[illegible]', '[illegible] ಮೇಲೆ' '[illegible]' 'ಗೃಹಸ್ಥಾಶ್ರಮ' [illegible] ಗತ್ತಿಯ ಬಗ್ಗೆ [illegible] ಒಂದು [illegible] ಮುಂದೆ ಶರ್ಮರು ಬರೆದ ಕವನಗಳಿಗೆಲ್ಲ [illegible] ಮತ್ತು ಹಿನ್ನೆಲೆ.

ಶರ್ಮರ 'ಕನಸು ಕನವರಿಕೆ ಕಾವ್ಯಕ್ಕೆ ಬೇಕೇಬೇಕು.

[illegible] ಎಂಬ [illegible] ಅರ್ಥವತ್ತಾಗಿದೆ

ಶರ್ಮರ ಎಲ್ಲ ಕವನ ಸಂಕಲನಗಳನ್ನು ಕುರಿತು ಬರೆಯುವ ಉದ್ದೇಶವಿಲ್ಲ ಈಗ. ಈ [illegible] ಅವರ '[illegible]' ಸಂಕಲನವನ್ನು ಅವರು [illegible] ಅಂದೇ ಅದರಲ್ಲಿನ ಕೆಲವು ಕವನಗಳನ್ನು [illegible]

ಸಂಕಲನದ ತಲೆ ಹೆಸರಿನ ಕವನವನ್ನು ಬಿಟ್ಟರೆ - ಕೆಲವು ಭಗ್ನ ಚಿತ್ರಗಳು ಎಂಬ ಕವನಗಳನ್ನು ವಿಶೇಷವಾಗಿ ಮೆಚ್ಚಿಕೊಂಡು ಅವರಿಗೆ ಒಂದು ಪತ್ರವನ್ನು ಬರೆದೆ. ಆ ಪತ್ರ ತಲುಪಿದೊಡನೆ ಅವರು ನನಗೆ ದೂರವಾಣಿಯಲ್ಲಿ ಹೀಗೆ ಹೇಳಿದರು : ''ನಾನು ಇನ್ನು ಮೇಲೆ ಪತ್ರಗಳನ್ನು ಬರೆಯಬಾರದು ಎಂದುಕೊಂಡಿದ್ದೆ. ನನ್ನನ್ನು ಜನ ಇಷ್ಟೇಕೆ ತಾತ್ಸಾರದಿಂದ ಕಾಣುತ್ತಾರೆಂದು ತುಂಬ ಬೇಸರವಾಗಿತ್ತು. ನಿಮ್ಮ ಪತ್ರ ನನಗೆ ಮತ್ತೆ ಉತ್ಸಾಹ ತಂದಿದೆ. ನಿಮಗೆ ವಂದನೆಗಳು !'' ಆಗ ನನಗೆ ಗೊತ್ತಾಯಿತು ಅವರಿಗೆ ನಿಜವಾಗಿ ಬೇಸರವಾಗಿದ್ದಕ್ಕೆ ಕಾರಣಗಳಿದ್ದುವು. ಧೀಮಂತ ಗುಣದ ಕವಿಗೆ ತನ್ನ ಕಾವ್ಯವನ್ನು ಅರ್ಥಮಾಡಿಕೊಳ್ಳುವ ಜನ ಅಧಿಕರಾಗಿರದಿದ್ದರೂ ಚಿಂತೆ ಇಲ್ಲ, ಅರ್ಥಮಾಡಿಕೊಂಡವರೂ ಏಕೆ ಅವರ ಕವನಗಳ ಬಗ್ಗೆ ಮಾತನಾಡುವುದಿಲ್ಲ ಎಂಬ ಪ್ರಶ್ನೆ ಕಾಡುತ್ತಿತ್ತು. ಶರ್ಮರ ಕವನಗಳು ಅಡಿಗರ ಕವನಗಳಿಗಿಂತ ಹೆಚ್ಚು ಕಷ್ಟ ಅರ್ಥಮಾಡಿಕೊಳ್ಳಲು. ಶರ್ಮರ ಕವನಗಳನ್ನು ನಾಲ್ಕಾರು ಸಲ ಓದಿದರೆ ಅವು ಅರ್ಥವನ್ನು ನಿಧಾನವಾಗಿ ಬಿಟ್ಟುಕೊಡುತ್ತವೆ. ಶರ್ಮರ ಅಭಿಪ್ರಾಯ ಇಂತಿತ್ತು. ತಾವು ಕವನ ರಚಿಸಲು ಎಷ್ಟು ಶ್ರಮವನ್ನು ಮಾಡಿರುತ್ತಾರೋ ಅಷ್ಟೇ ಕಷ್ಟವನ್ನು ಓದುಗರೂ ವಹಿಸಬೇಕು ಎಂಬುದು. ಇದು ನಿಜ. ಅವರ ಅನೇಕ ಕವನಗಳನ್ನು ಕಷ್ಟಪಟ್ಟು ಓದಬೇಕು. ಸ್ಪಷ್ಟವಾಗಿ ಅರ್ಥವಾಗುವವರೆಗೆ ಓದಬೇಕು.

ಮತ್ತೊಂದು ಮುಖ್ಯ ವಿಷಯವಿದೆ. ಅವರು ಗೀತವನ್ನು ಹಾಡುವುದಕ್ಕಾಗಿ ಕವನಗಳನ್ನು ರಚಿಸಲಿಲ್ಲ. ಹಾಡಿದ ಕವನಗಳಿಂದ ಇತರರಿಗೆ ಕೀರ್ತಿ ಪ್ರತಿಷ್ಠೆಗಳು ಲಭಿಸಿದುವು. ಆದರೆ ಅವುಗಳು, ನಿಜವಾಗಿ ಕವನಗಳಲ್ಲ. ಅವು ಹಾಡುಗಳು. ಕವನಗಳಿಗೆ ಹಾಡು ಬೇಕಿಲ್ಲ. ಕವನವೆಂಬುದು ಗಾಢಚಿಂತನ, ಗೂಢತತ್ತ್ವಗಳಿಂದ ಕೂಡಿದ್ದು. ಅವುಗಳನ್ನು ಹಾಡಿ ಜನಸಾಮಾನ್ಯರನ್ನು ರಮಿಸುವುದು ಕವಿಯ ಉದ್ದೇಶವಾಗಕೂಡದು. ಇದೊಂದು ವ್ರತವಾಯಿತು ಅವರಿಗೆ. ಇದರಿಂದ ಕೆಲವು ಕವಿಗಳಿಗೆ ವಿರೋಧವೂ ಆಯಿತು. ಆದರೆ ಕೊನೆಯತನಕ ಅವರು ತಮ್ಮ ಅಭಿಪ್ರಾಯವನ್ನು ಬದಲಿಸಲಿಲ್ಲ.

ಶರ್ಮರ ಕಾವ್ಯದ ಬಗ್ಗೆ ಒಂದು ವಿಶಿಷ್ಟವಾದ ಮಾತನ್ನು ಹೇಳಬೇಕು. ಅಡಿಗರ ಶರ್ಮರ ರಚನಾಕ್ರಮ ಬೇರೆಬೇರೆಯಾದರೂ ಸತ್ವದಲ್ಲಿ ಇಬ್ಬರ ಸಾಮರ್ಥ್ಯವೂ ಒಂದೇ ಮಟ್ಟದ್ದು. ಅಡಿಗರದು ರಚನೆ ಸ್ವಲ್ಪ ಸರಳ, ಶರ್ಮರದು ಬೇಕೆಂದೇ ಕ್ಲಿಷ್ಟ. ಅಡಿಗರ ಭಾಷೆ ಕನ್ನಡದ ನೆಲದಿಂದಾದದ್ದು. ಶರ್ಮರ ಭಾಷೆ, ಪರದೇಶದ ಸಂಪರ್ಕದ್ದು. ಅದಕ್ಕೆ ಕಾರಣ ಶರ್ಮರು ಇಪ್ಪತ್ತೈದು ವರ್ಷಗಳ ಕಾಲ ತಮ್ಮ ದೇಶದ ಹೊರಗೇ ಇದ್ದರು. ಆದರೆ ಕನ್ನಡದ ನೆಲದ, ಜನರ, ಸಾಹಿತ್ಯದ ಪ್ರೇಮವನ್ನು ಉಳಿಸಿಕೊಂಡ ಅವರ ಬದುಕು ನಿಜವಾಗಿ ಗೌರವಾರ್ಹವಾದದ್ದು. ಅವರ ಅನೇಕ ಕವನಗಳು ಕನ್ನಡ ಸಾಹಿತ್ಯದ ಶಾಶ್ವತ ಆಸ್ತಿ.

ಶರ್ಮರ ವ್ಯಂಗ್ಯವು ಎಷ್ಟು ಗಾಢವಾದದ್ದು ಎಂಬುದನ್ನು ತಿಳಿಸಲು ಒಂದು ಸನ್ನಿವೇಶವನ್ನು ತಿಳಿಸುವುದು ಉತ್ತಮ. ಕನ್ನಡ ಪವಿತ್ರವಾದ [illegible]

ಪ್ರಪಂಚದ ಎಲ್ಲೆಡೆ ಅದನ್ನು ತುಂಬ ಶ್ರದ್ಧೆಯಿಂದ ವೈಭವಯುತವಾಗಿ ಆಚರಿಸುತ್ತಾರೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ ಒಂದು ಸಮಯದಲ್ಲಿ ಕೋಪನ್‌ಹೇಗನ್, ಲಂಡಂಡೆರಿ ಮತ್ತು ಮೈಲಾಯ್‌ಗಳಲ್ಲಿ ಹೇಗೆ ಆಚರಣೆಗೊಂಡಿತು ಎಂಬುದನ್ನು ಚಿತ್ರಿಸಿರುವ ಶರ್ಮರ ಮೂರು ಕವನಗಳಿವೆ. ಕೋಪನ್ ಹೇಗನ್ ಇರುವುದು ಡೆನ್ಮಾರ್ಕ್‌ನಲ್ಲಿ ಲಂಡಂಡೆರಿ ಇರುವುದು ಐರ್ಲೆಂಡಿನಲ್ಲಿ ಮೈಲಾಯ್ ಎಂಬುದು ವಿಯೆಟ್ನಾಮಿನಲ್ಲಿರುವ ಒಂದು ಸಣ್ಣ ಹಳ್ಳಿ. ಅಲ್ಲಿ ಅಮೆರಿಕದ ಸೈನ್ಯಗಳು ಅಮಾನುಷವಾದ ಆಕ್ರಮಣ ಮಾಡಿ ಹೆಂಗಸರು ಮಕ್ಕಳನ್ನು ಅಚಿಂತ್ಯವಾದ ಹಿಂಸೆಗೆ ಒಳಗು ಮಾಡಿದರು. ಇಲ್ಲಿ ಬೌದ್ಧಮತೀಯರು ಹೆಚ್ಚಾಗಿದ್ದಾಗ ಐರ್ಲೆಂಡಿನಲ್ಲಿ ರೋಮನ್ ಕ್ಯಾಥೋಲಿಕ್ಕರಿಗೂ ಪ್ರಾಟೆಸ್ಟೆಂಟರಿಗೂ ಹರಿಯಲಾಗದ ದ್ವೇಷ ಮನೆಮಾಡಿದೆ. ಡೆನ್ಮಾರ್ಕ್‌ನಲ್ಲಿ ಪ್ರಚಾರದಲ್ಲಿರುವುದು ಲ್ಯೂದರಿಸ್ಟ್ . ಹೀಗೆ ವಿಸ್ತಾರವಾಗಿ ಹರಡಿರುವ ಈ ಮೂರು ಪ್ರದೇಶಗಳಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಕ್ರಿಸ್ತನ ಜನ್ಮದ ಹಬ್ಬವನ್ನು ಹೇಗೆ ಆಚರಿಸುವರು ಎಂಬುದು ಈ ಮೂರು ಕವನಗಳ ವಸ್ತು.

ಡೆನ್ಮಾರ್ಕಿನ ಕೋಪನ್‌ಹೇಗನ್ ಆಚರಿಸಿದ ಹಬ್ಬ ಹೀಗಿತ್ತು :-

ಆದಿಭೋಗದ ಕೆಲಸ ಯಥಾವತ್ತಾಗಿ ನಡೆದು
ತೊಟ್ಟಿಕ್ಕುತ್ತ ನಿಂತ
ನಗ್ನ ತರುಣ ತರುಣಿ
ಸುತ್ತ ನೆರೆದವರ ಜೊತೆಗೆ ಧ್ವನಿಕೊಟ್ಟು ಹಾಡಿದರು-
ಮುಗಿಲಮುಟ್ಟಿತ್ತು
ಕ್ರಿಸ್ತನನಂತ
ಅಪಾರ ಕರುಣೆ

ಈ ಹಬ್ಬ ನೆರವೇರುವುದು ಮಧ್ಯರಾತ್ರಿಯ ಕೊನೆಯಲ್ಲಿ ಎಂಬುದನ್ನು ನೆನೆದು ಅರ್ಥಮಾಡಿಕೊಂಡರೆ ಈ ಹಬ್ಬವನ್ನು ಎಷ್ಟು ಪವಿತ್ರ ದೃಷ್ಟಿಯಿಂದ ಜನರು ನೆರವೇರಿಸಿದರು ಎಂಬುದರ ಚಿತ್ರ ಮನದಟ್ಟಾಗುತ್ತದೆ.

ಲಂಡಂಡೆರಿಯಲ್ಲಿ ಎರಡು ಗುಂಪುಗಳ ನಡುವೆ, ಇಬ್ಬಣದವರೂ ಕ್ರಿಸ್ತನ ಭಕ್ತರೇ ಆದರೂ ಕೊನೆಗಾಣದ ದ್ವೇಷ. ಒಬ್ಬ ಕಿವುಡ ಬಾಲಕ ನಡೆಯುತ್ತಿದ್ದಾಗ ಒಬ್ಬ ಯೋಧ ಅವನನ್ನು ಕಂಡ. ಬಾಲಕನ ಕೈಲಿ ಒಂದು ಪಿಸ್ತೂಲಿತ್ತು. ಅದನ್ನು ಕಂಡ ಯೋಧ ಆ ಪಿಸ್ತೂಲನ್ನು ನೆಲಕ್ಕೆಸೆದು ಕೈ ಎತ್ತಿ ನಿಲ್ಲುವಂತೆ ಕೂಗಿದ. ಹುಟ್ಟು ಕಿವುಡನಿಗೆ ಇದು ಕೇಳಿಸಲಿಲ್ಲ. ಆದರೆ ಹುಡುಗ ಮಾತನಾಡದೇ ಇದ್ದುದೇ ಸಾಕಾಯಿತು. ಯೋಧನಿಗೆ ಬಾಲಕನಿಗೆ ಗುರಿಯಿಟ್ಟು ತನ್ನ ಪಿಸ್ತೂಲಿನಿಂದ ಹೊಡೆದ. ಬಾಲಕ ಸತ್ತ. ಒಬ್ಬ ಮುದುಕಿ ಬಹುಶಃ ಅವನ ಅಜ್ಜಿ ಓಡಿ ಬಂದು ಹುಡುಕಿ ಆ ಹುಡುಗ ಕ್ರಿಸ್‌ಮಸ್ ಹಬ್ಬಕ್ಕೆ ಕೊಂಡು ಬಂದಿದ್ದ ನಿಗಿನಿಗಿ ಪಿಸ್ತೂಲಿನ ಬೊಂಬೆಯನ್ನು ಎತ್ತಿ ಹಿಡಿದಳು. ಅವಳ ಕಣ್ಣಿನಿಂದ ಕಾಲುವೆ ಹರಿಯಿತು.

ಇದು ಲಂಡಂಡೆರಿಯಲ್ಲಿ ನೆರವೇರಿದ ಕ್ರಿಸ್‌ಮಸ್.

ಮೂರನೆಯದು ಕ್ರಿಸ್‌ಮಸ್ ಪ್ರತಿಮೆ. ಒಬ್ಬ ಯೋಧ ತಾನು ನಿಂತಿದ್ದಂತೆ ಒಬ್ಬಳು ವಿಯಟ್ನಾಮ್‌ನ ಹೆಂಗಸನ್ನು ಹಿಡಿದು ಅವಳ ತಲೆಗೆ ಗ್ರೆನೇಡನ್ನು ಹಿಡಿದು ತನ್ನ ಕಾಮಾಸಕ್ತಿಯನ್ನು ತಣಿಸುವಂತೆ ಬಲವಂತಪಡಿಸಿ ಯಶಸ್ವಿಯಾಗಿದ್ದ. ಇಂಥ ಸ್ಥಿತಿಯಲ್ಲಿ ಕಥೆಡ್ರಲ್ಲಿನ ಗಂಟೆ ಬಾರಿಸಿತು. ಕ್ರಿಸ್ತನ ಜನನದ ಹಬ್ಬ ನೆರವೇರಿತು. ಎಂಥ ವಿಡಂಬನೆ!

ಇವು ಕ್ರಿಸ್ತಮತೀಯರನ್ನು ಕುರಿತು ರಚಿತವಾಗಿರುವ ಕವನಗಳಾದರೂ ಈ ಬಗೆಯ ವ್ಯವಹಾರವನ್ನು ಯಾವ ಮತಾಂಧ ಸಮುದಾಯಕ್ಕೂ ಅನ್ವಯವಾಗುವ ಸತ್ವವನ್ನು ಹೊಂದಿದೆ. ನಾನು ಹೇಳುವ ಕವನಗಳನ್ನು ಪೂರ್ತಿ ಉದಾಹರಿಸಲು ಬಹು ಕಷ್ಟವಾದುದರಿಂದ ನನ್ನ ಮನಸ್ಸು ಆ ಕೆಲಸ ಮಾಡಲು ಒಪ್ಪುತ್ತಿಲ್ಲ. ವ್ಯಂಗ್ಯದ ಗಾಢ ಪರಿಣಾಮವನ್ನು ತಿಳಿಯ ಬಯಸುವವರು ನಾನು ಬಿಟ್ಟಿರುವ ಆ ಕವನದ ಸಾಲುಗಳನ್ನು ಓದಲೇಬೇಕು.

ಶರ್ಮರ ಎಲ್ಲ ಕವನ ಸಂಕಲನಗಳನ್ನೂ ಸಣ್ಣ ಲೇಖನವೊಂದರಲ್ಲಿ ಪರಿಚಯಿಸಲಾಗುವುದಿಲ್ಲ. ಆದರೆ ನಾವು ಶರ್ಮರು ನವ್ಯಪಂಥದ ಬಹುಪ್ರಧಾನ ಕವಿ ಎಂಬುದನ್ನು ಬಿಟ್ಟು ಅವರ ಕಾವ್ಯದ ಪ್ರಮುಖ ಅಂಶಗಳನ್ನು ನೆನಪಿಡಬೇಕು.

ರಾಮಚಂದ್ರಶರ್ಮರು 'ಬುಧ ನೀಡಿದ ಸ್ಫೂರ್ತಿ'ಯನ್ನು ಪ್ರಕಟಿಸುವ ವೇಳೆಗೆ ನವ್ಯಮಾರ್ಗವನ್ನು ಸಂಪೂರ್ಣವಾಗಿ ಅಪ್ಪಿಕೊಂಡುಬಿಟ್ಟರು. ಮತ್ತೆ ಹಿಂದಿರುಗಿ ನೋಡಲಿಲ್ಲ. ಪ್ರತಿಮಾ ನಿರ್ಮಾಣದಲ್ಲಿ ಅಪಾರ ಯಶಸ್ಸನ್ನು ಸಾಧಿಸಿದರು. ಹಾಗೆಯೇ ರೂಪಕಗಳನ್ನೂ ಸಂಕೇತಗಳನ್ನೂ ಸೃಷ್ಟಿಸಿದರು. ಹೊಸತನ್ನೇ ಹೇಳಬೇಕೆಂಬುದು ಒಂದು ನಿರ್ಧಾರವಾಯಿತು. ಅವರ ಕಾವ್ಯದಲ್ಲಿ ಕಾಮಾಸಕ್ತಿ ಎಂಬುದು ಒಂದು ಪ್ರಧಾನ ಅಂಶ ಅಷ್ಟೆ! ಅದೇ ಪ್ರಧಾನವಲ್ಲ. ಅವರ ಮನೆ ಸಾಹಿತ್ಯ ದಾಂಪತ್ಯದ ಸದನವಾಗಿತ್ತು. ಅದರ ಆತ್ಮೀಯ ಪರಿಣಾಮವು ಅವರ ಕಾವ್ಯದಲ್ಲಿ ಆಗಾಗ ಸ್ಪಷ್ಟವಾಗಿ ಇಣುಕಿ ನೋಡುತ್ತದೆ. ಅವರಿಗೆ ಬಡಾಯಿಯನ್ನು ಕಂಡರೆ ಪರಮದ್ವೇಷ. ನೇರವಾದ ಮಾತಿನ, ಸ್ಪಷ್ಟ ಒತ್ತಾಯದ, ಸ್ನೇಹಮಯವಾದ, ಹಾಸ್ಯ ಪ್ರಜ್ಞೆಯ ಜೀವಂತ ಸಂಭಾಷಣೆಯ ಸಂಭಾವಿತ ವ್ಯಕ್ತಿಯಾಗಿದ್ದ ಕವಿ ಜನಪ್ರಿಯತೆಯನ್ನು ಸಂಪಾದಿಸಿದ್ದರು.

ಸ್ವಂತ ಕಾವ್ಯದ ವಾಚನದಲ್ಲಿ ಸ್ವಲ್ಪ ನಾಟಕೀಯತೆಯನ್ನು ಬೆರಸಿ ಪರಿಣಾಮ ಸೌಖ್ಯವನ್ನುಂಟುಮಾಡುತ್ತಿದ್ದರು. ನಿರೀಶ್ವರತೆಯೇ ಅವರ ಮತವಾಗಿತ್ತು. ಎಲ್ಲರೊಡನಿದ್ದೂ ಅವರು ಬೇರೆಯಾಗಿಯೇ ನಿಂತರು ಕೊನೆಯ ತನಕ. ಅವರ ಕತೆಗಳಲ್ಲಿಯೂ ಭಾಷೆ ಕಾವ್ಯಮಯವಾಗುತ್ತದೆ. ಅಲ್ಲಿಯೂ ಪ್ರತಿಮೆಗಳನ್ನು ತುಂಬಿದ್ದಾರೆ. ಅವರ ಬರವಣಿಗೆಯಲ್ಲೆಲ್ಲ ಜೀವನೋತ್ಸಾಹ ತುಂಬಿದೆ.

ಶರ್ಮರ ಕಾವ್ಯದ, ಕತೆಗಳ ಹೊಸ ವಿಮರ್ಶೆಯ ಅವಶ್ಯಕತೆ ಇದೆ. ಕವಿಯಾಗಿ ಅವರು ಬೆಳೆದುದನ್ನು ಕಾಲಾನುಕ್ರಮದಲ್ಲಿ ಅಭ್ಯಾಸ ಮಾಡಿದರೆ ಒಂದು ಸಫಲ

ರಸಯಾತ್ರೆಯಾಗುತ್ತದೆ. ವಾಚಾಳಿಯಾದ ಕವಿ ಮಿತಭಾಷಿಯಾದದ್ದೇ ಒಂದು ಸವಾಡ. ಅವರು ಏಕಪಂಥೀಯರಾಗಿರಲಿಲ್ಲ. ಪ್ರಗತಿಶೀಲ, ದಲಿತ, ಬಂಡಾಯ ಮುಂತಾದ ಯಾವ ಹಣೆಪಟ್ಟಿಗೂ ಅವರು ದಕ್ಕುತ್ತಿರಲಿಲ್ಲ. ಆದರೆ ಆ ಎಲ್ಲ ಪಂಥಗಳನ್ನೂ ಅರಗಿಸಿಕೊಂಡ ಸತ್ವ ಅವರದಾಗಿತ್ತು. ನವ್ಯ ಸಣ್ಣಕತೆಗಳಿಗೆ ಅತ್ಯಂತ ಶ್ರೇಷ್ಠ ಮಾದರಿಯಾಗಿ ಅವರು ಸ್ಥಾಪಿತರಾಗಿದ್ದಾರೆ.

ಸಿಗರೇಟು ಅವರ ಆರೋಗ್ಯವನ್ನು ಕೆಡಿಸಿಬಿಟ್ಟಿತು. ಮೊದಲಿನಿಂದಲೂ ನನ್ನ ಬಗ್ಗೆ ಒಂದು ಗೌರವ ಹೊಂದಿದ ಅವರು ನನ್ನ ಎದುರಿಗೆ ಸಿಗರೇಟನ್ನು ಸೇದುತ್ತಿರಲಿಲ್ಲ. ಕೆಲವು ದಿನಗಳ ಹಿಂದೆ ನಮ್ಮ ಮನೆಗೆ ಬಂದು ಯಾವುದೋ ವಿಚಾರವಾಗಿ ಸ್ವಲ್ಪ ಹೆಚ್ಚು ಹೊತ್ತು ಮಾತನಾಡುತ್ತ ಕುಳಿತಿದ್ದೆವು. ಅವರಿಗೆ ಏದುಸಿರು ಬಂತು. ಮೆಟ್ಟಿಲಿಳಿದು ಹೊರಗೆ ಹೋಗಲು ಕಷ್ಟವಾಗಿತ್ತು. ಆಗ ಅವರು ಹೇಳಿದರು :- "ಸಾರ್, ನಿಮ್ಮ ಮನೆಯಲ್ಲಿ ಕುಳಿತು ಸಿಗರೇಟು ಸೇದಬಹುದೆ ?" ನನಗೆ ಕಣ್ಣಲ್ಲಿ ನೀರು ತುಂಬಿಕೊಂಡಿತು. ಶರ್ಮರ ಆರೋಗ್ಯ ಎಷ್ಟು ಹತಾಶವಾಗಿದೆ ಎಂದು ಸಂಕಟಪಟ್ಟೆ. ನನ್ನ ಬಳಿ ಇದ್ದ ಒಂದು ಆಶ್‌ಟ್ರೇಯನ್ನು ತಂದು ಅವರ ಮುಂದೆ ಸ್ಟೂಲಿನ ಮೇಲೆ ಇಟ್ಟೆ . ಒಂದು ಸಿಗರೇಟನ್ನು ನಿಧಾನವಾಗಿ ಸೇದಿ ಉಸಿರನ್ನು ಮತ್ತೆ ಪಡೆದರು. ಇದಾದ ಎರಡು ತಿಂಗಳೊಳಗಾಗಿ ಅವರು ಆಸ್ಪತ್ರೆಯನ್ನು ಸೇರಿದರು. ನಾನು ಹೋದಾಗ ಆಕ್ಸಿಜನ್ ನೀಡುವ ಚಿಕಿತ್ಸೆ ನಡೆದಿತ್ತು. ನನ್ನ ಮಗ, ಅರುಣನೂ ಬಂದಿದ್ದನು. ನಾನು ಅವರ ಸ್ಥಿತಿಯನ್ನು ಹೆಚ್ಚು ಹೊತ್ತು ನೋಡಲಾರದೆ ಹೊರಬಂದೆ. ನನ್ನ ಮಗನ ಕೈಹಿಡಿದು ಬಲವಾಗಿ ಜಿಕಿ ತಮ್ಮ ಪ್ರೀತಿಯನ್ನು ತೋರಿಸಿದರಂತೆ. ಅವನು ಕಣ್ಣೀರು ಹಾಕಿಕೊಂಡು ಹೊರಟು ಬಂದ.

ಮಾರನೆಯ ದಿನವೇ ಅವರ ಅವಸಾನವಾಯಿತು. ಅನೇಕ ಸಾಹಿತಿ ಮಿತ್ರರು ಬಂದು ಅಂತ್ಯಗೌರವವನ್ನು ಸಲ್ಲಿಸಿದರು. ಅವರನ್ನು ಕಳೆದುಕೊಂಡ ದುಃಖ ಎಲ್ಲರ ಮುಖದಲ್ಲೂ ಕಂಡುಬಂತು. ಒಬ್ಬ ದೊಡ್ಡ ವ್ಯಕ್ತಿ ಇಲ್ಲದೆ ಹೋದರೂ ಆತನ ಪ್ರೀತಿ ಅವರನ್ನು ಕಂಡವರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದುಬಿಟ್ಟಿದೆ.

ಅವರ ನೆನಪನ್ನು ಕನ್ನಡನಾಡಿನಲ್ಲಿ ಶಾಶ್ವತವಾಗಿ ಇಡುವಂತೆ ಏನಾದರೂ ಏರ್ಪಾಟು ಮಾಡಬೇಕು.

ವಿದ್ವದ್ವರೇಣ್ಯ ಎಸ್.ಕೆ. ರಾಮಚಂದ್ರರಾಯರು
(1925-2006)

ಬೆಂಗಳೂರಿನ ಜಯನಗರದ ಮೊದಲನೆಯ ಬ್ಲಾಕಿನಲ್ಲಿ ವಾಸವಾಗಿದ್ದ ಪ್ರೊ|| ಎಸ್.ಕೆ. ರಾಮಚಂದ್ರರಾಯರ ಮನೆ ಈ ಭಾಗದ ನಾಗರಿಕರಿಗೆಲ್ಲ ಒಂದು ಸಂಸ್ಕೃತಿ ಕೇಂದ್ರವಾಗಿತ್ತು. ಜ್ಞಾನಪಿಪಾಸುಗಳಾದ ವಿದ್ವಜ್ಜನರು ಅವರ ಮನೆಗೆ ಅನೇಕ ಸಮಸ್ಯೆಗಳ ಪರಿಹಾರಕ್ಕೆಂದು ಆಗಮಿಸುತ್ತಿದ್ದರು. ಅವರೆಲ್ಲರ ಮನಸ್ಸಿಗೆ ಆಹ್ಲಾದ ಉಂಟಾಗುವಂತೆ ಮಾತನಾಡುವ, ಸಮಾಧಾನ ನೀಡುವ, ಸಮಸ್ಯೆಗಳಿಗೆ ತಾರ್ಕಿಕವಾದ ಪರಿಹಾರಗಳನ್ನು ನೀಡುವ ರಾಯರು ಸದಾ ಹಸನ್ಮುಖಿಗಳಾಗಿ ವಿರಾಜಿಸುತ್ತಿದ್ದರು. ರಾಯರ ವ್ಯಕ್ತಿತ್ವವೇ ಆಕರ್ಷಕವಾದುದು. ಸಂಪ್ರದಾಯದ ವೈದಿಕ ವಿದ್ವಾಂಸರ ಉಡುಪಿನಲ್ಲಿ ತೇಜಸ್ವಿಯಾದ ಈ ಹಿರಿಯರನ್ನು ಕಾಣುವುದೇ ಒಂದು ಸುಖಾನುಭವವನ್ನು ನೀಡುತ್ತಿತ್ತು. ನಾನಾಶಾಸ್ತ್ರ ವಿಚಾರವೆಂಬ ನಿರ್ಮಲ ಜಲದಲ್ಲಿ ಮಿಂದ ಮುಖದಿಂದ ಹೊರಬರುತ್ತಿದ್ದ ವಿವೇಕಯುತವಾದ ವಾಕ್ಪ್ರವಾಹದಿಂದ ಸಂತುಷ್ಟರಾದವರು ಅವರ ಆಗಮನದ ಉದ್ದೇಶ ಸಾರ್ಥಕವಾಯಿತೆಂದು ಭಾವಿಸುತ್ತಿದ್ದರು. ಇಂಥ ಜೀವಂತ ಜ್ಞಾನಭಂಡಾರವಾಗಿದ್ದ ರಾಯರ ಅವಸಾನದಿಂದ 2006ರ ಫೆಬ್ರವರಿ ತಿಂಗಳ ಎರಡನೆಯ ತಾರೀಖಿನ ಪ್ರಾತಃಕಾಲ ನಗರಕ್ಕೆ ವ್ಯಸನ ತುಂಬಿಕೊಂಡಿತು.

ವರ್ತಮಾನದಲ್ಲಿ ಇಬ್ಬರು ಇಂಥ ವಿದ್ವಾಂಸರು ಕಾಣಬರುತ್ತಾರೋ ಇಲ್ಲವೋ ಎಂಬ ಪ್ರತಿಭೆಯನ್ನು ಪಡೆದಿದ್ದ ರಾಯರಿಗೆ ಅಂಥ ಅಸಾಧಾರಣ ವ್ಯಕ್ತಿತ್ವವಿತ್ತು. ಸ್ವಗೃಹದ

ಹಿನ್ನೆಲೆಯಲ್ಲಿ ಪರಂಪರೆಯಿಂದ ಬಂದ ವೈದಿಕ ಕ್ಷೇತ್ರದ ಅನೇಕ ವಿಭಾಗಗಳಲ್ಲಿ ಅವರು ಸಿದ್ಧಿಯನ್ನು ಗಳಿಸಿದರು. ವಿಶ್ವವಿದ್ಯಾಲಯದಲ್ಲಿ ಮನಶ್ಶಾಸ್ತ್ರ ವಿಭಾಗದ ಎಂ.ಎ. ಪದವಿಯಿಂದ ಪಾಶ್ಚಾತ್ಯ ಚಿಂತನೆಯ ಮಾರ್ಗದಲ್ಲಿ ಪರಿಣತಿಯನ್ನು ಗಳಿಸಿದರು. ಹೀಗೆ ಪೌರಸ್ತ್ಯ ಮತ್ತು ಪಾಶ್ಚಾತ್ಯ ಚಿಂತನ ಮಂಥನಗಳ ಸಮ್ಮಿಶ್ರಣದಿಂದ ಅವರ ವ್ಯಕ್ತಿತ್ವಕ್ಕೆ ಅಪೂರ್ವ ಸಾಮರ್ಥ್ಯವು ದತ್ತವಾಗಿತ್ತು. ಅವರು ಪರಿಣತಿಯನ್ನು ಹೊಂದಿದ್ದ ಕ್ಷೇತ್ರಗಳ ವ್ಯಾಪ್ತಿಯನ್ನು ವಿವರಿಸುವುದು ಕಷ್ಟ. ಸಂಸ್ಕೃತ ಸಾಹಿತ್ಯ, ವೇದೋಪನಿಷತ್ತುಗಳು, ಇತಿಹಾಸ ಪುರಾಣಗಳು, ವೈದಿಕ ದರ್ಶನಗಳು, ವೈದಿಕೇತರವಾದ ಜೈನ, ಬೌದ್ಧ ದರ್ಶನಗಳು ಎಲ್ಲ ಲಲಿತಕಲೆಗಳು, (ಸಂಗೀತ, ಚಿತ್ರಕಲೆ, ಶಿಲ್ಪ, ನಾಟ್ಯ) ಆಯುರ್ವೇದ, ಶ್ರೀವಿದ್ಯೆ, ಅವಧೂತಸಿದ್ಧಿ - ಇವುಗಳಲ್ಲದೆ ಪಾಲಿಸಾಹಿತ್ಯ, ಗ್ರಂಥಸಂಪಾದನೆ, ಅನುವಾದಗಳು ಕೂಡ ಅವರಿಗೆ ಚಿರಪರಿಚಿತವಾದುವು. ಈ ಎಲ್ಲ ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಅವರು ರಚಿಸಿರುವ ಗ್ರಂಥಸಮೂಹವೇ ಐನೂರರ ಸಂಖ್ಯೆಯ ಹತ್ತಿರ ಬರುತ್ತದೆ.

ಅಧ್ಯಾತ್ಮಚಿಂತನ ಅವರ ಪ್ರಥಮ ಆಯ್ಕೆ. ಅವರು ಆಧ್ಯಾತ್ಮಿಕ ವ್ಯಾಸಂಗವನ್ನು ಪ್ರಾರಂಭಿಸಿದ ತರುಣದಲ್ಲಿ ಒಮ್ಮೆ ಅವರು ಹಿಂದೆ ಶೃಂಗೇರಿಯ ಶಾರದಾಪೀಠದ ಅಧಿಪತಿ ಗಳಾಗಿದ್ದ (1912-1954) ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಯವರನ್ನು ಕಂಡ ರಂತೆ. ಆಗ ರಾಯರು ಸ್ವಾಮಿಯವರಿಗೆ ಬಿನ್ನವಿಸಿದ್ದರಂತೆ : "ಮಹಾಸ್ವಾಮಿ, ನಾನು ಮಾಧ್ವ. ನನಗೆ ಅದ್ವೈತವನ್ನು ಅರ್ಥಮಾಡಿಕೊಳ್ಳಬೇಕೆಂಬ ಅಪೇಕ್ಷೆಯಿದೆ. ಸಹಾಯಮಾಡ ಬೇಕು." ಅದಕ್ಕೆ ಸ್ವಾಮಿಗಳು ಉತ್ತರಿಸಿದರಂತೆ :-

"ಅದಕ್ಕೇನು, ಬಾ. ಅದ್ವೈತವೇನು ಸ್ಮಾರ್ತರ ಗುತ್ತಿಗೆಯೆ ?" ಹೀಗೆ ಪ್ರಾರಂಭ ಮಾಡಿಸಿದ ರಾಯರು ಅವರ ಬಳಿ ಆಧ್ಯಾತ್ಮಿಕ ವಿದ್ಯೆಯಲ್ಲಿ ಮುಂದುವರಿದರು. ಅದ್ವೈತದಲ್ಲಿ ಅಪರಿಮಿತವಾದ ಜ್ಞಾನವನ್ನು ಸಂಪಾದಿಸಿದರು. ಜೀವನಪರ್ಯಂತ ಆ ಜ್ಞಾನವನ್ನು ಇತರ ಜ್ಞಾನಪಿಪಾಸುಗಳಿಗೆ ಧಾರೆ ಎರೆದರು. ಹೀಗೆ ಆ ವಿದ್ಯೆಯಲ್ಲಿ ಜ್ಞಾನವನ್ನು ಸಂಪಾದಿಸಿದ ಅನೇಕ ಶಿಷ್ಯರು ತಮ್ಮ ಶಿಷ್ಯವೃತ್ತಿಯನ್ನು ಕೃತಜ್ಞತೆಯಿಂದ ಸದಾ ನೆನೆಯುತ್ತಾರೆ.

ಅವರು ಅದ್ವೈತವನ್ನು ಮಾತ್ರ ಬೋಧಿಸುತ್ತಿರಲಿಲ್ಲ. ದ್ವೈತ, ವಿಶಿಷ್ಟಾದ್ವೈತದ ತತ್ತ್ವಗಳನ್ನೂ ಹೋಲಿಕೆಗಾಗಿ ತಿಳಿಸಿಕೊಡುತ್ತಿದ್ದರು. ಕೇಳಿದವರು ತಮಗೆ ಬೇಕಾದ ಮಾರ್ಗವನ್ನು ಅನುಸರಿಸಬಹುದಾಗಿತ್ತು. ಹೀಗೆ ತೌಲನಿಕವಾಗಿ ತ್ರಿಮತಸ್ಥರಿಗೂ ರಾಯರು ಬಹುಕಾಲ ಪಾಠ ಮಾಡಿದ್ದಾರೆ. ಇದೊಂದು ಮಹಾ ಲೋಕೋಪಕಾರ.

ಇಂಥ ಮಹಾವಿದ್ವಾಂಸರು ಯಾವ ವೃತ್ತಿಯಲ್ಲಿಯೂ ಕೊನೆಯತನಕ ನಿರತರಾಗದಿ ದ್ದುದು ಒಂದು ವಿಸ್ಮಯ. ಬೆಂಗಳೂರಿನ ಭಾರತೀಯ ವಿಜ್ಞಾನಸಂಸ್ಥೆಯಲ್ಲಿ ಸಂಶೋಧಕರಾಗಿ ಸೇರಿದ ಮೇಲೆ ನಿಮ್ಹಾನ್ಸ್ ಸಂಸ್ಥೆಯಲ್ಲಿ ಕ್ಲಿನಿಕಲ್ ಸೈಕಾಲಜಿ ವಿಭಾಗದ ಮುಖ್ಯಸ್ಥರಾಗಿ ದುಡಿದರು. ಯಾವುದೋ ತತ್ತ್ವದ ವಿಚಾರದಲ್ಲಿ ಅಭಿಪ್ರಾಯ ವ್ಯತ್ಯಾಸ ಉಂಟಾಗಿ ತಮ್ಮ

ಕೆಲಸಕ್ಕೆ ರಾಜೀನಾಮೆ ನೀಡಿ ಸ್ವತಂತ್ರರಾಗಿ ಬಾಳಲು ನಿಶ್ಚಯಿಸಿದರು. ಅನೇಕ ಕಡೆಗಳಲ್ಲಿ ಸಂದರ್ಶನ ಪ್ರಾಧ್ಯಾಪಕರಾಗಿ ಅತ್ಯುತ್ತಮವಾದ ಕಾರ್ಯಗಳನ್ನು ನಿರ್ವಹಿಸಿದರು. ಆದರೆ ಯಾರ ಕೈಕೆಳಗೂ ದುಡಿಯಲು ಮುಂದಾಗಲಿಲ್ಲ.

ಇಂಥ ಸ್ವಾತಂತ್ರ್ಯದ ದೆಸೆಯಿಂದಲೇ ಅವರ ವ್ಯಾಸಂಗದ ವ್ಯಾಪ್ತಿ ಹೆಚ್ಚಾಯಿತು. ಸ್ವಾರಸ್ಯವೇನೆಂದರೆ ಅವರು ಯಾವ ಕ್ಷೇತ್ರದ ಅಭ್ಯಾಸವನ್ನೇ ಮುಂದುವರಿಸಿದರೂ ಅದರಲ್ಲಿ ಪರಿಪೂರ್ಣವಾದ ತಿಳಿವಳಿಕೆ ಬರುವ ತನಕ ಬಿಟ್ಟಿರಲಿಲ್ಲ. ಅವರು ರಚಿಸಿರುವ ಗ್ರಂಥರಾಶಿಯನ್ನು ನೋಡಿದರೇ ಆಶ್ಚರ್ಯವುಂಟಾಗುತ್ತದೆ.

ಹದಿನಾರು ಸಂಪುಟಗಳ 'ಋಗ್ವೇದದರ್ಶನ' ಒಂದು ಮಹತ್ಕಾರ್ಯ. ಈ ಸಂಪುಟಗಳು ಇಂಗ್ಲಿಷಿನಲ್ಲಿವೆ. ಆದರೂ ಅಲ್ಲಿ ಉಪಯೋಗಿಸಿರುವ ಭಾಷೆ ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿದೆ. ಬೇಕಾದವರು ಕನ್ನಡಕ್ಕೆ ಅನುವಾದವನ್ನು ಮಾಡಿಕೊಳ್ಳಬಹುದು. ಆರು ಸಂಪುಟಗಳ ಪ್ರತಿಮಾಕೋಶ, ಹನ್ನೆರಡು ಸಂಪುಟಗಳ ಆಗಮಕೋಶ, ಆಯುರ್ವೇದದ ಮೂರು ಸಂಪುಟಗಳು – ಇವುಗಳ ರಚನೆಗೆ ಒಂದು ಜೀವಮಾನವೇ ಸಾಕಾಗುವುದಿಲ್ಲ. 'ತಿರುಪತಿಯ ತಿಮ್ಮಪ್ಪ', 'ಶಾರದಾಪೀಠದ ಮಾಣಿಕ್ಯ' ಎಂಬಂಥ ಸಂಶೋಧನ ಗ್ರಂಥಗಳು, ಶಿಲ್ಪಶಾಸ್ತ್ರದ ಕಲೆಗಳ ಸಂಪುಟಗಳು ಬಹು ಆಳವಾದ ಜ್ಞಾನದಿಂದ ಮಾತ್ರ ರಚಿತವಾಗುವಂಥವು. ಹೀಗೆ ನೂರಾರು ಗ್ರಂಥಗಳಿವೆ ಅವರ ಹೆಸರಿನಲ್ಲಿ.

'ಈಶಾವಾಸ್ಯ ಉಪನಿಷತ್ತು' ಎಂಬ ಗ್ರಂಥವು ಉಪನಿಷತ್ತುಗಳಲ್ಲಿ ಮೊದಲನೆಯದು. ಇದು ಶುಕ್ಲ ಯಜುರ್ವೇದದ ವಾಜಸನೇಯ ಸಂಹಿತೆಗೆ ಸೇರಿದ್ದು. ಈ ಉಪನಿಷತ್ತಿನ ಸಾರಸರ್ವಸ್ವವನ್ನು ಸುಮಾರು ಇನ್ನೂರು ಪುಟಗಳಲ್ಲಿ ನಿರೂಪಿಸಿರುವ ರೀತಿ ಅನನ್ಯವಾದುದು. ಅವರ ಗ್ರಂಥಗಳಲ್ಲಿ ಇದಕ್ಕೆ ಪ್ರಥಮಸ್ಥಾನ ದೊರಕುತ್ತದೆ. ಇಲ್ಲಿಯ ವಿವರಗಳು ತೌಲನಿಕವಾಗಿದ್ದು ಜಿಜ್ಞಾಸುಗಳಿಗೆ ತುಂಬ ಉಪಕಾರಕವಾಗಿದೆ.

ರಾಯರ ಶೈಲಿ ಸರಳ ಮತ್ತು ಸುಂದರ. ಯಾವ ಭಾಷೆಯಲ್ಲಿಯೇ ಆಗಲಿ ಆ ಭಾಷೆಯ ಮರ್ಯಾದೆಯನ್ನು ಅನುಸರಿಸಿ ಓದುಗರಿಗೆ ಅದನ್ನು ಆಕರ್ಷಕವಾಗಿ ಮಾಡುವುದರಲ್ಲಿ ಅವರು ಸಿದ್ಧಹಸ್ತರು. ಈ ಮಾತನ್ನು ಅವರ ಎಲ್ಲ ಗ್ರಂಥಗಳಿಗೂ ಅನ್ವಯಿಸಬಹುದು.

ಅವರ ಮಾತುಗಾರಿಕೆಯ ಬಗ್ಗೆ ಸ್ವಲ್ಪ ವಿವರವನ್ನು ನೀಡುವುದು ಅಗತ್ಯ. ಯಾವ ವಿಷಯವನ್ನೇ ಆಗಲಿ ಅದರ ಪ್ರಾಮುಖ್ಯವನ್ನು ಮನಮುಟ್ಟುವಂತೆ ಮಾಡಲು ಬೇಕಾದ ಆಧಾರಗಳನ್ನು ಗುರುತಿಸಿಟ್ಟುಕೊಂಡು ವ್ಯಾಖ್ಯಾನ ಮಾಡುತ್ತಿದ್ದರು. ಅವರು ಆರಿಸುವ ಎಲ್ಲ ಶ್ಲೋಕಗಳೂ ವೃತ್ತಗಳೂ ಅವರಿಗೆ ವಾಚೋವಿಧೇಯವಾಗಿರುತ್ತಿದ್ದವು. ಶಬ್ದಗಳು ಪ್ರಾಸಾನುಪ್ರಾಸವಾಗಿ ಧಾರಾಳವಾಗಿ ಹರಿದುಬರುತ್ತಿದ್ದವು. ಕೇಳುಗರಿಗೆ ಯಾವೊಂದು

ವಾಕ್ಯವೂ ಕ್ಲಿಷ್ಟವಾಗುತ್ತಿರಲಿಲ್ಲ. ಒಮ್ಮೆ, ನಾನು ಏರ್ಪಡಿಸಿದ್ದ ಒಂದು ರಾಮಾಯಣ ಸಪ್ತಾಹದಲ್ಲಿ ಅವರು ಮೊದಲ ಉಪನ್ಯಾಸ ಮಾಡಿ ಆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಬೇಕೆಂದು ಕೇಳಿಕೊಂಡೆ. ಅವರು ಪ್ರೀತಿಯಿಂದ ಬಂದು ಮೊದಲನೆಯ ದಿನ ಒಂದೂವರೆ ಗಂಟೆಯ ಹೊತ್ತು 'ಇಂದಿಗೆ ರಾಮಾಯಣದ ಪ್ರಸ್ತುತತೆ' ಎಂಬ ವಿಷಯವಾಗಿ ಭಾಷಣ ಮಾಡಿದರು. ಒಂದು ಚೀಟಿಯೂ ಕೈಯಲ್ಲಿರಲಿಲ್ಲ. ಎಲ್ಲ ಪ್ರಸಂಗಗಳ ಶ್ಲೋಕಗಳನ್ನೂ ಧಾರಾಕಾರವಾಗಿ ಉದಾಹರಿಸಿದರು. ಹೃದಯವನ್ನು ಕಲಕುವ ಭಾವಪೂರ್ಣ ಪ್ರಸಂಗಗಳು ಬಂದಾಗ ಸಭಾಸದರೆಲ್ಲರ ಮನತಟ್ಟುವಂತೆ ರೋಮಾಂಚನವಾಗುವಂತೆ ಮಾಡಿದರು. ಸೀತೆಯಾಡಿದ "ಹಾರೋ ನಾರೋಪಿತಃ ಕಂಠೇ ಮಯಾ ವಿಶ್ಲೇಷಭೀರುಣಾ । ಇದಾನೀಂ ಅಂತರೇ ಜಾತಃ ಸರಿತ್ಸಾಗರ ಭೂಧರಾಃ" ಎಂಬ ಶ್ಲೋಕವನ್ನು ಹೇಳಿ ಕೇಳುಗರ ಕಣ್ಣಿನಲ್ಲಿ ಕಣ್ಣೀರು ತೊಟ್ಟಿಕ್ಕುವಂತೆ ಮಾಡಿದರು. ಈ ಉಪನ್ಯಾಸವನ್ನು ಅಂದು ಕೇಳಿದವರು ಈಗಲೂ ನೆನೆಯುತ್ತಾರೆ.

ಮತ್ತೊಮ್ಮೆ ಕೆಲವು ಜನ ವಿದ್ವಾಂಸರೊಡನೆ ನಾನೂ ರಾಯರೂ ವೇದಿಕೆಯ ಮೇಲೆ ಇರಬೇಕಾಯಿತು. 'Preparation for oldage' ಎಂಬ ವಿಷಯದಲ್ಲಿ ಇಂಗ್ಲಿಷಿನ ಒಂದು ವಿಚಾರ ಸಂಕಿರಣ. ತುಂಬ ಜನ ಸೇರಿದ್ದರು. ಎಲ್ಲರೂ ಒಂದೊಂದು ವಿಷಯವಾಗಿ ಮಾತನಾಡಿದರು. ವ್ಯಾಸಂಗದ ಪ್ರಯೋಜನ, ಸಂಗೀತ, ಕ್ರೀಡೆ ಇತ್ಯಾದಿಗಳ ನಿರೂಪಣೆಯಾಯಿತು. ನಾನು 'Reading - a safe preparation' ಬಗ್ಗೆ ಸ್ಫೂರ್ತಿದಾಯಕವಾಗಿ ಮಾತನಾಡಿದೆ. ರಾಯರು ಆಧ್ಯಾತ್ಮಿಕ ಸಾಧನೆಯ ಬಗ್ಗೆ ಸ್ಫೂರ್ತಿದಾಯಕವಾಗಿ ಮಾತನಾಡಿದರು. ಕೊನೆಯಲ್ಲಿ ನನ್ನ ಕಡೆ ಕೈಮಾಡಿ 'Mr. G.V., Do not be satisfied with mere reading' ಎಂದು ವಿಶೇಷವಾಗಿ ಹೇಳಿದರು. ಸಭೆಯಲ್ಲಿದ್ದ ಡಿ.ಟಿ. ರಾಮಸ್ವಾಮಿ ಎಂಬ ದೊಡ್ಡ ವಿದ್ವಾಂಸರು ಎದ್ದು ಹೇಳಿದರು : "Mr. Ramachandra Rao is one of the most widely read scholars. Why does he object to reading?" ಎಂದರು. ಆ ಬಳಿಕ ರಾಯರು Advantages of reading ಮೇಲೆ ಅರ್ಧಗಂಟೆ ಸೊಗಸಾದ ಉಪನ್ಯಾಸ ಮಾಡಿದರು. ಈ ಸನ್ನಿವೇಶವನ್ನು ನಾನು ನೆನಪಿನಲ್ಲಿಟ್ಟಿದ್ದೇನೆ.

ಅಭಿನವಗುಪ್ತನ ಸ್ಥಾನ ಸಂಸ್ಕೃತ ಸಾಹಿತ್ಯದಲ್ಲೂ ದರ್ಶನ ಶಾಸ್ತ್ರದಲ್ಲೂ ಬಹು ದೊಡ್ಡದು. ಸಾಹಿತ್ಯದ ವಿದ್ಯಾರ್ಥಿಗಳಾದ ನಮಗೆ ಅಭಿನವಗುಪ್ತನ ಹೆಸರು ಅವನು ಆನಂದವರ್ಧನನ 'ಧ್ವನ್ಯಾಲೋಕ'ಕ್ಕೆ ರಚಿಸಿರುವ 'ಲೋಚನ' ಎಂಬ ಟೀಕೆಗೆ ಮಾತ್ರ ಸೀಮಿತವಾದದ್ದು. ಅಭಿನವಗುಪ್ತನು ಋಷಿಸಮಾನಾದ ತತ್ತ್ವವೇತ್ತನೆಂಬುದು ತಿಳಿದಿತ್ತು, ಆದರೆ ವಿವರಗಳು ನನ್ನ ಗಮನಕ್ಕೆ ಬಂದಿರಲಿಲ್ಲ. ರಾಮಚಂದ್ರರಾಯರು ಕೆಲವು ತಿಂಗಳುಗಳ ಹಿಂದೆ ಅಭಿನವಗುಪ್ತನನ್ನು ಕುರಿತು ಐದು ಉಪನ್ಯಾಸಗಳನ್ನು ನೀಡಿದರು. ಆ

ಉಪನ್ಯಾಸಗಳನ್ನು ಕೇಳಲು ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ನಗರದ ಅನೇಕ ವಿದ್ವಾಂಸರು ಬಂದಿದ್ದರು. ಅಭಿನವಗುಪ್ತನ ಪ್ರಮುಖ ಗ್ರಂಥಗಳನ್ನು ಆಧರಿಸಿ ಅವರು ನೀಡಿದ ಉಪನ್ಯಾಸಗಳಲ್ಲಿ ಅವರು ಉದಾಹರಿಸಿದ ಎಲ್ಲ ಶ್ಲೋಕಗಳನ್ನೂ ವೃತ್ತಗಳನ್ನೂ ಅವರು ಪಾಠೋಪಧೇಯಗಳನ್ನಾಗಿಸಿಕೊಂಡಿದ್ದರು. ನಮಗೆಲ್ಲ ಆಶ್ಚರ್ಯವಾಯಿತು. ಆ ಉಪನ್ಯಾಸಗಳ ಸಂಗ್ರಹಾನುವಾದವನ್ನು ಆಗಲೇ ಪುಸ್ತಕರೂಪದಲ್ಲಿ ಪ್ರಕಟಿಸಲಾಯಿತು. ಅಭಿನವಗುಪ್ತನಲ್ಲಿ ನನಗಿದ್ದ ಆಸಕ್ತಿಯನ್ನು ಅರಿತಿದ್ದ ರಾಯರು ಆ ಸಭೆಯಲ್ಲಿ ನನಗೊಂದು ಪ್ರತಿಯನ್ನು ನೀಡಿ ನನ್ನ ಹೃದಯಕ್ಕೆ ತುಂಬ ತೃಪ್ತಿಯನ್ನು ತಂದಿತ್ತರು.

'ಶ್ರೀತತ್ತ್ವನಿಧಿ' ಎಂಬ ಗ್ರಂಥವನ್ನು ರಾಮಚಂದ್ರರಾಯರು ಅತ್ಯುತ್ತಮ ರೀತಿಯಲ್ಲಿ ಸಂಪಾದನೆ ಮಾಡಿ ಪ್ರಕಟಪಡಿಸಿದ್ದಾರೆ. ಈ ಗ್ರಂಥದ ಬಗ್ಗೆ ಸ್ವಲ್ಪ ವಿವರಗಳನ್ನು ನೀಡದಿದ್ದರೆ ರಾಯರ ಗ್ರಂಥಸಂಪಾದನಾ ಸಾಮರ್ಥ್ಯವನ್ನು ಕಡೆಗಣಿಸಿದಂತಾಗುತ್ತದೆ. ಆದುದರಿಂದ ಸಂಗ್ರಹವಾಗಿಯಾದರೂ ಇಷ್ಟನ್ನು ಹೇಳಲೇಬೇಕು.

ಮೈಸೂರಿನ ಮಹಾರಾಜರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಎಪ್ಪತ್ನಾಲ್ಕು ವರ್ಷಗಳ ಕಾಲ ಬದುಕಿದ್ದರು. ಅವರ ಆಳ್ವಿಕೆಯು ಪ್ರಾರಂಭವಾದ ದಿನಗಳಲ್ಲಿ ಕೆಲವರು ನಡೆಸಿದ ಪಿತೂರಿಗಳ ಪರಿಣಾಮವಾಗಿ ಆಂಗ್ಲ ಕಮೀಷನರುಗಳ ಆಡಳಿತಕ್ಕೆ ರಾಜ್ಯವು ಸಿಕ್ಕಿಕೊಂಡಿತು. ಆದರೂ ಅವರು ವಿದ್ವತ್ಪಕ್ಷಪಾತಿಗಳಾಗಿ, ಧರ್ಮಕಾರ್ಯಗಳಲ್ಲಿ ನಿರತರಾಗಿ ಪಂಡಿತರ ಸಹಾಯದಿಂದ ಗ್ರಂಥಗಳನ್ನು ರಚಿಸುತ್ತ ಕಾಲವನ್ನು ಕಳೆದರು. ಅವರ ಹೆಸರಿನಲ್ಲಿ ಅರುವತ್ತಕ್ಕೂ ಮೀರಿದ ಸಂಖ್ಯೆಯ ಗ್ರಂಥಗಳಿವೆ. ತಮ್ಮ ಗ್ರಂಥಗಳನ್ನು ಅರಮನೆಯ ಅಂಬಾವಿಲಾಸ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಿ ಆಸ್ಥಾನ ಪಂಡಿತರಿಗೂ ಇತರ ಪ್ರಮುಖರಿಗೂ ಅವುಗಳನ್ನು ಉಚಿತವಾಗಿ ಹಂಚುತ್ತಿದ್ದರು. ತಮ್ಮ ಗ್ರಂಥಗಳಿಗೆ ಪ್ರಸಿದ್ಧ ಚಿತ್ರಕಲಾ ಚತುರರ ಕೈಲಿ ವರ್ಣಚಿತ್ರಗಳನ್ನು ಬರೆಸಿ ಪ್ರಕಟಿಸುತ್ತಿದ್ದರು. 'ಶ್ರೀತತ್ತ್ವನಿಧಿ' ಎಂಬ ಗ್ರಂಥ ಇಂಥ ಗ್ರಂಥಗಳಲ್ಲಿ ಮುಖ್ಯವಾದುದು. ಮೈಸೂರಿನ ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಿ ಇದರ ಒಂದೇ ಪ್ರತಿಯಿದೆ. ಆ ಪ್ರತಿಯಲ್ಲಿ ರಾಯಲ್ ಆಕಾರದ 1500 ಪುಟಗಳಿವೆ. ಒಂದು ಸಾವಿರದಷ್ಟು ಕಿರುವರ್ಣ ಚಿತ್ರಗಳಿವೆ. ಇದರ ಬೆಲೆ ಅಲ್ಲಿನ ವಿದ್ವಾಂಸರಿಗೇ ತಿಳಿಯದು. ಆ ಸಂಸ್ಥೆಯಲ್ಲಿರುವ ಪ್ರತಿಯಲ್ಲಿರುವ ವಿವರಗಳನ್ನು ಇತರ ವಿದ್ವಾಂಸರಿಗೆ ತೋರಿಸಲೂ ಅವರೂ ಅಪೇಕ್ಷಿಸುವುದಿಲ್ಲ. ಆದರೆ ಇಂಥ ಉತ್ತಮ ಗ್ರಂಥವು ಇನ್ನು ಹೆಚ್ಚು ಕಾಲ ಕತ್ತಲೆಯಲ್ಲಿರಬಾರದೆಂದು ಒಂದು ಪ್ರತಿಯನ್ನು ಸಂಪಾದಿಸಿ ರಾಯರು ಒಂದು ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿದರು. ಆದರೆ ಅಲ್ಲಿಯೂ ಇದು ಪ್ರಕಟವಾಗಲಿಲ್ಲ. ಆಗ ಬಹುಪ್ರಯತ್ನದಿಂದ ಆ ಪ್ರತಿಯನ್ನು ಹಿಂದಕ್ಕೆ ತರಿಸಿ ಸಂಪೂರ್ಣವಾಗಿ ಸಂಪಾದನೆ ಮಾಡಿ ಅನೇಕ ವರ್ಣಚಿತ್ರಗಳನ್ನು ಸೇರಿಸಿ ಅತ್ಯಂತ ಸುಂದರವಾಗಿ ಪ್ರಕಟಪಡಿಸಿದ್ದಾರೆ. ಹೀಗೆ ಪ್ರಕಟನೆಗೆ ಸಹಾಯಮಾಡಿದವರು ಕಲ್ಪತರು ಸಂಶೋಧನಾ ಪ್ರತಿಷ್ಠಾನದ ಅಧಿಕಾರಿಗಳು.

ಈ ಗ್ರಂಥವು ಒಂದು ವಿಶ್ವಕೋಶ. ಇದರಲ್ಲಿ ಸಂಗೀತ, ಸಾಹಿತ್ಯ, ಜ್ಯೋತಿಷ, ಆಹಾರ ಸಂಹಿತೆ, ಆಟಗಳು ಮುಂತಾಗಿ ಬಹು ವ್ಯಾಪಕವಾದ ವಿವರಗಳಿವೆ. ಇಂಥ ಗ್ರಂಥ ಹಿಂದೆ ರಚಿತವಾಗಿರಲಿಲ್ಲ. ಇಲ್ಲಿರುವ ಚಿತ್ರಗಳ ಸಂಗ್ರಹ ಅತಿಪ್ರಮುಖವಾದ ಭಾಗ. ಗ್ರಂಥಗಳಲ್ಲಿ ವರ್ಣಚಿತ್ರಗಳನ್ನು ಸೇರಿಸುವುದು ಪರ್ಷಿಯನ್ ಭಾಷೆಯಿಂದ ಬಂದದ್ದು. ಮುಮ್ಮಡಿಯವರು ಈ ಕೆಲಸವನ್ನು ಮಾಡಿದ್ದಾರೆ. ನಮ್ಮ ಸಂಸ್ಕೃತಿಯ ಅನೇಕ ವಿವರಗಳು ಇಲ್ಲಿವೆ. ದೇವತೆಗಳ ಆಕಾರ, ರಾಗಗಳ ಆಕಾರ, ಆಯುಧಗಳ ಆಕಾರ ಹೀಗೆ ಆಕಾರಚಿಂತನೆ ಈ ಗ್ರಂಥದ ದೊಡ್ಡ ಆಕರ್ಷಣೆ. ಅನೇಕ ಅಮೂರ್ತ ಭಾವನೆಗಳಿಗೆ ಮೂರ್ತಸ್ವರೂಪವನ್ನು ಕೊಡುವ ಒಂದು ಕ್ರಿಯೆ ಇಲ್ಲಿ ನಡೆದಿದೆ. ಈ ಪುಸ್ತಕದಲ್ಲಿ 'ಸಂತಾನಾಂಬುಜ' ಎಂಬ ವಂಶವೃಕ್ಷದಲ್ಲಿ ರಾಜರ ಮನೆತನದ ಹಿರಿಯರ ಚಿತ್ರಗಳು ಕ್ರಮವಾಗಿ ರಚಿತವಾಗಿವೆ. ಈ ಗ್ರಂಥದಲ್ಲಿ 9 ನಿಧಿಗಳಿವೆ, ಅಧ್ಯಾಯಗಳಾಗಿ. ಇದರ ಭಾಷೆ ಸಂಸ್ಕೃತ.

ಇಂಥ ಗ್ರಂಥವನ್ನು ವರ್ಣಚಿತ್ರಗಳ ಸಹಿತ, ಕೆಲವು ವರ್ಣರಹಿತ ಚಿತ್ರಗಳೊಡನೆ ಸಂಪಾದಿಸಿ ಪ್ರಕಟಿಸಿ ಗ್ರಂಥ ಪ್ರಕಟಣ ಪ್ರಪಂಚಕ್ಕೆ ದೊಡ್ಡ ಉಪಕಾರವನ್ನು ಮಾಡಿದ್ದಾರೆ, ರಾಯರು. ಇದೊಂದು ವಿಶಿಷ್ಟ ಸೇವೆ ಕರ್ನಾಟಕ ರಾಜ್ಯಕ್ಕೆ.

ರಾಮಚಂದ್ರರಾಯರ ಉದಾರ ಹೃದಯವನ್ನೂ ಶಿಶುಸಮಾನವಾದ ಮುಗ್ಧತೆಯನ್ನೂ ಅವರ ಸಂಸಾರದ ಸಂತೋಷಪ್ರದವಾದ ಸ್ವಭಾವವನ್ನೂ ತಿಳಿಸುವ ಒಂದು ವೈಯಕ್ತಿಕ ಘಟನೆಯಿಂದ ಈ ಲೇಖನವನ್ನು ಮುಗಿಸುತ್ತೇನೆ.

ಒಮ್ಮೆ ನಾನು ಅವರ ಮನೆಗೆ ಹೋದಾಗ ಅವರ ಮನೆಯ ಮುಂಗಟ್ಟಿನಲ್ಲಿ ಒಂದು ಮಣ್ಣಿನ ಕುಂಡದಲ್ಲಿ ಒಂದು ದಾಸವಾಳದ ಗಿಡವಿದ್ದುದನ್ನು ನೋಡಿದೆ. ಅದರಲ್ಲಿ ಒಂದೇ ಒಂದು ಹೂವು ಆಗತಾನೇ ಅರಳಿತ್ತು. ಪ್ರಾತಃಕಾಲದ ತಿಳಿಬೆಳಕಿನಲ್ಲಿ ಅದರ ಬಣ್ಣ ತುಂಬ ಆಕರ್ಷಕವಾಗಿತ್ತು. ಹಳದಿಗೂ ಕೆಂಪಿಗೂ ನಡುವಣ ಒಂದು ಹೊಸ ಬಣ್ಣ. ನಾನೂ ಅದರಿಂದ ಆಕರ್ಷಿತನಾಗಿದ್ದೆ. ನಮ್ಮ ಮಾತು ಮುಗಿದು ಮನೆಗೆ ನಾನು ಹಿಂದಿರುಗುವಾಗ ಆ ಹೂವಿನ ಆಕರ್ಷಣೆಯನ್ನು ಮತ್ತೆ ಹೇಳಿದೆ. ಅವರು "ಬೇಕಾದರೆ ನೀವು ಅದನ್ನು ನಿಮ್ಮ ಮನೆಗೆ ತೆಗೊಂಡುಹೋಗಿ" ಎಂದರು. "ನಿಮ್ಮ ಮನೆಗೆ ಗತಿ ಏನು ?" ಎಂದು ನಾನು ಕೇಳಿದೆ. ರಾಯರ ಹೆಂಡತಿ ನಮ್ಮಲ್ಲಿ ಇದೇ ಹೂವಿನ ಮತ್ತೊಂದು ಗಿಡ ಇದೆ ಎಂದರು. ರಾಯರು ತಾವೇ ಆ ಕುಂಡವನ್ನು ಹಿಡಿದು ಬಂದು ನನ್ನ ಕಾರಿನಲ್ಲಿ ಇಟ್ಟುಬಿಟ್ಟರು. ನಾನೇನೋ ಮನೆಗೆ ತಂದುಬಿಟ್ಟೆ. ನಮ್ಮ ಮನೆಯಲ್ಲಿ ಆ ಗಿಡವು ಬೆಳೆದು ಪ್ರತಿದಿನವೂ ದೇವತಾರ್ಚನೆಗೆ 8-10 ಹೂವುಗಳನ್ನು ಬಿಟ್ಟು ಸಹಾಯಕವಾಯಿತು. ರಾಯರನ್ನು ಕಂಡಾಗಲೆಲ್ಲ ಆ ಗಿಡದ ಹೂವುಗಳ ವಿಚಾರವನ್ನು ನಾನು ಹೇಳದೆ ಬಿಡುತ್ತಿರಲಿಲ್ಲ. ಎರಡು ಮೂರು ವರ್ಷಗಳ ಬಳಿಕ ಹೀಗೆಯೇ ಅವರ ಮನೆಯಲ್ಲಿ ಮಾತನಾಡುತ್ತಿದ್ದಾಗ ಶ್ರೀಮತಿ ರಾಮಚಂದ್ರರಾಯರು "ನಮ್ಮ ಮನೆಯ ಗಿಡ ಸತ್ತುಹೋಯಿತು" ಎಂದರು. ನನಗೆ ಆಘಾತವಾಯಿತು. ನಾನು ಆ

ಗಿಡವನ್ನು ನಮ್ಮ ಮನೆಗೆ ತರದೆ ಇದ್ದರೆ ಅದರ ಹೂವುಗಳು ಇದೇ ಮನೆಯಲ್ಲಿರುತ್ತಿದ್ದುವಲ್ಲಾ ಎಂಬ ಚಿಂತೆ ಹತ್ತಿತು. ರಾಯರು ಗೂಟ ಮಾಡಿ ಮತ್ತೊಂದು ಗಿಡವನ್ನು ಮಾಡಬಹುದು ಎಂದು ಹೇಳಿದರು. ಬಹಳ ವ್ಯಸನದಿಂದ ನಾನು ಮನೆಗೆ ಬಂದೆ. ಆ ಹೂವಿನ ಗಿಡದ ಮುಂದೆ ನಿಂತು ಹಳೆಯ ನೆನಪನ್ನು ತಂದುಕೊಂಡೆ. ನನ್ನ ಕಣ್ಣಿಗೆ ಅದರ ಪಕ್ಕದ ಕುಂಡದಲ್ಲಿ ಅದೇ ಗಿಡದ ಗೂಟ ಮಾಡಿದ ಸಸಿ ಬೆಳೆದಿತ್ತು. ಅದರಲ್ಲಿ ಒಂದು ಮೊಗ್ಗು ಅರಳುವುದರಲ್ಲಿತ್ತು. ಮಾರನೆಯ ದಿನ ಬೆಳಗ್ಗೆ ಬಹುಬೇಗ ರಾಯರು ವಾಯುವಿಹಾರದಿಂದ ಮನೆಗೆ ಹಿಂದಿರುಗುವ ವೇಳೆಗೆ ಆ ಗಿಡವನ್ನು ಕಾರಿನಲ್ಲಿಟ್ಟುಕೊಂಡು ಹೋಗಿ ಅವರ ಮನೆಯ ಮುಂಗಟ್ಟಿನಲ್ಲಿ ಹಿಂದೆ ಇಟ್ಟಿದ್ದ ದಾಸವಾಳದ ಸ್ಥಳದಲ್ಲಿಯೇ ಈ ಕುಂಡವನ್ನು ಇಟ್ಟು ರಾಯರಿಗೆ ತೋರಿಸಿದೆ. ಅವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಅವರ ಹೆಂಡತಿಯನ್ನು ಕರೆದು "ನೋಡು, ತಪ್ಪಿಸಿಕೊಂಡು ಹೋಗಿದ್ದ ಮಗ ಮನೆಗೆ ಬಂದಹಾಗಿದೆ" ಎಂದು ಹೇಳಿದರು. ನನ್ನ ಮನಸ್ಸಿಗೆ ಮಹಾ ಸಮಾಧಾನವಾಯಿತು. ಈ ಸನ್ನಿವೇಶದ ಚಿತ್ರ ನನಗೆ ಆಗಾಗ ಕಣ್ಮುಂದೆ ಕಟ್ಟುತ್ತದೆ.

ರಾಮಚಂದ್ರರಾಯರ ವಿದ್ವತ್ತು ದೊಡ್ಡದು. ಅವರ ಲೇಖನಗಳ ವ್ಯಾಪ್ತಿ ಬಹುಮುಖವಿದ್ದು. ಅವರ ಸ್ನೇಹಶೀಲ ಇವೆರಡಕ್ಕೂ ಹೆಚ್ಚಾದ ಗುಣವು. ಸದಾ ನಗುಮುಖದ, ಉದಾರ ಹೃದಯದ "ಸಂತೋಷಂ ಜನಯೇತ್ ಪ್ರಾಜ್ಞಃ" ಎಂಬ ಆರ್ಯೋಕ್ತಿಯನ್ನು ನಂಬಿದ, ಮುಗ್ಧ ಹೃದಯದ, ವಿನೀತ ವ್ಯವಹಾರದ ಪರಿಪೂರ್ಣ ವಿದ್ವಾಂಸನನ್ನು ಕಳೆದುಕೊಂಡ ಜನತೆ ಅವರ ಕೃತಿಗಳ ವಾಚನದಲ್ಲಿ ಸಮಾಧಾನವನ್ನು ಕಾಣುತ್ತಿದೆ. ಅವರ ನೆನಪಿಗೆ ಅವರು ರಚಿಸಿರುವ ಕೃತಿರಾಶಿಗಿಂತ ದೊಡ್ಡ ಸ್ಮಾರಕ ಬೇರೆ ಯಾವುದು ತಾನೇ ಇದ್ದೀತು.

'ರಾಜತರಂಗಿಣಿ' ಖ್ಯಾತಿಯ ನೀರ್ಪಾಜೆ ಭೀಮಭಟ್ಟರು
(1934-2002)

ದಕ್ಷಿಣ ಕನ್ನಡದ ಬಂಟ್ವಾಳ ತಾಲ್ಲೂಕಿನ ಕನ್ಯಾನದಲ್ಲಿ ನೆಲೆನಿಂತು ಆಸಕ್ತಿಯ ಕೃಷಿಕರಾಗಿಯೂ ಸಾಹಿತ್ಯದ ಕೃತಿಗಳ ನಿರ್ಮಾಣಕಾರರಾಗಿಯೂ ಪ್ರಸಿದ್ಧಿ ಪಡೆದ ನೀರ್ಪಾಜೆ ಭೀಮಭಟ್ಟರದು ಬಹುಮುಖವಾದ ವ್ಯಕ್ತಿತ್ವ. ವಿದ್ವದ್ವಂಶದಲ್ಲಿ ಜನಿಸಿ ಅವರು (1934-2002) ಬಾಲ್ಯದಲ್ಲಿಯೇ ಸಂಸ್ಕೃತ ಸಾಹಿತ್ಯದಲ್ಲಿ ಅಪಾರ ಪರಿಶ್ರಮವನ್ನು ಗಳಿಸಿದರು. ತಂದೆ ಶಂಕರಭಟ್ಟರು ತಾಯಿ ಶಂಕರಿ ಅಮ್ಮ ಅವರು ನಿರ್ಮಿಸಿದ್ದ ಸುಸಂಸ್ಕೃತ ವಾತಾವರಣದಲ್ಲಿ ಸಂಸ್ಕೃತದಲ್ಲಿ ವಿದ್ವತ್ತನ್ನೂ ಸಮಾಜ ಸೇವೆಯಲ್ಲಿ ಆಸಕ್ತಿಯನ್ನೂ ಬೆಳೆಸಿಕೊಂಡರು.

ಮನೆಮಾತು ಕನ್ನಡದಲ್ಲೂ ಸಮಾಜದಲ್ಲಿದ್ದ ತುಳು ಮತ್ತು ಮಲೆಯಾಳಂ ಭಾಷೆಗಳಲ್ಲಿಯೂ ಪರಿಣತರಾದರು. ಮನೆಯಲ್ಲಿಯೇ ಖಾಸಗಿ ಅಭ್ಯಾಸಮಾಡಿ ಮದ್ರಾಸು ವಿಶ್ವವಿದ್ಯಾನಿಲಯದ 'ಸಾಹಿತ್ಯ ಶಿರೋಮಣಿ' ಪದವಿಯನ್ನು ಸಂಪಾದಿಸಿದರು. ಜೊತೆಗೆ ದಕ್ಷಿಣ ಹಿಂದೀ ಪ್ರಚಾರ ಸಭೆಯವರು ನಡೆಸುತ್ತಿದ್ದ ರಾಷ್ಟ್ರ ಭಾಷಾ ವಿಶಾರದ ಪರೀಕ್ಷೆಯಲ್ಲಿಯೂ ಉತ್ತಮ ರೀತಿಯಲ್ಲಿ ತೇರ್ಗಡೆ ಹೊಂದಿದರು. ಹೀಗೆ ಅನೇಕ ಭಾಷೆಗಳಲ್ಲಿ ಪರಿಣತಿಯನ್ನು ಪಡೆದು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಸೇವೆಯನ್ನು ನೀಡಲು ಅಗತ್ಯವಾದ ವ್ಯಕ್ತಿತ್ವವನ್ನು ಅವರು ಸಂಪಾದಿಸಿಕೊಂಡರು.

ದಕ್ಷಿಣಕನ್ನಡ ಜಿಲ್ಲೆಯು ಬಹುಕಾಲ ಮದ್ರಾಸು ಪ್ರಾಂತದ ಭಾಗವಾಗಿದ್ದು ಆ ಜಿಲ್ಲೆಯಲ್ಲಿದ್ದ ಅನೇಕ ಹಿರಿಯ ಪ್ರಸಿದ್ಧ ವಿದ್ವಾಂಸರ ಪರಿಚಯವು ಕನ್ನಡನಾಡಿಗೆ ಗೊತ್ತಿರಲಿಲ್ಲ. ಕನ್ನಡದ ಏಕೀಕರಣವಾಗುವತನಕ ಅವರೆಲ್ಲ ಮದ್ರಾಸಿನ ಆಡಳಿತದ ಅಂಧಕಾರದಲ್ಲಿ ಮುಳುಗಿ ಹೋಗಿದ್ದರು. ಏಕೀಕರಣವಾದ ಮೇಲೆ ಅನೇಕ ವಿದ್ವಾಂಸರ ಪರಿಚಯ ಕನ್ನಡನಾಡಿಗೆ ದೊರಕಿತು. ಇದು ಕನ್ನಡನಾಡಿನ ರಾಜಕೀಯ ಚರಿತ್ರೆಯ ವಿಪರ್ಯಾಸ.

ಹೀಗಿದ್ದರೂ ಕನ್ನಡದಲ್ಲಿ ಸಾಹಿತ್ಯ ಕೃಷಿ ಮಾಡಿದ ದಕ್ಷಿಣಕನ್ನಡದ ಹಿರಿಯ ವಿದ್ವಾಂಸರು ಮೈಸೂರು ಸಂಸ್ಥಾನದಲ್ಲಿಯೂ ತುಂಬ ಗೌರವವನ್ನು ಸಂಪಾದಿಸಿದ್ದರು. ಪಂಜೆ ಮಂಗೇಶರಾಯರು, ಗೋವಿಂದ ಪೈಗಳು, ಮುಳಿಯ ತಿಮ್ಮಪ್ಪಯ್ಯನವರು ಅನೇಕ ಯಕ್ಷಗಾನದ ಭಾಗವತರು, ಅರ್ಥಧಾರಿಗಳು ಇವರ ಹೆಸರುಗಳೂ ಪ್ರಸಿದ್ಧವಾಗಿದ್ದವು. ರಾಷ್ಟ್ರಮತ, ರಾಷ್ಟ್ರಬಂಧು ಮುಂತಾದ ಪತ್ರಿಕೆಗಳ ಪ್ರಭಾವವೂ ಸಾಕಷ್ಟು ಇತ್ತು. ಇಂಥ ಸಮಯದಲ್ಲಿಯೇ ನೀರ್ಪಾಜೆ ಭೀಮಭಟ್ಟರು ತಮ್ಮ ಲೇಖನ ವ್ಯವಸಾಯವನ್ನು ಅಭಿವೃದ್ಧಿಪಡಿಸಿಕೊಂಡರು.

ಸ್ವಲ್ಪಕಾಲ ಅವರು ಕಮ್ಮಜೆ ಎಂಬ ಊರಿನಲ್ಲಿ ಸಂಸ್ಕೃತದ ಪಾಠಶಾಲೆಯಲ್ಲಿ ಅಧ್ಯಾಪಕರೂ ಆಗಿದ್ದರು. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಕೆಲವು ಕಾಲ ಹಳೆಗನ್ನಡ ಗ್ರಂಥಗಳ ಸಂಗ್ರಾಹಕರಾಗಿಯೂ ಸಂಪಾದಕರಾಗಿಯೂ ಕಾರ್ಯವನ್ನು ನಿರ್ವಹಿಸಿದರು. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಉಪಸಂಪಾದಕ ವೃತ್ತಿಯಲ್ಲಿಯೂ ಅನುಭವವನ್ನು ಗಳಿಸಿಕೊಂಡರು. ಈ ಎಲ್ಲ ಅನುಭವಗಳ ಪರಿಣಾಮವಾಗಿ ಅವರು ಲೇಖನ ಕಲೆಯನ್ನು ಮೈಗೂಡಿಸಿಕೊಂಡು ತಮ್ಮ ಊರಾದ ಕನ್ಯಾನದಲ್ಲಿಯೇ ನೆಲೆಸಿ ಸಮಾಜ ಸೇವೆಯನ್ನೂ ಸಾಹಿತ್ಯ ಸೇವೆಯನ್ನೂ ಮಾಡಲು ತೀರ್ಮಾನ ಮಾಡಿದರು. ಇದು ಅವರು ಬಹುವಾಗಿ ಚಿಂತಿಸಿ ಕೈಗೊಂಡ ತೀರ್ಮಾನ. ಆದುದರಿಂದ ಅವರು ಅನೇಕ ಕಾರ್ಯಗಳನ್ನು ಸಾಧಿಸಲು ಅವಕಾಶವಾಯಿತು.

ಪುತ್ತೂರಿನ ಸೇವೆಯಲ್ಲಿ ನಿರತರಾಗಿ ಪಂಚಾಯ್ತಿಯ ಅಧ್ಯಕ್ಷರಾಗಿ, ತಾಲ್ಲೂಕು ಬೋರ್ಡಿನ ಸದಸ್ಯರಾಗಿ, ಭೂ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕರಾಗಿ ಮೂವತ್ತು ವರ್ಷಗಳ ಕಾಲ ದುಡಿದುದರ ದೆಸೆಯಿಂದ ಕನ್ಯಾನಕ್ಕೆ ಅನೇಕ ದೃಷ್ಟಿಯಿಂದ ಮಾನ್ಯತೆ ಬಂತು. ಊರಿನಲ್ಲಿ ಯಾವ ಕಾರ್ಯ ನೆರವೇರಬೇಕಾದರೂ ಸದಾ ನೆರವು ನೀಡುತ್ತಿದ್ದುದು ಅವರ ಸ್ವಭಾವವಾಗಿತ್ತು. ಇದರಿಂದ ಅವರಿಗೆ ಅಧಿಕಾರದ ಜನಪ್ರಿಯತೆ ದೊರಕಿತು. ಕೋಆಪರೇಟಿವ್ ಬ್ಯಾಂಕಾಗಲಿ, ಮಾರ್ಕೆಟಿಂಗ್ ಸೊಸೈಟಿಯಾಗಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಾಗಲಿ ಅವರ ನೇತೃತ್ವವನ್ನು ಪಡೆದೇ ಮುಂದಿನ ಕಾರ್ಯ ಪ್ರಗತಿ ಪಡೆಯುತ್ತಿತ್ತು. ಈ ಜನಪ್ರಿಯತೆಯನ್ನು ಸಹಿಸದ ಕೆಲವರ ದೆಸೆಯಿಂದ ಅವರು ಒಮ್ಮೆ ಒಂದು ಅಪಘಾತಕ್ಕೂ ಒಳಗಾಗಬೇಕಾಯಿತು. ಅಪಾರ ಜನಬಲ ಅವರಿಗೆ ಇದ್ದುದರಿಂದ ಪ್ರಾಮಾಣಿಕ ವ್ಯಕ್ತಿಯಾದ್ದರಿಂದ ಅವರ ಪ್ರಭಾವವನ್ನು ಯಾರೂ ಕಡಿಮೆ ಮಾಡಲಾಗಲಿಲ್ಲ.

ಸಮಾಜ ಸೇವೆಯಲ್ಲಿ ಇಷ್ಟು ಗಾಢವಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದರೂ ಸಾಹಿತ್ಯ ಸೇವೆಯಲ್ಲಿಯೂ ಅವರು ಸದಾ ನಿರತರಾಗಿದ್ದುದು ನಿಜವಾಗಿ ಆಶ್ಚರ್ಯಕರವಾಗಿತ್ತು. ಪ್ರಥಮವಾಗಿ ಅವರು ಪತ್ರಿಕಾ ಲೇಖಕರಾಗಿ ಪ್ರಚಾರಕ್ಕೆ ಬಂದರು. ರಾಷ್ಟ್ರಬಂಧು, ರಾಷ್ಟ್ರಮತ ಪತ್ರಿಕೆಗಳ ಸಂಪಾದಕರಾಗಿದ್ದ ಕಡೆಂಗೋಡ್ಲು ಶಂಕರಭಟ್ಟರು ಹಿರಿಯ ಕವಿಗಳಾಗಿದ್ದರು. ಅವರ ಗೆಳೆತನವಿದ್ದುದರಿಂದ ನೀರ್ಪಾಜೆ ಭೀಮಭಟ್ಟರಿಗೆ ಪತ್ರಿಕಾ ವ್ಯವಸಾಯದಲ್ಲಿ ಮಿಡಿಯುವುದು ಸಾಧ್ಯವಾಯಿತು. ಯುಗಪುರುಷ, ಜೀವನ, ಜಯಂತಿ, ತರಂಗ, ಸುಧಾ, ಚಿತ್ರಗುಪ್ತ, ಪ್ರಪಂಚ, ಜನಪ್ರಗತಿ, ನವಭಾರತ, ಉದಯವಾಣಿ ಮುಂತಾದ ಪತ್ರಿಕೆಗಳಲ್ಲಿ ಲೇಖಕರಾಗಿ ಅನೇಕ ಲೇಖನಗಳನ್ನು ರಚಿಸಿದರು. ಜನವಾಹಿನಿ ಪತ್ರಿಕೆಯಲ್ಲಿ ಬಹುಕಾಲ ಅಂಕಣಕಾರರಾಗಿ ಸೇವೆ ಮಾಡಿದರು. ಸಂಸ್ಕೃತದ ಪತ್ರಿಕೆಗಳಾದ 'ಸಂಸ್ಕೃತ ಭವಿತವ್ಯಂ' 'ಮಧುರವಾಣೀ'ಗಳಲ್ಲಿ ಸಂಸ್ಕೃತದಲ್ಲಿಯೂ ಲೇಖನಗಳನ್ನು ರಚಿಸಿದರು. ಭಾರತೀಯ ವಿದ್ಯಾಭವನದ ಹಿಂದೀ ಮಾಸಪತ್ರಿಕೆಯಾದ 'ಭಾರತೀ' ಪತ್ರಿಕೆಯಲ್ಲಿ ಅನೇಕ ಹಿಂದೀ ಸಾಹಿತ್ಯ ಪರವಾದ ಲೇಖನಗಳನ್ನು ಪ್ರಕಟಿಸಿದರು.

ನೀರ್ಪಾಜೆ ಭೀಮಭಟ್ಟರು ರಾಜಕೀಯ ಘಟನೆಗಳನ್ನು ಕುರಿತು ಸಂಸ್ಕೃತದಲ್ಲಿಯೇ ನಾಟಕಗಳನ್ನು ರಚಿಸಿದ್ದಾರೆ. 'ಕಾಶ್ಮೀರ ಸಂಧಾನ ಸಮುದ್ಯಮ' 'ಹೈದರಾಬಾದ್ ವಿಜಯ' 'ಗೋವಾ ಸ್ವಾತಂತ್ರ್ಯಂ' ಎಂಬ ನಾಟಕಗಳು ಭಾರತದ ಅನೇಕ ಕಡೆಗಳಲ್ಲಿ ರಂಗದ ಮೇಲೆ ಪ್ರದರ್ಶಿತವಾಗಿವೆ. ಅದರಿಂದ ಭೀಮಭಟ್ಟರು ಭಾರತದ ನಾಟಕಕಾರರ ಪಂಕ್ತಿಯಲ್ಲಿ ಗೌರವ ಪಡೆದಿದ್ದಾರೆ. ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿರುವ ಅನೇಕ ನಾಟಕಗಳಿವೆ. ಮುಖ್ಯವಾಗಿ ಮಾಲತೀಮಾಧವ, ಮಣ್ಣಿನ ಬಂಡಿ, ಊರ್ವಶಿ, ಮಾಲವಿಮಿತ್ರ ಇವು ಮುಖ್ಯವಾದವು. ಕಾವ್ಯಸಂಸಾರ, ಕಾಳಿದಾಸನ ಕಾವ್ಯ ಸಮೀಕ್ಷೆ, ಮನನ, ಸಾಹಿತ್ಯಪ್ರಜ್ಞೆ, ರಸವತ್ - ಮುಂತಾದವು ಸಂಸ್ಕೃತ ಸಾಹಿತ್ಯ ಕೃತಿಗಳ ವಿಮರ್ಶೆಯ ಪ್ರಬಂಧಗಳಾಗಿವೆ.


ಇವಲ್ಲದೆ ಅವರು ವಿಡಂಬನ ಸಾಹಿತ್ಯದಲ್ಲಿ ಬರೆದ ಅನೇಕ ಹಾಸ್ಯ ಪ್ರಬಂಧಗಳು ಒಂಟಿಕೊಳ್ಳುವ ಆಸಾಮಿಗಳು, ಚೌಚೌ, ಹಸ್ತಸುದ್ಧಿ, ಚಿತ್ರಾನ್ನ ಮುಂತಾದ ಹೆಸರಿನಲ್ಲಿ ಪ್ರಕಟವಾಗಿವೆ.

ಆದರೆ ಭೀಮಭಟ್ಟರ ಅತಿ ಪ್ರಧಾನವಾದ ಅನುವಾದಗಳು ಮೂರು. ಕಲ್ಹಣ ಎಂಬ ಪ್ರಸಿದ್ಧ ಸಂಸ್ಕೃತ ಕವಿಯ 'ರಾಜತರಂಗಿಣಿ' ಎಂಬ ಕಾವ್ಯದ ಅನುವಾದ. ಇದು ಎರಡು ಸಂಪುಟಗಳಲ್ಲಿ ಪ್ರಕಟವಾಗಿದೆ. ಇದೊಂದು ಚಾರಿತ್ರಿಕಾಂಶಗಳಿಂದ ಕೂಡಿದ ಪ್ರಾಚೀನ ಕೃತಿ. ಇದು ಕನ್ನಡಕ್ಕೆ ಅನುವಾದವಾದುದು ಇದೇ ಮೊದಲು. ಅನುವಾದವೂ ಚೆನ್ನಾಗಿದೆ. ಈ ಕಾರಣದಿಂದಲೇ ಈ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವು ದೊರಕಿತು. 1997ರಲ್ಲಿ ಈ ಬಹುಮಾನದಿಂದ ಅವರ ಕೃತಿಯ ಪರಿಚಯ ಎಲ್ಲ ಕಡೆಗೆ ಉಂಟಾಯಿತು. ಅವರ ಅನುವಾದವು ಪ್ರಚಾರ ಪಡೆದುದರಿಂದ ಉತ್ತೇಜಿತರಾಗಿ ಅವರು ಬಿಲ್ಹಣನ

'ವಿಕ್ರಮಾಂಕದೇವ ಚರಿತಮ್' ಎಂಬ ಕಾವ್ಯವನ್ನೂ ಅನುವಾದಮಾಡಿದ್ದಾರೆ. ಇತ್ತೀಚೆಗೆ ಸುಬಂಧುವಿನ 'ವಾಸವದತ್ತಾ' ಕಾವ್ಯವನ್ನೂ ರಾಜಶೇಖರನ 'ಕಾವ್ಯಮೀಮಾಂಸೆ'ಯನ್ನೂ ಕನ್ನಡಕ್ಕೆ ಅನುವಾದಮಾಡಿದ್ದಾರೆ. ಹೀಗೆ ಸಂಸ್ಕೃತದ ಪ್ರಸಿದ್ಧ ಗ್ರಂಥಗಳ ಅನುವಾದಗಳನ್ನು ಕನ್ನಡ ಸಾಹಿತ್ಯದ ಬೊಕ್ಕಸಕ್ಕೆ ಅರ್ಪಿಸುವುದು ಅನುಪಮವಾದ ಸಾಹಿತ್ಯ ಕಾರ್ಯ. ಇಂಥ ಕಾರ್ಯವನ್ನು ಆಗಮಾಡಿಸುವ ಸಂಸ್ಕೃತ ವಿದ್ವಾಂಸರು ಎಂದೂ ನಮ್ಮಲ್ಲಿ ಬೆರಳೆಣಿಕೆಯಲ್ಲಿ ಉಳಿಯುವವರೇ. ಭೀಮಭಟ್ಟರ ಅನುವಾದವು ಸರಳವೂ ಸುಂದರವೂ ಆಗಿ ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡಿದೆ. ಅಪಾರವಾದ ವಿದ್ವತ್ತಿನಿಂದ ಮಾತ್ರ ಸಾಧ್ಯವಾದ ಇಂಥ ಉದ್ಗ್ರಂಥಗಳ ಅನುವಾದ ರಚನೆಗಾಗಿ ಕನ್ನಡನಾಡು ಭೀಮಭಟ್ಟರಿಗೆ ಕೃತಜ್ಞರಾಗಿರಬೇಕು. ಹೀಗೆ ಕನ್ನಡಕ್ಕೆ ಅನುವಾದವಾಗಬೇಕಾಗಿರುವ ಅನೇಕ ಗ್ರಂಥಗಳಿವೆ ಸಂಸ್ಕೃತದಲ್ಲಿ! ನಮ್ಮ ನಾಡಿನ ಹಿರಿಯ ಸಂಸ್ಕೃತ ವಿದ್ವಾಂಸರು ಈ ಕಡೆ ಗಮನ ಕೊಡಬೇಕಾಗಿದೆ.

ಭೀಮಭಟ್ಟರ ದೀರ್ಘಕಾಲದ ಸಾಹಿತ್ಯ ಸೇವೆಯನ್ನು ಗುರುತಿಸಿ ಕ್ರಿ.ಶ. 2000ದಲ್ಲಿ ನೆರವೇರಿದ ದಕ್ಷಿಣ ಕನ್ನಡ ಜಿಲ್ಲೆಯ ಹನ್ನೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಅವರನ್ನು ಆಯ್ಕೆ ಮಾಡಿ ನಾಡು ಅವರಿಗೆ ಗೌರವವನ್ನು ಸಲ್ಲಿಸಿತು. ಆ ಸಮ್ಮೇಳನದಲ್ಲಿ ಅವರು ಮಾಡಿದ ಅಧ್ಯಕ್ಷ ಭಾಷಣದಲ್ಲಿ ಕನ್ನಡನಾಡಿನ ಅನೇಕ ಸಮಸ್ಯೆಗಳನ್ನು ಉಲ್ಲೇಖಿಸಿ ಅವುಗಳಿಗೆ ಪರಿಹಾರೋಪಾಯಗಳನ್ನು ಸೂಚಿಸಿದ್ದಾರೆ. 2002ರಲ್ಲಿ ಅವರು ಅಲ್ಪಕಾಲದ ಅನಾರೋಗ್ಯದಿಂದ ಅನಿರೀಕ್ಷಿತವಾಗಿ ನಿಧನ ಹೊಂದಿದ್ದು ನಾಡಿಗೆ ದೊಡ್ಡ ನಷ್ಟವಾಯಿತು.

ಈಗ ಭೀಮಭಟ್ಟರ ಸಮಾಜ ಸೇವೆಯನ್ನೂ ಸಾಹಿತ್ಯ ಸೇವೆಯನ್ನೂ ನೆನೆದು ಅವರ ಹೆಸರಿನಲ್ಲಿ, ಅವರ ಜನ್ಮದಿನವಾದ 12-4-2003ರಂದು ನೀರ್ಚಾಜೆ ಭೀಮಭಟ್ಟ ಪ್ರತಿಷ್ಠಾನ ಎಂಬ ಸಂಸ್ಥೆಯನ್ನು ಕಸ್ತಾನದಲ್ಲಿ ಉದ್ಘಾಟನೆ ಮಾಡಿದ್ದಾರೆ. ಭೀಮಭಟ್ಟರ ಹೆಸರಿನಲ್ಲಿ ಸಮಾಜ ಮತ್ತು ಸಾಹಿತ್ಯ ಸೇವೆಗೆ ಪ್ರೋತ್ಸಾಹವನ್ನು ನೀಡುವ ಉದ್ದೇಶದಿಂದ ಈ ಸಂಸ್ಥೆ ಉದಯವಾಗಿದೆ. ಅದಕ್ಕೆ ಕನ್ನಡಿಗರೆಲ್ಲ ಶುಭವನ್ನು ಹಾರೈಸುತ್ತಾರೆ.



ಹಳೆಯಕಾಲದ ವಿದ್ವತ್ತಿಗೆ ಪ್ರಾತಿನಿಧಿಕ ವಿದ್ವಾಂಸರಾದ ನಾಡೋಜ ಪ್ರೊ. ಜಿ. ವೆಂಕಟಸುಬ್ಬಯ್ಯನವರು ನಾಡೋಜ ಪದವಿಗೆ ಹೇಳಿ ಮಾಡಿಸಿದ ಭಾಷಾಕೋವಿದರು. ಕನ್ನಡ ಭಾಷೆಯ ಸಾಹಿತ್ಯದ ಮತ್ತು ಸಂಸ್ಕೃತಿಯ ವಿಷಯಗಳಲ್ಲಿ ಅಧಿಕಾರಯುತವಾಗಿ ವಿವರಣೆ ನೀಡಬಲ್ಲವರು. ಅವರಿಗೆ ಆಪ್ತರಾಗಿದ್ದ ಅನೇಕ ಹಿರಿಯ ವ್ಯಕ್ತಿಗಳನ್ನು ಕುರಿತು ಬೇರೆ ಬೇರೆ ಸಂದರ್ಭಗಳಲ್ಲಿ ಪ್ರೊ ಜಿ.ವಿ. ಅವರು ರಚಿಸಿದ ಪತ್ರಿಕಾ ಲೇಖನಗಳು ಇಲ್ಲಿವೆ. ಇಲ್ಲಿ ಉಲ್ಲೇಖಗೊಂಡ ಎಲ್ಲ ವಿದ್ವಾಂಸರೂ ಖ್ಯಾತನಾಮರೇ ! ಅವರ ನೆನಪನ್ನು ತರುವುದಕ್ಕಾಗಿ ರಚಿತವಾದ ಸಂಗ್ರಹವಾದರೂ ಸ್ವಾರಸ್ಯವಾದ ಈ ಲೇಖನಗಳಿಂದ ಕನ್ನಡ ನಾಡಿನ ಹಳೆಯ ತಲೆಮಾರಿನ ಕೆಲವರು ವಿದ್ವಾಂಸರ ಚಿತ್ರಗಳು ನಮ್ಮ ಕಣ್ಮುಂದೆ ನಿಲ್ಲುತ್ತವೆ.

ವಸಂತ ಪ್ರಕಾಶನ

ISBN 81-89818-18-X
9 788189 818180